ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಖಾದ್ರಿ ಶಾಮಣ್ಣ

ಹೆಚ್.ಆರ್. ಶ್ರೀಶ

ಕನ್ನಡ ಪುಸ್ತಕ ಪ್ರಾಧಿಕಾರ

ಖಾದ್ರಿ ಶಾಮಣ್ಣ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಲೇಖಕರು

ಹೆಚ್.ಆರ್. ಶ್ರೀಶ

# ಖಾದ್ರಿ ಶಾಮಣ್ಣ

## ಬದುಕು - ಬರಹ - ಹೋರಾಟ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು - ೫೬೦ ೦೦೨

**KHADRI SHAMANNA** A Monograph on Khadri Shamanna in kannada Written by H.R.Shrisha Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011
Pages : Xii + 136
Copies : 1000
Price : ₹ 70

ಮೊದಲ ಮುದ್ರಣ : ೨೦೧೧
ಪುಟಗಳು : Xii + ೧೩೬
ಪ್ರತಿಗಳು : ೧೦೦೦
ಬೆಲೆ : ₹ : ೭೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೭೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ

ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ-ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ

ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ಇಶಿ ಮಾತ್ರ, ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ,

ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

೧೯೪೦ ದೇಶದ ತುಂಬ ಸ್ವಾತಂತ್ರ್ಯ ಚಳವಳಿ ಹೋರಾಟ ಹರಡಿಕೊಂಡ ಕಾಲ. ಆಗಿನ ಕಾಲದಲ್ಲಿ ಯುವಕರು ಎಲ್ಲರೂ ಹೋರಾಟದಲ್ಲಿ ಧುಮುಕಿದ್ದರು. ಕಾಲೇಜಿಗೆ ಹೋಗುತ್ತಿದ್ದವರು ಬಹಳ ಕಡಿಮೆ. ಎಲ್ಲರ ಮೇಲೂ ಗಾಂಧಿ ಪ್ರಭಾವ. ವೈಯುಕ್ತಿಕ ಬದುಕಿಗಿಂತ ದೇಶದ ಸ್ವಾತಂತ್ರ್ಯಕ್ಕೆ ಆದ್ಯತೆ. ಆದರಿಂದಲೇ ಇವರೆಲ್ಲರ ವೈಯಕ್ತಿಕ ಬದುಕು ದೊಡ್ಡಸೊನ್ನೆ. ತಂದೆತಾಯಿ, ಹೆಂಡತಿ, ಮಕ್ಕಳ ಬಗ್ಗೆ ಚಿಂತಿಸದವರಲ್ಲ, ಆ ದೃಷ್ಟಿಯಿಂದ ಇವರೆಲ್ಲ ಕರ್ತವ್ಯಭ್ರಷ್ಟರು. ದೇಶ- ರಾಜ್ಯದ ವಿಚಾರ ಬಂದಾಗ ಇವರು ಯಾರಿಗೂ ಸೊಪ್ಪು ಹಾಕುತ್ತಿರಲಿಲ್ಲ, ಜೈಲಿಗೆ ಹೋಗಿ ಬರುವುದು, ಬ್ರಿಟಿಷರು- ಅರಸೊತ್ತಿಗೆ ವಿರುದ್ಧ ಘೋಷಣೆ ಕೂಗುವುದು, ಪೊಲೀಸರಿಂದ ಲಾಠಿ ಏಟು ತಿನ್ನುವುದು ಹೊಸದೇನೂ ಅಲ್ಲ, ಮನೆಯವರ ದೃಷ್ಟಿಯಲ್ಲಿ ಇವರು ಕೆಲಸಕ್ಕೆ ಬಾರದವರು. ಸಮಾಜದ ದೃಷ್ಟಿಯಲ್ಲಿ ಇವರು ಬಹಳ ಬೇಕಾದವರು. ಆದರಿಂದಲೇ ಇವರಿಗೆ ನೆಂಟರಿಗಿಂತ ಸ್ನೇಹಿತರೇ ಹೆಚ್ಚು.

ಸ್ವಾತಂತ್ರ್ಯ ಹೋರಾಟದೊಂದಿಗೆ ಸಾಮಾಜಿಕ ಹಾಗೂ ಆರ್ಥಿಕ ಅನಿಷ್ಟಗಳ ವಿರುದ್ಧ ಹೋರಾಟ. ಸಮಾಜದ ಕಟ್ಟ ಕಡೆಯ ಮನುಷ್ಯನಿಗೆ ಮೊತ್ತ ಮೊದಲ ಅವಕಾಶ ಎಂಬುದೇ ಇವರ ಜೀವನ ಮಂತ್ರ. ರಾಜಕೀಯ ಇವರಿಗೆ ಮೈಲಿಗೆ ವಸ್ತುವಾಗಿರಲಿಲ್ಲ, ವೃತ್ತಿಯೂ ಆಗಿರಲಿಲ್ಲ, ಆಗಿನ ಕಾಲದಲ್ಲಿ ಸ್ವಾತಂತ್ರ್ಯಹೋರಾಟಗಾರರೆಲ್ಲ ಕಾಂಗ್ರೆಸ್ಸಿಗರೇ. ಆದರೆ ಈಗಿನ ಕಾಂಗ್ರೆಸ್ ಅಲ್ಲ.ಸ್ವಾತಂತ್ರ್ಯ ಬರುವ ವೇಳೆಗೆ ಕಾಂಗ್ರೆಸ್ಸಿನ ಅವನತಿ ಆರಂಭಗೊಂಡಿತ್ತು. ಯುವಕರು ನೆಹರೂ ಬಿಟ್ಟು ಹೊಸ ನಾಯಕರನ್ನು ಹುಡುಕಲು ಆರಂಭಿಸಿದ್ದರು. ಆಗ ಕಂಡವರೇ ಜೆಪಿ- ರಾಮ ಮನೋಹರ ಲೋಹಿಯಾ.

ದೇಶದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಸಮಾಜವಾದ ಸೂಕ್ತ ಎನಿಸಿತು. ಎಡಪಂಥೀಯ ಮತ್ತು ಬಲ ಪಂಥೀಯ ಧೋರಣೆಗಳ ನಡುವೆ ಗಾಂಧಿವಾದವನ್ನಿಟ್ಟುಕೊಂಡು ಸುಧಾರಣೆ ತರಲು ಸಮಾಜವಾದ ಸರಿಯಾದ ಮಾರ್ಗ ಎನಿಸಿತು. ಇದರಲ್ಲೇ ವಿನೋಬಾ ಅವರ ಭೂದಾನ ಚಳವಳಿಯೂ ಹೊಸ ಅರ್ಥ ಪಡೆಯಲು ಸಾಧ್ಯವಾಯಿತು. ಕಾಂಗ್ರೆಸ್ಸಿನ ಬೂರ್ಜ್ವಾ ನೀತಿಯಿಂದ ದೂರವಿರುವ ಕಮ್ಯೂನಿಸ್ಟ್ ಹಾಗೂ ಆರ್‌ಎಸ್‌ಎಸ್ ಮಾನಸಿಕ ಹಿಂಸೆಯಿಂದ ಹೊರತಾದ ಸಮಾಜವಾದ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಸೂಕ್ತ ರಾಜಕೀಯ ವ್ಯವಸ್ಥೆ ಎನಿಸಿತು. ಆದರಿಂದಲೇ ಜೆಪಿ- ಲೋಹಿಯಾ ಹಿಂದೆ ಯುವಕರ ದಂಡು ಸಿದ್ಧವಾಯಿತು.

2

ಇದು ಖಾದ್ರಿ ಶಾಮಣ್ಣ ಬೆಳೆದು ಬಂದ ಅಂದಿನ ವಾತಾವರಣದ ಚಿತ್ರಣ. ಇದರ ಪ್ರಭಾವದಿಂದ ಅವರ ಬರಹಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ಗಾಂಧಿವಾದ, ಸರ್ವೋದಯ ತತ್ವಗಳು ಎದ್ದು ಕಾಣುತ್ತಿದ್ದವು. ಯಾವುದೇ ಪತ್ರಿಕೆಯಲ್ಲಿ ಕೆಲಸ ಮಾಡಲಿ ಈ ತತ್ವಗಳ ಪ್ರತಿಪಾದನೆ ಪ್ರಮುಖವಾಗಿತ್ತು.

ಈ ಪುಸ್ತಕ ಸಿದ್ಧಪಡಿಸಲು ನೆರವಾದವರು ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಪದಾಧಿಕಾರಿಗಳು ಮಾಧ್ಯಮ ಅಕಾಡಮಿಯ ಶ್ರೀ ಮುಕುಂದ ಪುರೋಹಿತ್ ಹಾಗೂ ಕನ್ನಡ ಗೆಳೆಯರ ಬಳಗದ ಮಿತ್ರ ಶ್ರೀ ರಾ.ನಂ.ಚಂದ್ರಶೇಖರ್, ಶ್ರೀ ಲಕ್ಷ್ಮಣ ಕೊಡಸೆ, ಹೊರೆಯಾಲ ದೊರೆಸ್ವಾಮಿ ಹಾಗೂ ಹಸ್ತಪ್ರತಿ ಸಿದ್ಧಪಡಿಸಲು ನೆರವಾದ ಶ್ರೀ ಪ್ರೇಮ್. ಅವರೆಲ್ಲರಿಗೂ ಲೇಖಕ ಆಭಾರಿ. ಪುಸ್ತಕದಲ್ಲಿ ಲೇಖನ ಮತ್ತು ಸಂಪಾದಕೀಯಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಮಯೂರ ಹಾಗೂ ಕನ್ನಡಪ್ರಭ ಪತ್ರಿಕೆಗಳ ಸಂಪಾದಕರಿಗೆ ಕೃತಜ್ಞತೆಗಳು.

ಈ ಪುಸ್ತಕ ಹೊರಬರಲು ಮೂಲಪ್ರೇರಣೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಸಿದ್ದಲಿಂಗಯ್ಯ ಮತ್ತು ಪ್ರಾಧಿಕಾರದ ಸದಸ್ಯರಿಗೆ ಹಾಗೂ ಆಡಳಿತಾಧಿಕಾರಿಗಳಾದ ಅಶೋಕ ಎನ್.ಚಲವಾದಿ ಅವರಿಗೆ ಗೌರವಪೂರ್ವಕ ನಮನ.

– ಹೆಚ್. ಆರ್. ಶ್ರೀಶ

# ಪರಿವಿಡಿ


| | | |
|---|---|---|
| 1. | ಪ್ರಸ್ತಾವನೆ | 1 |
| 2. | ಬಾಲ್ಯ | 9 |
| 3. | ವಿದ್ಯಾಭ್ಯಾಸ | 14 |
| 4. | ಆಸಕ್ತಿ-ಪ್ರೇರಣೆ | 16 |
| 5. | ರಾಜಕೀಯ ವರಸೆ | 18 |
| 6. | ಕಾಗೋಡು ಸತ್ಯಾಗ್ರಹ | 19 |
| 7. | ಗೋಕಾಕ ಚಳವಳಿ | 25 |
| 8. | ಹೊಸ ಹಾದಿಯಲ್ಲಿ ಕನ್ನಡ ಚಳವಳಿ | 32 |
| 9. | ದಿಕ್ಕು ಬದಲಾದ ಸಂಘರ್ಷ | 42 |
| 10. | ಕನ್ನಡ ಜಾಗೃತಿಗೆ ಸ್ಪಷ್ಟನೆಲೆ | 47 |
| 11. | ಕನ್ನಡ ದೂರದರ್ಶನ - ದಶಕದ ಯಶಸ್ವಿ ಹೋರಾಟ | 52 |


## ಖಾದ್ರಿ ಸಂಪಾದಕೀಯ ಲೇಖನಗಳು


| | | |
|---|---|---|
| 12. | ಅವಿರತ ಹೋರಾಟ | 61 |
| 13. | ವಿಧಿ ಲಿಖಿತ | 64 |
| 14. | ಜೀವಧ್ವನಿ | 67 |
| 15. | ಸಾತ್ವಿಕ ಸಂಘರ್ಷ | 70 |
| 16. | ಕನ್ನಡಕ್ಕೆ ಕುತ್ತು | 72 |
| 17. | ಕೆಂಡದೊಡನೆ ಸರಸ | 74 |
| 18. | ಎದ್ದು ನಿಲ್ಲೋಣ | 76 |
| 19. | ಕನ್ನಡದ ಕಳಕಳಿ | 78 |
| 20. | ಎಚ್ಚರಿಕೆಯ ಗಂಟೆ | 90 |
| 21. | ಅನನ್ಯ ನಮನ | 93 |
| 22. | ಪಣ ತೊಡೋಣ | 96 |
| 23. | ಭುಗಿಲೆದ್ದ ಹಳ್ಳಿಗಾಡು | 98 |

| | | |
|---|---|---|
| 24. | ರಸಋಷಿ | 101 |
| 25. | ಬೆಂಕಿ ಬಿದ್ದಿದೆ, ಬನ್ನಿ... | 103 |
| 26. | ಅಸಮಾನ ಬೀಚಿ | 106 |
| 27. | ದಿಟ, ದಿಟ್ಟ | 108 |
| 28. | ಒಡೆಯರು ಬಂದಿದ್ದಾರೆ... | 110 |
| 39. | ದಿಟ್ಟ ಹೆಜ್ಜೆ ಹಾಕೋಣ | 111 |
| 30. | ವಿಚಾರ ಗ್ರಾಸ | 113 |

**ಚಿತ್ರ ಸಂಪುಟ** **117**

# ಪ್ರಸ್ತಾವನೆ
# ಕನ್ನಡ ಗದ್ಯದ ಬಲು ದೊಡ್ಡ ವ್ಯವಸಾಯಿ

ಖಾದ್ರಿ ಶಾಮಣ್ಣ ಬೌದ್ಧಿಕವಾಗಿ, ಶಾರೀರಿಕವಾಗಿ ಆಜಾನುಬಾಹು. ಭಾಷಣ-ಬರಹಗಳೆರಡರಲ್ಲೂ ಕನ್ನಡಕ್ಕೆ ಹೊಸತನ ತಂದ ಗಟ್ಟಿಗ-ಕನ್ನಡಿಗ. ಕನ್ನಡ ಪತ್ರಿಕೋದ್ಯಮಕ್ಕೆ ವಿಚಾರದ ಲೇಪ ಹಚ್ಚಿ ಓದುಗರ ಮನಸೂರೆಗೊಂಡವರು. ವಿಷಯ ವಿಸ್ತಾರ, ವಿಚಾರ ಪ್ರತಿಪಾದನೆ-ಪ್ರಚೋದನೆ, ಪಂಡಿತ-ಪಾಮರರಿಬ್ಬರ ನುಡಿಕಟ್ಟುಗಳ ಲೀಲಾಜಾಲ ಬಳಕೆ-ಖಾದ್ರಿ ಹೆಗ್ಗಳಿಕೆ-ಅಗ್ಗಳಿಕೆ. ಕನ್ನಡ ಗದ್ಯದಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರ ತರುವಾಯ ಅವರ ಜಾಡಿನಲ್ಲೇ ಸಾಗಿ ಹೊಸ ನಮೂನೆ ಗದ್ಯ ರಚನೆ ಹರಿಕಾರ ಖಾದ್ರಿ ಶಾಮಣ್ಣ.

ಕೆಲವು ಪತ್ರಕರ್ತರು ತಮ್ಮ ಸರ್ವಸ್ವವನ್ನು ತಮ್ಮ ಪತ್ರಿಕೆಗಳಿಗೆ ವಿನಿಯೋಗಿಸುತ್ತಾರೆ. ಇನ್ನು ಕೆಲವರು ಬೇರೆಯಾಗಿ ತಮ್ಮ ವೃತ್ತಿ ಅನುಭವಜನ್ಯ ಸಂಗತಿಗಳನ್ನು ಉಪಯೋಗಿಸಿ ಕೊಂಡು ಪುಸ್ತಕ ಬರೆಯುತ್ತಾರೆ. ಶಾಮಣ್ಣ ಮೊದಲ ಗುಂಪಿಗೆ ಸೇರಿದ ಲೇಖಕರು.

ಮೈಸೂರು ತಾತಯ್ಯ, ಡಿ.ವಿ.ಜಿ., ತಿ.ತಾ.ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ, ಕಡೆಂಗೋಡ್ಲು ಶಂಕರಭಟ್ಟರು ಮುಂತಾದವರ ನಂತರದ ಪೀಳಿಗೆಯವರಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಹೆಸರು.

ತೀಕ್ಷ್ಣ ಕೊರಲಗಿನ ಸಂಪಾದಕೀಯಗಳಿಗೆ, ರಂಗುರಂಗಾದ ನುಡಿ ಚಿತ್ರಗಳಿಗೆ, ರೋಚಕ ತಲೆ ಬರಹಗಳಿಗೆ, ವ್ಯಕ್ತಿ-ಊರು-ದೇಶಗಳ ಹೆಸರನ್ನು ಕರಾರುವಕ್ಕಾಗಿ ಹೇಳುವ ಪತ್ರಕರ್ತನ ಸಹಜ ಪ್ರತಿಭಾವಂತಿಕೆಗೆ ಮತ್ತೊಂದು ಹೆಸರು ಖಾದ್ರಿಶಾಮಣ್ಣ.

ಅವರಿಗೆ ಪತ್ರಿಕೋದ್ಯಮ ಒಂದು ದೀಕ್ಷೆಯಾಗಿತ್ತು. ಹೊಟ್ಟೆಪಾಡಿಗಾಗಿ ವೃತ್ತಿ ಅರಸಿಕೊಂಡು ಬಂದವರಲ್ಲ, ಅವರ ಸ್ವಧರ್ಮವೇ ಪತ್ರಿಕೋದ್ಯಮ. ವಿಚಾರಪ್ರಸಾರ ಅವರ ಮೂಲ ಮಂತ್ರ.

ಕನ್ನಡದ ಕೂಗಾಗಲಿ, ಸಮಾಜದ ತುಳಿತಕ್ಕೊಳಗಾದವರ ದನಿಯಾಗಲಿ, ಮಹಿಳೆಯರ ಆರ್ತನಾದವಾಗಲಿ-ಖಾದ್ರಿಯವರ ಲೇಖನಿಗೆ ಅವನ್ನೆಲ್ಲ ಮನಮುಟ್ಟುವಂತೆ ಚಿತ್ರಿಸುವ ಸತ್ವ-ಕಸುವು ಇತ್ತು. ಇಂದಿಗೂ, ಅವರ 'ಒಡೆಯರು ಬಂದರು, ದಾರಿಬಿಡಿ' ಸಂಪಾದಕೀಯ ಎಲ್ಲರ ಬಾಯಲ್ಲೂ ಹಚ್ಚ ಹಸಿರು.

ಸಿದ್ದವನಹಳ್ಳಿಯವರಿಗೆ ಖಾದ್ರಿಶಾಮಣ್ಣ ಅವರ ವಿಚಾರದಲ್ಲಿ ಅಪಾರ ಪ್ರೇಮ. ಸ್ವತಃ ಖಾದ್ರಿಯವರೇ ಇದನ್ನು ವಿವರಿಸಿದ್ದಾರೆ:

''ಹಳ್ಳಿ ಹಳ್ಳಿ ತಿರುಗಿ ನಾನು ಹೊತ್ತು ಹಾಳು ಮಾಡುತ್ತಿದ್ದೇನೆಂದು ಅವರ ಆಕ್ಷೇಪ. ಒಂದುದಿನ ಮೆಜೆಸ್ಟಿಕ್ ಚೌಕದಲ್ಲಿ ನನ್ನನ್ನು ಕಂಡುನಿಂತರು. ಹತ್ತಿರ ಕರೆದರು. 'ನೀವು ಸ್ವಧರ್ಮ ಬಿಟ್ಟಿದ್ದೀಯೆ. ಪತ್ರಿಕೆಯೇ ನಿನ್ನನೆಲೆ. ನೀನು ಅಲ್ಲಿಗೇ ಹಿಂತಿರುಗಬೇಕು'' ಎಂದರು. ನಾನು ಸಮ್ಮತಿಸಿ, ನಕ್ಕೆ. ಆ ಮಾತನ್ನು ಆಣತಿಯೆಂದು ಭಾವಿಸಿದೆ. ಪತ್ರಿಕಾಲಯ ದಿಂದ ಹೊರಗಿದ್ದಾಗಲೂ ಪತ್ರಿಕಾವೃತ್ತಿ ಬಿಟ್ಟಿರಲಿಲ್ಲ. ಅಂತೆಯೇ ಮರುಪ್ರವೇಶ ಕಷ್ಟವೇ ಆಗಲಿಲ್ಲ.

ನನಗೆ ಪತ್ರಿಕಾವೃತ್ತಿಯಲ್ಲಿ ನಿತ್ಯ ನಿರಂತರ ಆಸ್ಥೆ ಉಂಟುಮಾಡಿದ ಕೀರ್ತಿ ಶರ್ಮಾಜೀಯದು. 1942ರ ಆಂದೋಲನದ ಕಾಲದಲ್ಲಿ ಸೆರೆಮನೆಯಲ್ಲಿದ್ದಾಗ ಗಾಂಧೀಜಿಯ 70ನೆಯ ಹುಟ್ಟುಹಬ್ಬಕ್ಕಾಗಿ ಡಾ||ರಾಧಾಕೃಷ್ಣನ್ ಸಂಭಾವನಾ ಗ್ರಂಥ ಸಿದ್ಧ ಪಡಿಸಿದ್ದರು. ಅದರ ಅನೇಕ ಲೇಖನಗಳನ್ನು ಭಾಷಾಂತರಿಸಿದ್ದೆ. ಅವನ್ನೆಲ್ಲ ಒಂದೊಂದಾಗಿ ವಿಶ್ವಕರ್ನಾಟಕದಲ್ಲಿ ಪ್ರಕಟಿಸಿದವರು, ಶರ್ಮಾಜೀ ಬೆನ್ನುತಟ್ಟಿದರು. ತಪ್ಪುತೋರಿಸಿ ಕೊಟ್ಟರು. ಹುರುಪುಕೊಟ್ಟು ಅಖಾಡಕ್ಕೆ ಇಳಿಸಿದರು''.

ಖಾದ್ರಿ ಶಾಮಣ್ಣ ಹಾಗೂ ಎಚ್.ವೈ.ಶಾರದಾಪ್ರಸಾದ್ ನಡುವೆ ಸುಮಾರು ಐವತ್ತು ವರ್ಷಗಳಿಗೂ ಹೆಚ್ಚಿನ ಆತ್ಮೀಯ ಗೆಳೆತನ. ಖಾದ್ರಿ ಕುರಿತು ಪ್ರಸಾದರ ಮಾತು ಪದೇಪದೇ ಮೆಲುಕು ಹಾಕುವ ಸವಿ-ರುಚಿ ಹೊಂದಿವೆ. ''ವಿದ್ಯಾರ್ಥಿ ದೆಸೆಯಿಂದಲೇ ಭಾಷೆಯ ಮೇಲೆ ಒಳ್ಳೆಯ ಸ್ವಾಮ್ಯ. ರಾಜಕೀಯದಲ್ಲಿ ಹರಿತವಾದ ಪ್ರಜ್ಞೆ, ಗಾಂಧೀವಾದದ ಬಗ್ಗೆ ಒಲವು ಮಾತ್ರವಲ್ಲ, ಒಳ್ಳೆ ಪ್ರಜ್ಞೆ.

ಖಾದ್ರಿ ನೀತಿಯುತ ನಿಲುವು, ಅದನ್ನು ಪ್ರತಿಪಾದಿಸುವುದರಲ್ಲಿ ಆತನ ವಚನ ವೈಭವಗಳ ಬಗ್ಗೆ ನನ್ನ ಮೆಚ್ಚುಗೆ ಎಂದಿನಂತಿತ್ತು. ಆತನ ಮನಸ್ಸು ವಿಶಾಲವಾಗಿತ್ತು. ಹಿಡಿದ ಪಟ್ಟನ್ನು ಸುಲಭವಾಗಿ ಬಿಡುತ್ತಿರಲಿಲ್ಲ, ಕನ್ನಡ ಗದ್ಯದ ದೊಡ್ಡ ವ್ಯವಸಾಯಿ''.

ಖಾದ್ರಿ ಶಾಮಣ್ಣ ನಮ್ಮ ಮನೆ-ಮಂದಿ-ಬಂಧು ಬಳಗಕ್ಕೆಲ್ಲ ಅಣ್ಣ. ತಂದೆತಾಯಿಯ ಪ್ರೀತಿಯ ಹಿರೇ ಮಗ 'ಚಾಮು'ವನ್ನು ಕುರಿತು ಆಡುತ್ತಿದ್ದ ಮಾತು ಹೆಚ್ಚಾಗಿ ಮಾತುಗಳು ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಫಲಾಪೇಕ್ಷೆಯಿಲ್ಲದೆ ತಮ್ಮ ಭವಿಷ್ಯವನ್ನು ಒತ್ತೆ ಇಟ್ಟು ಗಾಂಧೀ ಮಹಾತ್ಮನ ಮೋಡಿಗೆ ಸಿಲುಕಿ ಮನೆಯನ್ನು ಮರೆತ ನೂರಾರು-ಸಾವಿರಾ ಮಧ್ಯಮವರ್ಗದ ಯುವಕರ ಮನೆಗಳವರ ಹಳಹಳಿಯೇ ಈ ಮನೆಯಲ್ಲೂ ಮಾರ್ದನಿಸಿತ್ತು. ಪದೇಪದೇ ಅವರ ತಂದೆ ಹೇಳುತ್ತಿದ್ದ ಮಾತು: ''ನನ್ನ ಹಿರೇಮಗನನ್ನು ದೇಶಕ್ಕೆ ಬಿಟ್ಟಿರುವೆ''.

ಮೇಲುಕೋಟೆ ವೈದಿಕ ಕುಟುಂಬದಲ್ಲಿ 1925ರ ಜೂನ್ 6ರಂದು ಜನನ. ಊರಿನಲ್ಲಿ ಪ್ರಾಥಮಿಕ ಶಿಕ್ಷಣ. ಆಗಲೇ ಸಂಸ್ಕೃತ ಕಲಿಕೆ. ಆರೇಳು ವರ್ಷದ ಬಾಲಕನಾಗಿರುವಾಗಲೇ

ಮದ್ರಾಸಿನಲ್ಲಿ ನೆಲೆಸಿದ್ದ ಚಿಕ್ಕಪ್ಪ ಹಾಗೂ ಅತ್ತೆಯರ ಪ್ರಭಾವ. ಚಿಕ್ಕಪ್ಪನೊಡನೆ ಮರೀನಾ ದಂಡೆಯ ಮೇಲೆ ನಡೆಯುತ್ತಿದ್ದ ರಾಜಕೀಯ ಮುಖಂಡರ ಭಾಷಣ ಕೇಳುವ ಸದವಕಾಶ; ಎಳೆಯ ಖಾದ್ರಿಯಲ್ಲಿ ಅಲ್ಲಿಂದಲೇ ರಾಷ್ಟ್ರೀಯ ವಿಚಾರದ ಬೀಜಾಂಕುರ.

ಮೈಸೂರಿನಲ್ಲಿ ಮಹಾರಾಜ ಹೈಸ್ಕೂಲಿನಲ್ಲಿ ಓದು. ಆಗಲೇ ತಮ್ಮ ಹಿರಿಯ ವಿದ್ಯಾರ್ಥಿಗಳನ್ನು ಮಾತಿನಲ್ಲಿ ಮಣ್ಣು ಮುಕ್ಕಿಸುತ್ತಿದ್ದ ಗತ್ತು-ಗಮ್ಮತ್ತು. ಸೀನಿಯರ್ ಇಂಟರ್ ವೇಳೆಗೆ ಸ್ವಾಮಿ ವಿವೇಕಾನಂದ-ಪರಮಹಂಸರ ಪ್ರಭಾವ. ಆಗಿನಿಂದಲೇ ಪ್ರತಿಭಟನೆ ಅವರ ವ್ಯಕ್ತಿತ್ವದ ಅಭಿನ್ನ ಅಂಶ. ಕಂದಾಚಾರದ ವಿರುದ್ಧ, ಸಂಪ್ರದಾಯದ ವಿರುದ್ಧ ಬಂಡೆದ್ದರು. (ಬಲವಂತವಾಗಿ ಉಪನಯನ ಮಾಡಿದಾಗ ಜನಿವಾರ ಕಿತ್ತೆಸೆದು ಹೊರಬಂದರು.) ಪ್ರತಿತಿಂಗಳು ಒಂದು ರೂಪಾಯಿ ಸ್ಕಾಲರ್‌ಶಿಪ್‌ಗಾಗಿ ಜುಟ್ಟು ಬಿಟ್ಟುಕೊಂಡು ನಾಮ ಹಾಕಿಕೊಂಡು ಮೈಸೂರಿನ ಲಕ್ಷ್ಮೀಪುರಂನ ಸಾಹುಕಾರರ ಮನೆಯ ಮುಂದೆ ಅಜ್ಞನ ಬಲವಂತಕ್ಕೆ ನಿಲ್ಲಬೇಕಾಗುತ್ತಿತ್ತು. ಆ ಮನೆಯವರು ಭಿಕ್ಷೆಯಂತೆ ನೀಡುತ್ತಿದ್ದ ಒಂದು ರೂಪಾಯಿ ಖಾದ್ರಿ ಶಾಮಣ್ಣ ಅವರ ಜಾತಿ ವಿರುದ್ಧ ಸಿಡಿದೇಳಲು ಮೂಲವಾಯಿತು. ಅಲ್ಲೇ ಅವರ ಮನದಾಳದ ಸಮತೆಗಾಗಿ ತುಡಿತ ಪುಟಿಯಿತು.

ಸಹಜವಾಗಿಯೆ ಅಂದಿನ ಸಮಾಜವಾದಿ ಚಳವಳಿ ಹಿರಿಯರಾದ ಜಯಪ್ರಕಾಶ್ ನಾರಾಯಣ್, ಡಾ|| ಲೋಹಿಯಾ ಕಡೆಗೆ ಹೆಚ್ಚು ಆಕರ್ಷಿತರಾದರು. ಸ್ವಾತಂತ್ರ್ಯ ಚಳವಳಿಗೆ ವಿದ್ಯಾರ್ಥಿ ಚಳವಳಿ ಮೂಲಕ ಪ್ರವೇಶ. ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದ ಬಹುಮಾನದ ಹಣ ಐದು ರೂಪಾಯಿ. ಅದಕ್ಕೆ ಪಡೆದುಕೊಂಡದ್ದು ಗಾಂಧೀಜಿ 'ಯಂಗ್ ಇಂಡಿಯಾ' ಸಂಪುಟ. ಆಸಕ್ತಿಯಿಂದ ಓದಿ ಮುಗಿಸಿದೆ ಎನ್ನುತ್ತಾರೆ ಖಾದ್ರಿ. 'ಗಣಿತದ ತರಗತಿಯಲ್ಲಿ ಕುಳಿತು ಕಾರ್ಲ್‌ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಓದಿದೆ' ಎಂದು ಕಿರಿಯರೊಡನೆ ಹೇಳಿಕೊಳ್ಳುತ್ತಿದ್ದರು. ರಾಷ್ಟ್ರೀಯ ಸಂಗ್ರಾಮ ಅವರನ್ನು ಈ ಪುಸ್ತಕ ಓದುವ ಗೀಳಿಗೆ ಹಚ್ಚಿತು. ಅದಕ್ಕೆ ಪ್ರೋತ್ಸಾಹ ಎಚ್.ಕೆ.ವೀರಣ್ಣಗೌಡರು.

ಆ ವೇಳೆಗಾಗಲೇ ಗಾಂಧೀಜಿಯ 'ಹರಿಜನ' ಪತ್ರಿಕೆಯನ್ನು ವಾರವಾರವೂ ಒಂದು ಅಕ್ಷರವೂ ಬಿಡದೆ ಓದುತ್ತಿದ್ದೆ ಎಂದು ಖಾದ್ರಿ ಹೇಳಿದ್ದಾರೆ.

1942ರ 'ಚಲೇಜಾವ್' ಚಳವಳಿ ನೂರಡಿ ರಸ್ತೆಯ ಫಲಹಾರ ಮಂದಿರದಲ್ಲಿ ಕುಳಿತು ಗಾಂಧೀಜಿ ಹಾಗೂ ಇತರೆ ನಾಯಕರ ಬಂಧನದ ರೇಡಿಯೋ ಸುದ್ದಿ ಕೇಳಿ ವಿದ್ಯಾರ್ಥಿಗಳು ಹೋರಾಟಕ್ಕೆ ಇಳಿದರು. ಶಾಲಾಕಾಲೇಜುಗಳಿಗೆ ಬಹಿಷ್ಕಾರ ಸಂಘಟಿಸುವುದರಲ್ಲಿ ಗೆಳೆಯರೊಡನೆ ನಿರತ. ಅಂದು ಸಂಜೆ ಸುಬ್ಬರಾಯನಕೆರೆ ಮೈದಾನದಲ್ಲಿ ಸಾರ್ವಜನಿಕ ಸಭೆ. ''ಎಂ.ಎನ್.ಜೋಯಿಸರ ಸಿಂಹಗರ್ಜನೆ ಎದುರಿನ ಸೀತಾವಿಲಾಸ ಛತ್ರದಿಂದ ಮಾರ್ದನಿಸುತ್ತಿತ್ತು. ಆ ಸಭೆಯಲ್ಲಿ ಮಾತನಾಡಿದ ಮೊಟ್ಟಮೊದಲ ವಿದ್ಯಾರ್ಥಿ ಖಾದ್ರಿ ಶಾಮಣ್ಣ. ಯಾರ ಭೀತಿಯೂ ಇರಲಿಲ್ಲ. ಗಾಂಧೀಜಿಯ ಅಪ್ಪಣೆ ಮಾತ್ರ ಕಿವಿಯಲ್ಲಿ

ಮೊಳಗುತ್ತಿತ್ತು. ಅತ್ಯಂತ ರೋಮಾಂಚಕಾರಿ ಸನ್ನಿವೇಶ. 'ಇಗೋ ಹೊರಟೆವು ಬಿಡುಗಡೆಯಾಗಿ ಬಹರಾರು ನಮಗಿದಿರಾಗಿ' ವರಕವಿ ಬೇಂದ್ರೆಯವರ ಈ ಸಾಲುಗಳು ನಮ್ಮ ನಾಲಿಗೆಯ ಮೇಲೆ ನಲಿದವು. ಸ್ವಾತಂತ್ರ್ಯಕ್ಕಾಗಿ ಏನೆಲ್ಲ ಮಾಡಬಹುದು ಅದನ್ನೆಲ್ಲ ಮಾಡಿಯೇ ತೀರಬೇಕು. ಈ ಕೆಚ್ಚು ನಮ್ಮನ್ನಾವರಿಸಿತು'' ಎಂದು ಖಾದ್ರಿ ಬರೆದು ಕೊಂಡಿದ್ದಾರೆ.

ಇಂಟರ್‌ಮೀಡಿಯಟ್ ಓದಿಗಾಗಿ ಯುವರಾಜರ ಕಾಲೇಜಿಗೆ. ಆದರೆ ಚಳವಳಿ ಅವರನ್ನು ಬಿಡಲಿಲ್ಲ. ಮಹಾರಾಜರ ಕಾಲೇಜಿನ ಗ್ರಂಥಭಂಡಾರದಲ್ಲಿ ಖಾದ್ರಿ ಗೆಳೆಯರ ಗುಂಪು ನಾಡಬಾಂಬೊಂದನ್ನು ಇಟ್ಟಿತ್ತು. ಅದು ಆಸ್ಫೋಟಗೊಂಡಾಗ ಅಲ್ಲೋಲಕಲ್ಲೋಲ. ಪೊಲೀಸರ ಕೈಗೆ ಶ್ರೀರಂಗಪಟ್ಟಣದ ಕಿರಂಗೂರು ಸೇತುವೆ ಬಳಿ ಸಿಕ್ಕಿ ಬಿದ್ದರು ಒಡನಾಡಿ ಕೃಷ್ಣಮೂರ್ತಿಯೊಡನೆ ಖಾದ್ರಿ. ಜೈಲುವಾಸ. ಕಾಲೇಜು ವಿದ್ಯಾಭ್ಯಾಸಕ್ಕೆ ವಿದಾಯ. ಲೋಕ ಜೀವನ ಶಿಕ್ಷಣಕ್ಕೆ ಪದಾರ್ಪಣ. 'ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೂ ಕಾಲೇಜಿಗೆ ಹೋಗುವುದಿಲ್ಲ' ಎಂಬ ಪ್ರತಿಜ್ಞೆ.

ಸೆರೆಮನೆಯಿಂದ ಬಿಡುಗಡೆಯಾದ ಬಳಿಕ 1944ರ ಮಧ್ಯಭಾಗದಲ್ಲಿ 'ಜನವಾಣಿ' ಪತ್ರಿಕೆ ಸೇರಿದರು. ಆರು ತಿಂಗಳು ಕಾಲ ಕೆಲಸ. ಹೋರಾಟಕ್ಕೆ ಪತ್ರಿಕಾ ವೃತ್ತಿಯೂ ತಕ್ಕ ಕಸುಬು ಎಂಬ ಆಶಯ ಚಿಗುರೊಡೆಯಿತು. ಅದು ಕೊನೆ ತನಕ ಅವರ ಉಸಿರಾಗಿತ್ತು.

1944ರ ನವೆಂಬರಿನಲ್ಲಿ ಗಾಂಧೀಜಿ ಆಶ್ರಮ ಸೇವಾಗ್ರಾಮಕ್ಕೆ. ಹಿಂದೂಸ್ತಾನೀ ತಾಲಿಮೀ ಸಂಘ ಏರ್ಪಡಿಸಿದ್ದ ಶಿಕ್ಷಣ ಶಿಬಿರದಲ್ಲಿ ಪಾಲ್ಗೊಂಡರು. ಅಲ್ಲಿ ಗಾಂಧೀಜಿ ಸಾನಿಧ್ಯ ತುಂಬ ಹುರುಪುಕೊಟ್ಟಿತು. ಬಾಪೂಗೆ ಬರುತ್ತಿದ್ದ ಗಾಡಿಗಟ್ಟಲೆ ಅಂಚೆಯಲ್ಲಿ ನೂರಾರು ಪತ್ರಿಕೆಗಳು. ಮುಖ್ಯ ಇಂಗ್ಲೀಷ್ ಪತ್ರಿಕೆಗಳನ್ನೆಲ್ಲ ಓದಿ ಗಾಂಧೀಜಿ ಅವಗಾಹನೆಗಾಗಿ ಇಡುವ ಕೆಲಸ ಕಾರ್ಯದರ್ಶಿ ನರಹರಿಪಾರೇಖ್ ಖಾದ್ರಿಗೆ ವಹಿಸಿದರು. ಅದೂ ಒಂದು ಶಿಕ್ಷಣವಾಗಿ ಪರಿಣಮಿಸಿತು. ಸೇವಾಗ್ರಾಮದಿಂದ ಹಲವಾರು ಕನ್ನಡಪತ್ರಿಕೆಗಳಿಗೆ ನಿಯಮಿತವಾಗಿ ಬರೆದರು. ವಿಶೇಷ ಸುದ್ದಿಗಳನ್ನು ಕಳುಹಿಸಿದರು.

ಸೇವಾಗ್ರಾಮದಿಂದ ಮರಳಿ ಮೈಸೂರಿಗೆ. ಎಚ್.ಸಿ.ದಾಸಪ್ಪ ದಂಪತಿಗಳ ನೇತೃತ್ವದಲ್ಲಿ ಕೆಲಸ. ನಂತರ ಗೆಳೆಯರ ಜತೆಗೂಡಿ ಕರ್ನಾಟಕ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸಂಘಟಿಸಲು ತೀರ್ಮಾನ. ಕಮಲಾದೇವಿ ಚಟ್ಟೋಪಾಧ್ಯಾಯ ಮಾರ್ಗದರ್ಶನ. ಕರ್ನಾಟಕದಾದ್ಯಂತ ಜಯಪ್ರಕಾಶನಾರಾಯಣರ ಪ್ರವಾಸ. ಮಂಗಳೂರಿನಲ್ಲಿ ಸೋಷಲಿಸ್ಟ್ ಸಮ್ಮೇಳನ. 'ಜಾಗೃತಿ' ಪತ್ರಿಕೆಯ ಸಂಪಾದಕನನ್ನಾಗಿ ಮಾಡಿ ಮುಂಬೈಗೆ ಕಮಲಾದೇವಿ ಕರೆದೊಯ್ದರು. ನಂತರ ಅದು ಧಾರವಾಡಕ್ಕೆ ಖಾದ್ರಿಯವರ ನೇತೃತ್ವದಲ್ಲೇ ಸ್ಥಳಾಂತರ. 1948ರ ಜೂನ್ ವೇಳೆಗೆ ಬೆಂಗಳೂರಿಗೆ ಪತ್ರಿಕೆವರ್ಗ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮೈಸೂರು ಸೀಮೆಯಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ ಪಾತ್ರ. 'ಜಾಗೃತಿ' ಕೆಲವು ಸಂಚಿಕೆಗಳು

ಬೆಂಗಳೂರಿನಲ್ಲಿ ಪ್ರಕಟಗೊಂಡವು. ಅರಸೊತ್ತಿಗೆ ಇಲ್ಲದ ಕರ್ನಾಟಕ ಆಗಲೇಬೇಕೆಂಬ ಲೇಖನ ಪತ್ರಿಕೆಯಲ್ಲಿ ಪ್ರಕಟವಾಯಿತು. ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಅಧಿಕಾರಕ್ಕೆ ಬಂದ ಕೆ.ಸಿ.ರೆಡ್ಡಿ ಸರ್ಕಾರ 'ಜಾಗೃತಿ' ಯಿಂದ ಐದು ಸಾವಿರ ರೂಪಾಯಿ ಠೇವಣಿ ಹಣ ಕೇಳಿತು. ಠೇವಣಿ ಹಣ ಕೊಡಲಿಲ್ಲ, ಆಗಲಿಲ್ಲ, ಪತ್ರಿಕೆ ನಿಂತುಹೋಯಿತು. 'ಜಾಗೃತಿ' ನಾಡಿನೆಲ್ಲೆಡೆ ಬಹು ಜನಪ್ರಿಯವಾಗಿತ್ತು. ಅದರಲ್ಲಿ ಬರುತ್ತಿದ್ದ ಖಾದ್ರಿಯವರ ರಾಜಕೀಯ ಲೇಖನಗಳನ್ನು ಜನರು ಅತ್ಯಂತ ಆಸಕ್ತಿಯಿಂದ ಎದಿರು ನೋಡುತ್ತಿದ್ದರು.

1948ರ ಏಪ್ರಿಲ್ 15. ನಾಸಿಕ್‌ನಲ್ಲಿ ಸಮಾಜವಾದಿ ಸಮ್ಮೇಳನ. ಖಾದ್ರಿ ಸಹ ಭಾಗವಹಿಸಿದ್ದರು. ಸೋಷಲಿಸ್ಟರು ಕಾಂಗ್ರೆಸ್ ಪಕ್ಷ ತೊರೆಯಲು ನಿರ್ಧರಿಸಿದರು.

ಖಾದ್ರಿ ಮರಳಿ ಕನ್ನಡ ಪತ್ರಿಕೋದ್ಯಮಕ್ಕೆ. ಪ್ರಜಾವಾಣಿ ಸೇರಿದರು. 1948 ರಿಂದ 50ರವರೆಗೆ ಅದರ ಸುದ್ದಿ ಸಂಪಾದಕ. ಆನಂತರ ಜಂಟೀ ಸಂಪಾದಕರಾದರು. (ಸಿ.ಜಿ.ಕೆ.ರೆಡ್ಡಿ ಜತೆಗೂಡಿ ಹಿಂದೂಸ್ತಾನ್ ವಿಮಾನ ಕಾರ್ಖಾನೆ ಕಾರ್ಮಿಕರ ಮುಷ್ಕರಕ್ಕೆ ಶೋಷಿತರ ಪರವಾದ ಶಾಮಣ್ಣ ಬೆಂಬಲ. 'ಪ್ರಜಾವಾಣಿ'ಗೆ ರಾಜೀನಾಮೆ. ಮರಳಿ ಸಮಾಜವಾದಿ ಆಮೇಲೆ ಸರ್ವೋದಯ ಚಳವಳಿಗಳಲ್ಲಿ ಸಕ್ರಿಯ.

1950-60ರ ದಶಕ: ಕರ್ನಾಟಕ ಎಲ್ಲೆಡೆ ಊರೂರು ಅಲೆತ. ಮೊದಲು ಸೋಷಲಿಸ್ಟ್ ಪಾರ್ಟಿ ಕಟ್ಟಲು. ಆಮೇಲೆ ವಿನೋಬಾ ಭೂದಾನ ಚಳವಳಿ ಪ್ರಚಾರಕ್ಕೆ. ಪ್ರಸಿದ್ಧ ಕಾಗೋಡು ಸತ್ಯಾಗ್ರಹದಲ್ಲಿ ಮಹತ್ವದ ಪಾತ್ರ. ಸ್ವಾತಂತ್ರ್ಯ ಬಂದ ನಂತರವೂ ಸೆರೆವಾಸ. 1952ರ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ, ಠೇವಣಿ ಉಳಿಸಿಕೊಂಡರು; ಪ್ರಬಲ ಕಾಂಗ್ರೆಸ್ ಸ್ಪರ್ಧಿಯ ವಿರುದ್ಧ. ಆ ಚುನಾವಣೆಗಾಗಿ ಖಾದ್ರಿ ಖರ್ಚು ಮಾಡಿದ್ದು ಕೇವಲ 350 ರೂಪಾಯಿ. ಇವೆಲ್ಲವನ್ನೂ ಸ್ವತಃ ಖಾದ್ರಿಯವರ ಬಾಯಲ್ಲೇ ಕೇಳುತ್ತಿದ್ದಾಗ ನಮಗೆ ಅನುಭವದ ಸುಗ್ಗಿಯ ಹುಗ್ಗಿ.

ಜಯಪ್ರಕಾಶ ನಾರಾಯಣರು ವಿನೋಬಾ ಮೋಡಿಗೆ ಬಿದ್ದು ಸರ್ವೋದಯದ ಕಡೆ ತಿರುಗಿದಾಗ, ಖಾದ್ರಿ ಅವರನ್ನು ಅನುಸರಿಸಿದರು. ಜೆ.ಪಿ. ಹಾಗೂ ವಿನೋಬಾ ಭಾಷಣಗಳ ಕನ್ನಡ ಭಾಷಾಂತರಕಾರರಾಗಿ ಮನಮುಟ್ಟುವ ಭಾಷಣ ಶೈಲಿ. ನಿಜವಾಗಿ ಜೆಪಿ ಮಾನಸಪುತ್ರ ಖಾದ್ರಿ.

ಮೈಸೂರಿನಲ್ಲಿ ಗಾಂಧೀಗ್ರಂಥಮಾಲೆಯಲ್ಲಿ ಪ್ರೊ.ಯಾಮುನಾಚಾರ್ಯರ ಜತೆಗೂಡಿ ಗಾಂಧೀ ಸಾಹಿತ್ಯವನ್ನು ಕನ್ನಡಕ್ಕೆ ತರುವ ಕೆಲಸದಲ್ಲಿ ಭಾಗಿ. ಗಾಂಧೀ 'ಅರ್ಥವಿಚಾರ' ಹಾಗೂ 'ರಾಜನೀತಿ' ಅನುವಾದಿಸಿದರು ಶಾಮಣ್ಣ.

ಪತ್ರಿಕೋದ್ಯಮದ ನಂಟು ಈ ಅವಧಿಯಲ್ಲೂ ಮುಂದುವರೆದಿತ್ತು. 1960ರಲ್ಲಿ ಮತ್ತೆ ಪತ್ರಿಕೋದ್ಯಮಕ್ಕೆ. ಸಂಯುಕ್ತ ಕರ್ನಾಟಕದ ಸುದ್ದಿ ಸಂಪಾದಕರಾಗಿ ಸೇರಿದರು. ಆಗ

'ವಿಶ್ವಮಿತ್ರ' ಎಂಬ ಹೆಸರಿನಲ್ಲಿ ವಾರ ವಾರವೂ ಬಿಡಿಸುತ್ತಿದ್ದ ನುಡಿಚಿತ್ರ, ವಾರದವ್ಯಕ್ತಿ ಬಹಳ ಜನಪ್ರಿಯವಾಗಿತ್ತು.

1963 ರಿಂದ 1965ರವರೆಗೆ ನಿಯತಕಾಲಿಕ ಪತ್ರಿಕೋದ್ಯಮದಲ್ಲಿ ಕೈ ಆಡಿಸಿದರು. ತಾಯಿನಾಡು ಬಳಗ ಹೊರತಂದ 'ಗೋಕುಲ' ವಾರಪತ್ರಿಕೆ ಸಂಪಾದಕರಾಗಿ ಖಾದ್ರಿ ಹೊಸತನ ತಂದರು. ವಿಚಾರ ಪ್ರಚೋದಕ ಲೇಖನಗಳು, ಅಂಕಣಗಳು, ಕಥಾಸಾಹಿತ್ಯ ಮೊದಲಾದವುಗಳಿಂದ ವೈವಿಧ್ಯಮಯವಾಗಿ ಬರುತ್ತಿದ್ದ 'ಗೋಕುಲ'ದಲ್ಲಿ ಖಾದ್ರಿಯವರ ಛಾಪು ಢಾಳವಾಗಿ ಕಾಣುತ್ತಿತ್ತು. ಪ್ರತಿವಾರದ ಸಂಚಿಕೆಯ ಹೊಸತನ ನಾಲ್ಕು ದಶಕಗಳ ನಂತರವೂ ಅದರ ಅಂದಿನ ಓದುಗರ ಮನಸ್ಸಿನಲ್ಲಿ ಈ ಹೊತ್ತಿಗೂ ಹಸಿರು. ಮುಕ್ತ ಮನಸ್ಸು ಅವರ ಅಂತಃಸತ್ವ. ಹೊಸ ಲೇಖಕರು, ಕಲಾವಿದರು 'ಗೋಕುಲ' ದಿಂದ ಬೆಳಕಿಗೆ ಬಂದವರು.

ಮುದ್ದಾದ ಅಕ್ಷರಗಳು. ಅಚ್ಚುಕಟ್ಟಾದ ಗಂಭೀರ ವಿಚಾರಮಂಡನೆ. ಉಡಾಫೆಗೆ ಆಸ್ಪದ ಇಲ್ಲ. ಯುವಪೀಳಿಗೆ ಪ್ರತಿಭೆ ಕಂಡರೆ ಬಹಳ ಮೆಚ್ಚುಗೆ, ಪ್ರೋತ್ಸಾಹ. ಗುರು-ಶಿಷ್ಯ ಪರಂಪರೆ ನೆನಪಿಸುವ ಧಾಟಿ. ಪೀಳಿಗೆಯ ಅಂತರ ಕಾಣದ ಕಾಡದ ಸತ್ರಕರ್ತ. ಸಂಪಾದಕೀಯಗಳನ್ನು ಮುಖಪುಟಕ್ಕೆ ತಂದ ಕೀರ್ತಿ ಖಾದ್ರಿಯವರದು.

ಖಾದ್ರಿ ಶಾಮಣ್ಣ ಅವರ ಬಾನುಲಿ ಭಾಷಣ, ಚಿಂತನ ಕಾರ್ಯಕ್ರಮಗಳು ಶ್ರೋತೃಗಳಿಗೆ ರಸಗವಳ. ಮೋಡಿ ಹಾಕುವ ಶೈಲಿ. ಅವಿಸ್ಮರಣೀಯ ಅನುಭವ.

ಅವರ ಭಾಷಾ ಪಾಂಡಿತ್ಯ ಇಂದಿಗೂ ಅವರ ಹೆಸರು ಹಸಿರಾಗಿರಲು ಕಾರಣ. ಸಂಸ್ಕೃತ, ಹಿಂದಿ, ಇಂಗ್ಲಿಷ್ ಜ್ಞಾನ ಖಾದ್ರಿ ಕನ್ನಡಕ್ಕೆ ಪೂಗದಸ್ತಾದ ಭೂಮಿಕೆ. ಇಂಗ್ಲಿಷ್ ಕುರುಡು ದ್ವೇಷವಲ್ಲ. ''ಎಲ್ಲಿಯವರೆಗೆ ಇಂಗ್ಲಿಷ್ ಭಾಷೆಯನ್ನು ತಲೆಯಮೇಲೆ ಹೊತ್ತು ಮೆರೆಸುವುದು? ಇಂಗ್ಲಿಷ್ ಗುಲಾಮಗಿರಿಯೇ ಇರಬೇಕೇ?'' ಎಂದು ತಮ್ಮ ಸಂಪಾದಕೀಯದಲ್ಲಿ ಮರುಸವಾಲು ಅವರದು. ಹಿಂದಿ ಒಲುಮೆ ಸ್ವಾತಂತ್ರ್ಯ ಹೋರಾಟ ಫಲ. ಸಂಸ್ಕೃತ ಬಾಲ್ಯದ ಬಳುವಳಿ. ಕನ್ನಡದ ಬಗ್ಗೆ ರಾಜೀ ಇಲ್ಲದ ಪ್ರೇಮ.

'ಪ್ರಜಾವಾಣಿ' ಪುನಃ 1965ರಲ್ಲಿ ಖಾದ್ರಿಯವರನ್ನು ಕೈಬೀಸಿ ಕರೆಯಿತು. 1974ರವರೆಗೆ ಪ್ರಜಾವಾಣಿಯ ಸುದ್ದಿ ಸಂಪಾದಕರಾಗಿ ಸುದ್ದಿ ವಿಭಾಗದ ಜೀವತಂತು ವಾಗಿದ್ದರು. ಲಂಡನ್ನಿನ ಥಾಂಸನ್ ಪ್ರತಿಷ್ಠಾನದಲ್ಲಿ ಪತ್ರಿಕೋದ್ಯಮ ಉನ್ನತ ತರಬೇತಿ ಪಡೆದದ್ದೂ ಇದೇ ಸಮಯದಲ್ಲಿ.

ಖಾದ್ರಿ ಶಾಮಣ್ಣ ಕನ್ನಡ ಪತ್ರಿಕೋದ್ಯಮದ ಜಂಗಮ. ಪ್ರಜಾವಾಣಿ ತೊರೆದು 'ಸಂಯುಕ್ತ ಕರ್ನಾಟಕ' ಬಳಗದ ಪ್ರಧಾನ ಸಂಪಾದಕರಾದರು. ಹೊಸಮುಖಗಳನ್ನು ಪತ್ರಿಕೋದ್ಯಮಕ್ಕೆ ಪರಿಚಯಿಸಿದರು.

1975ರ ತುರ್ತುಪರಿಸ್ಥಿತಿಯ ಕಾಲದಲ್ಲಿ ಅವರ ಚಡಪಡಿಕೆ ಸಮೀಪದಲ್ಲಿದ್ದವರಿಗೆ ಗೊತ್ತಾಗುತ್ತಿತ್ತು. ಅದರೂ ಭೂಗತ ಚಳವಳಿಯಲ್ಲಿ ಸಕ್ರಿಯ. ಜಾರ್ಜ್‌ಫರ್ನಾಂಡೀಸ್, ಸಿ.ಜಿ.ಕೆ.ರೆಡ್ಡಿ, ಬರೋಡಾ ಡೈನಮೆಟ್ ಪ್ರಕರಣದಲ್ಲಿ ಗುಪ್ತಗಾಮಿನಿಯಾಗಿ ಖಾದ್ರಿ ಕೆಲಸ ಮಾಡಿದರು. ಅನಂತರ ಬಿಡುಗಡೆಯಾದ 'ಬರೋಡ ಡೈನಮೆಟ್ ಸಂಚು' ಪುಸ್ತಕದ ಕನ್ನಡ ಅವತರಣಿಕೆ ಖಾದ್ರಿ ಲೇಖನಿಯಿಂದಲೇ ಮೂಡಿತು.

ಆಮೇಲೆ 1978ರಲ್ಲಿ 'ಕನ್ನಡಪ್ರಭ'ದ ಸಂಪಾದಕರಾದರು. ಕನ್ನಡ ಪತ್ರಿಕಾ ಓದುಗರ ಮನೆಮಾತಾದರು. ಅವರ ನಿಧನದವರೆಗೆ ಮೇ 11, 1990ರ ತನಕ ಸುದೀರ್ಘಕಾಲ ಸಂಪಾದಕರಾಗಿ ಸಂತೃಪ್ತ ಲೇಖನಿ ವ್ಯವಸಾಯ. ''ಆಡಳಿತ ಭಾಷೆಯಾಗಿ ಕನ್ನಡವನ್ನು ಎಲ್ಲ ಮಜಲುಗಳಲ್ಲಿ ಜಾರಿಗೆ ತರಬೇಕಾದುದು ಬರಿ ಅಭಿಮಾನದ ಮಾತೆಂದು ತಿಳಿಯಬಾರದು. ಜನತಂತ್ರದಲ್ಲಿ ಮತದಾರ ಪ್ರಭುವಿಗೆ ತಿಳಿಯುವ ಭಾಷೆಯಲ್ಲಿ ಆಡಳಿತ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡವೇ ಆ ಭಾಷೆ. ಇದು ಅನಿವಾರ್ಯ ಅಗತ್ಯ. ಇದನ್ನು ಜಾರಿಗೆ ತರದೇ ಕುಂಟುನೆಪಗಳನ್ನು ಒಡ್ಡುವುದು ಜನತೆಗೆ ಎಸಗುವ ಮಹಾದ್ರೋಹ. ಇದು ಎಲ್ಲರೂ ಅರಿತು ನಡೆಯಬೇಕಾದ ಸಂಗತಿ.'' ಇದು ಅವರ ದಿಟ್ಟ ಧಾಟಿ.

ರೈತ ಚಳವಳಿ, ಗೋಕಾಕ್ ಚಳವಳಿ, ಚಿಕ್ಕಮಗಳೂರು ಲೋಕಸಭೆ ಮರುಚುನಾವಣೆ ಸಂದರ್ಭಗಳಲ್ಲಿ ಅವರ ಅಗ್ರಲೇಖನ ಚೇತೋಹಾರಿ. ಕಾಂಗ್ರೆಸ್ ವಿರೋಧಿ ಸರ್ಕಾರಗಳ ರಚನೆಯಲ್ಲಿ ಬಹಳ ಆಸಕ್ತಿ. ಅದೊಂದು ವೈಚಾರಿಕ ನಿಷ್ಠೆ. ರಾಮಕೃಷ್ಣ ಹೆಗಡೆ ಸರ್ಕಾರ ರಾಜ್ಯದಲ್ಲಿ ರಚಿತವಾದಾಗ ಅದರಲ್ಲಿ ಸಕ್ರಿಯ ತೊಡಗಿಸಿಕೊಂಡರು. 1984ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ನಾಮಕರಣ.

ಕವಿ ಪುತಿನ ಅವರೊಡನೆ ಖಾದ್ರಿ ನಿಕಟ ನಂಟು. ಒಂದುಕಡೆ ಪುತಿನ ಶಾಮಣ್ಣ ಅವರನ್ನು ಕುರಿತು ಬರೆದಿದ್ದಾರೆ: ''ನಾನು ಅವನ ಸಂಪಾದಕೀಯವನ್ನು ಓದುತ್ತಾ ಇದ್ದೆ. ಅವನ ವಾಕ್ಯಗಳಲ್ಲಿ ಕ್ರಿಯಾಪದವೇ ಕಂಡುಬರುತ್ತಿರಲಿಲ್ಲ. 'ನಿನ್ನ ಸಂಪಾದಕೀಯ ಚೆನ್ನಾಗಿದೆ. ಆದರೆ ಕ್ರಿಯಾಪದಗಳೇ ಇಲ್ಲದೇ ಟೆಲಿಗ್ರಾಫಿಕ್ ಕನ್ನಡ ಇದ್ದ ಹಾಗೆ ಇದೆಯಲ್ಲಾ; ಕ್ರಿಯಾಪದ ಸೇರಿಸಿ ಬರೆಯಪ್ಪಾ' ಎಂದು ನಾನು ಹೇಳಿದಾಗ ಅದಕ್ಕೆ ಆತ, 'ಇದನ್ನೇ ಜನ ಮೆಚ್ಚುವರಲ್ಲಾ' ಎಂದು ಉತ್ತರಿಸಿದ. ಇನ್ನು ಜನರ ತೀರ್ಪಿನ ಮೇಲೆ ಎರಡು ಮಾತಿಲ್ಲ, ನಾನು ಸುಮ್ಮನಾದೆ. ಆದರೆ, ಒಂದು ಸಂಪಾದಕೀಯವನ್ನು ಓದಿ ಅದರ ಸೌಂದರ್ಯಕ್ಕೆ ನಾನೂ ಮಾರುಹೋದೆ. ವ್ಯಂಗ್ಯ, ಟೀಕೆ, ವಿಡಂಬನೆ ಹಾಗೂ ವಾಕ್ಯಗಳ ಓಟದ ರಭಸದ ಹೊಳಪುಗಳು. ಆದರೆ ಸಂಗತಿಗಳನ್ನು ಬಿಡದೆ ಸತ್ಯಾಂಶ ತಿರುಚದೆ ಅವುಗಳನ್ನು ಹೊಳೆಯಿಸುವ ಶಾಮಣ್ಣನ ಬರಹದ ಬೆಡಗು ನನ್ನನ್ನು ಆಶ್ಚರ್ಯಗೊಳಿಸಿ, ಆತನನ್ನು ಹಾರ್ದಿಕವಾಗಿ ಅಭಿನಂದಿಸಿದ ನೆನಪು ಈಗಲೂ ಇದೆ''.

ದಿವಂಗತ ಹಾ.ಮಾ.ನಾಯಕರು, ''ಶಾಮಣ್ಣದಡೂತಿ ಆಸಾಮಿ, ನೂರು ಜನರ ನಡುವೆ ಎದ್ದು ಕಾಣುವ ವ್ಯಕ್ತಿ. ಅವರು ತಮ್ಮದೇ ಒಂದು ದಾರಿಯನ್ನು ನಿರ್ಮಿಸಿದರು. ಕೆಲವರು

ಅವರನ್ನು ದಿಗ್ಗಜತ್ಲಿಂದು ವರ್ಣಿಸಿದ್ದಾರೆ. ಆ ಸ್ವಯಂ ನಿರ್ಮಿತ ವ್ಯಕ್ತಿತ್ವ ಅದು ಒಪ್ಪುವ ವರ್ಣನೆ. ಶಾಮಣ್ಣನವರ ಸಾವಿನೊಂದಿಗೆ ನಮ್ಮ ಪತ್ರಿಕೋದ್ಯಮದ ಒಂದು ಅಧ್ಯಾಯ ಮುಗಿಯಿತು. ಹೊಸ ಅಧ್ಯಾಯಗಳಲ್ಲಿ ಅವರಂಥವರು ಕಾಣಸಿಕೊಳ್ಳುತ್ತಾರೆಯೇ ಎಂಬುದನ್ನುಕಾಯ್ದುನೋಡಬೇಕು'' ಎಂದು ಬರೆದಿದ್ದಾರೆ.

ಖಾದ್ರಿಯವರಿಗೆ ದೊರೆತ ರಾಜಕೀಯ ದೀಕ್ಷೆ, ಪತ್ರಿಕೋದ್ಯಮ ಪ್ರಾವೀಣ್ಯತೆ ಒಂದು ಅನುಪಮ ಸಂಗಮ. ಅದೇ ಅವರ ವಿಶೇಷ. ಅವರ ಬಳಿ ಸುಳಿದಾಡಿದ ಕಿರಿಯರಿಗೆ ಜೀವನದ ಬುತ್ತಿ. ದೇಶ ನೋಡು, ಕೋಶ ಓದು ಅವರ ಜೀವನ ಸಂದೇಶ. ಕನ್ನಡಕ್ಕೆ ದಕ್ಕಿದ ದೊಡ್ಡ ಗಂಟು.

# ಬಾಲ್ಯ

ತಲೆಯಿಂದ ಇಳಿಬಿಟ್ಟ ಸೊಂಪಾದ ಕೂದಲು. ಅರಳಿದ ಕಣ್ಣುಗಳಲ್ಲಿ ಬಾಲ ಅಂಜಿಕೆ ಭಯಭೀತ ನೋಟದ ಬದಲು ನಿರ್ಭಯ ಸೆಣಸಿನ ನೋಟ. ವಿಶಾಲ ಹಣೆ. ಸೋದರತ್ತೆ ಪ್ರೀತಿಯಿಂದ ಮದ್ರಾಸಿನಿಂದ ( ಈಗಿನ ಚೆನ್ನೈ )ತಂದುಕೊಟ್ಟ ಟ್ರೈಸಿಕಲ್ ಮೇಲೆ ಸವಾರಿ ಹೊರಡಲು ಅಣಿಯಾಗಿರುವ ಬಾಲಕನ ಚಿತ್ರ.

ಮೇಲುಕೋಟೆಗೆ ಶಾಮಣ್ಣನ ಟ್ರೈಸಿಕಲ್ ಬಂದಾಗ ನಮಗೆಲ್ಲ ಭಾರೀ ಮೋಜು. ಅವನು ಸೈಕಲ್ ಮೇಲೆ . ನಾವೆಲ್ಲಾ ಅದನ್ನು ದೂಡುವುದು, ಆಗಲೇ ಶಾಮಣ್ಣನಲ್ಲಿ ದಿಟ್ಟತನ ಕಾಣುತ್ತಿತ್ತು. ಎಂದು ಖಾದ್ರಿಯವರ ಬಾಲ್ಯದಿಂದ ಕೊನೆಯತನಕ ಒಡನಾಡಿ ಯಾಗಿದ್ದ ಕಿಟ್ಟೂ ಮೇಷ್ಟ್ರು ತಮ್ಮ 86 ನೆಯ ವಯಸ್ಸಿನಲ್ಲಿ ಆತ್ಮೀಯ ಗೆಳೆಯನ ಬಾಲ್ಯ ಚಿತ್ರ ಬಿಡಿಸುತ್ತ ಹೋದರು.

ಕಿಟ್ಟೂ ಮೇಷ್ಟ್ರು ಮತ್ತಾರೂ ಅಲ್ಲ ಕವಿ ಪುತಿನ ಅವರ ಕಿರಿಯ ಸೋದರ. ಖಾದ್ರಿ ಚಡ್ಡಿ ಗೆಳೆಯ ಪಿ.ಟಿ. ಕೃಷ್ಣಯ್ಯಂಗಾರ್. ಅವರ ಜತೆ ಲೋಕಾಭಿರಾಮ ಮಾತಿಗೆ ಕುಳಿತರೆ ಪ್ರಚಲಿತ ವಿದ್ಯಮಾನ ಪ್ರಸ್ತಾಪವಾದರೆ ಸಾಕು ಶಾಮಣ್ಣ ಇರುಕ್ಕುಮಾಯಿಂತಯ್ಯ ಇಪ್ಪೋ ಸರಿಯಾ ಆಳಿದುಂವು- ಇದು ಕಂದಮಿಳಿನಲ್ಲಿ( ಕನ್ನಡ-ತಮಿಳು) ಅವರು ಮಾತು ಸಾಗುವುದು. ಹಾಗೆಯೇ ಹಳೆಯ ನೆನಪಿನಂಗಳದಲ್ಲಿ ವಿಹರಿಸುತ್ತ ಖಾದ್ರಿ ಶಾಮಣ್ಣನವರ ಬಾಲ್ಯದ ನಡಾವಳಿಯ ಬಣ್ಣನೆ. 'ನಮಗೆಲ್ಲಾ ಆಗಲೇ ಅವನು ಲೀಡರ್. ಅವನು ಸೈಕಲ್ಲಿನಲ್ಲಿ ಕೂತರೆ, ನಾವೆಲ್ಲಾ ಅದನ್ನು ತಳ್ಳಬೇಕು. ಅಗಾಗ ನಮಗೂ ಸೈಕಲ್ ಸವಾರಿ ಛಾನ್ಸ್ ಸಿಗುತ್ತಿತ್ತು. ಭಾರೀ ಚೂಟಿ. ಲವಲವಿಕೆ ತೇಜಸ್ಸಿನ ಆಕರ್ಷಕ ಭಾವಚಿತ್ರ ಅವನದು. ಅವನೊಡನಾಟ ನಮಗೆ ಮೋಜಿನಾಟವಾಗಿತ್ತು' ಎಂದರು.

ಖಾದ್ರಿಯವರ ಮತ್ತೊಬ್ಬ ನಿಕಟವರ್ತಿ ವಿನೋಬಾ ಅನುಯಾಯಿ ದಿವಂಗತ ಅಯ್ಯರ್ ಅವರಿಗೂ 'ಶಾಮಣ್ಣ ಎಳೆಯವನಾಗಿದ್ದಾಗ ಬಹಳ ಚೂಟಿ ಕಾಣಯ್ಯ, ಮೋಹಕ ವ್ಯಕ್ತಿತ್ವ ಅವನದು'. ಬೆಳೆಯುವ ಪೈರು ಮೊಳಕೆಯಲ್ಲೇ ಎನ್ನುವ ನಾಣ್ಣುಡಿಗೆ ಅನುರೂಪವಾದ ಆಕರ್ಷಕ ಬಾಲ್ಯದ ವ್ಯಕ್ತಿತ್ವ ಖಾದ್ರಿಯವರದು. ಬಾಲ್ಯದಲ್ಲಿ ಹುಡುಗರ ಗುಂಪು ಕಟ್ಟಿಕೊಂಡು ಆಟ-ಪಾಠಗಳಲ್ಲಿ ತೊಡಗಿಸಿಕೊಂಡ ಬಗೆಯಲ್ಲೇ ನಂತರದ ಮೈಸೂರು ವಿದ್ಯಾರ್ಥಿ ಜೀವನದಲ್ಲಿ ಮತ್ತು ಅಲ್ಲಿಂದ ನೇರವಾಗಿ ಸಾರ್ವಜನಿಕ ಜೀವನ, ವೃತ್ತಿಗೆ ಜಿಗಿದಾಗಲೂ ಅವರದು ಮುಂಚೂಣಿಯ ನಡೆ.

ಖಾದ್ರಿಯವರ ಬಾಲ್ಯದ ಬಹುಪಾಲು ಮೇಲುಕೋಟೆ, ಮೈಸೂರು, ಚೆನ್ನೈಗಳಲ್ಲಿ ಸಾಗಿತು. ಅದರಲ್ಲಿ ಮೇಲುಕೋಟೆ ಮತ್ತು ಮೈಸೂರಿನ ಪರಿಸರ ಪ್ರಭಾವ ಒಂದು ತೆರನಾಗಿದ್ದರೆ, ಚೆನ್ನೈವಾಸದ ಖದರ್ರೇ ಬೇರೆ. ಇವೆರಡರ ಸುಂದರ ಸಮರಸ ಸಮ್ಮಿಶ್ರಣವೇ ಅವರ ಒಟ್ಟಾರೆ ಅರಳಿದ ವ್ಯಕ್ತಿತ್ವಕ್ಕೆ ಆಸರೆ, ಪೋಷಣೆ. ನಂತರದ ಪ್ರಭಾವಗಳೆಲ್ಲವಕ್ಕೂ ಅತಿ ಪೂರಕ.

ಮಂಡ್ಯ ಜಿಲ್ಲೆ ಮೇಲುಕೋಟೆ ನಾಡಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಿರಿವಂತಿಕೆಯ ಸೆಲೆಗಳಲ್ಲೊಂದು. 12 ನೆಯ ಶತಮಾನದಲ್ಲಿ ತಮಿಳುನಾಡಿನಿಂದ ಆಶ್ರಯಕೋರಿ ವಲಸೆ ಬಂದರು ವಿಶಿಷ್ಟಾದ್ವೈತದರ್ಶನ ಪ್ರತಿಪಾದಕ ಮಹಾನ್ ವಿಷ್ಣು ಭಕ್ತ ಆಚಾರ್ಯ ರಾಮಾನುಜರು.

ಮೇಲುಕೋಟೆ ಪರಿಸರದಲ್ಲಿ ಸುಮಾರು 12 ವರ್ಷ ವಾಸವಾಗಿ, ತಮಿಳು ಸಂಸ್ಕೃತಿ, ಆಗಮಿಕ ಪರಂಪರೆ, ಧಾರ್ಮಿಕ ವಿಧಿವಿಧಾನಗಳನ್ನು ಕನ್ನಡದ ಮಣ್ಣಿನಲ್ಲಿ ಮೇಳೈಸಿ ಜನರಲ್ಲಿ ಹೊಸ ಚೇತನ ತುಂಬಿದವರು. ಉಳಿದ ಊರುಗಳಿಗೊಂದು ದೇವಾಲಯ ವಿದ್ದರೆ, ಇಲ್ಲಿ ದೇವಾಲಯದ ಸುತ್ತಲೂ ಊರ ಬದುಕು. ಇದೇ ಸಮುದಾಯ ಜೀವನಕ್ಕೆ ಸೋಪಾನ. ಆ ಬದುಕಿನ ಜೀವಜೀವಾಳವೇ ಪರಸ್ಪರಾವಲಂಬನ. ಮೇಲು- ಕೀಳು, ಹೆಚ್ಚು ಕಡಿಮೆ ಎಂಬ ತಾರತಮ್ಯ ಇದರಲ್ಲಿ ಗೌಣ. ಮೇಲುಕೋಟೆ ಉತ್ಸವಾದಿಗಳಲ್ಲಿ ಸಕಲ ಜನರ ಸರಸಾಟ ಹೊಸ ಜೀವನೋತ್ಸಾಹಕ್ಕೆ ಹುರುಪು. ಬಾಲ್ಯದಲ್ಲಿ ಖಾದ್ರಿಗೆ ಇದು ದಕ್ಕಿತು.

ಹುಟ್ಟಿದ್ದು ವೈದಿಕ ಸಂಪ್ರದಾಯದ ನಡುವೆ. ಜೂನ್ 6, 1925 ಜನನ. ಖಾದ್ರಿ ಶ್ರೀನಿವಾಸ ದೇಶಿಕಾಚಾರ್-ಲಕ್ಷ್ಮಮ್ಮ (ಎಲ್ಲರ ಪ್ರೀತಿಯ ಅಚ್ಚು) ದಂಪತಿಗಳ ಹಿರಿಯ ಮಗ. ಸಹಜವಾಗಿಯೇ ಇಡೀ ಖಾದ್ರಿ ಪರಿವಾರಕ್ಕೆ ಬಾಲಕ 'ಚಾಮೂ'ನನ್ನು ಕಂಡರೆ ಬಲು ಅಕ್ಕರೆ. ವಿಶೇಷವಾಗಿ ಚಿಕ್ಕಪ್ಪವೆಂಗಲ್ಲಿ- ವೆಂಕಟನರಸಿಂಹಾಚಾರ್ -ಎಲ್ಲರ ಪ್ರೀತಿಯ ದಾಯು ಖಾದ್ರಿಯವರ ತಂದೆಯ ತಮ್ಮ ಅವರಿಗೆ. ಆಕಾಲಕ್ಕೆ ಆಟೋಮೊಬಿಲ್ ಎಂಜಿಯರಿಂಗ್ ಡಿಪ್ಲೋಮ ಹೋಲ್ಡರ್. ಇಂಗ್ಲೀಷಿನ ಮೇಲೆ ಗಟ್ಟಿ ಹಿಡಿತ. ಎಳೆಯ ಚಾಮೂ ಕಂಡಜ್ಲಯಿ ಬಲು ಪ್ರೀತಿ. ಖಾದ್ರಿ ಸೋದರತ್ತೆಯರಿಬ್ಬರೂ ಅಕಾಲ ವಿಧವೆಯರು. ಆದರೂ ಜೀವನದಲ್ಲಿ ಧೃತಿಗೆಡಲಿಲ್ಲ, ಬದುಕನ್ನು ದಿಟ್ಟತನದಿಂದ ಸ್ವೀಕರಿಸಿ ಸಂಪ್ರದಾಯದ ಗೋಜಲಿನ ಬೇಲಿ ಜಿಗಿದು, ಮದ್ರಾಸಿನಲ್ಲಿ ನೆಲೆ ನಿಂತರು. ಮೇಲುಕೋಟೆ-ಮದ್ರಾಸ್ ನಡುವೆ ಎಳೆಯ ಚಾಮೂ ಓಡಾಟಕ್ಕೆ ಇದು ಮೂಲ ಕಾರಣ. ಸಂಪ್ರದಾಯ- ಆಧುನಿಕ ಚಿಂತನೆ ಇವಡರ ತಂಪನೆಯ ಸ್ಪರ್ಶ. ಚಿಕ್ಕಪ್ಪ ದಾಯೂ ಚಾಮೂನನ್ನು ಮದ್ರಾಸಿಗೆ ಕರೆದುಕೊಂಡು ಹೋದಾಗಲೆಲ್ಲ ಪ್ರತಿನಿತ್ಯ ಅಲ್ಲಿನ ಮರೀನಾ ಬೀಚಿಗೆ ಕರೆದೊಯ್ಯುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ರಾಷ್ಟ್ರ ನಾಯಕರ ಭಾಷಣಗಳು, ಸ್ವಾತಂತ್ರ್ಯ ಸಂಗ್ರಾಮದ ಐತಿಹ್ಯಗಳನ್ನು ಬಾಲಕ ಚಾಮುವಿನ ಮನಸ್ಸಿನಲ್ಲಿ ಬಿಂಬಿಸುತ್ತಿದ್ದರು. ದೇಶದ ಆಗುಹೋಗುಗಳ ಬಗೆಗೆ ಇದೊಂದು ತೆಳು ಸ್ಪರ್ಷ.

ಜತೆಗೆ ಆಧುನಿಕ ಬದುಕಿನ ಹೊಸ ಪರಿಚಯ. ಅಲ್ಲಿನ ಕೌಟುಂಬಿಕ ಜೀವನ ತಣ್ಣಗೆ ತಟ್ಟಿತು ಎಳೆಯನಿಗೆ.

ಖಾದ್ರಿಯವರ ಜತೆ ಆತ್ಮೀಯವಾಗಿ ಮಾತನಾಡುವಾಗಲೆಲ್ಲ ಅವರು ತಮ್ಮ ಮೇಲೆ ಗಾಢ ಪರಿಣಾಮ ಬೀರಿದ ಅವರ ಹಿರಿಯ ಸೋದರತ್ತೆ ಕುರಿತು ಅಭಿಮಾನದಿಂದ ತಮ್ಮ ಅನಿಸಿಕೆ ಹಂಚಿಕೊಳ್ಳುತ್ತಿದ್ದರು ಎಂದು ಖಾದ್ರಿಯವರ ಕಿರಿಯ ಸೋದರ ಖಾದ್ರಿ ಅಚ್ಯುತನ್ ತಿಳಿಸುತ್ತಾರೆ. ಅವರೊಡನಾಟದಲ್ಲಿ ಬೆಳೆಸಿಕೊಂಡ ಶಿಸ್ತಿನ ನಡೆ, ಚೊಕ್ಕಟವಾಗಿರುವ ಶುಭ್ರತೆ ಖಾದ್ರಿಯವರ ಜೀವನದ ಕೊನೆ ಘಳಿಗೆ ತನಕ ಅವರಂಗಭಾಗ. ಸಂಪ್ರದಾಯದ ಚೌಕಟ್ಟಿನಿಂದ ಚಿಲಾಂಗು ಹಾಕಲು ಎಳೆಯ ಚಾಮೂಗೆ ಇಷ್ಟು ಸಾಕಾಗಿತ್ತು.

ಎಲ್ಲ ಗ್ರಾಮಗಳಲ್ಲಿರುವ ಹಾಗೆ ಮೇಲುಕೋಟೆಯಲ್ಲೂ ಸಣ್ಣ ಓಣಿಗಳು, ಹೆಂಚಿನ ಮನೆಗಳು ಕಾಣಸಿಗುತ್ತವೆ. ದೇವಾಲಯಗಳು, ಕೊಳಗಳು ಇಲ್ಲಿ ಸಾಮಾನ್ಯ. ಇಲ್ಲಿ ಕೊಳ ಗಳನ್ನು ಪುಷ್ಕರಣಿ ಎಂದು ಕರೆಯುತ್ತಾರೆ. ಇಂತಹ ಇತಿಹಾಸ ಪ್ರಸಿದ್ಧ ಮೇಲುಕೋಟೆಯಲ್ಲಿ ಖಾದ್ರಿಯವರ ತಾತ ಶೇಷಾಚಾರ್ಯರು ದೇವಾಲಯದ ಪಾರುಪತ್ತೇಗಾರರು. ಹಾಗಾಗಿ ದೇವರ ಪ್ರಸಾದವಾಗಿ ಮನೆಯಲ್ಲಿ ವಿವಿಧ ಭಕ್ಷ್ಯಭೋಜ್ಯ ಯಾವಾಗಲೂ ಇರುತ್ತಿತ್ತು. ದೇಶಿಕಾಚಾರ್ಯರ ಮನೆ ಕಲ್ಯಾಣಿ ಸಮೀಪವೇ ಇತ್ತು. ದಕ್ಷಿಣದ ತುದಿಯಲ್ಲಿ ಸಂಸ್ಕೃತ ಪಾಠಶಾನ್ಲಿ, ಖಾದ್ರಿ ಶಾಮಣ್ಣನವರ ತಂದೆ ಶ್ರೀನಿವಾಸ ದೇಶಿಕಾಚಾರ್ಯ ಕೆಲಕಾಲ್ದಿರಿನರಿ ಕ್ಲಲರಿಷ್ಲಅಜಿಯಿರ್ಗ್ಲೌ ಓದಿ ಹೈಸ್ಕೂಲಿಗೆ ಮೈಸೂರು ಸೇರಿದರು. ಖ್ಯಾತಕವಿ ಪು.ತಿ. ನರಸಿಂಹಾಚಾರ್ಯರು ಅವರ ಸಹಪಾಠಿಗಳು.

ನಾಡಿನ ಹಿರಿಯ ಕವಿ ಚೇತನ ಪುತಿನ ಅವರೂ ಮೇಲುಕೋಟೆಯವರು. ಖಾದ್ರಿ ಶಾಮಣ್ಣನವರ ತಂದೆ ಸಮಕಾಲೀನರು, ಸ್ನೇಹಿತರು. ಅವರು ತಂದೆ-ಮಗ ಕುರಿತು ಒಂದು ಕಡೆ ಹೇಳಿರುವುದು ಮನೋಜ್ಞ.

ಖಾದ್ರಿ ಶಾಮಣ್ಣನ ತಂದೆ ಶ್ರೀನಿವಾಸ ದೇಶಿಕಾಚಾರ್ ಅವರನ್ನು ಪ್ರೀತಿಯಿಂದ ಚೀಮಾಚು ಎಂದು ಕರೆಯುತ್ತಿದ್ದರು. ಅವರ ಮನೆಯ ಹಿತ್ತಲಿನಲ್ಲಿ ಸೀಬೆ, ದಾಳಿಂಬೆ ಮರಗಳಿದ್ದವು. ಅವುಗಳನ್ನು ಏರಿ ಹಣ್ಣು ತಿನ್ನುವುದು ಬಾಲಕರ ಕೆಲಸವಾಗಿತ್ತು. ಚೀಮಾಚು ಪ್ರಕೃತಿ ಲೌಕಿಕದ ಕಡೆ ಹೆಚ್ಚಾಗಿ ಒಲಿದಿತ್ತು. ದೇವಸ್ಥಾನಕ್ಕೂ ಹೆಚ್ಚಾಗಿ ಬಂದದ್ದು ನೆನಪಿಲ್ಲ. ಅಷ್ಟು ಹೊತ್ತಿಗೆ ಮೇಲುಕೋಟೆಯಲ್ಲಿ ಪ್ರೈಮರಿ- ಮಿಡಲ್ ಸ್ಕೂಲ್ ಬಂದಿತ್ತು. ಮೈಸೂರಿಗೆ ಬಂದಾಗ ಬೇರೆ ಬೇರೆ ಶಾಲೆಯಾಗಿದ್ದರಿಂದ ಭೇಟಿ ಕಡಿಮೆಯಾಯಿತು. ರಜೆಯಲ್ಲಿ ಸ್ನೇಹ ಮಿಲನ ಮುಂದುವರಿಯಿತು. ಮೇಲುಕೋಟೆಯಲ್ಲಿ ಎರಡು ಗರಡಿ ಮನೆಗಳಿದ್ದವು. ನಾವಿಬ್ಬರೂ ಅಲ್ಲಿ ಸ್ವಲ್ಪಕಾಲ ಸಾಧನೆ ಮಾಡಿದ ನೆನಪು. ನನಗೆ ಮೇಲುಕೋಟೆ ದಳವಾಯಿ ಕೆರೆಯಲ್ಲಿ ಈಜುವುದು ಉಲ್ಲಾಸದ ಸಂಗತಿಯಾಗಿತ್ತು. ಅಲ್ಲದೆ ಮಿಡಲ್ ಸ್ಕೂಲಿನಲ್ಲಿ ಫುಟ್‌ಬಾಲ್‌ಗೆ ತುಂಬಾ ಪ್ರೋತ್ಸಾಹ. ಚೀಮಾಚು ಫುಲ್ ಬ್ಯಾಕ್.ನಾನು ಹಾಫ್ ಬ್ಯಾಕ್.

ತಂದೆಯ ಉತ್ಸಾಹ ಪೂರ್ಣವಾದ ಚೈತನ್ಯವನ್ನು ಶಾಮಣ್ಣ ಪಡೆದುಕೊಂಡಿದ್ದ. ಆತನು ಅಷ್ಟೆ ಯಾವಾಗಲೂ ಗೆಲುವಾಗಿಯೇ ಇದ್ದ ಮನುಷ್ಯ. ಸೋಲು ಎಂಬ ಪದ ಅವನ ನಿಘಂಟುವಿನಲ್ಲಿ ಇಲ್ಲವೇ ಇಲ್ಲ ಎಂಬುದಾಗಿ ತೋರುತ್ತಿತ್ತು. ಮಾನಸಿಕ ಆಸ್ತಿಯನ್ನು ಚೀಮಾಚಿಯಿಂದ ಪಡೆದುಕೊಂಡ. ಶಾಮಣ್ಣನೂ ಅಷ್ಟೆ. ಒಂದು ತರದ ಮೆಲುನಗೆ ಅವನ ಮುಖದ ಮೇಲೆ ಸದಾ ಕಾಣುತ್ತಿತ್ತು.

ಶ್ರೀನಿವಾಸದೇಶಿಕಾಚಾರ್ಯರು ಮೈಸೂರಿನಲ್ಲಿ ಅವರ ಬಂಧುಗಳಾದ ದೇಶಿಕಾಚಾರ್ ಪ್ರಭಾವಕ್ಕೆ ಒಳಗಾದರು. ಈ ದೇಶಿಕಾಚಾರ್ಯರು ಚರಿತ್ರೆಯ ಪ್ರಾಧ್ಯಾಪಕರಾಗಿದ್ದರು. ಬ್ರಹ್ಮಚಾರಿ, ದೇಶಭಕ್ತ. ಸಂಧ್ಯಾವಂದನೆ ಹೊರತುಪಡಿಸಿ ವೈದಿಕ ಇಕ್ಕಿಟ್ಟಿನಲ್ಲಿ ಹೆಚ್ಚು ಶ್ರದ್ಧೆ ಇಲ್ಲದ ಮನುಷ್ಯ. ಒಂದು ರೀತಿಯಲಿ ಸೋಷಲಿಸ್ಟ್ ಅದರ ಪ್ರಭಾವ ಶ್ರೀನಿವಾಸ ದೇಶಿಕಾಚಾರ್ಯರ ಮೇಲೂ ಆಗಿತ್ತು.

ಖಾದ್ರಿ ಶಾಮಣ್ಣ ಸಂಸ್ಕೃತವನ್ನು ಪ್ರಾಥಮಿಕ ವಿದ್ಯಾಭ್ಯಾಸ ಮೇಲುಕೋಟೆ ಪಾಠಶಾಲೆಯಲ್ಲಿ ಕಲಿತ. ಮನೆಗೆ ದೊಡ್ಡ ಮಗ. ಖಾದ್ರಿ ಶಾಮಣ್ಣ ಅವರನ್ನು ಒಮ್ಮೆ ಅವರ ತಂದೆ ಮೈಸೂರಿನ ಪರಕಾಲ ಮಠದ ಸ್ವಾಮಿಗಳ ಬಳಿ ಕರೆದುಕೊಂಡು ಹೋಗಿದ್ದರು. ಅವರು ಇವರನ್ನು ನೋಡಿದ ಕೂಡಲೇ ಈತ ಬಹಳ ಎತ್ತರಕ್ಕೆ ಬೆಳೆಯುತ್ತಾನೆ ಎಂದು ಹೇಳಿದರು. ಅದೇರೀತಿ ಶೃಂಗೇರಿ ಸ್ವಾಮೀಜಿ ಕೂಡ ಬಾಲಕನನ್ನು ಹರಿಸಿದ್ದರು.

ಮೈಸೂರಿನ ಮಹಾರಾಜ ಹೈಸ್ಕೂಲು ಸೇರಿ ಅಜ್ಜಿಯ ಮನೆಯಲ್ಲಿ ವಾಸ. ಅರ್ಕೈಯರ್ ಇವರ ಸಹಪಾಠಿ. ಯಾವುದನ್ನೇ ಓದಲಿ ಬಹಳ ಗಟ್ಟಿನಿಂದ ಹೇಳುವುದು ಖಾದ್ರಿ ಶೈಲಿ. ಹರಿಜನ ಪತ್ರಿಕೆ ಇವರಿಗೆ ಭಗವದ್ಗೀತೆಯಾಗಿತ್ತು. ಮೇಲುಕೋಟೆ ಸುತ್ತಮುತ್ತ ಗ್ರಾಮಗಳಲ್ಲಿ ನಡೆಯುತ್ತಿದ್ದ ಸಂತೆಗೆ ಹೋಗಿ ಸ್ವಾತಂತ್ರ್ಯದ ಚಳವಳಿಯ ಬಗ್ಗೆ ಭಾಷಣ ಮಾಡುತ್ತಿದ್ದರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದಾಗ ಸ್ವಾಮಿವಿವೇಕಾನಂದ ಹಾಗೂ ರಾಮಕೃಷ್ಣ ಪರಮಹಂಸರ ಪ್ರಭಾವ ಅಧಿಕವಾಗಿತ್ತು. ಒಮ್ಮೆ ತಲೆಬೋಳಿಸಿ ಕೊಂಡು ಸನ್ಯಾಸಿಯಾಗಲು ಬಯಸಿ ತಂದೆಯಿಂದ ಕಪಾಳ ಮೋಕ್ಷ ಮಾಡಿಸಿಕೊಂಡಿದ್ದರು.

ಖಾದ್ರಿಯವರದು ಮೊದಲಿನಿಂದಲೂ ಪ್ರತಿಭಟನೆಯ ಸ್ವಭಾವ. ಸಂಪ್ರದಾಯ, ಕಂದಾಚಾರಗಳ ವಿರುದ್ಧ ಪ್ರತಿಭಟನೆ ಜೀವನದುದ್ದಕ್ಕೂ ನಡೆಯಿತು. ಚಿಕ್ಕವಯಸ್ಸಿನಲ್ಲೇ ಅವರ ತಂದೆ ಪರಕಾಲಮಠದಲ್ಲಿ ಉಪನಯನ ಮಾಡಿದರು. ಖಾದ್ರಿಗೆ ಇದರಲ್ಲಿ ಆಸಕ್ತಿ ಇರಲಿಲ್ಲ. ಉಪನಯನ ಮುಗಿಯುತ್ತಿದ್ದಂತೆ ನಾಮಕ್ಕೆ ಎಂಜಲು ಹಾಕಿ ಅಳಿಸಿ ಹೊರಬಂದರು.

ಪ್ರೌಢಶಾಲೆಯಲ್ಲಿದ್ದಾಗಲೇ ಗಾಂಧೀಜಿ ಆತ್ಮಕಥೆ ಓದಿದ್ದರು. ಪ್ರಬಂಧ ಸ್ಪರ್ಧೆಯಲ್ಲಿ 5 ರೂ. ಬಹುಮಾನ ಬಂದಾಗ ಅವರು ಕೂಡಲೇ ತೆಗೆದುಕೊಂಡಿದ್ದು ಗಾಂಧೀಜಿಯ ಯಂಗ್ ಇಂಡಿಯಾ ಪತ್ರಿಕೆಯ ಸಂಪುಟಗಳು. ಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದರು. ಪುರಭವನದಲ್ಲಿ

ಪ್ರತಿದಿನ ಸಂಜೆ ಆಕಾಶವಾಣಿ ಸುದ್ದಿಯನ್ನು ಕೇಳುವುದು ಇವರ ಹವ್ಯಾಸವಾಗಿತ್ತು. ಗಣಿತದ ತರಗತಿಯಲ್ಲಿ ಕುಳಿತು ಕಾರ್ಲ್ ಮಾರ್ಕ್ಸ್ ಓದುತ್ತಿದ್ದರು.

## ವಿದ್ಯಾಭ್ಯಾಸ

ಖಾದ್ರಿ ಶಾಮಣ್ಣ ಅವರಿಗೆ ಮೇಲುಕೋಟೆ ಸಾಂಸ್ಕೃತಿಕ ಪರಿಸರ ಬಾಲ್ಯದಲ್ಲಿ ದೊರಕಿ ಅದು ಸುಸಂಸ್ಕೃತ ವ್ಯಕ್ತಿತ್ವ ಅರಳಲು ಭೂಮಿಕೆ ಒದಗಿಸಿತು. ಖಾದ್ರಿಯವರ ಸುಂದರ ಕೈಬರಹಕ್ಕೆ ಪ್ರಾಥಮಿಕ ಶಾಲೆ ಮೇಷ್ಟ್ರು ಸತತ ನೀಡಿದ ಶಿಕ್ಷೆ ಮೂಲ ಪ್ರೇರಣೆ ಎಂದು ಅವರೇ ಹೇಳುತ್ತಿದ್ದರು. ಊರಿನ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಅಭ್ಯಾಸ. ಮಾಧ್ಯಮಿಕ ಶಾಲೆಯ ವ್ಯಾಸಂಗ ಮುಗಿದ ವೇಳೆಗಾಗಲೇ ಸುತ್ತಲಿನ ಆಗುಹೋಗುಗಳ ಪರಿಜ್ಞಾನ. ಮೈಸೂರಿಗೆ ಪ್ರೌಢಶಾಲೆ ವ್ಯಾಸಂಗಕ್ಕೆ ಹೋಗುವ ಮೊದಲೇ ಗಾಂಧೀಜಿಯ ಆತ್ಮಕತೆ ಓದಿಕೊಂಡವರು. ಹಿಂದ್ ಸ್ವರಾಜ್ ಪುಸ್ತಕವನ್ನು ಗೆಳೆಯರೆಲ್ಲ ಸಾಮೂಹಿಕವಾಗಿ ಓದುತ್ತಿದ್ದರು. ಆ ಪುಸ್ತಕ ಎಲ್ಲರ ಮೇಲೆ ಬಹಳ ಪ್ರಭಾವ ಬೀರಿತು.

ಚಿಕ್ಕವಯಸ್ಸಿನಿಂದಲೂ ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳನ್ನು ಗುರುತಿಸುತ್ತಿದ್ದ ಖಾದ್ರಿ, ವಿದ್ಯಾರ್ಥಿ ಜೀವನದಲ್ಲಿ ಸ್ವಾತಂತ್ರ್ಯಾಕಾಂಕ್ಷೆ ಬಹುಪಲು ಬೆಳೆಯಿತು. ರಾಷ್ಟ್ರನಾಯಕರ ವೀರಗಾಥೆ ಬುದ್ಧಿ ಮನಸ್ಸುಗಳನ್ನು ಸೆಳೆಯಿತು. ಪ್ರೌಢಶಾಲೆಯಲ್ಲಿ ಪ್ರಬಂಧ ಸ್ಪರ್ಧೆಯೊಂದು ನಡೆಯಿತು. ಖಾದ್ರಿಗೆ ಮೊದಲ ಬಹುಮಾನ ೫ ರೂಪಾಯಿ. ಅದರಲ್ಲಿ ಕೊಂಡಿದ್ದು ಯಂಗ್ ಇಂಡಿಯಾ. ಅದನ್ನು ಓದಿ ನೆಹರೂ ಅವರ ಆತ್ಮಕತೆಯನ್ನೂ ತಿರುವಿ ಹಾಕಿದ ಮೇಲೆ ಎಲ್ಲ ನಾಯಕರ ವಿಷಯ ತಿಳಿಯಿತು. ಅನುದಿನವೂ ಪತ್ರಿಕೆ ಓದುವುದೇ ಒಂದು ಕೆಲಸ. ಅದರಿಂದ ದೇಶದಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳು ತಿಳಿಯುತ್ತಿತ್ತು. ಖಾದ್ರಿ ಒಡನಾಡಿ ಎಂದರೆ ಬಾಸು ಕೃಷ್ಣಮೂರ್ತಿ. ಶಾಲೆಯಲ್ಲಿದ್ದಾಗಲೇ ಇಬ್ಬರೂ ಹೊಸ ವಿಚಾರಕ್ಕೆ ಪಕ್ಕಾದವರು. ಭಾರತೀಯ ನವೋದಯ ಯುವಕರಲ್ಲಿ ಹೊಂಗನಸು ಚಿಗುರಿಸಿತ್ತು. ಸ್ವಾಮಿವಿವೇಕಾನಂದರ ಪ್ರಭಾವ. ವಿವೇಕಾನಂದರಿಂದ ಹಿಡಿದು ಗಾಂಧೀಜಿವರೆಗೆ ಎಲ್ಲರ ಬರಹಗಳಿಗೆ ತೆರೆದುಕೊಂಡ ಮನಸ್ಸು.

ಹೊಸ ಭಾರತವನ್ನು ಕಾಣುವ ತವಕ. ಮೊದಲ ಹೆಜ್ಜೆಯಾಗಿ ಚಲೇಜಾವ್ ಚಳವಳಿಯಲ್ಲಿ ಏನನ್ನಾದರೂ ಮಾಡುವ ಉತ್ಸಾಹ. ಯಾರ ಅಂಜಿಕೆಯೂ ಇಲ್ಲ. ಸ್ವಾತಂತ್ರ್ಯ ಆದೋಲನದೊಂದಿಗೇ ಮೂಡಿಬಂದ ಅಧ್ಯಯನಶೀಲತೆ. ಶಾಲೆ ಕಾಲೇಜಿನಲ್ಲೂ ಓದಿ ನಲ್ಲಿ ಮುಂದು. ಹೀಗೆ ಸ್ವಾತಂತ್ರ್ಯ ಹೋರಾಟ ಬದುಕಿನ ಅಂಗವಾಗಿ ಹೋಗಿತ್ತು. ಖಾದ್ರಿ ವಿದ್ಯಾಭ್ಯಾಸ ಮತ್ತು ಸ್ವಾತಂತ್ರ್ಯ ಹೋರಾಟ ಎರಡೂ ಹಾಸುಹೊಕ್ಕಾಗಿತ್ತು. ಮಹಾರಾಜ

ಕಾಲೇಜಿನಲ್ಲಿ ಕೈ ಬಾಂಬ್ ಇಟ್ಟು ಸಿಕ್ಕಿಬಿದ್ದು ಜೈಲು ಸೇರಿದರೂ ಶಿಕ್ಷಣ ನಿಲ್ಲಲಿಲ್ಲ. ಗಾಂಧೀಜಿ ಸೇವಾಗ್ರಾಮದಲ್ಲಿ ಮುಂದುವರಿಯಿತು. ಇಂಗ್ಲೀಷ್, ಹಿಂದಿ, ಸಂಸ್ಕೃತ, ಕನ್ನಡದಲ್ಲಿ ಅಸ್ಖಲಿತ ಪಾಂಡಿತ್ಯ. ಯಾವುದೇ ಕೆಲಸ ಮಾಡಲಿ ಅದರಲ್ಲಿ ಅಚ್ಚುಕಟ್ಟು, ತೇಪೆ ಕೆಲಸ ಇಲ್ಲವೆ ಇಲ್ಲ. ಕಚ್ಚೆಪಂಚೆ ಕೋಟು ತೊಡುವುದರಿಂದ ಹಿಡಿದು ಸಂಪಾದಕೀಯ ಬರೆಯುವವರೆಗೆ ಎಲ್ಲೂ ಒಂದು ಸುಕ್ಕು ಇಲ್ಲ. ಒಮ್ಮೆ ಬರೆದರೆ ಆಯಿತು ಅದನ್ನು ಅಳಿಸುವ ಪ್ರಶ್ನೆಯೇ ಇಲ್ಲ. ಶಬ್ದ ಭಂಡಾರದ ಗಣಿ.

ತಾತನ ಸಂಪ್ರದಾಯಕ್ಕೆ ಸೆಡ್ಡು ಹೊಡೆದು ನಿಂತವರು. ಜುಟ್ಟು ಬಿಡಲು ಹೇಳಿದರೆ ಪೂರ್ಣ ತಲೆಬೋಳಿಸಿಕೊಂಡು ತಾತನ ಮುಂದೆ ಹಾಜರ್. ಆಗ ತಾತ ಅಸಹಾಯಕ. ತಾತನ ಒತ್ತಾಯಕ್ಕೆ ಶ್ರೀಮಂತರ ಮನೆಗೆ ಹೋಗಿ ಸ್ಕಾಲರ್ ಶಿಪ್ ಹಣ ಪಡೆಯಬೇಕಾದ ಕಾಲ. ಖಾದ್ರಿಗೆ ಇದು ಒಲ್ಲದ ಕೆಲಸ.

ಇಂದಿರಾಗಾಂಧಿಗೆ ಪತ್ರಿಕಾ ಸಲಹೆಗಾರರಾಗಿದ್ದ ಎಚ್.ವೈ. ಶಾರದಾಪ್ರಸಾದ್ ಖಾದ್ರಿ ಸಹಪಾಠಿಗಳು. 50 ವರ್ಷಗಳ ಸ್ನೇಹ. ಶಾರದಾ ಪ್ರಸಾದ್ ಖಾದ್ರಿಯವರ ಬಗ್ಗೆ ಈ ರೀತಿ ಹೇಳಿದ್ದಾರೆ : "50 ವರ್ಷಗಳ ಗೆಳೆತನದ ಹಕ್ಕಿನಿಂದ ಖಾದ್ರಿ ಶಾಮಣ್ಣನ ಬಗ್ಗೆ ಏಕವಚನ ಬಳಸುತ್ತೇನೆ. ಆತನನ್ನು ನಾನು ಮೊದಲು ಕಂಡಿದ್ದು ಚರ್ಚಾಕೂಟದಲ್ಲಿ. ಆಗ ಆತ ತೆಳ್ಳಗಿದ್ದ. ಆದರೆ ಕಂಠದ ಶಕ್ತಿ ಜೋರಾಗಿತ್ತು. ಚರ್ಚೆಯಲ್ಲಿ ಭಾಗವಹಿಸಿದರೆ ಎದುರಿನವರು ಮಣ್ಣು ಮುಕ್ಕುವಂತೆ ಮಾಡುತ್ತಿದ್ದ. ಆಗಿನಿಂದಲೂ ಭಾಷೆಯ ಮೇಲೆ ಒಳ್ಳೆಯ ಸ್ವಾಮ್ಯ. ರಾಜಕೀಯದಲ್ಲಿ ಹರಿತವಾದ ಪ್ರಜ್ಞೆ, ಗಾಂಧೀವಾದದ ಬಗ್ಗೆ ಒಲುವು ಹಾಗೂ ಪ್ರಜ್ಞೆ.

1942 ಚಲೇಜಾವ್ ಚಳವಳಿ ಖಾದ್ರಿ ಕೊಡುಗೆ ಕಡಿಮೆ ಏನಲ್ಲ. ಸೆರೆಮನೆಯಲ್ಲಿ ಯುವಕರ ನಡುವೆ ತಿಕ್ಕಾಟ ನಡೆದರೆ ಅದಕ್ಕೆ ಪರಿಹಾರ ನೀಡುವುದು ಖಾದ್ರಿ ಕೆಲಸ. ನಾನು ಮುಂಬೈ ಇಂಡಿಯನ್ ಎಕ್ಸ್‌ಪ್ರೆಸ್ ಸೇರಿದರೆ ಆತ ಸೇವಾಗ್ರಾಮದಲ್ಲಿ ತರಬೇತಿ ಪಡೆದು ಸೋಷಲಿಸ್ಟರ ಕನ್ನಡ ಪತ್ರಿಕೆ ಜಾಗೃತಿ ನಡೆಸಲು ಮುಂಬೈಗೆ ಬಂದ. ಆದರಿಂದ ನಮ್ಮ ಸ್ನೇಹ ಇನ್ನೂ ಗಟ್ಟಿಯಾಯಿತು.

ಮುಂದೆ ನಮ್ಮಿಬ್ಬರ ರಾಜಕೀಯ ಅಭಿಪ್ರಾಯ ಬೇರೆಯಾದರೂ ಸ್ನೇಹಕ್ಕೆ ಕುಂದು ಬರಲಿಲ್ಲ. ಆತನ ಮನಸ್ಸು ವಿಶಾಲ. ಹಿಡಿದ ಪಟ್ಟನ್ನು ಬಿಡುತ್ತಿರಲಿಲ್ಲ. ಕೆಲವು ಪತ್ರಕರ್ತರು ತಮ್ಮ ಸಂಪೂರ್ಣ ಶಕ್ತಿಯನ್ನು ಪತ್ರಿಕೆಗೆ ಧಾರೆ ಎರೆಯುತ್ತಿದ್ದರು. ಮತ್ತೆ ಕೆಲವರು ಬೇರೆ ಪುಸ್ತಕ ಬರೆದು ಆದರ ಮೂಲಕ ಪ್ರಚಾರ ಪಡೆಯುತ್ತಿದ್ದರು. ಖಾದ್ರಿ ಮೊದಲ ಗುಂಪಿಗೆ ಸೇರಿದವನು. ಮುಂದಿನ ತಲೆಮಾರಿಗೆ ಖಾದ್ರಿ ಪರಿಚಯ ಅತ್ಯಗತ್ಯ".

■

## ಆಸಕ್ತಿ-ಪ್ರೇರಣೆ

1942 ಚಲೇಜಾವ್ ಚಳವಳಿ ಎಲ್ಲರಿಗೂ ಬಿಸಿ ತಟ್ಟಿತ್ತು. ಮೊದಲ ಉಬ್ಬರ ಸ್ವಲ್ಪ ಕಡಿಮೆಯಾದ ಮೇಲೆ ಖಾದ್ರಿ ಶಾಮಣ್ಣ ತಮ್ಮ ಮಿತ್ರರೊಂದಿಗೆ ಮೇಲುಕೋಟೆ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗಿ ಕತ್ತೆಯ ಮೇಲೆ ಚರ್ಮದ ಚೀಲಗಳಲ್ಲಿ ಸೇಂದಿಸಾಗಿಸುತ್ತಿದ್ದವರನ್ನು ತಡೆದು ಚೀಲಗಳನ್ನು ಚಾಕುವಿನಿಂದ ಹರಿದು ಸೇಂದಿಯನ್ನು ಚೆಲ್ಲುವಂತೆ ಮಾಡಿದರು. ಮಹಾರಾಜ ಬ್ರಿಟಿಷರ ಅಡಿಯಾಳು. ಅವರಿಗೆ ತೆರಿಗೆ ಕೊಡಬಾರದು ಎಂದು ಹಳ್ಳಿಗಳಿಗೆ ಹೋಗಿ ಪ್ರಚಾರ ಮಾಡುತ್ತಿದ್ದರು.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಕೈಬಾಂಬ್ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಬೆಂಗಳೂರಿನ ಸೆಂಟ್ರಲ್ ಜೇಲು ಸೇರಿದರು. ಸೆರೆಮನೆಯಿಂದ ಬಿಡುಗಡೆಯಾದ ಮೇಲೆ 1944ರಲ್ಲಿ ಗಾಂಧೀಜಿ ಸೇವಾ ಗ್ರಾಮ ಸೇರಿದರು. ಅಲ್ಲೇ ಅವರಿಗೆ ಸಂಪೂರ್ಣ ಶಿಕ್ಷಣ ದೊರೆಯಿತು. ಗಾಂಧೀಜಿಗೆ ಬರುತ್ತಿದ್ದ ಪತ್ರಗಳನ್ನು ನೋಡಿಕೊಳ್ಳುವುದು ಅವುಗಳ ವಿಂಗಡಣೆ ಇವರ ಕೆಲಸವಾಯಿತು. 1953 ಆಚಾರ್ಯ ವಿನೋಬಾ ಭೂದಾನ ಆಂದೋಲನ ಆರಂಭಿಸಿದ್ದರು. ಬೆಳಗುಂಬ ನಾರಾಯಣಪ್ಪ ಟಿ.ಎಸ್. ಅನಂತರಂಗಾಚಾರ್ ಮೈಸೂರು ಸೀಮೆಯಲ್ಲಿ ಭೂದಾನ ಚಳವಳಿ ಆರಂಭಿಸಿದ್ದರು. ಖಾದ್ರಿ ಈ ಗುಂಪಿನಲ್ಲಿ ಸೇರಿದರು. ಮೇಲುಕೋಟೆಯಲ್ಲಿ ಕುಟ್ಟೀಜಿ ಹಾಗೂ ಅರ್‍ಯೆಯರ್ ಭೂದಾನ ಚಳವಳಿಗೆ ಧುಮುಕಿದರು. 1967 ಮೇಲುಕೋಟೆಗೆ ವಿನೋಬಾಜಿ ಆಗಮಿಸಿದರು. ಅವರ ಸೂಚನೆಯಂತೆ ಕುಟ್ಟೀಜಿ ದಕ್ಷಿಣ ಭಾರತದಲ್ಲಿ ಪಾದಯಾತ್ರೆ ಕೈಗೊಂಡರು.

ಖಾದ್ರಿ ಬಾಳ ಗೆಳೆಯ ಎಂದರೆ ಬಾಸು ಕೃಷ್ಣಮೂರ್ತಿ. ಜಯಪ್ರಕಾಶ್ ನಾರಾಯಣ ಹಜಾರಿಬಾಗ್ ಸೆರೆಮನೆಯ ಗೋಡೆ ಹಾರಿಬಂದು ಭೂಗತರಾಗಿ ಚಳವಳಿಗೆ ನಿರ್ದೇಶನ ನೀಡಿ ಆಗಿನ ಯುವ ಪೀಳಿಗೆಗೆ ಕಣ್ಮಣಿಯಾಗಿದ್ದರು. ಬಾಸು ಕಂಚಿನ ಕಂಠ. ಚಳವಳಿಯಲ್ಲಿ ಘೋಷಣೆ ಕೂಗಿದರೆ ಸಾಕು ಎಲ್ಲ ದಿಕ್ಕುಗಳಿಗೂ ತಲುಪುತ್ತಿತ್ತು.

ಖಾದ್ರಿ ಕಾಲೇಜಿಗೆ ಶರಣು ಹೊಡೆದು ಗಾಂಧೀಜಿ ಸೇವಾ ಗ್ರಾಮ ಸೇರಿದ ಮೇಲೆ ಹಿಂತಿರುಗಿ ಬಂದಿದ್ದು ಮದ್ರಾಸಿಗೆ. ಎರಡನೇ ಮಹಾಯುದ್ಧ ಮುಗಿದಿತ್ತು. ಕರ್ನಾಟಕದಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಉದಯವಾಗಿತ್ತು. ಆದರೆ ಅದಕ್ಕೆ ಚೈತನ್ಯ ತುಂಬುವ ಕೆಲಸ

ನಡೆದಿರಲಿಲ್ಲ. ಈ ಕೆಲಸವನ್ನು ಕಮಲಾದೇವಿ ಚಟ್ಟೋಪಾಧ್ಯಾಯ ಕೈಗೊಂಡರು. ಅದರ ಅಂಗವಾಗಿ ಮಂಗಳೂರಿನಲ್ಲಿ ಸಮಾಜವಾದಿ ಸಮ್ಮೇಳನ. ಜೆಪಿ ಆಗಮಿಸಿದ್ದರು. ಆಗ ಖಾದ್ರಿ ಶಾಮಣ್ಣ ಮುಂಬೈನಲ್ಲಿ ಜಾಗೃತಿ ಕನ್ನಡ ವಾರ ಪತ್ರಿಕೆ ಜವಾಬ್ದಾರಿ ಹೊತ್ತು ಅಲ್ಲಿಗೆ ತೆರಳಿದ್ದರು. ಬೆಂಗಳೂರಿಗೆ 2 ಸಾವಿರ ಪ್ರತಿ ಜಾಗೃತಿ ಬರುತ್ತಿತ್ತು. ಅದನ್ನು ಮಾರಾಟ ಮಾಡುವ ಕೆಲಸ ಬಾಸು ಕೃಷ್ಣಮೂರ್ತಿಯವರದು. ಪತ್ರಿಕೆ ಮಾರಾಟದಿಂದ ಬಂದ ಹಣವನ್ನು ಪಕ್ಷದ ಸಂಘಟನೆಗಳಿಗೆ ಬಳಸುತ್ತಿದ್ದರು. ಸೋಗಾಲ ನಾಗಭೂಷಣ, ಕಣ್ಣನ್ ಪಕ್ಷವನ್ನು ಕಟ್ಟಿದರು. ಶಿವಮೊಗ್ಗದ ವೈ.ಆರ್.ಪರಮೇಶ್ವರಪ್ಪ ಶಾಂತವೇರಿ ಗೋಪಾಲಗೌಡ, ಜಿ. ಸದಾಶಿವ ರಾವ್, ಧಾರವಾಡದ ನರಿಬೋಳಿ ಪಕ್ಷವನ್ನು ಕಟ್ಟಿದರು. ಈ ಪಕ್ಷ ಚುನಾವಣೆಯಲ್ಲಿ ಭಾಗವಹಿಸುವ ಮುನ್ನ ಕಾಗೋಡುವಿನಲ್ಲಿ ರೈತ ಚಳವಳಿಯಲ್ಲಿ ಭಾಗವಹಿಸಿತು. ಡಾ. ಲೋಹಿಯಾ ಭಾಗವಹಿಸಿದ್ದರು. ಖಾದ್ರಿ ಕಾಗೋಡು ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಕಂಡರು. ಈ ರೀತಿ ಸೆರೆಮನೆವಾಸ ಅನುಭವಿಸುವುದು ಖಾದ್ರಿಯವರಿಗೆ ಹೊಸತೇನಲ್ಲ. 1950ರಲ್ಲಿ ಎಚ್‌ಎಎಲ್‌ನಲ್ಲಿ ಕಾರ್ಮಿಕರ ಮುಷ್ಕರ. ಕಿಡಿ ಶೇಷಪ್ಪ, ಸಿಜಿಕೆ ರೆಡ್ಡಿ ಅವರೊಂದಿಗೆ ಖಾದ್ರಿ ಬಂಧಿತರಾದರು. ಮುಂದೆ ಲೋಕಸಭೆ ಚುನಾವಣೆ. ತುಮಕೂರಿನಿಂದ ಖಾದ್ರಿ, ಚಾಮರಾಜಪೇಟೆಯಿಂದ ಬಾಸು ಸಮಾಜವಾದಿ ಪಕ್ಷದ ಅಭ್ಯರ್ಥಿ. ಇಬ್ಬರೂ ಸೋಲನ್ನು ಕಂಡರು.

ಭೂದಾನ ಚಳವಳಿ ಪೂರ್ಣಗೊಳ್ಳುತ್ತ ಬಂದಾಗ ಖಾದ್ರಿ ಮೈಸೂರಿನ ಗಾಂಧಿ ಗ್ರಂಥಮಾಲೆ ಸೇರಿದರು. ಅಲ್ಲಿ ಅನುವಾದದ ಕೆಲಸ. ಪ್ರೊ. ಯಾಮುನಾಚಾರ್ಯರು ಪ್ರಧಾನ ಸಂಪಾದಕರು. ಜಿ.ವಿ.ನಾರಾಯಣಮೂರ್ತಿ, ಪ್ರಾಣೇಶರಾವ್, ಕೆ.ಎಸ್. ನಾರಾಯಣಸ್ವಾಮಿ ಖಾದ್ರಿ ಜತೆ. ಸಿದ್ಧವನಹಳ್ಳಿ ಇವರಿಗೆ ಬರಹದ ಗುರು. ಅವರಿಂದ ಬಳುವಳಿಯಾಗಿ ಬಂದಿದ್ದು ಚಿಕ್ಕಚಿಕ್ಕವಾಕ್ಯಗಳ ಕ್ರಿಯಾಪದ ಇಲ್ಲದ ಬರಹ. ಅದೇ ಖಾದ್ರಿಯವರ ಶೈಲಿಯಾಗಿ ಜನಪ್ರಿಯತೆಗೆ ಕಾರಣವಾಯಿತು. ಯಲವಾಲದಲ್ಲಿ ಗ್ರಾಮದಾನ ಸಮ್ಮೇಳನ. ಡಾ. ರಾಜೇಂದ್ರ ಪ್ರಸಾದ ಅವರಿಂದ ಹಿಡಿದು ಎಲ್ಲ ರಾಷ್ಟ್ರೀಯ ನಾಯಕರು ಆಗಮಿಸಿದ್ದರು. ಅವರ ಭಾಷಣವನ್ನು ಕನ್ನಡ ಅನುವಾದ ಮಾಡುವುದು ಖಾದ್ರಿ ಕೆಲಸ. ಆಗ ಜೀಪ್ ಅಪಘಾತ ಸಂಭವಿಸಿ ಖಾದ್ರಿಯವರ ಕಾಲು ಮುರಿಯಿತು. ಜೆಪಿಯವರೇ ಆಸ್ಪತ್ರೆಗೆ ಬಂದು ನೋಡಿಕೊಂಡು ಹೋದರು. ಅನಂತರ ಸಂಯುಕ್ತ ಕರ್ನಾಟಕ, ಗೋಕುಲ ಪತ್ರಿಕೆಯಲ್ಲಿ ಕೆಲಸ ಮಾಡುವಾಗ ಗೆಳೆಯ ಬಾಸು ಸಹ ಉದ್ಯೋಗಿ. ಪತ್ರಿಕೋದ್ಯಮ, ಸಮಾಜವಾದಿ ಚಳುವಳಿ, ಸರ್ವೋದಯ, ಎಲ್ಲದರಲ್ಲೂ ಖಾದ್ರಿ–ಬಾಸು ಒಟ್ಟೊಟ್ಟಿಗೆ. ■

## ರಾಜಕೀಯ ವರಸೆ

# ತುಮಕೂರಿನಿಂದ ಲೋಕಸಭೆಗೆ ಸ್ಪರ್ಧೆ

ಸ್ವಾತಂತ್ರ್ಯ ನಂತರ ಪಡೆದ ಮೊದಲ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಲೋಕಸಭಾ ಕ್ಷೇತ್ರದಿಂದ ಅಂದು ಯುವ ಪತ್ರಕರ್ತರಾಗಿದ್ದ ಹೆಸರಾಂತ ಪತ್ರಕರ್ತ, 'ಕನ್ನಡಪ್ರಭ'ದ ಮಾಜಿ ಸಂಪಾದಕ ಖಾದ್ರಿ ಶಾಮಣ್ಣ ಅವರು ಸ್ಪರ್ಧಿಸಿದ್ದರು.

1952ರಲ್ಲಿ ನಡೆದ ತುಮಕೂರು ಲೋಕಸಭಾ ಚುನಾವಣೆಯಲ್ಲಿ ಖಾದ್ರಿ ಶಾಮಣ್ಣ ಅವರು ಸೋಷಲಿಸ್ಟ್ ಪಕ್ಷದಿಂದ ಸ್ಪರ್ಧಿಸಿ 47,756 ಮತಗಳನ್ನು ಪಡೆದು ದ್ವಿತೀಯ ಸ್ಥಾನ ಗಳಿಸಿದ್ದರು. ಅವರ ಆಪ್ತ ವಲಯಗಳ ಪ್ರಕಾರ ಖಾದ್ರಿ ಶಾಮಣ್ಣ ಅವರು ಆ ಚುನಾವಣೆಗೆ ಖರ್ಚು ಮಾಡಿದ್ದು ಕೇವಲ 350 ರೂಪಾಯಿ. ಆದರೂ ಗಣನೀಯ ಎನಿಸಬಹುದಾದ ಶೇ.21.37 ಪ್ರಮಾಣದಲ್ಲಿ ಮತಗಳನ್ನು ಪಡೆದಿದ್ದರು. ಅಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಸಿ.ಆರ್.ಬಸಪ್ಪ ಅವರು ಆಯ್ಕೆಯಾಗಿದ್ದರು. ಅವರಿಗೆ 1,16,596 ಮತ ಬಿದ್ದಿದ್ದವು.

ಖಾದ್ರಿ ಶಾಮಣ್ಣ ಅವರು ಆ ಚುನಾವಣೆಯಲ್ಲಿ ಪ್ರಚಾರಕ್ಕೆ ಬಳಸಿದ್ದು 'ಟಾಂಗಾ' ಎಂಬುದು ಮತ್ತೊಂದು ವಿಶೇಷ

ಖಾದ್ರಿ ಶಾಮಣ್ಣ ಅವರ ಪೂರ್ವಿಕರು ಮಧುಗಿರಿ ತಾಲ್ಲೂಕು ಗರಣಿಯವರು. ಹಾಗಾಗಿ ಸಹಜವಾಗಿ ಸ್ವಾತಂತ್ರ್ಯಾನಂತರ ನಡೆದ ಮೊದಲ ಚುನಾವಣೆಯಲ್ಲಿ ಖಾದ್ರಿ ಶಾಮಣ್ಣ ತುಮಕೂರನ್ನೇ ಆಯ್ಕೆ ಮಾಡಿಕೊಡ್ಡಿದ್ದರು. ಖಾದ್ರಿ ಶಾಮಣ್ಣ ಅವರು ಜೆ.ಹೆಚ್.ಪಟೇಲ್ ಹಾಗೂ ಶಾಂತವೇರಿ ಗೋಪಾಲಗೌಡರ ಒಡನಾಟ ಹೊಂದಿದ್ದ ರಿಂದಲೇ ರಾಜಕೀಯ ಪ್ರವೇಶಕ್ಕೆ ಸ್ವಾತಂತ್ರ್ಯಾನಂತರ ನಡೆದ ಮೊದಲ ಲೋಕಸಭಾ ಚುನಾವಣೆ ವೇದಿಕೆಯಾಯಿತು. ಆದರೆ ಚುನಾವಣೆ ನಂತರ ಸಿದ್ದವನಹಳ್ಳಿ ಕೃಷ್ಣಶರ್ಮ 'ಪತ್ರಿಕೋದ್ಯಮದಲ್ಲಿ ಮುಂದುವರಿಯಿರಿ' ಎಂದು ಸಲಹೆ ನೀಡಿದ ಮೇರೆಗೆ ಖಾದ್ರಿ ಶಾಮಣ್ಣ ಪತ್ರಿಕಾರಂಗದಲ್ಲಿ ಮುಂದುವರೆದರು ಎಂಬುದು ಅವರ ಆಪ್ತರ ಅಭಿಪ್ರಾಯ. ■

# ಕಾಗೋಡು ಸತ್ಯಾಗ್ರಹ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಚಿಕ್ಕ ಹಳ್ಳಿ ಕಾಗೋಡು. ಕರ್ನಾಟಕಕ್ಕೆ ಅಪೂರ್ವ ರೈತ ಸತ್ಯಾಗ್ರಹವನ್ನು ನೀಡಿ ಐವತ್ತು ವರ್ಷಗಳಿಗೂ ಹೆಚ್ಚು ಕಳೆದವು. ಕಾಗೋಡಿನ ಗೇಣಿದಾರ ರೈತರು ಆ ಹಳ್ಳಿಯ ಭೂ ಮಾಲೀಕರ ಮತ್ತು ಸರ್ಕಾರದ ವಿರುದ್ಧ ಒಂದು ವರ್ಷ ಕಾಲ ಹೋರಾಟ ನಡೆಸಿದರು. ಹಳ್ಳಿಗಾಡಿನ ಭೂರಹಿತ ಹಿಂದುಳಿದ ಜಾತಿ ಯೊಂದರಲ್ಲಿ ಅನುಪಮವಾದ ಆತ್ಮವಿಶ್ವಾಸವನ್ನು ಈ ಸತ್ಯಾಗ್ರಹ ಮೂಡಿಸಿತೆಂಬುದು ನಿರ್ವಿವಾದ. ಈ ಸತ್ಯಾಗ್ರಹದ ಸಂಕ್ಷಿಪ್ತ ಚಿತ್ರಣವನ್ನು ಹಾಗೂ ಸತ್ಯಾಗ್ರಹದ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳ ಬಗ್ಗೆ ಚಿಂತನೆಯನ್ನು ಮುಂದಿಡುವ ಬರಹ ಇದು.

1950ರ ದಶಕದಲ್ಲಿ ಕಾಗೋಡು ಕುಗ್ರಾಮ. ಹಾಗಲಪುರ, ಮಣಗದ್ದೆ ಮತ್ತು ಸಣ್ಣಮನೆ ಗ್ರಾಮಗಳೊಂದಿಗೆ ಸೇರಿಕೊಂಡು ಅದು ಹಿರೇನಲ್ಲೂರು ಕಂದಾಯ ಗ್ರಾಮ ವಾಗಿತ್ತು. ಹಾಗೂ ಇದೇ ಗ್ರೂಪ್ ಪಂಚಾಯಿತಿಯ ಭಾಗವಾಗಿತ್ತು. ಆಗ ಕಾಗೋಡಿನಲ್ಲಿ ಗೌಡರದು (1) ಮಡಿವಾಳರದು (3) ಅಕ್ಕಸಾಲಿಗರದು (1) ಆದಿಕರ್ನಾಟಕದವರು (14) ಹಾಗೂ ದೀವರದು (70) ಹೀಗೆ ಒಟ್ಟು 89 ಮನೆಗಳಿದ್ದವು. ಗೌಡರೂ ಭೂಮಾಲಿಕರು. ಸುತ್ತಲ ಏಳು ಹಳ್ಳಿಗಳಲ್ಲಿ ಅವರಿಗೆ 1,000 ಎಕರೆಗೆ ತರಿಭೂಮಿ, 60 ಎಕರೆ ಖುಷ್ಕಿ ಭೂಮಿ ಮತ್ತು 360 ಎಕರೆ ಕಾಡು ಇತ್ತು. ಆ ಗೌಡರು ವರ್ಷಕ್ಕೆ ಸುಮಾರು 3000 ರೂ. ಕಂದಾಯ ಕಟ್ಟುತ್ತಿದ್ದರು. ದೀವರಲ್ಲಿ ಸವಾಜಿ ಮನೆ (ಮಾಜಿ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪನವರ ಮನೆತನ) ಮಾತ್ರ ಕೊಂಚ ಸ್ಥಿತಿವಂತರಾಗಿದ್ದರು. ಅವರಿಗೆ 3 ಎಕರೆ ತರಿ ಭೂಮಿ ಇತ್ತು. ದೀವರು, ಮಡಿವಾಳರು ಮತ್ತು ಆದಿಕರ್ನಾಟಕ ಕುಟುಂಬ ಗಳವರು ವರ್ಷವಿಡೀ ಎರಡು ಹೊತ್ತಿನ ಊಟ ಕೂಡ ಕಾಣದಷ್ಟು ಕಡು ಬಡವರು.

ಕಾಗೋಡು ಗೌಡರು ಆಳುಗಳನ್ನು ಇಟ್ಟುಕೊಂಡೇ 18 ಎಕರೆಯನ್ನು ಮಾತ್ರ ತಾವೇ ವ್ಯವಸಾಯ ಮಾಡಿಸುತ್ತಾ ಉಳಿದ ಎಲ್ಲಾ ಭೂಮಿಯನ್ನು ಒಕ್ಕಲುಗಳಿಗೆ ಗೇಣಿ ನೀಡಿದ್ದರು. ಸವಾಜಿ ಮನೆಯವರೂ ಗೌಡರ ಒಕ್ಕಲುಗಳಲ್ಲಿ ಒಬ್ಬರಾಗಿದ್ದರು.

ಹಳೆ ಪೈಕದವರು, ಬಿಲ್ಲವರು, ಈಳಿ(ಡಿ)ಗರು, ನಾಮಧಾರಿಗಳು ಹೀಗೆ ಕರ್ನಾಟಕದ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರುಗಳನ್ನು ಹೊಂದಿರುವ ದೀವರು ಪರಂಪರಾಗತವಾಗಿ ಹೆಂಡ ಸಾರಾಯಿ ಭಟ್ಟಿ ಇಳಿಸುವುದನ್ನು ಉಪ ಕಸುಬಾಗಿಸಿ ಕೊಂಡಿದ್ದವರು. ಶಿವಮೊಗ್ಗ

ಜಿಲ್ಲೆಯ ಸಾಗರ, ಹೊಸನಗರ, ಸೊರಬ ತಾಲ್ಲೂಕುಗಳಲ್ಲಿದ್ದ ಒಕ್ಕಲುಗಳಲ್ಲಿ ಶೇ.90ರಷ್ಟು ಜನ ದೀವರೇ ಆಗಿದ್ದರು. ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿತರಾದ ಈ ಜನ ಗೌಡರ ಎದುರು ತಮ್ಮ ಕಾಲು ಮುಚ್ಚುವಷ್ಟು ಉದ್ದಕ್ಕೆ ಪಂಚೆ ಉಡುವಂತಿರಲಿಲ್ಲ; ಚಪ್ಪಲಿ ಹಾಕಿಕೊಳ್ಳುವಂತಿರಲಿಲ್ಲ; ಗೌಡರು ಎದುರಾದರೆ, ತಾವು ಮೆಟ್ಟಿದ ಚಪ್ಪಲಿ ಬಿಚ್ಚಿ ಕೈಯಲ್ಲಿ ಹಿಡಿದು ಬೆನ್ನು ಹಿಂದಿಟ್ಟುಕೊಂಡು ಗೌಡರು ಮರೆಯಾಗುವವರೆಗೆ ನಿಂತಿರಬೇಕಾಗಿತ್ತು; ಗೌಡರ ಮಕ್ಕಳನ್ನೂ ಬಹುವಚನದಲ್ಲಿ ಮಾತಾಡಿಸಬೇಕಾಗಿತ್ತು; ತಮ್ಮದಲ್ಲದ ಭೂಮಿಯಲ್ಲಿ ಬೆವರು–ರಕ್ತ ಸುರಿಸಿ, ಕೂತು ತಿನ್ನುತ್ತಾ ದರ್ಬಾರು ನಡೆಸುತ್ತಿದ್ದ ಗೌಡರಿಗೆ ಗೇಣಿಯನ್ನು ಕೊಡಬೇಕಾಗಿತ್ತು. ವಿರಾಮ ಕಾಲದಲ್ಲೂ ಗೌಡರ ಮನೆ–ಹೊಲಗಳಲ್ಲಿ ಬಿಟ್ಟಿ ಚಾಕರಿಯನ್ನು ಮಾಡಬೇಕಿತ್ತು.

ಈ ಹಿನ್ನೆಲೆಯಲ್ಲಿ 1946ರಲ್ಲಿ ಮೊಟ್ಟಮೊದಲ ಬಾರಿಗೆ ತೀರ್ಥಹಳ್ಳಿಯಲ್ಲಿ ''ಮಲೆನಾಡು ಗೇಣಿದಾರರ ಸಂಘ''ದ ರಚನೆಯಾಯಿತು. 1948ರ ಸುಮಾರಿಗೆ ಸೋಷಲಿಸ್ಟ್ ಪಕ್ಷದ ''ಹಿಂದ್ ಕಿಸಾನ್ ಪಂಚಾಯತ್'' ಕೂಡ ಪ್ರಾರಂಭವಾಯಿತು. ಇದೇ ಕಾಲಕ್ಕೆ ''ಸಾಗರ ತಾಲ್ಲೂಕು ರೈತರ ಸಂಘ'' ಅಸ್ತಿತ್ವಕ್ಕೆ ಬಂತು. ಇದು ನೂರಕ್ಕೆ ನೂರು ಪಾಲು ದೀವರ ಸಂಘವಾಗಿತ್ತು. ಈ ಸಂಘವೇ ಮೊದಲ ಬಾರಿಗೆ ಕಾಗೋಡು ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು.

ಈ ಸಂಘದ ಕಾರ್ಯದರ್ಶಿಯೇ ಗಣಪತಿಯಪ್ಪ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಗಡಿಯ ಸಿದ್ದಾಪುರ ಗ್ರಾಮದವರಾದ ಇವರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ, [illegible]ತಲೆಗ, ಜೇಲು ಕಂಡಿದ್ದವರು. ದೀವರನ್ನು ಶಾಲೆಯಲ್ಲಿ ಸೇರಿಸಿಕೊಳ್ಳುವುದೇ ಇಲ್ಲದಿದ್ದ ಕಾಲದಲ್ಲಿ ಗಣಪತಿಯಪ್ಪ 7ನೇ ತರಗತಿ ಪಾಸಾಗಿದ್ದರು. ಸಿದ್ದಾಪುರಕ್ಕೆ ಹಿರೇನಲ್ಲೂರು ಸಮೀಪ. ಅಲ್ಲಿಗೆ ಗಣಪತಿಯಪ್ಪ ಬಂದಾಗ ಗ್ರಾಮಪಂಚಾಯಿತಿಯವರು, ಸುತ್ತಮುತ್ತ ಶಾಲೆಯೇ ಇಲ್ಲದ್ದನ್ನು ಗಮನಕ್ಕೆ ತಂದುಕೊಂಡು, ತಮ್ಮ ಭಾಗದ ಮಕ್ಕಳಿಗೆ ಪಾಠ ಹೇಳಲು ಗಣಪತಿಯಪ್ಪನವರನ್ನು ಒಪ್ಪಿಸಿದರು.

ಗಣಪತಿಯಪ್ಪನವರದು ದೀವರಲ್ಲೇ ಎದ್ದು ಕಾಣುವಂತಹ ವ್ಯಕ್ತಿತ್ವ. ಮಾತೂ ಅಷ್ಟೇ. ಉಡುಪೂ ಅಷ್ಟೇ. ಅವರ ಹೆಸರೂ ದೀವರಲ್ಲಿ ಬಹು ಅಪರೂಪ. ಗೌಡರ ಸಮಕ್ಕೆ ಕುಳಿತುಕೊಳ್ಳುತ್ತಿದ್ದ ಅವರು ಪತ್ರಿಕೆ ಓದುವ, ಸ್ಪಷ್ಟ ಕನ್ನಡ ಮಾತನಾಡುವ ಅಭ್ಯಾಸದವರು. ಇವರನ್ನು ಕಂಡರೆ ಗೌಡರಿಗೂ ಆದರವಿತ್ತು.

ಈ ಹೊತ್ತಿನಲ್ಲೇ ಕಾಗೋಡಿನಲ್ಲಿ ಶಿವಲಿಂಗವೊಂದನ್ನು ಪುನರ್ ಪ್ರತಿಷ್ಠಾಪನೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ವಿವಾದ ಎದ್ದಿತು. ಇದಕ್ಕಾಗಿ ಗ್ರಾಮದಲ್ಲಿ ಎಲ್ಲಾ ಜಾತಿಯವರಿಂದ ವರಾಡ (ಚಂದಾ) ಎತ್ತಲಾಗಿತ್ತು. ಆದರೂ ಸಮಾರಂಭದ ಆಹ್ವಾನ ಪತ್ರಿಕೆಯನ್ನು ವೀರಶೈವ ಮಂಡಳಿ, ಹಿರೇನಲ್ಲೂರು ಹೆಸರಿನಲ್ಲಿ ಹೊರಬಂತು. ಇದನ್ನು ದೀವರು

ಮುಖ್ಯವಾಗಿ ಗಣಪತಿಯಪ್ಪ ಪ್ರಶ್ನಿಸಿದರು. ಅದೇ ದಿನ ದೀವರ ಸಭೆ ನಡೆದು ತೀರ್ಮಾನವಾದಂತೆ ದೀವರ ಮಡಳಿ, ಹಿರೇನಲ್ಲೂರು ಹೆಸರಿನಲ್ಲಿ ಇನ್ನೊಂದು ಆಹ್ವಾನ ಪತ್ರಿಕೆ ಮುದ್ರಣವಾಗಿ, ಒಂದೆರಡು ದಿನಗಳಲ್ಲಿ ಕಾಗೋಡಿನಲ್ಲಿ ಪ್ರಸಾರವಾಗಿ ಬಿಟ್ಟಿತು. ಇದರಿಂದ ಕುಪಿತರಾದ ಗೌಡರು, ಇದಕ್ಕೆಲ್ಲಾ ಗಣಪತಿಯಪ್ಪ ಕಾರಣವೆಂದು ಪತ್ತೆ ಮಾಡಿ, ಅವರ ಮೇಲೆ ಹಲ್ಲೆಗೆ ಹೊರಟರು. ಆದರೆ ಗಣಪತಿಯಪ್ಪ ಊರಲ್ಲಿರಲಿಲ್ಲ ಹಾಗಾಗಿ ಬಚಾವಾದರು.

ಆದರೆ ಎಲ್ಲಾ ವಿಷಯ ತಿಳಿದ ಗಣಪತಿಯಪ್ಪ ಆಗ ದೀವರಲ್ಲಿದ್ದ ವಿದ್ಯಾವಂತರನ್ನು ಹಾಗೂ ಮುಖಂಡರನ್ನು ಬೇಟಿಯಾಗಿ, ಗೌಡರ ವಿರುದ್ಧ ದೀವರನ್ನು ಸಂಘಟಿಸಲು "ಸಾಗರ ತಾಲ್ಲೂಕು ರೈತ ಸಂಘ"ವನ್ನು ಕಟ್ಟಿದರು. ಹಲವೆಡೆ ಸಭೆಗಳನ್ನು ನಡೆಸಿದರು. 1958ರ ಹೊತ್ತಿಗೆ ಈ ಸಭೆಗಳಿಗೆ ಸೋಷಲಿಸ್ಟ್ ನಾಯಕರೂ ಆಹ್ವಾನಿತರಾದರು. 1959ರಲ್ಲಿ ಸಾಗರ ತಾಲ್ಲೂಕು ರೈತ ಸಂಘ ಮತ್ತು ಮಲೆನಾಡು ರೈತ ಸಂಘಗಳು ಒಂದುಗೂಡಿದವು.

ಗೌಡರು ಒಕ್ಕಲುಗಳಿಗೆ ಗೇಣಿಗಾಗಿ ಭೂಮಿಯನ್ನು ನೀಡುವಾಗ ಬಿತ್ತನೆ ಬೀಜವನ್ನು ಪಡೆದು ಫಸಲನ್ನು ಅಳೆಸಿಕೊಳ್ಳಲು ಒಪ್ಪಂದವಾಗಿರುತ್ತಿತ್ತು. ಕಾಳು ಅಳತೆಗೆ ಖಂಡುಗ ಮಾನವಾಗಿತ್ತು. ಒಂದು ಖಂಡುಗಕ್ಕೆ 20 ಕೊಳಗ, ಒಂದು ಕೊಳಗಕ್ಕೆ 3 ಸೇರು ಎಂಬ ಲೆಕ್ಕ ಇತ್ತು. ಆದರೆ ಗೌಡರು ಎರಡು ಸೈಜಿನ ಕೊಳಗಗಳನ್ನು ಬಳಸುತ್ತಿದ್ದುದು ದೀವರ ಗಮನಕ್ಕೆ ಬಂತು. ಬಿತ್ತನೆ ಬೀಜ ಕೊಡುವಾಗ 3 ಸೇರಿನ ಕೊಳಗ ಬಳಸುತ್ತಿದ್ದರೆ ಫಸಲನ್ನು (ಗೇಣಿ) ಅಳೆಸಿಕೊಳ್ಳುವಾಗ 4 ಸೇರಿನ ಕೊಳಗವನ್ನು ಬಳಸಲಾಗುತ್ತಿತ್ತು. ಇದನ್ನು ಪ್ರಶ್ನಿಸಿದಾಗ ಗೌಡರಿಂದ ದರ್ಪದ ಪ್ರತಿಕ್ರಿಯೆ ಬಂತು. ದೀವರೂ ಕೂಡ ಗೇಣಿಯನ್ನು 3 ಸೇರಿನ ಕೊಳಗದಲ್ಲೇ ನೀಡುವುದಾಗಿ ನಿರ್ಧರಿಸಿಬಿಟ್ಟರು. ಎರಡೂ ಕಡೆಯವರೂ ಪಟ್ಟು ಹಿಡಿದರು. ಗೇಣಿದಾರರ ಸಮಸ್ಯೆಯನ್ನು ರೈತ ಸಂಘ ಸರ್ಕಾರಕ್ಕೆ ಮುಟ್ಟಿಸಿತು. ಆದರೆ, ಗೇಣಿದಾರರ ಬೇಡಿಕೆಗಳಿಗೆ ಎಲ್ಲೆಡೆಯಿಂದ ನಿರ್ಲಕ್ಷ್ಯವೇ ವ್ಯಕ್ತವಾಯಿತು.

ಕಾಗೋಡಿನ ಗುರುವಯ್ಯ ಗೌಡರು ಒಕ್ಕಲುಗಳಿಗೆ "ನಮ್ಮ ಭೂಮಿ ಬಿಟ್ಟು ಬಿಡಿ, ಕೊಳಗದ ವಿಷಯ ಕೋರ್ಟಿನಲ್ಲಿ ಇತ್ಯರ್ಥವಾಗಲಿ" ಎಂದು ಬಿಟ್ಟರು. ಈ ವಿಷಯದ ಬಗ್ಗೆ ಈ ಭಾಗದ ಭೂಮಾಲೀಕರೆಲ್ಲಾ ಒಂದಾಗಿದ್ದರು. ರೈತ ಸಂಘದ ನಾಯಕರು ಡಿ.ಸಿ. ಸಮ್ಮುಖದಲ್ಲಿ ಮಾತುಕತೆ ನಡೆಸಿದರೂ ಸಮಸ್ಯೆ ಇತ್ಯರ್ಥವಾಗಲಿಲ್ಲ.

ಸೋಷಲಿಸ್ಟ್ ಪಕ್ಷ ಪ್ರಾರಂಭದಿಂದಲೂ ಕಾಗೋಡು ಒಕ್ಕಲುಗಳ ಪರವಾಗಿ ಆಸಕ್ತಿ, ಸಹಾಯನುಭೂತಿಯನ್ನು ತೋರಿತ್ತು. 1951ರಲ್ಲಿ ಸೋಷಲಿಸ್ಟ್ ಪಕ್ಷದ ಆಗಿನ ರಾಜ್ಯಾಧ್ಯಕ್ಷ ಸಿ.ಜಿ.ಕೆ.ರೆಡ್ಡಿ 'ದ ಜೆನೆಸಿಸ್ ಆಫ್ ದ ಕಾಗೋಡು' ಎಂಬ ಪುಸ್ತಕವನ್ನು ಮುದ್ರಿಸಿ, ವಿಶೇಷವಾಗಿ ಕಾಂಗ್ರೆಸ್ ನಾಯಕರಲ್ಲಿ ಹಂಚಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಸದಾಶಿವರಾವ್, ಪಕ್ಷದ

ಶಿವಮೊಗ್ಗ ಜಿಲ್ಲಾಧ್ಯಕ್ಷ ಗೋಪಾಲಗೌಡ, ಕಾಗೋಡಿಗೆ ಮೇಲಿಂದ ಮೇಲೆ ಭೇಟಿ ನೀಡುತ್ತಿದ್ದರು. ಆದರೆ ಸೋಷಲಿಸ್ಟ್ ಪಕ್ಷ ತಾವು ರಾಜ್ಯದಲ್ಲಿ ತುಂಬಾ ಬಲಹೀನವಾಗಿದ್ದರೂ, ಕಾಗೋಡು ವಿವಾದದಲ್ಲಿ ಅದು ತುಂಬು ಆಸಕ್ತಿ ತೋರಿತು ಮತ್ತು ಈ ಆಸಕ್ತಿ ಸಕ್ರಿಯವಾಯಿತು.

1951ರ ಮಳೆಗಾಲದ ಮುನ್ನ ಒಕ್ಕಲುಗಳು ತಮ್ಮ ಭೂಮಿಯಲ್ಲಿ ಬಿತ್ತನೆಗೆಂದು ಹೋದಾಗ ಕಾಗೋಡು ವಿವಾದ ಸ್ಫೋಟಗೊಂಡಿತು. ಗೌಡರು ಆಳುಗಳು ಈ ಒಕ್ಕಲುಗಳ ಎತ್ತು-ನೊಗಗಳನ್ನು ಕಿತ್ತೆಸೆದರು. ಒಕ್ಕಲುಗಳನ್ನು ಥಳಿಸಿದರು. ಭೂಮಿಯಿಂದ ಓಡಿಸಿದರು. ಒಕ್ಕಲುಗಳು ತಮ್ಮ ಭೂಮಿಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಾರೆಂದು ಗೌಡರು ಪೊಲೀಸರಿಗೆ ದೂರು ನೀಡಿದರು. ಪೊಲೀಸರು ಬಂದು ಒಕ್ಕಲುಗಳನ್ನು ಬಂಧಿಸಿದರು. ಪ್ರತಿಭಟನೆ ತೋರಿದವರನ್ನು ಥಳಿಸಿದರು.

ಒಕ್ಕಲುಗಳ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯವನ್ನು ಸೋಷಲಿಸ್ಟ್ ಪಕ್ಷ ಬಲವಾಗಿ ಖಂಡಿಸಿತು. ಕಾಗೋಡು ಭಾಗದಲ್ಲೆಲ್ಲಾ ಸಭೆಗಳು ನಡೆದವು. ಕಾಗೋಡಿನಲ್ಲಿ ಒಕ್ಕಲುಗಳು ಮತ್ತು ಪೊಲೀಸರ ಮಧ್ಯೆ ದಿನನಿತ್ಯವೂ ಘರ್ಷಣೆ ನಡೆಯಲಾರಂಭಿಸಿತು. ಕಾಗೋಡಿನ ಗೌಡರಿಗೆ ಸುತ್ತ ಮುತ್ತಲ ಗೌಡರಿಂದ, ಭೂಮಾಲೀಕರಿಂದ ಸಹಾನುಭೂತಿ, ಬೆಂಬಲಗಳು ಯಥೇಚ್ಛವಾಗಿ ದೊರೆತವು.

ಕಾಗೋಡಿನಲ್ಲಿ ಬಂಧಿತರಾದ ರೈತ ನಾಯಕರ ಮತ್ತು ಒಕ್ಕಲುಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಜಿಲ್ಲೆಯ ಹೊರಗಿನಿಂದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಸತ್ಯಾಗ್ರಹದಲ್ಲಿ ಪಾಲುಗೊಳ್ಳತೊಡಗಿದರು. ಪೊಲೀಸರಿಗೆ, ಪೊಲೀಸ್ ವ್ಯಾನುಗಳಿಗೆ ಕಾಗೋಡು ಬಿಡಾರ ಒದಗಿಸಿತು. ಕಾಗೋಡು ಸತ್ಯಾಗ್ರಹ ರಾಜ್ಯಮಟ್ಟದಲ್ಲೂ ಸುದ್ದಿ ಮಾಡಿತ್ತು. ಪ್ರಜಾವಾಣಿ ದಿನಪತ್ರಿಕೆಯ ಮುಖಪುಟದಲ್ಲಿ ಬ್ಯಾನರ್ ಹೆಡ್ಡಿಂಗ್‌ನಲ್ಲಿ ಸತ್ಯಾಗ್ರಹದ ವರದಿ, ಸಂಪಾದಕೀಯ ಪ್ರಕಟವಾದವು.

ಈ ಮಧ್ಯೆ ಕಾಗೋಡು ಸತ್ಯಾಗ್ರಹಕ್ಕೆ ಭಂಗ ತರುವಂತಹ ರೀತಿಯಲ್ಲಿ ಕೆಂಜಿಗಾಪುರ ಭೂಮಿಯನ್ನು ಒಕ್ಕಲುಗಳಿಗೆ ಒದಗಿಸುವ ಸಲಹೆ ಬಂದಿತ್ತಾದರೂ ಅದು ತಿರಸ್ಕೃತವಾಯಿತು. ಸತ್ಯಾಗ್ರಹ ಸೋಷಲಿಸ್ಟ್ ಪಕ್ಷದ ಬೆಂಬಲದಿಂದ ಮುಂದುವರೆಯಿತು. ಕಾಗೋಡಿನ ಒಕ್ಕಲುಗಳು ಸತ್ಯಾಗ್ರಹದಲ್ಲಿ ಹಣ್ಣಾಗಿದ್ದರೂ, ಹೋರಾಟದ ಛಲ ಕಳೆದುಕೊಂಡಿರಲಿಲ್ಲ. ಈ ಹಂತದಲ್ಲಿ ಸಂಧಾನಕ್ಕೆ ಬಂದ ಗೃಹಮಂತ್ರಿಗಳಿಗೂ ರೈತ ನಾಯಕರು ಸೊಪ್ಪು ಹಾಕಲಿಲ್ಲ. ಸೋಷಲಿಸ್ಟ್ ಪಕ್ಷದ ನಾಯಕರ ಮತ್ತು ಕಾರ್ಯಕರ್ತರ ಪಾಲ್ಗೊಳ್ಳುವಿಕೆಯಿಂದಾಗಿ ಸತ್ಯಾಗ್ರಹ ಇನ್ನೂ ಬಿರುಸಾಗಿ ನಡೆಯಿತು. ಸತ್ಯಾಗ್ರಹಕ್ಕೆ ಮಸಿ ಬಳಿಯುವ ಕೆಲಸ ನಡೆದರೂ, ಸತ್ಯಾಗ್ರಹಿಗಳು ಧೃತಿಗೆಡಲಿಲ್ಲ. ದಕ್ಷಿಣಕನ್ನಡ, ಬೆಂಗಳೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಿಂದ ಆಗಮಿಸಿದರು. ವಾರೆಂಟ್ ಇದ್ದರೂ ಅನೇಕರು ತಲೆಮರೆಸಿಕೊಂಡೇ ಸತ್ಯಾಗ್ರಹವನ್ನು ಸಂಘಟಿಸಿದರು.

1951ರ ಜೂನ್‌ನಲ್ಲಿ ಸೋಷಲಿಸ್ಟ್ ಪಕ್ಷದ ಧುರೀಣ ರಾಮಮನೋಹರ ಲೋಹಿಯಾ ಕಾಗೋಡಿಗೆ ಬಂದರು. ಅವರನ್ನು ಸತ್ಯಾಗ್ರಹಿಗಳು ಹಾಗೂ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು. ಆದರೆ, ಅದೇ ದಿನ ಪೊಲೀಸರು ಅವರನ್ನು ಬಂಧಿಸಿ ಬೆಂಗಳೂರಿಗೆ ಒಯ್ದು ಕ್ರೆಸೆಂಟ್ ಹೌಸಿನಲ್ಲಿ ಇಟ್ಟರು. ಅರಮನೆಯಂಥ ಆ ಭವ್ಯ ಮನೆಯಲ್ಲಿ ಸೆರೆಯಾಗಿರಲು ಒಪ್ಪದ ಲೋಹಿಯಾ ಈ ಬಗ್ಗೆ ಪ್ರತಿಭಟಿಸಿದಾಗ ಅವರನ್ನು ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಲಾಯಿತು. ಎಂಟು ದಿನಗಳು ಕಳೆಯುವಷ್ಟರಲ್ಲಿ ಸರ್ಕಾರ ಲೋಹಿಯಾರ ಮೇಲಿನ ಕೇಸ್ ಹಿಂತೆಗೆದುಕೊಂಡಿತು. ಆಗ ಲೋಹಿಯಾ – ''ಕಾಗೋಡಿನ ಮಾಸ್ತಿಗಳು, ಕೆಂಚಪ್ಪಗಳು ಮಾತ್ರವಲ್ಲ, ಭಾರತದ ಎಲ್ಲರೂ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟಕ್ಕೆ ಮುಂದಾಗಬೇಕು. ನನ್ನ ಮೇಲೆ ಕೇಸ್ ಹಿಂತೆಗೆದುಕೊಂಡು ಇಂತಹದ್ದೇ ಆಪಾದನೆಗಳಿಗೆ ಗುರಿಯಾಗಿರುವ ಇತರರನ್ನು ಸೆರೆಮನೆಯಲ್ಲೇ ಉಳಿಸುವುದು ಪ್ರಜಾಸತ್ತೆಗೆ ಅಥವಾ 'ಕಾನೂನಿನ ಮುಂದೆ ಎಲ್ಲರೂ ಸಮಾನರು' ಎಂಬ ತತ್ವಕ್ಕೆ ಸಲ್ಲದು'' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಂತರದ ಕೆಲವೇ ದಿನಗಳಲ್ಲಿ ಸತ್ಯಾಗ್ರಹ ಕಾವು ಕಳೆದುಕೊಂಡಿತು. ಮುಖ ಉಳಿಸಿಕೊಳ್ಳಲು ರಾಜಿ ಸೂತ್ರ ಸಿದ್ಧವಾಯಿತು. 1951ರ ಸೆಪ್ಟೆಂಬರ್‌ನಲ್ಲಿ ಸೋಷಲಿಸ್ಟ್ ಪಕ್ಷದ ಅಂದಿನ ಅಧ್ಯಕ್ಷ ಜಯಪ್ರಕಾಶ್ ನಾರಾಯಣರು ಬರುವ ಹೊತ್ತಿಗೆ ಸತ್ಯಾಗ್ರಹದ ಕಾರ್ಯಕರ್ತರು ಜೈಲಿನಿಂದ ಹೊರಬರಲಾರಂಭಿಸಿದ್ದರು. ಕಾಗೋಡು ಸತ್ಯಾಗ್ರದಿಂದಾಗಿ ಯಾವೊಂದು ಮೂಲಭೂತ ಸಮಸ್ಯೆಯೂ ಬಗೆಹರಿಯಲಿಲ್ಲ. ನಿಜವೆಂದರೆ ಈ ಸತ್ಯಾಗ್ರಹ ಸಮಸ್ಯೆಯನ್ನು ಮೂಲಭೂತವಾಗಿ ಗ್ರಹಿಸಿರಲಿಲ್ಲ. ಸೋಷಲಿಸ್ಟ್ ಪಕ್ಷ ನೇತೃತ್ವ ವಹಿಸಿದ ಮೇಲೂ ಸತ್ಯಾಗ್ರಹದ ದೃಷ್ಟಿ ಬದಲಾಗಲಿಲ್ಲ. ಸತ್ಯಾಗ್ರಹ ಮೊದಲಿನಿಂದಲೂ ಸೀಮಿತ ಉದ್ದೇಶವನ್ನು ಇಟ್ಟುಕೊಂಡಿತ್ತು.

ಆದರೂ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಭೂರಹಿತರಾಗಿದ್ದ ಕೆಳಜಾತಿಯ ಜನ, ಅಧಿಕಾರ ಹಿಡಿದಿದ್ದ ಪಾಳೆಯಶಾಹಿ ಭೂಮಾಲಿಕ ವರ್ಗ (ಇದು ಬಲಿಷ್ಠ ಜಾತಿಯೂ ಆಗಿತ್ತು)ವನ್ನು ಯಾವುದೇ ಕಾನೂನಿನ ಬಲವಿಲ್ಲದಾಗ್ಯೂ ಸಂಘಟಿತವಾಗಿ ಎದುರಿಸಿದ್ದೇ ಕಾಗೋಡು ಸತ್ಯಾಗ್ರಹದ ಹೆಗ್ಗಳಿಕೆ. ಇದರಲ್ಲಿ ಕಾಗೋಡಿನ ದೀವರು ತಮ್ಮ ಜೀವನದ ಏಕಮಾತ್ರ ಆಸರೆಯಾಗಿದ್ದ ಗೇಣಿ ಭೂಮಿಯನ್ನೇ ಪಣಕ್ಕಿಟ್ಟು ಹೋರಾಡಿದರು. ಇವರ ಈ ಸ್ವಾಭಿಮಾನಿ ಹೋರಾಟಕ್ಕೆ ಉಳಿದ ಹಳ್ಳಿಗಳ ದೀವರೂ ಬೆಂಬಲ ನೀಡಿದರು. ಈ ಕಾರಣದಿಂದಲೇ ಕಾಗೋಡು ಸತ್ಯಾಗ್ರಹ ಧೀರೋದಾತ್ತವಾದುದು.

1952ರಲ್ಲಿ ಪಾಸಾದ ಮೈಸೂರು ಟೆನೆನ್ಸಿ ಕಾಯ್ದೆ 1954ರಲ್ಲಿ ಕೆಲವು ಭಾಗಗಳಲ್ಲಿ ಜಾರಿಗೆ ಬಂತು. ಇದು ಒಕ್ಕಲುಗಳ ಹಿತವನ್ನು ಸಂಪೂರ್ಣವಾಗಿ ಕಾಪಾಡುವಂತಹುದಾಗಿರ ಲಿಲ್ಲ. 1954ರಲ್ಲಿ ಧಾರ್ಮಿಕ ಜಹಗೀರಿ ಇನಾಂ ರದ್ದತಿ ಕಾಯ್ದೆ ಬಂತು. ಇದೂ ಹಲ್ಲಿಲ್ಲದ ಶಾಸನವಾಗಿತ್ತು. 1957ರಿಂದ ಪ್ರಯತ್ನ ನಡೆದು 1965ರಲ್ಲಿ ಜಾರಿಗೆ ಬಂದ ಭೂ ಸುಧಾರಣಾ

ಶಾಸನದಲ್ಲೂ ಭೂಮಾಲೀಕರಿಗೆ ಕಳ್ಳದಾರಿಗಳಿದ್ದವು. ಒಕ್ಕಲುಗಳಿಗಿಂತ ಹೀನಾಯ ಆರ್ಥಿಕ ಸ್ಥಿತಿಯಲ್ಲಿದ್ದ ಕೃಷಿ ಕೂಲಿಕಾರರ ಹಿತ ಈ ಯಾವ ಕಾಯ್ದೆಗಳಲ್ಲೂ ಪ್ರಸ್ತಾಪವೇ ಆಗಿರಲಿಲ್ಲ. ಪಾಳೆಯಗಾರಿ ಭೂ ಮಾಲೀಕತ್ವವನ್ನು ತೊಡೆದು ಹಾಕುವ ದಿಸೆಯಲ್ಲಿ ಬಂದ ಮೊದಲನೇ ಕಾಯ್ದೆ 1973ರಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ತಂದ ಕಾಯ್ದೆ ಎಂದೇ (ಇದರಲ್ಲೂ ಕೆಲವು ಗಂಭೀರ ದೋಷಗಳಿದ್ದವು) ಹೇಳಬಹುದಾದರೂ, ಇದೂ ಸಮಾಜವಾದಿ ಆಶಯವನ್ನೇನೂ ಆಧಾರವಾಗಿ ಹೊಂದಿರಲಿಲ್ಲ.

# ಗೋಕಾಕ ಚಳವಳಿ

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ನಡೆದ 1982ರ ಗೋಕಾಕ್ ಭಾಷಾ ಚಳವಳಿ ಕನ್ನಡ ಭಾಷೆಯ ದೀರ್ಘ ಇತಿಹಾಸದಲ್ಲಿ ಒಂದು ಪ್ರಮುಖಘಟ್ಟ ಶಿಕ್ಷಣದಲ್ಲಿ ಕನ್ನಡ ಭಾಷೆಯ ಸ್ಥಾನಮಾನಗಳ ಬಗ್ಗೆ ಆವರೆಗೆ ನಡೆದ ಚಳವಳಿಗಿಂತ ಭಿನ್ನವಾಗಿ, ಸಾಮೂಹಿಕ ಭಾಗವಹಿಸುವಿಕೆಯಿಂದ ತನ್ನ ಛಾಪನ್ನು ಒತ್ತಿದ ಆ ಚಳವಳಿ ಭಾರತೀಯ ಭಾಷಾ ಚಳವಳಿಯ ಒಂದು ಪ್ರಮುಖ ಘಟ್ಟ ಬಿಟ್ಟಿತು.

ಪ್ರೌಢಶಾಲಾ ಹಂತದಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಲ್ಲಿರಿಸಿದುದರ ಪರಿಣಾಮ ಕನ್ನಡ ವಿದ್ಯಾರ್ಥಿಗಳಿಗೆ, ಪರೋಕ್ಷವಾಗಿ ಕನ್ನಡ ಭಾಷೆಗೆ ಅನ್ಯಾಯವಾಗುತ್ತಿದೆ ಎಂಬ ಕಾರಣದಿಂದ ಆ ಭಾಷೆಯನ್ನು ಪ್ರಥಮ ಭಾಷೆ ಸ್ಥಾನದಿಂದ ತೆಗೆಯಬೇಕು ಮತ್ತು ರಾಜ್ಯದ ಭಾಷೆಯಾದ ಕನ್ನಡವನ್ನು ಆ ಸ್ಥಾನದಲ್ಲಿರಿಸಬೇಕು ಎಂಬ ಬಹುಸಂಖ್ಯಾತ ಕನ್ನಡ ಜನತೆಯ ಅಭೀಪ್ಸೆಗೆ ಅನುಗುಣವಾಗಿ ಅಂದಿನ ಸರ್ಕಾರ ಒಂದು ಸಮಿತಿಯನ್ನು ರಚಿಸಿತು. ಮುಖ್ಯವಾಗಿ ಸಂಸ್ಕೃತ - ಕನ್ನಡದ ಸ್ಥಾನವನ್ನು ನಿಗದಿ ಪಡಿಸುವುದು ಆ ಸಮಿತಿಯ ಉದ್ದೇಶವಾಗಿತ್ತು. ಕನ್ನಡದ ಕವಿಕಾದಂಬರಿಕಯೆರಾಗಿದ್ದ ಡಾ. ವಿನಾಯಕ ಕೃಷ್ಣ ಗೋಕಾಕರನ್ನು ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿತು. ಶ್ರೀಯುತರಾದ ಜಿ.ನಾರಾಯಣ, ಎಸ್.ಕೆ.ರಾಮಚಂದ್ರರಾವ್, ತ.ಸು.ಶಾಮರಾವ್, ಕೆ.ಕೃಷ್ಣಮೂರ್ತಿ, ಎಚ್.ಪಿ.ಮಲ್ಲೇದೇವರು ಸಮಿತಿಯ ಇತರ ಸದಸ್ಯರಾಗಿದ್ದರು.

ಈ ಸಮಿತಿಯ ಹೆಚ್ಚಿನ ಸದಸ್ಯರು ಸಂಸ್ಕೃತದ ಪರವಾಗಿದ್ದಾರೆಂದು ರಾಜ್ಯದ ಅಲ್ಲಲ್ಲಿ ಗುಲ್ಲು ಎದ್ದಿತ್ತು. ಸಾರ್ವಜನಿಕರ ಅಹವಾಲು ಸ್ವೀಕರಿಸುವುದಕ್ಕೆ ಸಮಿತಿ ಮೈಸೂರಿಗೆ ಬಂದಿದ್ದಾಗ, ಸಾಹಿತಿ ಹಾಗೂ ಯುವರಾಜ ಕಾಲೇಜಿನ ಅಂದಿನ ಪ್ರಾಂಶುಪಾಲರಾಗಿದ್ದ ಎಸ್.ನಾರಾಯಣಶೆಟ್ಟಿ (ಸುಜನಾ) ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಮುತ್ತಿಗೆ ಹಾಕಿ ಘೇರಾಯಿಸಿದ್ದು ಇಲ್ಲಿ ಉಲ್ಲೇಖನೀಯ. ಸಮಿತಿಯ ಅಧ್ಯಕ್ಷರಾಗಿದ್ದ ವಿ.ಕೃ.ಗೋಕಾಕರು ಕನ್ನಡ ಭಾಷೆಯ ಸ್ಥಾನಮಾನಕ್ಕೆ ಚ್ಯುತಿ ಬರದ ಹಾಗೆ ತಾವು ಕಾರ್ಯ ನಿರ್ವಹಿಸುವುದಾಗಿ ಪ್ರತಿಭಟನಕಾರರಿಗೆ ಆಶ್ವಾಸನೆಯನ್ನು ನೀಡಿದರು. ಅದರಂತೆ, 1981ರಲ್ಲಿ ಸಮಿತಿ ಅಂದಿನ ಆರ್.ಗುಂಡೂರಾವ್ ನೇತೃತ್ವದ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ, ಪ್ರೌಢಶಾಲಾ ಹಂತದ ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನವನ್ನು ಇತ್ತು ಸಂಸ್ಕೃತವನ್ನು

ಆ ಸ್ಥಾನದಿಂದ ಇಳಿಸಿತು. ಆಗ ಆ ಬಗ್ಗೆಯೂ ಅನೇಕ ಭಿನ್ನಾಭಿಪ್ರಾಯಗಳು ಕೇಳಿಬಂದವು. ಆದರೆ, ರಾಜ್ಯದ ಭಾಷೆಯಾದ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯ ಸಂದಿತು ಎಂಬುದು ಸಮಾಧಾನಕರ ಸಂಗತಿ.

## ಮೊದಲ ಸಭೆ

ಕನ್ನಡಕ್ಕೆ ಸಿಕ್ಕ ಪ್ರಥಮ ಪ್ರಾಶಸ್ತ್ಯವನ್ನು ತಪ್ಪಾಗಿ ಅರ್ಥೈಸಿಕೊಂಡ ರಾಜ್ಯ ಸಭಾಸದಸ್ಯ ಎಫ್.ಎಮ್.ಖಾನ್ ಎಂಬುವವರು ಗೋಕಾಕ್ ಭಾಷಾವರದಿಯನ್ನು ವಿರೋಧಿಸಿ ಬೆಂಗಳೂರಿನಲ್ಲಿ ಒಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಆ ಮೆರವಣಿಗೆ ಬಗ್ಗೆ ಗುಸುಗುಸು ಅನ್ನುತ್ತಿರುವಾಗಲೆ ಮೈಸೂರಿನ ಬುದ್ಧಿಜೀವಿಗಳು, ಕನ್ನಡಾಸಕ್ತರು, ವಿದ್ಯಾರ್ಥಿಗಳು ಮಹಾರಾಜ ಕಾಲೇಜು ಶತಮಾನೋತ್ಸವ ಭವನದ ಮುಂದಿನ ಉದ್ಯಾನದಲ್ಲಿ ಒಂದು ಸಂಜೆ ಸಭೆ ಸೇರಿದರು. ಆ ಸಭೆಯಲ್ಲಿ ಸ.ರಮೇಶ, ಸ.ರ.ಸುದರ್ಶನ, ವಿಜಯಾದಬ್ಬೆ ಕೆ.ರಾಮದಾಸ್, ಶಿವರಾಮುಕಾಡನಕುಪ್ಪೆ ಕೆ.ಮುದ್ದುಕೃಷ್ಣ ಕುಕ್ಕರಹಳ್ಳಿ ಮಹದೇವಪ್ಪ ನಾ.ಮಹಾವೀರ ಪ್ರಸಾದ್, ಹೊರೆಯಾಲ ದೊರೆಸ್ವಾಮಿ ಸೇರಿದಂತೆ ಒಟ್ಟುಸುಮಾರು 20 ಜನರು ಸೇರಿದ್ದರು. ಅಲ್ಲಿ ಗೋಕಾಕ್ ಭಾಷಾ ವರದಿಯನ್ನು ಕುರಿತು ವಿರೋಧಿಸಿದ ಎಫ್.ಎಮ್.ಖಾನ್‌ರವರ ಪ್ರತಿಭಟನೆಯ ಬಗ್ಗೆ ವಿವರವಾಗಿ ಚರ್ಚೆ ನಡೆಸಲಾಯಿತು. ಅಂತಿಮವಾಗಿ ವರದಿ ಜಾರಿಗೆ ಆಗ್ರಹಿಸಿ ಮೈಸೂರಿನಲ್ಲಿ ದೀರ್ಘಕಾಲದ ಪ್ರತಿಭಟನೆ ಮಾಡಬೇಕೆಂದು ಅಂದಿನ ಸಭೆಯಲ್ಲಿ ತೀರ್ಮಾನವಾಯಿತು.

ಅದರಂತೆ ಮಾರ್ಚ್ 15 ರಿಂದ 21 ರವರೆಗೆ (1982) ಮೈಸೂರಿನ ಕೇಂದ್ರ ಭಾಗವಾದ ತಾತಯ್ಯ ಪ್ರತಿಮೆ ಇರುವ ಉದ್ಯಾನದಲ್ಲಿ ಧರಣಿಯೇ ಮೊದಲಾದ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅದರ ನೇತೃತ್ವವನ್ನು ಮೈಸೂರಿನ ಕನ್ನಡ ಮಾಧ್ಯಮ ಹೋರಾಟ ಸಮಿತಿಯ ಅಂದಿನ ಸಂಚಾಲಕರಾದ ಹೊರೆಯಾಲ ದೊರೆಸ್ವಾಮಿ, ನಾ.ಮಹವೀರ ಪ್ರಸಾದ್ ಹಾಗೂ ಸ.ರ.ಸುದರ್ಶನ್ ವಹಿಸಿಕೊಳ್ಳುವುದೆಂದು ನಿರ್ಧರಿಸ ಲಾಯಿತು. ಸ.ರ.ಸುದರ್ಶನ್ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗಿಯಾಗಿ ದ್ದರಿಂದ, ಆ ಹೊತ್ತಿಗೆ ಮೈಸೂರು ವಿಶ್ವವಿದ್ಯಾನಿಲಯುದ ಕೆಲಸಕ್ಕೆ ರಾಜೀನಾಮೆ ಇತ್ತು ಹೊರಬಂದಿದ್ದ ಹೊರೆಯಾಲ ದೊರೆಸ್ವಾಮಿ ಹಾಗೂ ಮಹಾವೀರ ಪ್ರಸಾದ್ ಪ್ರತಿಭಟನೆಯ ನೇತೃತ್ವದ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾದುದು ಅನಿವಾರ್ಯವಾಯಿತು. ಜನಸಂಘಟನೆಯ ಕೆಲಸ ಪ್ರಾರಂಭವಾಯಿತು. ಸಾಹಿತಿ ಗೆಳೆಯ ಮಳಲಿವಸಂತ ಕುಮಾರ್ ಅವರೊಂದಿಗೆ ಕುವೆಂಪು ಹಾಗೂ ಪುತಿನ ಅವರ ಮನೆಗಳಿಗೆ ಹೋಗಿ ಧರಣಿ ವಿಷಯ ತಿಳಿಸಿ, ಅವರಿಂದ ಶುಭಹಾರೈಕೆಗಳನ್ನು ಹೊತ್ತು ತಂದರು.

## ಧರಣಿ ಪ್ರಾರಂಭ

ಪ್ರತಿಭಟನಾ ಮೆರವಣಿಗೆ ಮತ್ತು ಧರಣಿ ಪ್ರಾರಂಭವಾಗುವ ಒಂದೆರಡು ದಿನಮುನ್ನ

ಪತ್ರಿಕಾ ಹೇಳಿಕೆ ಬಿಡುಗಡೆ ಹೇಳಿಕೆಯನ್ನು ಪತ್ರಿಕೆಗಳು ದಿನದ ಪ್ರಮುಖ ಸುದ್ದಿಯನ್ನಾಗಿ ಮಾಡಿದವು. ಅದನ್ನು ಓದಿ ಪೊಲೀಸರು ಸಂಚಾಲಕರಲ್ಲೊಬ್ಬರಾಗಿದ್ದ ಮಹಾವೀರ ಪ್ರಸಾದ್ ಮನೆಗೆ ವಿಚಾರಣೆಗೆಂದು ದಾಳಿ ಇಕ್ಕಿದರು. ಅದರಿಂದ, ಪ್ರಸಾದ್ ವಿಚಲಿತರಾದಂತೆ ತೋರಿತು. ಆದರೆ, ಗೋಕಾಕ್ ಭಾಷಾವರದಿಯ ಜಾರಿಗಾಗಿ ಆಗ್ರಹಿಸಿ ನಡೆಸಿದ ಧರಣಿ ಮಾತ್ರ ನಿಗದಿತ ದಿನದಂದು ಅಂದರೆ 1982ರ ಮಾರ್ಚ್ 15ರಂದು ಬೆಳಿಗ್ಗೆ 8ಕ್ಕೆ ಸರಿಯಾಗಿ ತಾತಯ್ಯ ಉದ್ಯಾನದಲ್ಲಿ ಪ್ರಾರಂಭವಾಯಿತು.

ತಾತಯ್ಯ ಪ್ರತಿಮೆ ಬಲಭಾಗಕ್ಕೆ ಹಾಕಿದ್ದ ಚಪ್ಪರದಡಿಯಲ್ಲಿ ಧರಣಿ ಕಾರ್ಯಕ್ರಮ ಸಾರ್ವಜನಿಕರಿಗೊಂದು ಆಕರ್ಷಣೆಯಾಗಿತ್ತು. ಚಪ್ಪರದ ವ್ಯವಸ್ಥೆ ಪ್ರಚಾರ ಮತ್ತಿತರ ಸಾಂದರ್ಭಿಕ ಕೆಲಸದ ಜವಾಬ್ದಾರಿಯನ್ನು ಈಗ ದಿವಂಗತರಾಗಿರುವ ಆರ್.ಚಂದ್ರಶೇಖರ್ ಹಾಗೂ ಎ.ವಿ.ರಾಮಕೃಷ್ಣ ಮೈ.ಪು.ಆನಂದಕುಮಾರ್ ಪ್ರಮುಖವಾಗಿ ನೋಡಿಕೊಳ್ಳುತ್ತಿದ್ದರು. ಅದರಲ್ಲೂ ಚಂದ್ರಶೇಖರ್ ಅವರ ಪಾತ್ರ ಮಿಗಿಲಾದುದೆಂದೇ ಹೇಳಬೇಕು. ಕನ್ನಡ ಪರವಾದ ಆ ಚಳವಳಿಗೆ ಬನುಮಯ್ಯ ಕಾಲೇಜಿನ ಅಂದಿನ ಪ್ರಾಂಶುಪಾಲರಾಗಿದ್ದ ಹೆಚ್. ಸಿದ್ಧಲಿಂಗಯ್ಯನವರು ನೀಡಿದ ಗುಪ್ತ ಬೆಂಬಲ ನಿಜಕ್ಕೂ ಶ್ಲಾಘನೀಯವಾದುದು. ಚಳವಳಿಗೆ ಪೂರಕವಾದ ಅನೇಕ ಕೆಲಸಕಾರ್ಯಗಳನ್ನು (ಧರಣಿ ಪ್ರತಿಭಟನೆಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಇಡಲು ಕಾಲೇಜಿನಲ್ಲಿ ಅವಕಾಶ ಕಲ್ಪಿಸಿಕೊಟ್ಟದ್ದು, ಸಭೆಗಳನ್ನು ನಡೆಸಲು ಕಾಲೇಜಿನ ಕೊಠಡಿಗಳನ್ನು ಒದಗಿಸಿದ್ದು ಇತ್ಯಾದಿ) ಮಾಡುವಲ್ಲಿ 1982 ಮತ್ತು ಆ ಮುಂದಿನ ಒಂದೆರಡು ವರ್ಷಗಳವರೆಗೆ ಅವರು ನೀಡಿದ ಬೆಂಬಲ ನಿಜಕ್ಕೂ ಬೆಲೆಯುಳ್ಳವು. ಸಿದ್ಧಲಿಂಗಯ್ಯನವರ ಅಪ್ಪಟ ಕನ್ನಡತನಕ್ಕೆ ಒಂದು ಶ್ರೇಷ್ಠ ನಿದರ್ಶನ ಅದಾಗಿದ್ದವು.

## ನೂರರಿಂದ ಸಾವಿರಕ್ಕೆ

ಪ್ರತಿದಿನವೂ ಧರಣಿ ಬೆಳಿಗ್ಗೆ 8 ರಿಂದ ಸಂಜೆ 5.30ರವರೆಗೆ ನಡೆಯುತ್ತಿತ್ತು. ಧರಣಿಯಲ್ಲಿ ಪ್ರತಿದಿನವೂ ನೂರಾರು ಜನರು ಪ್ರಾರಂಭದಲ್ಲಿ ಭಾಗವಹಿಸುತ್ತಿದ್ದರು. ಕ್ರಮೇಣ ಆ ಸಂಖ್ಯೆ ಸಾವಿರಗಟ್ಟಳೆ ಏರುತ್ತಾ ಹೋಯಿತು. ಧರಣಿ ಕೂರುವುದು, ಘೋಷಣೆ ಹಾಕುವುದು, ಮೆರವಣಿಗೆ ತೆಗೆಯುವುದು, ಪ್ರತಿಭಟನಾ ಹಾಡುಗಳನ್ನು ಹಾಡುವುದು – ಇವು ಅಂದಿನ ಸಾಮಾನ್ಯ ಕಾರ್ಯಕ್ರಮಗಳಾಗಿದ್ದವು.

ಮೈಸೂರಿನ ಸಾಹಿತಿಗಳು ಆ ಏಳು ದಿನಗಳಲ್ಲಿ ಅಲ್ಪಪ್ರಮಾಣದಲ್ಲಿ ಬಂದರು. ಕನ್ನಡಪರ ಸಂಘಟನೆಗಳ ಜನರು ಸ್ವಲ್ಪ ಪ್ರಮಾಣದಲ್ಲಿ ಬಂದರು. ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘಸಂಸ್ಥೆಗಳ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಬಂದರು. ಮುಸ್ಲಿಂ ಟ್ಯಾಕ್ಸಿಡ್ರೈವರ್ಸ್ ಅಸೋಷಿಯೇಷನ್ ಸದಸ್ಯರು, ಅಣ್ಣಾ ಡಿಎಂಕೆಯ ನಗರ ಘಟಕದ ಪದಾಧಿಕಾರಿಗಳು, ನಂಜುಮಳಿಗೆಯ ನಾಗರಿಕ ಸೇವಾ ಸಮಿತಿಯ ಸದಸ್ಯರು ಸೇರಿದಂತೆ ಒಟ್ಟು 39 ಸಂಘ ಸಂಸ್ಥೆಗಳ ಸದಸ್ಯರು ಅಂದಿನ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಿರಿಯ

ಸಾಹಿತಿಗಳೂ, ಗುರುಗಳೂ ಆಗಿದ್ದ ಡಾ.ಹಾ.ಮಾ.ನಾಯಕ ಅವರು ಎರಡನೆಯ ದಿನ ಸಂಜೆ 5 ಗಂಟೆಗೆ ಧರಣಿಯಲ್ಲಿಗೆ ಬಂದು, ಹತ್ತಿರದ ಒಂದು ಕಲ್ಲು ಬೆಂಚಿನ ಮೇಲೆ ಕುಳಿತರು. ಅವರನ್ನು ಧರಣಿಯಿದ್ದಲ್ಲಿ ಆಹ್ವಾನಿಸಿದೆ. 'ಇಲ್ಲಿ ಕುಳಿತರೂ ನಿಮಗೆ ನನ್ನ ಬೆಂಬಲ ಇದ್ದೇ ಇದೆ' ಎಂದು ಹೇಳಿ, ಐದುವರೆವರೆಗೂ ಅಲ್ಲೇ ಕುಳಿತಿದ್ದು ಆಮೇಲೆ ಎದ್ದು ಹೋದರು.

## ಕನ್ನಡವೇ ಅನ್ನ ಅಂದ ತೂಗುದೀಪ

ಧರಣಿಯ ಐದನೆಯದಿನ ಚಲನಚಿತ್ರ ನಟ ದಿವಂಗತ ತೂಗುದೀಪ ಶ್ರೀನಿವಾಸ್ ಬಂದಿದ್ದರು. ಅವರು ಧರಣಿ ಜಾಗಕ್ಕೆ ಸನಿಹದಲ್ಲಿದ್ದ ಒಂದು ಕಲ್ಲು ಬೆಂಚಿನ ಮೇಲೆ ನಿಂತು ಧರಣಿಗೆ ಬೆಂಬಲ ನೀಡುತ್ತಾ "ಕನ್ನಡ ನಮಗೆ ಊಟದಲ್ಲಿ ಅನ್ನ ಇದ್ದ ಹಾಗೆ, ಮುಖ್ಯ ಆಹಾರ, ಇತರ ಭಾಷೆಗಳು ಎಲೆಯ ತುದಿಯಲ್ಲಿ ಹಾಕಿರುವ ಉಪ್ಪಿನಕಾಯಿ, ಚಟ್ನಿ, ಹಪ್ಪಳ, ಪಲ್ಯ, ಉಪ್ಪು, ಕೋಸಂಬರಿಗಳ ಹಾಗೆ, ನಂಜಿಕೊಳ್ಳುವುದಕ್ಕೆ ಬೇಕು. ಆದರೆ, ಹೊಟ್ಟೆ ತುಂಬಲು ಅನ್ನವೇ ಬೇಕು" ಎಂದು ಹೇಳುವುದರ ಮೂಲಕ ಕರ್ನಾಟಕದಲ್ಲಿ ಕನ್ನಡದ ಮಹತ್ವವನ್ನು ಸಾರಿದರು. ಅವರೊಂದಿಗೆ ರಂಗನಿರ್ದೇಶಕ ಮೈಸೂರು ಎಂ.ಜಯರಾಂ ಮತ್ತಿತರರು ಇದ್ದರು. ಅಂದಿನ ದಿನಗಳ ಕನ್ನಡಪರ ಹೋರಾಟಗಾರರಲ್ಲಿ ಬಲು ಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದ ಕನ್ನಡ ಚಳುವಳಿಗಾರ ದಿವಂಗತ ನಾ.ನಾಗಲಿಂಗಸ್ವಾಮಿ ಅವರು ಅಂದಿನ ದಿನಗಳ ಧರಣಿಯನ್ನು "ಕನ್ನಡ ಯಾಗ" ಎಂದು ಬಣ್ಣಿಸಿದರು. ಅಣ್ಣಾ ಡಿ.ಎಂ.ಕೆ.ಯ ನಗರದ ಅಂದಿನ ಅಧ್ಯಕ್ಷರಾಗಿದ್ದ ದಿವಂಗತ ಪ್ರೊ.ಫ್ರಾನ್ಸಿಸ್ ಅವರು ತಮ್ಮ ಮಕ್ಕಳಾದ ಲೆಸ್ಲಿ ತ್ಯಾಗರಾಜನ್ (ಈಗ ಅಮೆರಿಕ ನಿವಾಸಿ) ಜಯಕುಮಾರ್ (ದಿವಂಗತ) ಹಾಗೂ ಮಕ್ಕಳು ಲಿಲ್ಲಿ (ಅಧ್ಯಾಪಕಿ) ಅವರುಗಳೊಂದಿಗೆ ಪ್ರತಿದಿನವೂ ಬಂದು ಧರಣಿಯಲ್ಲಿ ಭಾಗವಹಿಸುತ್ತಿದ್ದರು. ಹಾಗೆಯೇ ಒಂದುದಿನ ಚೋಟುಸಾಬ್ ಉರುಫ್ ಚೋಟು ಎಂಬ ಕಾಂಗ್ರೆಸ್ಸಿಗರೊಬ್ಬರು ಧರಣಿಗೆ ಬೆಂಬಲಸೂಚಿಸಿ, ತಾವು ತಮ್ಮ 200 ಜನ ಬೆಂಬಲಿಗರೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಇತ್ತಿರುವುದಾಗಿ ಘೋಷಿಸಿದರು. ಕನ್ನಡ ಮಾಧ್ಯಮ ಹೋರಾಟ ಸಮಿತಿಯ ಸಂಚಾಲಕನಾಗಿದ್ದ ನಾನು ಅವರ ರಾಜಿನಾಮೆ ಪತ್ರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ. ಪತ್ರಿಕೆಗಳಲ್ಲಿ ಸುದ್ದಿ ದೊಡ್ಡದಾಗೇನೂ ಬಂತು. ಆಮೇಲೆ ನನಗೆ ತಿಳಿಯಿತು ಅವರು ಬೆಂಬಲವಾಗಿ 200 ಇರಲಿ ಇಬ್ಬರೂ ಇಲ್ಲ ಅಂತ. ಹೋಗಲಿ, ಅವರಿಗೆ ಅವರೇ ಬೆಂಬಲಿಗರು ಹೌದೋ? ಅಲ್ಲವೋ? ಎಂಬ ಸಂದೇಹ ಬಂದಿತು. ಆದರೂ ಅವರೊಬ್ಬರು ಮಾತ್ರ ಆಗಾಗ್ಗೆ ಧರಣಿಯಲ್ಲಿ ಭಾಗವಹಿಸು ತ್ತಿದ್ದರು. ಈಗ ಅವರು ನನ್ನ ಸ್ನೇಹಿತರಲ್ಲೊಬ್ಬರಾಗಿದ್ದಾರೆ. ಇದೇ ಸಂದರ್ಭದಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದ ರಂಗನಟ ಕೆ.ಪ್ರಕಾಶಶೆಣೈ ಅವರು ಪ್ರತಿದಿನವೂ ತಮ್ಮ ಕಛೇರಿಗೆ ಹೋಗುವ ದಾರಿಯಲ್ಲಿ ಬೆಳಿಗ್ಗೆ ಹೊತ್ತು ಸ್ವಲ್ಪಕಾಲ ಧರಣಿಯಲ್ಲಿ ಭಾಗವಹಿಸಿ ಹೋಗುತ್ತಿದ್ದುದನ್ನು ಇಲ್ಲಿ ಸ್ಮರಿಸಬೇಕು.

## ಕ್ರಾಂತಿಕಾರಕ ಹಾಡುಗಳು

ಧರಣಿಯ ಏಕತಾನತೆಯನ್ನು ಹೊಡೆದು ಹಾಕುವಲ್ಲಿ ಮೈಸೂರು ವಿ.ವಿ.ನಿಲಯದ ಸಸ್ಯಶಾಸ್ತ್ರವಿಭಾಗದ ಪ್ರಾಧ್ಯಾಪಕ ಡಾ.ರಾಮಲಿಂಗಂ ಹಾಗೂ ಕುಕ್ಕರಹಳ್ಳಿಯ ಮಹದೇವಪ್ಪ ಸ್ಮಾರಕ ಮಾರ್ಕ್ಸ್‌ವಾದಿ ಗ್ರಂಥಾಲಯ ಹಿನ್ನೆಲೆಯ ಸದಸ್ಯರು ವಹಿಸಿದ್ದ ಪಾತ್ರ ಗಮನಾರ್ಹವಾದುದು. ಎಸ್.ತುಕಾರಂ, ಬಸವರಾಜು, ಮಹದೇವಪ್ಪ ಚಾಮುಂಡಯ್ಯ, ರಾಜಾಸಾಬ್, ಪಾಪಣ್ಣ ಜಯಪಾಲ, ರಾಮಲಿಂಗು, ದೇವರಾಜು ಈ ಮುಂತಾದವರು ಕ್ರಾಂತಿಕಾರಕ ಹಾಡುಗಳನ್ನು ಹಾಡುತ್ತಾ, ಘೋಷಣೆಗಳನ್ನು ಕೂಗುತ್ತಾ ಧರಣಿಗೆ ಪ್ರೋತ್ಸಾಹವನ್ನು ತುಂಬುತ್ತಿದ್ದರು. ಮೈಸೂರು ಮಾತ್ರವಲ್ಲದೆ ದೂರದ ಹನೂರು, ಜೆಟ್ಟಿಹುಂಡಿ, ಮೈದನಹಳ್ಳಿ, ಕೆ.ಆರ್.ಮಿಲ್ ಕಾಲೋನಿ, ಗುಂಡ್ಲುಪೇಟೆ, ಕೊಳ್ಳೆಗಾಲ ಮುಂತಾದ ಪ್ರದೇಶಗಳಿಂದಲೂ ಕನ್ನಡಪರ ಹೋರಾಟಗಾರರು ಬಂದು ಧರಣಿಯಲ್ಲಿ ಭಾಗವಹಿಸುತ್ತಿದ್ದರು. ಅದೇ ರೀತಿ ಮಾನಸಗಂಗೋತ್ರಿ ವಿದ್ಯಾರ್ಥಿಯಾಗಿದ್ದ ರಂಜಾನ್‌ದರ್ಗಾ, ಸಾಹಿತಿಗಳಾದ ಚದುರಂಗ, ಡಾ.ಅಕಬರ ಅಲಿ, ಡಾ.ಸಿ.ಪಿ.ಕೃಷ್ಣ ಕುಮಾರ್, ಡಾ.ಮಳಲಿ ವಸಂತಕುಮಾರ್, ಹೆಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್, ಕೆ.ಶಿವರಾಮ ಐತಾಳ, ಕೆ.ನ.ಶಿವತೀರ್ಥನ್, ಜಿ.ಹೆಚ್.ನಾಡುಕ, ಬಿ.ಬಸಪ್ಪ ಕಿ.ಗು. ವಿಟ್ಠಲಮೂರ್ತಿ (ಕನ್ನಡ ಚಳವಳಿಗಾರ) ಎ.ಸಿ.ಬಸಪ್ಪ, ಭೋಗನಂದೀಶ, ಟಿ.ಎಸ್. ರಾಮಸ್ವಾಮಿ, ಟಿ.ಎಸ್.ವೇಣುಗೋಪಾಲ್ ಈಚನೂರುಕುಮಾರ್, ಡಿ.ಜೆ.ಶಿವರಾಂ (ಸೋಮವಾರಪೇಟೆ). ಕುಮುದಾ, ದೇವನೂರು ಮಹಾದೇವ, ಎನ್.ಈಶ್ವರ್, ಸಿ.ಪಿ.ಸಿದ್ಧಾಶ್ರಮ, ರಾಜಶೇಖರ ಕೋಟಿ, ಪದ್ಮಾವತಿ, ಯು.ಎಂ.ಶಾಂತಪ್ಪ ಬಸವಣ್ಣ ಮೀರಾನಾಯಕ, ಗೆಜ್ಜೆಹೆಜ್ಜೆರಮಾನಂದ ಶಿವಕುಮಾರ್ (ರಂಗನಟ) ಮುಂತಾದವರು ಆಗಾಗ್ಗೆ ಧರಣಿಗೆ ಬರುತ್ತಿದ್ದರು. ದಲಿತ ಸಂಘರ್ಷ ಸಮಿತಿ, ರಾಜಸ್ಥಾನಿ ವ್ಯಾಪಾರಿ ಸಂಘದವರೇ ಮೊದಲಾದವರು ತಮ್ಮ ಸದಸ್ಯರೊಂದಿಗೆ ಬಂದು ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗೆ ಆ ಏಳು ದಿನಗಳಲ್ಲಿ ಭಾಗವಹಿಸಿದ ಸಂಘಸಂಸ್ಥೆಗಳು ಒಟ್ಟು 39.

ಏಳನೆಯ ದಿನ ಗೋಕಾಕ್ ಭಾಷಾ ವರದಿ ಜಾರಿಗೆ ಆಗ್ರಹಿಸಿ ಬೃಹತ್ ಮೆರವಣಿಗೆಯೊಂದನ್ನು ತೆಗೆಯಲಾಯಿತು. ಬೀದಿ ಭಾಷಣ ಮಾಡಿ ಧರಣಿಯನ್ನು ಮುಕ್ತಾಯಗೊಳಿಸಲಾಯಿತು. ಅದಾದ ಒಂದು ವಾರದಲ್ಲಿ ನಗರದ ಪುರಭವನ ಮೈದಾನದಲ್ಲಿ ಒಂದು ಬಹಿರಂಗ ಸಭೆಯನ್ನು ಕನ್ನಡ ಮಾಧ್ಯಮ ಹೋರಾಟ ಸಮಿತಿಯಿಂದ ವ್ಯವಸ್ಥೆ ಮಾಡಲಾಯಿತು. ಡಾ.ಯು.ಆರ್.ಅನಂತಮೂರ್ತಿ, ಡಾ.ಎಂ.ಅಕಬರ ಅಲಿ, ರಂಜಾನ್‌ದರ್ಗಾ, ಸ.ರ.ಸುದರ್ಶನ ಮತ್ತು ಮತ್ತು ಹೊರೆಯಾಲ ದೊರೆಸ್ವಾಮಿ ಮಾತನಾಡಿದರು. ಡಾ.ಅನಂತ ಮೂರ್ತಿ ಅವರು ಪ್ರೌಢಶಾಲೆಯ ಹತ್ತನೆಯ ತರಗತಿವರೆಗೆ ಕನ್ನಡವೇ ಭಾಷಾ ಮಾಧ್ಯಮವಾಗಿರಬೇಕು ಎಂದು ಆಗ್ರಹಿಸಿದರು.

ಹೀಗೆ, 1982ರ ಮಾರ್ಚ್ 15 ರಿಂದ 21 ರವರೆಗೆ ಏಳುದಿನಗಳ ಕಾಲ ಮೈಸೂರಿನಲ್ಲಿ ನಡೆದ ಪ್ರತಿಭಟನಾ ಧರಣಿಯ ಹೋರಾಟ ಮುಂದೆ ಮೈಸೂರು ಹಾಗೂ ರಾಜ್ಯಾದ್ಯಂತ ನಡೆದ ತೀವ್ರ ಸ್ವರೂಪದ ಗೋಕಾಕ್ ಚಳವಳಿಗೆ ನಾಂದಿಹಾಡಿತು. ಅದೇ ಮಾರ್ಚ್ 15 ರಂದು ವಿಜಾಪುರದಲ್ಲಿ ಗಂಗಾಧರ ಕೊರವಳ್ಳಿ (ಕೊರಳ್ಳಿ) ಎಂಬುವವರು 58 ದಿನಗಳ ಕಾಲ ಉಪವಾಸಕ್ಕೆ ಕುಳಿತರು. ಈ ರೀತಿ ಮೈಸೂರು ಮತ್ತು ವಿಜಾಪುರದಲ್ಲಿ ನಡೆದ ಆ ಎರಡು ಅಹಿಂಸಾತ್ಮಕ ಹೋರಾಟಗಳು ಇಡೀ ರಾಜ್ಯದ ಹೋರಾಟಕ್ಕೆ ಮುನ್ನುಡಿ ಬರೆದವು. ಇವೆರಡೂ ದಾಖಲೀಯ ಸಂಗತಿಗಳು.

ಮೈಸೂರಿನ ಈ ಏಳು ದಿನಗಳ ಚಳುವಳಿಯ ನಂತರ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ನಡೆದ ಚಳವಳಿ, ಕನ್ನಡ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ನಡೆದ ಚಳವಳಿ ಇನ್ನೂ ಹೆಚ್ಚು ವ್ಯಾಪಕವಾಗಿ ತೆರೆದುಕೊಂಡಿತು. ಅದರಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹೋರಾಟಗಾರರು ತೊಡಗಿಬಿಕೊಂಡರು. ಸಾಹಿತಿಗಳ ಬಂಧನವಾಯಿತು. ಮುಖ್ಯಮಂತ್ರಿ ಗುಂಡೂರಾವ್ ಅವರಿಗೆ ಮುತ್ತಿಗೆ ಹಾಕಲಾಯಿತು. (ಏಪ್ರಿಲ್ 13, 1982) ಹೋರಾಟಗಾರರಿಗೆ ಲಾಠಿ ಏಟು ಬಿದ್ದಿತು. ಚಳವಳಿ ವಿಸ್ತರಿಸಿದ ಹಾಗೆಲ್ಲ ಜನ ಬೆಂಬಲ ದೊರೆಯಿತು. ಚಲನಚಿತ್ರ ರಂಗದ ಹಿರಿಯ ತಾರೆಗಳಾದ ಡಾ.ರಾಜ್‌ಕುಮಾರ್, ದಿವಂಗತ ಲೋಕೇಶ್, ವಿಷ್ಣುವರ್ಧನ್, ಶಿವರಾಂ ಈ ಮುಂತಾದವರು ಭಾಗವಹಿಸಿ ರಾಜ್ಯಮಟ್ಟದ ಹೋರಾಟಕ್ಕೆ ಇಂಬು ನೀಡಿದರು. (ಮೇ. 18, 1982)

1982ರ ಜೂನ್ 4ರಂದು ಸರಕಾರವು ಕನ್ನಡ ಕ್ರಿಯಾ ಸಮಿತಿಯೊಂದಿಗೆ ಒಪ್ಪಂದವೊಂದಕ್ಕೆ ಬಂದು ಗೋಕಾಕ್ ವರದಿ ಜಾರಿಗೆ ತಾತ್ವಿಕವಾಗಿ ಒಪ್ಪಿತು. ಕನ್ನಡಕ್ಕೆ ಪ್ರಥಮ ಸ್ಥಾನ ನೀಡಿ ರಾಜ್ಯ ಸರ್ಕಾರ ಒಪ್ಪಿದ ಈ ವರದಿ ಅಂತಿಮವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕೆ ಅಂಶವನ್ನು 125 ಕ್ಕೆ ಎಂದು ನಿಗದಿಗೊಳಿಸಲಾಯಿತು.

ಕನ್ನಡ ಅಸ್ತಿತ್ವಕ್ಕೆ ನಡೆದ ಹೋರಾಟಗಳಲ್ಲಿ ಗೋಕಾಕ ಚಳವಳಿ ಪ್ರಮುಖ. ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದ ಕಾಲ. ಖಾದ್ರಿ ಶಾಮಣ್ಣ ಕನ್ನಡ ಪ್ರಭ ಪತ್ರಿಕೆಯ ಸಂಪಾದಕರು. ಕನ್ನಡ ಪರ ನಿಲುವು ಅಚಲ. ಅದರಿಂದ ಪತ್ರಿಕೆ ತುಂಬ ಗೋಕಾಕ ಚಳವಳಿಯ ಸುದ್ದಿಗಳು. ಕನ್ನಡಪ್ರಭಕ್ಕೆ ಸರಿಸಾಟಿಯಾಗಿ ಉಳಿದ ಪತ್ರಿಕೆಗಳು ನಿಲ್ಲಲಿಲ್ಲ. ರಾಜ್ಯದ ಪ್ರಮುಖ ಪತ್ರಿಕೆಯೊಂದು ಬೇರೆ ಕಾರಣಗಳಿಗೆ ಗೋಕಾಕ ಚಳವಳಿ ವಿರುದ್ಧನಿಂತಿತು. ಹೀಗಾಗಿ ಜನರಿಗೆ ಕನ್ನಡಪ್ರಭವನ್ನು ಆಶ್ರಯಿಸುವುದು ಅನಿವಾರ್ಯವಾಯಿತು.

ಮೈಸೂರಿನಲ್ಲಿ ಗೋಕಾಕ ಚಳವಳಿ ಬಹಳ ಬಿರುಸಾಗಿ ನಡೆಯಿತು. ಒಂದು ತಿಂಗಳು ಶಾಂತಿಯುತ ಚಳವಳಿ. ಜೈಲು ಭರೋ ಹಾಗೂ ಮಾನವ ಸರಪಳಿ ನಿರ್ಮಾಣಕ್ಕಂತೂ ಕೊನೆಯೇ ಇಲ್ಲ. ಹೆಂಗಸರು ಸಕ್ರಿಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಈ

ಚಳವಳಿಯಲ್ಲೇ. ಖಾದ್ರಿ ಶಾಮಣ್ಣ ಪ್ರತಿದಿನ ಮುಖಪುಟದಲ್ಲಿ ಸಂಪಾದಕೀಯ ಬರೆದು ಚಳವಳಿಗೆ ಸ್ಫೂರ್ತಿ ನೀಡುತ್ತಿದ್ದರು.

ಚಳವಳಿ ತಾರಕಸ್ಥಿತಿಗೆ ತಲುಪಿದಾಗ ಮುಖ್ಯಮಂತ್ರಿಗೆ ಮುತ್ತಿಗೆ ಹಾಕಲು ಚಳವಳಿಗಾರರು ತೀರ್ಮಾನಿಸಿದರು. ಎಲ್ಲಿ ಮುತ್ತಿಗೆ ಹಾಕಬೇಕೆಂಬುದು ನಿರ್ಧಾರ ವಾಗಿರಲಿಲ್ಲ. ಕೊನೆಗೆ ಮಾನಸಗಂಗೋತ್ರಿಯಲ್ಲಿ ರೇಷ್ಮೆ ವಿಭಾಗದ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಂದಾಗ ಅಲ್ಲಿ ಮುತ್ತಿಗೆ ಹಾಕುವುದು ಎಂದು ತೀರ್ಮಾನವಾಯಿತು. ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಮುತ್ತಿಗೆ ಸುದ್ದಿ ರವಾನೆ. ಖಾದ್ರಿ ಶಾಮಣ್ಣ ಕೂಡಲೇ ಬ್ಯಾನರ್ ಹೆಡ್‌ಲೈನ್ ಸಿದ್ಧಪಡಿಸಿದರು. ಮುಖ್ಯಮಂತ್ರಿ ಮುತ್ತಿಗೆ ಮೊದಲೇ ತಲೆಬರಹ ಸಿದ್ಧವಾಗಿತ್ತು.

## ಹೊಸ ಹಾದಿಯಲ್ಲಿ ಕನ್ನಡ ಚಳವಳಿ

### ಆರಂಭವಾದದ್ದು ಹೀಗೆ

ಗೋಕಾಕ್ ಭಾಷಾಸೂತ್ರದ ಅನುಷ್ಠಾನಕ್ಕೆ ಒತ್ತಾಯಿಸಿ ಧಾರವಾಡದಲ್ಲಿ 1982ರ ಏಪ್ರಿಲ್ 3ರಂದು ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯು ಡಾ|| ಶಂ.ಬಾ.ಜೋಶಿ ನೇತೃತದಲ್ಲಿ ಸರದಿ ಉಪವಾಸ ನಡೆಸುತ್ತಿತ್ತು. ಮೈಸೂರಿನಲ್ಲಿ ಕುವೆಂಪು ಅವರು ಸರದಿ ಉಪವಾಸವನ್ನು ಉದ್ಘಾಟಿಸುವ ಸುದ್ದಿ ಪ್ರಕಟವಾಗಿತ್ತು. ಇಷ್ಟಾದರೂ ಬೆಂಗಳೂರಿನಲ್ಲಿ ಚಳವಳಿ ತೀವ್ರತೆಯನ್ನು ಪಡೆದುಕೊಂಡಿರಲಿಲ್ಲ. ಸಾಮಾನ್ಯವಾಗಿ ಕನ್ನಡ ಪರ ಚಳವಳಿಗೆ ಕೇಂದ್ರಸ್ಥಾನವಾಗಿದ್ದ ಬೆಂಗಳೂರಿನಲ್ಲಿ ಈ ಮಹತ್ವದ ಚಳವಳಿ ವ್ಯವಸ್ಥಿತ ವಾಗಿ ನಡೆಯದುದರಿಂದ ಕೆಲವು ಸಾಹಿತಿಗಳು, ಕಾರ್ಯಕರ್ತರು ತಲ್ಲಣಗೊಂಡಿದ್ದರು.

ಜಿ.ನಾರಾಯಣರು ಕನ್ನಡ ಸಮಸ್ಯೆಗಳನ್ನು ಚರ್ಚಿಸಲು ಏಪ್ರಿಲ್ 10ರಂದು ನ್ಯಾಷನಲ್ ಕಾಲೇಜ್‌ನಲ್ಲಿ ಕನ್ನಡ ಜಾಗೃತಿ ಸಮಾವೇಶವನ್ನು ವ್ಯವಸ್ಥೆ ಮಾಡಿದರು. ಅಲ್ಲಿ ಸೇರಿದ್ದ ಸಾಹಿತಿಗಳು, ಕನ್ನಡ ಕಾರ್ಯಕರ್ತರು ಬೆಂಗಳೂರಿನಲ್ಲಿ ಚಳವಳಿ ಆರಂಭಿಸ ಬೇಕೆಂದು ಬಯಸಿದರು. ವಿಶೇಷವಾಗಿ ಚಿದಾನಂದಮೂರ್ತಿ, ಪಿ.ವಿ.ನಾರಾಯಣ ಏನೂ ಸಾಧ್ಯವಾಗದಿದ್ದರೆ ತಾವೇ ಉಪವಾಸ ಕೂರುವ ಯೋಚನೆ ಮಾಡಿದರು. ಅವರು ತಕ್ಷಣ ಕಾರ್ಯ ಪ್ರವೃತ್ತರಾದ್ದರಿಂದ ಊಟದ ಬಳಿಕ ಸೇರುವಂತೆ ಚೀಟಿಗಳು ವಿತರಣೆಯಾದವು. ರಂ.ಶ್ರೀ.ಮುಗಳಿ ಸೇರಿದಂತೆ ಹಲವರು ಸೇರಿದರು. ಸಮಾಲೋಚನೆಯ ನಂತರ ಏಪ್ರಿಲ್ 13ರಂದು ವಿಧಾನಸೌಧದ ಎದುರು ಧರಣಿ ಮತ್ತು ಸೆಂಟ್ರಲ್ ಕಾಲೇಜಿನಿಂದ ಮೆರವಣಿಗೆ ಎಂದು ತೀರ್ಮಾನವಾಯಿತು.

### ಸಾಹಿತಿಗಳ ಕಲಾವಿದರ ಬಳಗದ ಉದಯ

ಏಪ್ರಿಲ್ 13, 1982 ಕನ್ನಡ ಜಾಗೃತಿ ದೃಷ್ಟಿಯಿಂದ ಅತ್ಯಂತ ಮಹತ್ವದ ದಿನ. ರಾಜಧಾನಿ ಬೆಂಗಳೂರಿನಲ್ಲಿ ಅಪೂರ್ವ ರೀತಿಯಲ್ಲಿ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ಶಿಕ್ಷಕರು ಬೀದಿಗಿಳಿದು, ಕನ್ನಡದ ಉಳಿವಿಗೆ ಸರ್ಕಾರದ ಕಟ್ಟಳೆ ಮುರಿದು, ತಮ್ಮ ಸಾತ್ವಿಕ ರೋಷವನ್ನು ಪ್ರಕಟಿಸಿದರು. ಸೆಂಟ್ರಲ್ ಕಾಲೇಜು ಆವರಣದಿಂದ ಆರಂಭವಾದ ಮೌನ ಮೆರವಣಿಗೆ ಗೋಪಾಲಗೌಡ ವೃತ್ತದ ಬಳಿ ಅಂತ್ಯಗೊಂಡಿತು. ಮೆರವಣಿಗೆಯಲ್ಲಿ ರಂ.ಶ್ರೀ.ಮುಗಳಿ,

ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿದ್ಧಯ್ಯ ಪುರಾಣಿಕ, ಎಲ್.ಎಸ್.ಶೇಷಗಿರಿರಾವ್, ಜಿ.ಎಸ್.ಶಿವರುದ್ರಪ್ಪ, ಪಿ.ಲಂಕೇಶ್, ಕೋ.ಚೆನ್ನಬಸಪ್ಪ ಎಂ.ಚಿದಾನಂದಮೂರ್ತಿ, ನಿಸಾರ್ ಅಹಮದ್, ಮಾವಿನಕೆರೆ ರಂಗನಾಥನ್, ಎಚ್.ಎಂ.ಮರುಳಸಿದ್ದಯ್ಯ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಎಚ್.ಎಸ್.ಪಾರ್ವತಿ, ವಿಜಯ, ಎ.ಎಸ್.ಮೂರ್ತಿ, ಬರಗೂರು ರಾಮಚಂದ್ರಪ್ಪ, ಪಿ.ವಿ.ನಾರಾಯಣ, ಕೆ.ವಿ.ನಾರಾಯಣ, ಚಿ.ಶ್ರೀನಿವಾಸ ರಾಜು ಸೇರಿದಂತೆ ಹಲವು ಸಾಹಿತಿಗಳು, ಕಲಾವಿದರು – ಜಿ.ನಾರಾಯಣಕುಮಾರ್ ಮುಂತಾದ ಕನ್ನಡ ಚಳವಳಿ ಗಾರರು ಸೇರಿದ್ದರು. ಪ್ರಾರಂಭದಲ್ಲಿ ಸಾಂಕೇತಿಕವಾಗಿ ಹಿರಿಯರಾದ ಎಂ.ವಿ. ಸೀತಾರಾಮಯ್ಯ, ಜಿ.ಪುಟ್ಟಸ್ವಾಮಯ್ಯ ಅವರೂ ಪಾಲ್ಗೊಂಡಿದ್ದರು. 'ಬೀದಿಗಿಳಿದ ಸಾಹಿತಿ–ಚಲಿಸುವ ಜ್ವಾಲಾಮುಖಿ', 'ಸಾಹಿತಿಗಳ ಮೆರವಣಿಗೆ – ಆಸ್ಫೋಟದ ಮುನ್ಸೂಚನೆ', 'ಕನ್ನಡ ಒಂದೇ ಕರ್ನಾಟಕದ ಪ್ರಥಮ ಭಾಷೆ', 'ಗೋಕಾಕ್ ವರದಿ ವಿರೋಧಿ ಕನ್ನಡ ದ್ರೋಹಿ' ಹೀಗೆ ಮುಂತಾದ ಭಿತ್ತಿಫಲಕಗಳನ್ನು ಮೆರವಣಿಗೆಕಾರರು ಹಿಡಿದಿದ್ದರು. ಮೆರವಣಿಗೆ ಕೃಷ್ಣರಾಜೇಂದ್ರ ವೃತ್ತದ ಬಳಿ ಬಂದಾಗ ವಿಧಾನಸೌಧದ ಬಳಿಗೆ ಹೋಗಲಾಗದಂತೆ ರಸ್ತೆಗೆ ಅಡ್ಡವಾಗಿ ಹಗ್ಗ ಲಾಠಿಗಳನ್ನು ಹಿಡಿದು ಪೊಲೀಸರು ತಡೆ ಒಡ್ಡಿನಿಂತಿದ್ದರು. ಚಳವಳಿಗಾರರು ಶಾಂತಿ ಕಾಪಾಡುವ ಭರವಸೆ ನೀಡಿದರು. ಪೊಲೀಸರು ಜಗ್ಗಲಿಲ್ಲ. ಲಾಠಿಯಿಂದ ಹಿಂದಕ್ಕೆ ತಳ್ಳಲಾರಂಭಿಸಿದರು. ಕಬ್ಬನ್ ಪಾರ್ಕಿನ ಮೂಲಕ ಹೋಗುವಂತೆ ಆಜ್ಞೆ ಮಾಡಿದರು. ಮೆರವಣಿಗೆಯಲ್ಲಿದ್ದವರ ಸಹನೆ ಕಳೆಯಿತು. ಮೌನ ಮುರಿಯಿತು. 'ಕನ್ನಡಕ್ಕೆ ಜಯವಾಗಲಿ', 'ಕರ್ನಾಟಕಕ್ಕೆ ಜಯವಾಗಲಿ', 'ಗುಂಡೂರಾವ್‌ಗೆ ಧಿಕ್ಕಾರ', 'ಕನ್ನಡ ವಿರೋಧಿಗಳಿಗೆ ಧಿಕ್ಕಾರ' ಎಂದು ಘೋಷಣೆ ಹಾಕುತ್ತಾ ಪೊಲೀಸರ ತಡೆ ಭೇದಿಸಿ ಮುನ್ನಡೆದರು. ಮತ್ತೆ ಪೊಲೀಸರು ಸರ್ಕಾರಿ ಮುದ್ರಣಾಲಯದ ಬಳಿ ತಡೆ ನಿರ್ಮಿಸಿ, ಅಶ್ರುವಾಆಜಿಯಿರಿರಿ ಸಿಡಿಸಿ ಮೆರವಣಿಗೆ ಮುರಿಯುವ ಸಿದ್ಧತೆ ನಡೆಸಿದ್ದರು. ಪರಿಸ್ಥಿತಿ ತೀರಾ ಗಂಭೀರವಾಗಿತ್ತು. ಡಿ.ಸಿ.ಪಿ. ಪಿ.ಎಸ್.ರಾಮಾನುಜನ್‌ರವರ ಸಮಯಪ್ರಜ್ಞೆಯಿಂದ ಆಗಬಹುದಾಗಿದ್ದ ಅನಾಹುತ ತಪ್ಪಿತು. ಗೋಪಾಲಗೌಡ ವೃತ್ತದ ಬಳಿ ನಡೆದ ಸಭೆಯಲ್ಲಿ ಹಲವರು ಮಾತನಾಡಿ 'ಗೋಕಾಕ್ ವರದಿ ಜಾರಿಗೆ ಬರಲಿ' ಎಂದು ಒತ್ತಾಯಿಸಿದ್ದಲ್ಲದೆ ಕನ್ನಡಿಗರ ಎಲ್ಲ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಈ ಚಳವಳಿ ನಾಂದಿ ಆಗಲಿ ಎಂದರು.

## ಸರದಿ ಉಪವಾಸ ಆರಂಭ

ಸಭೆಯ ಅನಂತರ ಗೋಪಾಲಗೌಡರ ವೃತ್ತದ ಬಳಿ ನಿರ್ಮಿಸಿದ್ದ ಚಪ್ಪರದಲ್ಲಿ ಸರದಿ ಉಪವಾಸ ಪ್ರಾರಂಭವಾಯಿತು. ಮೊದಲ ದಿನ ರಂ.ಶ್ರೀ.ಮುಗಳಿ, ಎಂ.ವಿ.ಸೀ. ಸಿದ್ದಯ್ಯ ಪುರಾಣಿಕ, ಜಿ.ಎಸ್.ಶಿವರುದ್ರಪ್ಪ ಎಚ್.ದೇವೀರಪ್ಪ ಎಚ್.ಎಸ್.ಪಾರ್ವತಿ, ಜಿ.ವೈ.ಹುಬ್ಳೀಕರ ಮುಂತಾದವರು ಪಾಲ್ಗೊಂಡಿದ್ದರು.

ಮೆರವಣಿಗೆ ಆರಂಭಕ್ಕೆ ಮುನ್ನ ಸೆಂಟ್ರಲ್ ಕಾಲೇಜು ಆವರಣದಲ್ಲಿ ಸೇರಿದ್ದ ಜನರೆದುರು ಎ.ಎಸ್.ಮೂರ್ತಿಯವರು ಬೀದಿನಾಟಕ ಆಡಿ ಜನರಿಗೆ ವಿಷಯವನ್ನು ತಿಳಿಸಿದ್ದಲ್ಲದೆ 300 ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟರು. ಚಪ್ಪರದ ನಿರ್ಮಾಣಕ್ಕೆ ಜಿ.ರಾಮಕೃಷ್ಣ ಅವರು 100 ರೂಪಾಯಿಗಳನ್ನು ಸಾಲವಾಗಿ ನೀಡಿದ್ದರು. ನಂತರ ವಿಜಯ ನೂರು ರೂಪಾಯಿ ನೀಡಿದರು. ಏನೂ ಸಿದ್ಧತೆಯಲ್ಲಿಲ್ಲದ ಒಂದು ಮಹತ್ವದ ಸಂಘಟನೆ ಬೀಜಾಂಕುರವಾದದ್ದು ಹೀಗೆ. ಚಳವಳಿ ಪ್ರಾರಂಭವಾದರೂ ಒಂದು ಹೆಸರಿರಲಿಲ್ಲ. 13ರ ಸಂಜೆ ಒಂದು ಸಂಘಟನೆಗೆ ಹೆಸರಿಲ್ಲದಿದ್ದರೆ ಹೇಗೆ ಎಂದು ಹಲವರು ಹೇಳಿದರು. ಯಾವುದೋ ಮೂಲೆಯಿಂದ ಒಂದು ಹೆಸರು ತೇಲಿ ಬಂದಿತು: 'ಸಾಹಿತಿಗಳ ಕಲಾವಿದರ ಬಳಗ ಅಂದರೆ ಹೇಗೆ?' ಎಲ್ಲರೂ ಒಪ್ಪಿದರು. ಬಳಗ ಕನ್ನಡ ಜಾಗೃತಿಯ ಹೊಸ ಮನ್ವಂತರ ನಾಂದಿ ಹಾಡಿದ್ದು ಹೀಗೆ.

ಸಾಹಿತಿಗಳ ಕಲಾವಿದರ ಬಳಗದ ಉದಯದೊಂದಿಗೆ ಬೆಂಗಳೂರಿನಲ್ಲಿ ಬೆಂಗಳೂರಿನ ರಂಗಭೂಮಿ ಕ್ರಿಯಾ ಸಮಿತಿ, ಚಲನಚಿತ್ರ ಮಂಡಲಿಗಳು ಚಳವಳಿಗೆ ಇಳಿದವು. ಅ.ನ.ಕೃ. ಕಾಲದ ಕಾರ್ಯಕರ್ತರು ಗೋಪಾಲಗೌಡ ವೃತ್ತದ ಬಳಿ ಇದ್ದ ಬಳಗದ ಚಪ್ಪರಕ್ಕೆ ಬರತೊಡಗಿದರು.

**ಚಳವಳಿಗೆ ಹೊಸ ಆಯಾಮ ನೀಡಿದ ರಾಜಕುಮಾರ್ ಭೇಟಿ**

ಸಾಹಿತಿಗಳ ಕಲಾವಿದ ಬಳಗದ ಚಳವಳಿಗೆ ಬೆಂಬಲ ಸೂಚಿಸಲು ಕನ್ನಡ ಜನಪ್ರಿಯ ನಟ ರಾಜಕುಮಾರ್ ಅವರು ಏಪ್ರಿಲ್ 17ರಂದು ಮೆರವಣಿಗೆಯಲ್ಲಿ ಮೈಸೂರು ಬ್ಯಾಂಕ್ ಚೌಕದಿಂದ ಗೋಪಾಲಗೌಡ ವೃತ್ತದ ಬಳಿ ನಡೆಯುತ್ತಿದ್ದ ನಿರಶನ ಸ್ಥಳಕ್ಕೆ ಮೆರವಣಿಗೆಯಲ್ಲಿ ಬಂದರು. ಅವರ ಹಿಂದೆ ಜನಸಾಗರವೇ ಹರಿದು ಬಂದಿತು. ರಾಜಕುಮಾರ್ ಮಾತನಾಡಿ ಚಳವಳಿಗೆ ಪೂರ್ಣ ಬೆಂಬಲ ಸೂಚಿಸಿದರು. ಸಭೆಯ ನಂತರ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ವಾಹನದಲ್ಲಿ ರಾಜ್‌ರನ್ನು ಕರೆದುಕೊಂಡು ಹೋದರು. ಇದನ್ನು ತಪ್ಪಾಗಿ ಭಾವಿಸಿದ ಅಭಿಮಾನಿಗಳು ರೊಚ್ಚಿಗೆದ್ದರು. ಚಳವಳಿಯ ಮುಂಚೂಣಿಯಲ್ಲಿದ್ದ ಮಾವಿನಕೆರೆ ರಂಗನಾಥ್ ಕಾರೂ ಸೇರಿದಂತೆ ಹಲವು ವಾಹನಗಳು ಭಸ್ಮವಾದವು. ಕಲ್ಲು ತೂರಾಟದಿಂದ ಜಖಂ ಆದವು. ಪೊಲೀಸರು ಬೆತ್ತ ಪ್ರಹಾರ, ಅಶ್ರುವಾಯುಗಳನ್ನು ಬಳಸಿದರು. ಈ ಘಟನೆ ಅಹಿತಕರವಾದರೂ ಚಳವಳಿ ಹೆಚ್ಚು ಜನರ ಗಮನ ಸೆಳೆಯಿತು. ಸಂಸ್ಕೃತ ಪರವಿದ್ದ ಪೇಜಾವರಶ್ರೀಗಳು ನಿರಶನ ಸ್ಥಳಕ್ಕೆ ಬಂದರೂ ಚಳವಳಿಗಾರರು ಅವರನ್ನು ಭೇಟಿ ಮಾಡಲಿಲ್ಲ. ಈ ಘಟನೆಯ ಪರಿಣಾಮವಾಗಿ ಪೊಲೀಸರು ಸತ್ಯಾಗ್ರಹ ನಡೆಯುತ್ತಿದ್ದ ಸ್ಥಳದಲ್ಲಿ ನಿಷೇಧಾಜ್ಞೆ ವಿಧಿಸಿ 3 ಜನರಿಗಿಂತ ಹೆಚ್ಚು ಸೇರದಂತೆ ತಿಳಿಸಿದರು. ಸರದಿ ಉಪವಾಸ ಮಾಡುತ್ತಿದ್ದ ಬಂಡಾಯ ಸಂಘಟನೆಯವರು ಈ ಆಜ್ಞೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಹೇಳಿ ಗುಂಪಾಗಿ ಕುಳಿತರು. ಪೊಲೀಸರ ಮಾತನ್ನು ನಿರ್ಲಕ್ಷಿಸಿದ ಪರಿಣಾಮವಾಗಿ ಬರಗೂರು

ರಾಮಚಂದ್ರಪ್ಪ, ಕೆ.ವೆಂ.ರಾಜಗೋಪಾಲ್, ಕಾಳೇಗೌಡ ನಾಗವಾರ ಮುಂತಾದವರನ್ನು ಬಂಧಿಸಿದರು. ಇದು ಬಂಧಿತವಾದ ಮೊದಲ ಸತ್ಯಾಗ್ರಹಿಗಳ ತಂಡ. ಅನಂತರ ಅಂದು ಸಂಜೆ ಕನ್ನಡ ಗುಡಿಸಲಿನಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿದ್ದಯ್ಯ ಪುರಾಣಿಕ, ಖಾದ್ರಿ ಶಾಮಣ್ಣ ಮುಂತಾದವರನ್ನು ಬಂಧಿಸಿದರು. ಈ ಬಂಧನ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾಗಿ ಸಾರ್ವಜನಿಕರು ಕನ್ನಡ ಚಳವಳಿಯತ್ತ ಹೆಚ್ಚು ಗಮನ ಹರಿಸಲು ನೆರವಾಯಿತು.

ಏಪ್ರಿಲ್ 17ರಂದು ಚಿತ್ರದುರ್ಗದಲ್ಲಿ ಪೊಲೀಸರ ಗುಂಡಿಗೆ ಬಲಿಯಾದವರನ್ನು ಬಳಗವು ಹುತಾತ್ಮರೆಂದು ಬಣ್ಣಿಸಿತು. ಹಿರಿಯ ಸಾಹಿತಿ ಶ್ರೀರಂಗರೂ ಸೇರಿದಂತೆ 30 ಜನ ಸಾಹಿತಿಗಳು ಕಲಾವಿದರು ನಿಷೇಧಾಜ್ಞೆ ಮುರಿದು ಬಂಧನಕ್ಕೊಳಗಾದರು. ಬಳಗದ ಕರೆಗೆ ಓಗೊಟ್ಟು ನಗರದ ವಿವಿಧೆಡೆಗಳಲ್ಲಿ 300ಕ್ಕೂ ಹೆಚ್ಚು ಜನ ಬಂಧನಕ್ಕೊಳಗಾದರು.

## ಸತ್ಯಾಗ್ರಹ ಚಪ್ಪರದ ನಾಶ

ಹೋರಾಟ ತೀವ್ರವಾದ ಹಿನ್ನೆಲೆಯಲ್ಲಿ ಏಪ್ರಿಲ್ 19ರಂದು ಸರ್ಕಾರವು ಹೊಸ ಭಾಷಾಸೂತ್ರವನ್ನು ಪ್ರಕಟಿಸಿತು. ಇದು ಗೋಕಾಕ್ ಭಾಷಾಸೂತ್ರಕ್ಕೆ ವಿರುದ್ಧವಾಗಿತ್ತು. ಆದರೆ ಕನ್ನಡವು ಕಡ್ಡಾಯವಾಗಿತ್ತು. ಇದನ್ನು ಕೆಲವು ಗಣ್ಯ ಸಾಹಿತಿಗಳು ಸ್ವಾಗತಿಸಿದರು. ಕ್ರಿಯಾ ಸಮಿತಿ ಇದನ್ನು ತಿರಸ್ಕರಿಸಿತು. ಬಳಗವು 20ರಂದು ಸಮಾಲೋಚನಾ ಸಭೆ ಕರೆಯಿತು. ಆದರೆ 19ರ ರಾತ್ರಿ 11ಕ್ಕೆ ಹಠಾತ್ ದಾಳಿ ನಡೆಸಿದ ಪೊಲೀಸರು ಗುಡಾರವನ್ನು ನಾಶಪಡಿಸಿ ಸತ್ಯಾಗ್ರಹಿಗಳನ್ನು ಬಂಧಿಸಿದರು. ಈ ಘಟನೆಯ ಅನಂತರ ಸರ್ಕಾರಕ್ಕೆ ಒಂದು ವಾರದ ಗಡುವು ನೀಡಿ, ತತ್ಕಾಲಕ್ಕೆ ಚಳವಳಿಯನ್ನು ಸ್ಥಗಿತಗೊಳಿಸುವ ನಿರ್ಧಾರ ಮಾಡಲಾಯಿತು.

ಬಳಗವು ಏಪ್ರಿಲ್ 20ರಂದು ಸೆಂಟ್ರಲ್ ಕಾಲೇಜು ನಾಟಕ ವಿಭಾಗದ ಆವರಣದಲ್ಲಿ ಕರೆದಿದ್ದ ಸಮಾಲೋಚನಾ ಸಭೆಯಲ್ಲಿ ಕೆಲವರ ಅನಪೇಕ್ಷಿತ ನಡವಳಿಕೆಯಿಂದ ಕೆಲವು ಸಾಹಿತಿಗಳಿಗೆ ಇರುಸು ಮುರುಸಾಯಿತು. 'ಚಳವಳಿ ನಿಯಂತ್ರಣ ತಪ್ಪಬಾರದು' ಎಂಬುದು ಸಾಹಿತಿಗಳ ನಿಲುವು. ಕಡೆಗೆ ಹೋರಾಟದ ಮುಂದಿನ ಸ್ವರೂಪ ನಿರ್ಧರಿಸಲು ಎಂ. ಚಿದಾನಂದಮೂರ್ತಿಯವರ ಸಂಚಾಲಕತ್ವದಲ್ಲಿ ಸಮಿತಿ ರಚಿಸಲಾಯಿತು. ಎಲ್.ಎಸ್.ಶೇಷಗಿರಿರಾವ್, ಜಿ.ಎಸ್.ಶಿವರುದ್ರಪ್ಪ ಲಂಕೇಶ್, ಬರಗೂರು ರಾಮಚಂದ್ರಪ್ಪ ಮತ್ತು ಲೋಕೇಶ ಅವರುಗಳು ಸಮಿತಿಯ ಸದಸ್ಯರಾಗಿದ್ದರು.

ಈ ಸಮಿತಿಯ ಸಲಹೆಯಂತೆ ಬಳಗವು ಅಹಿಂಸಾತ್ಮಕ ಹೋರಾಟವನ್ನು ಮುಂದುವರಿಸಲು ಜನತೆಯನ್ನು ಕೋರಿ, ವಾರದ ಗಡುವಿನ ನಂತರವೂ ಸರ್ಕಾರವು ಸರಿಯಾದ ನಿರ್ಧಾರ ಕೈಗೊಳ್ಳದಿದ್ದರೆ ಹೋರಾಟವನ್ನು ತೀವ್ರಗೊಳಿಸುವುದಾಗಿ ಪ್ರಕಟಿಸಿತು. ಈ ಪ್ರಥಮ ಹಂತದ ಚಳವಳಿಯಲ್ಲಿ ಬಳಗವು ನಡೆಯಿಸಿದ ಧರಣದಲ್ಲಿ ಪಾಲ್ಗೊಳ್ಳಬೇಕಾದರೆ ಒಂದು ಲೇಖನವನ್ನಾದರೂ ಬರೆದಿರಬೇಕೆಂದು, ಇಲ್ಲವೇ ಕಲಾವಿದರಾದರೆ ಆ ಕ್ಷೇತ್ರದಲ್ಲಿ

ದುಡಿದಿರಬೇಕೆಂಬ ನಿಬಂಧನೆಯನ್ನು ಹಾಕಿದ್ದಲ್ಲದೆ, ನಿಯಮಿತವಾಗಿ ಪಾಲಿಸಿಕೊಂಡು ಬಂದಿತು.

## ವಿಸ್ತೃತಗೊಂಡ ಎರಡನೆಯ ಹಂತದ ಚಳವಳಿ

ಸರ್ಕಾರದ ಸೂತ್ರ ಪ್ರಕಟವಾದ ಮೇಲೆ ಶ್ರೀರಂಗರು, ಪೇಜಾವರಶ್ರೀಗಳು ಚಳವಳಿ ನಿಲ್ಲಿಸುವಂತೆ ಕರೆ ನೀಡಿದ್ದು ಸ್ವಲ್ಪ ಸಂದಿಗ್ಧಕ್ಕೆ ಕಾರಣವಾಯಿತು. ಬಳಗವು ಕಾರ್ಖಾನೆ-ಕಚೇರಿಗಳ ಮತ್ತು ಇತರ ಕನ್ನಡ ಸಂಘಗಳ ಸಹಕಾರದಿಂದ ಚಳವಳಿಯನ್ನು ಮುಂದುವರೆಸುವ ನಿರ್ಧಾರ ಮಾಡಿತು. ಬಳಗದ ಪದಾಧಿಕಾರಿಗಳು ಕನ್ನಡ ಸಂಘಟನೆ ಗಳಿಗೆ ಭೇಟಿ ನೀಡಲು ಪ್ರಾರಂಭಿಸಿದರು. ವಿಧಾನಸೌಧದ ಆಸುಪಾಸು ನಿಷೇಧಾಜ್ಞೆ ಇದ್ದುದರಿಂದ ನಗರದ ಬಡಾವಣೆಗಳಲ್ಲಿ ಪ್ರತಿಭಟನೆ ಮುಂದುವರಿಸಲು ನಿರ್ಧರಿಸ ಲಾಯಿತು.

ಬಳಗದ ನಿರ್ಧಾರವನ್ನು ಬಿಡುಗಡೆ ಮಾಡಿದ ಪ್ರಧಾನ ಸಂಚಾಲಕರಾದ ಚಿದಾನಂದಮೂರ್ತಿಯವರು ಸದ್ಯಕ್ಕೆ ಗೋಕಾಕ್ ವರದಿಯ ಜಾರಿಯತ್ತ ನಮ್ಮ ಗಮನ ಕೇಂದ್ರೀಕೃತವಾಗಿದ್ದರೂ, ಮೇಲ್ನೋಟಕ್ಕೆ ಇದೇ ಮುಖ್ಯವೆಂದು ಕಾಣಿಸಿದರೂ, ಇದರ ಜೊತೆ ಜೊತೆಗೆ ನಮ್ಮ ಹೋರಾಟವನ್ನು ಕನ್ನಡಿಗರಿಗೆ ಉದ್ಯೋಗ, ಆಡಳಿತ ಭಾಷೆಯಾಗಿ ಕನ್ನಡ, ರಾಜ್ಯಕ್ಕೆ ಸ್ವತಂತ್ರ ದೂರದರ್ಶನ ಕೇಂದ್ರ, ಕನ್ನಡ ನಾಮಫಲಕ ಇತ್ಯಾದಿ ಕ್ಷೇತ್ರಗಳಿಗೂ ವಿಸ್ತರಿಸುವ ಅಗತ್ಯವಿದೆ, ಕನ್ನಡದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ನಡೆಯಬೇಕಾಗಿರುವ ಹೋರಾಟಗಳಿಗೆ ಇದು ನಾಂದಿಯಾಗಲಿ, ಸಾಹಿತಿಗಳ, ಕಲಾವಿದರ ದುರ್ಬಲವಾಣಿಗೆ ಜನತೆಯು ಧ್ವನಿವರ್ಧಕವಾಗಿ ಕನ್ನಡ ಪರ ಧ್ವನಿ ಎಲ್ಲೆಡೆ ಕೇಳುವಂತಾಗಬೇಕೆಂದರು.

ಸಾತ್ತ್ವಿಕ ಸಂಘರ್ಷದ ಅಂಗವಾಗಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಧರಣಿ, ಮೆರವಣಿಗೆಗಳು ಪ್ರಾರಂಭವಾದವು. ಎಲ್ಲ ವರ್ಗದ ಎಲ್ಲ ಸ್ತರದ ಜನ ಉತ್ಸಾಹದಿಂದ ಚಳವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಸುಪ್ತವಾಗಿದ್ದ ಕನ್ನಡಾಭಿಮಾನ, ಕನ್ನಡಿಗರಲ್ಲಿ ಅಗ್ನಿಪರ್ವತವಾಗಿ ಕಾಣಿಸಿಕೊಂಡಿತು. ಬೆಂಗಳೂರಿನ ಕನ್ನಡ ಕಾರ್ಯಕರ್ತರ ಶ್ರಮವರಿಯದ ಉತ್ಸಾಹ ಉಲ್ಲೇಖನೀಯ. ಈ ವಿಕೇಂದ್ರೀಕೃತ ಧರಣಿವಲ್ಲಿ ಜಿ.ಎಸ್.ಶಿವರುದ್ರಪ್ಪ, ಲಂಕೇಶ್, ಎಲ್.ಎಸ್.ಶೇಷಗಿರಿರಾವ್ ಸೇರಿದಂತೆ ಹಲವು ಗಣ್ಯಸಾಹಿತಿಗಳು ಪಾಲ್ಗೊಂಡರು.

## ಚಳವಳಿಗೆ ತೀವ್ರತೆ ತರುವ ಪ್ರಯತ್ನ

ಬಳಗವು ಚಳವಳಿಗೆ ತೀವ್ರತೆ ತರುವ ಉದ್ದೇಶದಿಂದ ಕುವೆಂಪು ಮತ್ತು ರಾಜಕುಮಾರ್ ಅವರುಗಳಿಂದ ಬೆಂಬಲ ಪಡೆದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿ ಚಳವಳಿಗೆ ತೀವ್ರತೆ ತರಲು ಕಾರಣವಾಯಿತು. ಆ ಸಂದರ್ಭದಲ್ಲಿ ರಾಜಕುಮಾರ್ ಅವರು ರಾಜ್ಯಾದ್ಯಂತ ಪ್ರವಾಸ ಮಾಡುವಂತೆ ಪಾಟೀಲ ಪುಟ್ಟಪ್ಪ ಪತ್ರ ಬರೆದರು. ಆದರೆ ಅದನ್ನು ಆಗುಮಾಡಿದ್ದು

ಬಳಗ, ರಾಜಕುಮಾರರ ಪ್ರವಾಸದ ಕಾರ್ಯಕ್ರಮ ತೀರ್ಮಾನ ಮಾಡುವಲ್ಲಿ, ಅವರ ಮನವೊಲಿಸುವಲ್ಲಿ ಬಳಗ ವಹಿಸಿದ ಪಾತ್ರ ನಿರ್ಣಾಯಕವಾದದ್ದು. ಅಂದಿನ ದಿನಗಳಲ್ಲಿ ಪ್ರತಿದಿನ ಸಂಜೆ ಬಳಗದ ಸಭೆ ನಡೆಯುತ್ತಿತ್ತು. ನ್ಯಾಷನಲ್ ಕಾಲೇಜು ಆವರಣದಲ್ಲಿ, ಅನಂತರ ಲಂಕೇಶ್ ಪತ್ರಿಕೆ ಕಚೇರಿಯಲ್ಲಿ, ವಿಶೇಷ ಸಂದರ್ಭಗಳಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಗಳಲ್ಲಿ ಸಭೆಗಳು ನಡೆಯುತ್ತಿದ್ದವು.

ಈ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ದಾಖಲಿಸುವುದು ಅಗತ್ಯ ಎಂದು ಭಾವಿಸಿದ್ದೇನೆ. ರಾಜ್ಯಾದ್ಯಂತ ಪ್ರವಾಸ ಮಾಡಿದ್ದ ಪಾಟೀಲ ಪುಟ್ಟಪ್ಪನವರಿಂದ ಸಾರ್ವಜನಿಕರಿಗೆ ಚಳವಳಿಯ ಬಗ್ಗೆ ಹೆಚ್ಚಿನ ವಿವರ ತಿಳಿಸಲು ಒಂದು ಪತ್ರಿಕಾಗೋಷ್ಠಿಯನ್ನು ಬಳಗ ವ್ಯವಸ್ಥೆ ಮಾಡಿತ್ತು. ಸರ್ಪಭೂಷಣಮಠದ ಆವರಣದಲ್ಲಿ ನಡೆದ ಈ ಪತ್ರಿಕಾಗೋಷ್ಠಿಯಲ್ಲಿ ಪಾಟೀಲ ಪುಟ್ಟಪ್ಪನವರು ಇಂಗ್ಲಿಷ್‌ನಲ್ಲಿ ಪ್ರಾರಂಭಿಸಿದರು. ಅಲ್ಲಿದ್ದ ಎಲ್ಲರಿಗೂ ಆಶ್ಚರ್ಯವಾಯಿತು. ಕನ್ನಡದ ಬಗ್ಗೆ ಅಪಾರ ಕಾಳಜಿ ತೋರುವ ಪಾಪುರವರ ಇಂಗ್ಲಿಷ್ ವ್ಯಾಮೋಹ ಕನ್ನಡ ಕಾರ್ಯಕರ್ತರನ್ನು ಕೆರಳಿಸಿತು. ಚಂಪಾರವರ ಸೋದರ ವಿಜಯ ಪಾಟೀಲ ಅವರು ಪ್ರತಿಭಟಿಸಿದರು. ನಾವು ಅವರೊಡನೆ ಸೇರಿದೆವು. ಪತ್ರಕರ್ತರು ಪಾಪುರವರ ನಿಲುವು ಸರಿಯಲ್ಲ ಎಂದರು. ನಂತರ ಪತ್ರಿಕಾಗೋಷ್ಠಿ ಕನ್ನಡದಲ್ಲಿ ನಡೆಯಿತು.

ಬೆಂಗಳೂರಿನಲ್ಲಿ ಚಳವಳಿಯನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಮೇ 10ರಂದು ಎಂ.ವಿ.ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಸಾಹಿತಿಗಳು, ಕಲಾವಿದರು, ವಕೀಲರು ಕನ್ನಡ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ 26 ಜನರ ಸಮಿತಿಯೊಂದನ್ನು ರಚಿಸಿತು. ಪ್ರಧಾನ ಸಂಚಾಲಕರಾಗಿ ಚಿದಾನಂದಮೂರ್ತಿ, ಸಂಚಾಲಕರುಗಳಾಗಿ ಜಿ.ಕೆ.ಸತ್ಯ, ನಟ ಲೋಕೇಶ, ಬರಗೂರು ರಾಮಚಂದ್ರಪ್ಪ ಜಿ.ವೈ.ಹುಬ್ಳಿಕರ್, ಎಚ್.ಎಸ್.ರೇಣುಕಾ ಪ್ರಸಾದ್ ಮತ್ತು ಎಚ್.ಎಸ್.ಮಾಧವರಾವ್ ನೇಮಕವಾದರು. ಖಜಾಂಚಿಯಾಗಿ ಪಿ.ವಿ.ನಾರಾಯಣ, ಹಣಕಾಸು, ಕಾರ್ಮಿಕ ಸಂಘಟನೆ ಹಾಗೂ ಸಂಘಸಂಸ್ಥೆಗಳ ಸಂಪರ್ಕಕ್ಕಾಗಿ ಮಾವಿನಕೆರೆ ರಂಗನಾಥನ್, ಕೋ.ಚೆನ್ನಬಸಪ್ಪ, ಸಿ.ಚಂದ್ರಶೇಖರ, ಬೆ.ರಾ.ನಾಗರಾಜ್ ಹಾಗೂ ದೇವಕೀ ಕುಮಾರ್ ಅವರುಗಳ ನೇತೃತ್ವದಲ್ಲಿ ಉಪಸಮಿತಿ ರಚಿಸಲಾಯಿತು.

## ಬೆಳಗಿದ ಕನ್ನಡ ಪಂಜು

ಕಾರ್ಮಿಕರನ್ನು ಚಳವಳಿಯಲ್ಲಿ ತೊಡಗಿಸಿಕೊಳ್ಳುವ ಅಂಗವಾಗಿ ಕಾರ್ಮಿಕರಿಂದ 'ಕನ್ನಡ ಪಂಜು' ಬೆಳಗಿಸುವ ಕಾರ್ಯಕ್ರಮ ಮೇ 24ರಂದು ಹಮ್ಮಿಕೊಂಡಿತು. ಎಚ್.ಎ.ಎಲ್. ಕಾರ್ಮಿಕ ಈಶ್ವರಯ್ಯ ಪಂಜು ಬೆಳಗಿಸಿ ಪೌರ ಕಾರ್ಮಿಕ ನಾಗರಾಜು ಅವರಿಗೆ ನೀಡಿದರು. ಎಂ.ವಿ.ಸೀತಾರಾಮಯ್ಯ ನೇತೃತ್ವ ವಹಿಸಿದರು. ಹಠಾತ್ತಾಗಿ ನಡೆದ ಈ ಕಾರ್ಯಕ್ರಮದ ಸುದ್ದಿ ತಿಳಿದ ತಕ್ಷಣ ಪೊಲೀಸರು ಸ್ಥಳಕ್ಕೆ ಆಗಮಿಸಿ ಪಂಜನ್ನು ನಂದಿಸಿದರು. ಬೆಂಗಳೂರು

ವಿ.ವಿ.ಗ್ರಂಥಾಲಯದಿಂದ ನಂದಿಸಿದ ಪಂಜನ್ನು ಹಿಡಿದು ಮೆರವಣಿಗೆ ಹೊರಟ ನಾ.ಗೀತಾಚಾರ್ಯ ಮತ್ತು ಆರು ಮಂದಿ ವಿದ್ಯಾರ್ಥಿಗಳನ್ನು ಬಂಧಿಸಿ ರಾತ್ರಿಯೆಲ್ಲ ಠಾಣೆಯಲ್ಲಿ ಇಟ್ಟು ಶಿಕ್ಷಿಸಿದರು. ಮತ್ತೆ ಮೇ 25ರಂದು ಇಂತಹದೇ ಕಾರ್ಯಕ್ರಮ ಮಾಡಲು ಪ್ರಯತ್ನಿಸಿದ ಜೆ.ಶಂಬಣ್ಣ ಮಿತ್ರರನ್ನು ಮತ್ತೆ ಬಂಧಿಸಿದರು. ಇದರಿಂದಾಗಿ ಬಡಾವಣೆಗಳಲ್ಲಿ ಪಂಜಿನ ಮೆರವಣಿಗೆಗಳು ಪ್ರಾರಂಭವಾದವು.

## ಕನ್ನಡಕ್ಕಾಗಿ ಜೈಲು ತುಂಬಿ

ಇಷ್ಟೆಲ್ಲಾ ಚಳವಳಿ ನಡೆಯುತ್ತಿದ್ದರೂ ಸರ್ಕಾರ ಗಮನ ನೀಡದಿದ್ದಾಗ ಬಳಗ 'ಕನ್ನಡಕ್ಕಾಗಿ ಜೈಲು ತುಂಬಿ' ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಬೆಂಗಳೂರಿನ ಪುರಭವನದ ಮುಂದೆ ನಡೆದ ಈ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ಮಂದಿ ಬಂಧನಕ್ಕೊಳಗಾದರು. ಬೆಂಗಳೂರಿನ ಕೈಗಾರಿಕೆಗಳ ಸಂಘಟನೆಗಳು, ಹಲವು ಕನ್ನಡ ಸಂಘಗಳು ಪಾಲ್ಗೊಂಡಿದ್ದ ಈ ಕಾರ್ಯಕ್ರಮದಲ್ಲಿ ಪಿ.ಲಂಕೇಶ್, ಚಿದಾನಂದಮೂರ್ತಿ ಸೇರಿದಂತೆ ಹಲವು ಗಣ್ಯರು ಬಂಧನಕ್ಕೊಳಗಾದರು. ಚಿದಾನಂದಮೂರ್ತಿ, ಜಿ.ವೈ. ಹುಬ್ಳೀಕರ್, ರವೀಂದ್ರರೇಷ್ಮೆ ಚಿತ್ರ ನಿರ್ದೇಶಕ ಕೆ.ಎಂ.ಶಂಕರಪ್ಪ ಹ.ನಂ.ವಿಜಯ ಕುಮಾರ್ ಅವರುಗಳು ಜಾಮೀನು ನಿರಾಕರಿಸಿ ಜೈಲಿಗೆ ಹೋದರು. ಚಳವಳಿ ಕಾವು ಏರಿದುದರ ಪರಿಣಾಮ ಜೂನ್ 4ರಂದು ಸರ್ಕಾರವು ವಿಸ್ತೃತ ಸಭೆಯನ್ನು ಕರೆಯಿತು.

## ಮತ್ತೆ 'ಜೈಲು ತುಂಬಿ' ಚಳವಳಿ

ಜೂನ್ 4ರಂದು ರಾಜ್ಯ ಸರ್ಕಾರವು ಕರೆದಿದ್ದ ಸಭೆಯಲ್ಲಿ ಗೋಕಾಕ ಭಾಷಾಸೂತ್ರವನ್ನು ಒಪ್ಪುವಂತೆ ಒತ್ತಡ ತರುವ ಆಶಯದಿಂದ ಜೂನ್ 3ರಂದು ಬಳಗವು 'ಸಾಮೂಹಿಕ ಧರಣಿ' ಹಾಗೂ 'ಜೈಲು ತುಂಬಿ' ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಈ ಕಾರ್ಯಕ್ರಮಕ್ಕೆ ನಗರದಲ್ಲಿ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಅಕ್ಷರಶಃ ಸಾವಿರಾರು ಜನ ಬಂಧನಕ್ಕೊಳಗಾದರು. ಬಂಧಿತರಲ್ಲಿ ಸಾಹಿತ್ಯ ದಿಗ್ಗಜಗಳಾದ ಗೋಪಾಲಕೃಷ್ಣ ಅಡಿಗ, ಜಿ.ಎಸ್.ಶಿವರುದ್ರಪ್ಪ ಸಾ.ಶಿ.ಮರುಳಯ್ಯ, ಸುಮತೀಂದ್ರನಾಡಿಗ್, ಎಚ್.ಎಂ.ಮರುಳ ಸಿದ್ದಯ್ಯ, ಎಚ್.ಎಸ್. ಪಾರ್ವತಿ, ವೈದೇಹಿ ಮುಂತಾದ ಸಾಹಿತಿಗಳು, ಜಿ.ಕೆ.ಸತ್ಯ, ಹುಬ್ಳೀಕರ್, ಪ.ಸ.ಕುಮಾರ್, ಚಿ.ಸು.ಕೃಷ್ಣಶೆಟ್ಟಿ ಶಾಸಕರುಗಳಾದ ಜೆ.ಎಚ್.ಪಟೇಲ್, ಜೀವರಾಜ್ ಆಳ್ವ, ರಾಮದೇವ, ಪ್ರಮೀಳ ನೇಸರ್ಗಿ, ನಟರಾದ ಅಶೋಕ, ಲೋಕೇಶ ಮತ್ತು ಗಿರಿಜಾ ಲೋಕೇಶ್ ಅವರುಗಳಲ್ಲದೆ ನೂರಾರು ಸಂಘಟನೆಗಳ ಪ್ರತಿನಿಧಿಗಳು ಸೇರಿದ್ದರು.

## 'ಕನ್ನಡ ಚಳವಳಿಗೆ ಹೊಸ ಆಯಾಮ'

ಈ ಚಳವಳಿಯನ್ನು ಕನ್ನಡಪ್ರಭ (5.6.82) 'ಕನ್ನಡ ಚಳವಳಿಗೆ ಹೊಸ ಮಜಲು – ಸಾವಿರ ಬಂಧನ' ಎಂದು ಬಣ್ಣಿಸಿತು. ಬಂಧನಕ್ಕೆ ಒಳಗಾಗುವ ಮುನ್ನ ಜಿ.ಎಸ್.ಶಿವರುದ್ರಪ್ಪನವರು

'ಕನ್ನಡದಲ್ಲಿ ವ್ಯವಹರಿಸಿ – ಮಾತನಾಡಿ, ಇಂಗ್ಲಿಷ್ ಶಾಲೆಗಳು ರದ್ದಾಗಲಿ' ಕಾರ್ಯಕ್ರಮವನ್ನೂ ಗೋಪಾಲಕೃಷ್ಣ ಅಡಿಗರು 'ಕರ್ನಾಟಕಕ್ಕೆ ದೂರದರ್ಶನ ಮರುಪ್ರಸಾರ ಕೇಂದ್ರ ಬೇಡ – ಸ್ವತಂತ್ರ ಕನ್ನಡ ದೂರದರ್ಶನ ಬೇಕು' ಕಾರ್ಯಕ್ರಮ ವನ್ನೂ, ಜೆ.ಎಚ್.ಪಟೇಲರು 'ಆಡಳಿತ ಭಾಷೆಯಾಗಿ ಕನ್ನಡ' ಕಾರ್ಯಕ್ರಮವನ್ನು ನಟ ಲೋಕೇಶ್ 'ಕನ್ನಡದಲ್ಲಿ ಮಾತ್ರ ನಾಮಫಲಕ' ಕಾರ್ಯಕ್ರಮವನ್ನು ಬೆ.ರಾ.ನಾಗರಾಜ್ 'ಕನ್ನಡಿಗರಿಗೇ ಉದ್ಯೋಗ' ಕಾರ್ಯಕ್ರಮವನ್ನೂ ಸಾಂಕೇತಿಕವಾಗಿ ಉದ್ಘಾಟಿಸಿದರು.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಬೇಕು. ಗೋಕಾಕ್ ಚಳವಳಿಗೆ ವಿರುದ್ಧವಾಗಿದ್ದ ಪ್ರಜಾವಾಣಿ ಪತ್ರಿಕೆ 'ಕನ್ನಡಪರ ಧರಣಿ ಮುಂದೂಡಿಕೆ' ಎಂಬ ಸುದ್ದಿಯನ್ನು ಪ್ರಕಟಿಸಿ ಕನ್ನಡ ಕಾರ್ಯಕರ್ತರ ಆಕ್ರೋಶಕ್ಕೆ ಗುರಿಯಾಯಿತು. ಪತ್ರಿಕೆ ಕನ್ನಡಿಗರ ಕ್ಷಮೆ ಕೋರುವಂತೆ ಬಳಗ ಒತ್ತಾಯಿಸಿತು.

## ಸಮಾಧಾನ ತಂದ ಸಭೆ – ಅನುಷ್ಠಾನಕ್ಕೆ ಒತ್ತಾಯಿಸಿ ಮೌನ ಮೆರವಣಿಗೆ

ಸರ್ಕಾರವು ಜೂನ್ 4ರಂದು ಕರೆದ ಸಭೆಯಲ್ಲಿ ಒಮ್ಮತ ಮೂಡಿ ಪರಿಷ್ಕೃತ ಭಾಷಾಸೂತ್ರವು ರೂಪುಗೊಂಡಿತು. ಸಭೆಯಲ್ಲಿ ಮಾಸ್ತಿ, ಶಿವರಾಮಕಾರಂತ, ಶ್ರೀರಂಗ, ರಾಜಕುಮಾರ್ ಸೇರಿದಂತೆ 47 ಜನ ಗಣ್ಯರು ಪಾಲ್ಗೊಂಡಿದ್ದರು. ಸುಮಾರು 9 ಗಂಟೆಗಳಷ್ಟು ಸುದೀರ್ಘ ಕಾಲ ನಡೆದ ಈ ಸಭೆಯಲ್ಲಿ ಕೂತ ಮುಖ್ಯಮಂತ್ರಿ ಗುಂಡೂರಾಯರು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಸರ್ವ ಸಮ್ಮತ ಸೂತ್ರವು ರೂಪಿತವಾಗಿ ವಾರಗಳೇ ಕಳೆದರೂ ಸರ್ಕಾರವು ಆಜ್ಞೆಯನ್ನು ಹೊರಡಿಸಲಿಲ್ಲ, ಆಗ ಬಳಗವು ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಮೌನ ಮೆರವಣಿಗೆ ನಡೆಯಿಸಿತು. ಮೆರವಣಿಗೆಯಲ್ಲಿ ಎಂ.ವಿ.ಸೀ., ಜಿ.ಎಸ್.ಎಸ್., ಲಂಕೇಶ್, ಎಂ.ಆರ್.ಲಕ್ಷ್ಮಮ್ಮ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಈ ಚಳವಳಿಯ ಸಂದರ್ಭದಲ್ಲಿ ಕನ್ನಡಾಭಿಮಾನಿಗಳಿಗೆ ಉಚಿತ ಕಾನೂನು ನೆರವು ನೀಡಿದ ವಕೀಲರುಗಳಾದ ಎಚ್.ಎಸ್.ರೇಣುಕಾಪ್ರಸಾದ್, ಬೆ.ಕಾ.ಮೂರ್ತೀಶ್ವರಯ್ಯ, ಎಂ.ಎಸ್.ಮಂದಣ್ಣ ಅವರ ಸೇವೆ ಸ್ಮರಣೀಯ. ಇವರುಗಳು ಚಳವಳಿಯಲ್ಲೂ ತೊಡಗಿಸಿಕೊಂಡಿದ್ದರೆಂಬುದು ಮರೆಯಬಾರದ ಸಂಗತಿ. ಚಳವಳಿ ಸಂದರ್ಭದಲ್ಲಿ ನಿಷ್ಠೆಯಿಂದ ಕಾರ್ಯಕರ್ತರಾಗಿ ಎಲ್ಲ ಕೆಲಸಗಳನ್ನು ಮಾಡಿದ ನಾ.ಗೀತಾಚಾರ್ಯ, ದಿ.ಎಚ್.ಎಸ್.ರೇಣುಕಾರಾಧ್ಯ, ಮಲ್ಲಿಕಾರ್ಜುನ ಮೊರಬದ್, ಕೆ.ರಾಜಕುಮಾರ್, ಆರ್.ಜಿ.ಹಳ್ಳಿ ನಾಗರಾಜ್ ಅವರ ಹೆಸರುಗಳು ಉಲ್ಲೇಖನೀಯ. ಸಂಘ–ಸಂಸ್ಥೆಗಳನ್ನು ಸಂಘಟಿಸುವಲ್ಲಿ, ಚಳವಳಿಯ ಹಲವು ಸ್ತರಗಳಲ್ಲಿ ಶ್ರಮಿಸಿದ ಬೆ.ರಾ.ನಾಗರಾಜ್, ದಿ.ದೇವಕೀಕುಮಾರ ಮತ್ತುಕ ಕಾರ್ಯಕರ್ತರಿಗೆ ಸ್ಫೂರ್ತಿಯ ಚಿಲುಮೆಯಾಗಿ, ಆಕರ್ಷಕ

ಗೋಡೆ ಫಲಕಗಳು ಎದೆಬಿಲ್ಲೆಗಳನ್ನು ಮುದ್ರಿಸಿಕೊಟ್ಟ ಕಲಾವಿದ ಸಿ.ಚಂದ್ರಶೇಖರ್ ಅವರ ಸೇವೆ ಅಪೂರ್ವವಾದದ್ದು.

ಡಾ|| ರಾಜಕುಮಾರ್‌ರೊಡನೆ ಕಾಣಿಸಿಕೊಂಡವರು ಪಾಟೀಲ ಪುಟ್ಟಪ್ಪನವರು. ಆದರೆ ಆ ಮೆರವಣಿಗೆಯು ಯಶಸ್ವಿಯಾಗಲು ಚಿದಾನಂದಮೂರ್ತಿ, ಪಿ.ವಿ.ನಾರಾಯಣ, ಜಿ.ಕೆ.ಸತ್ಯ ಅವರುಗಳು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು. ಧಾರವಾಡ-ಬೆಂಗಳೂರು-ಮೈಸೂರುಗಳ ನಡುವೆ ಸಮನ್ವಯಗೊಳಿಸುವ ಕೆಲಸವನ್ನು ಬಳಗ ಯಶಸ್ವಿಯಾಗಿ ನಡೆಸಿತು.

**ಸಂತಾಪ ಸೂಚಕ ಸಭೆಯಾದ ವಿಜಯೋತ್ಸವ**

ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಅತ್ಯದ್ಭುತ ರೀತಿಯಲ್ಲಿ ಪ್ರಕಟವಾದ ಕನ್ನಡ ಪ್ರೇಮವನ್ನು ನಿರಂತರವಾಗಿ ಉಳಿಸಲು ಜುಲೈ ತಿಂಗಳಲ್ಲಿ ರಾಜಕುಮಾರ್ ನೇತೃತ್ವದಲ್ಲಿ 'ಜಾಗೃತ ಜಾಥಾ' ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಯಿತು.

ಸಾಹಿತಿಗಳ ಕಲಾವಿದರ ಬಳಗವು ಈ ಉತ್ಸಾಹವನ್ನು ಕನ್ನಡ ಸಮಸ್ಯೆಗಳ ಪರಿಹಾರಕ್ಕೆ ಬಳಸುವ ಉದ್ದೇಶದಿಂದ ಆಗಸ್ಟ್ 1ರಂದು ರಾಜಕುಮಾರ್ ನೇತೃತ್ವದಲ್ಲಿ ಒಂದು ಅರ್ಥಪೂರ್ಣ ಕಾರ್ಯಕ್ರಮ ವ್ಯವಸ್ಥೆ ಮಾಡಿತು.

ಈ ಸಭೆಯನ್ನು ಶಿವಾಜಿನಗರ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಿದರೆ ಅಲ್ಪಸಂಖ್ಯಾತರನ್ನೂ ಮುಖ್ಯವಾಹಿನಿಯೊಳಗೆ ಸೇರಿಸಿಕೊಳ್ಳಲು ಸಹಾಯಕವಾಗುತ್ತದೆಂದು ಬಳಗವು ಭಾವಿಸಿತು. ಆದರೆ ಪೊಲೀಸರ ಅನುಮತಿ ದೊರೆಯಲಿಲ್ಲ. ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲೂ ಅನುಮತಿ ಸಿಗಲಿಲ್ಲ. ಅಂತಿಮವಾಗಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಭೆ ವ್ಯವಸ್ಥೆ ಆಯಿತು. ಪೊಲೀಸರೊಡನೆ ಚರ್ಚಿಸಿ ಮೆರವಣಿಗೆಯ ಮಾರ್ಗವನ್ನು ತೀರ್ಮಾನಿಸಲಾಯಿತು. ಅನಂತರ ಮತ್ತೆ ಪೊಲೀಸರು ಮಾರ್ಗವನ್ನು ಬದಲಿಸಿದರು. ರಾಜಕುಮಾರ್ ಮೆರವಣಿಗೆಯಲ್ಲಿ ಬಂದರೆ ನಿಯಂತ್ರಣ ಕಷ್ಟ ಎಂದು ಪೊಲೀಸರು ತಿಳಿಸಿದರು. ರಾಜಕುಮಾರ್ ನೇರವಾಗಿ ಬಂದು ಸಭೆಯಲ್ಲಿ ಮಾತನಾಡುವುದು ಎಂದೂ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದೂ ತೀರ್ಮಾನಿಸಲಾಯಿತು. ಆದರೆ ಆಗಸ್ಟ್ 12ರ ಅಂದರೆ ಮೆರವಣಿಗೆಯ ದಿನ ಪತ್ರಿಕೆಗಳಲ್ಲಿ ರಾಜಕುಮಾರ್ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದಾಗಿ ಬಳಗದ ಸಂಚಾಲಕ ಜಿ.ಕೆ.ಸತ್ಯ ಹೇಳಿಕೆ ಇತ್ತರು. ಅವರಿಗೆ ಕೆಲವರು ತೀವ್ರ ಒತ್ತಡ ಹೇರಿ ದೂರವಾಣಿ ಮೂಲಕವೇ ಪತ್ರಿಕೆಗೆ ತಿಳಿಸುವಂತೆ ಮಾಡಿದ್ದರು.

ಬೆಂಗಳೂರಿನ ಮೂಲೆ ಮೂಲೆಗಳಲ್ಲಿ ಮೆರವಣಿಗೆಯನ್ನು ವರ್ಣರಂಜಿತವಾಗಿ ಮಾಡಲು ಉತ್ಸಾಹದಿಂದ ವ್ಯವಸ್ಥೆಗಳು ನಡೆದಿದ್ದವು. ರಾಜಕುಮಾರ್ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಬೆಳವಣಿಗೆ ಬಗ್ಗೆ ಪ್ರಧಾನ ಸಂಚಾಲಕರಾದ ಚಿದಾನಂದಮೂರ್ತಿಯವರು

ತೀವ್ರ ಆತಂಕ ವ್ಯಕ್ತಪಡಿಸಿದರು. ಅವರ ಆತಂಕ ನಿಜವಾಯಿತು. ಯೋಜಿತ ರೂಪದಲ್ಲಿಲ್ಲದಿದ್ದರೂ ಬೃಹತ್ ಮೆರವಣಿಗೆ ರಾಜಕುಮಾರ್ ನೇತೃತ್ವದಲ್ಲಿ ಹೊರಟಿತು. ಮೆರವಣಿಗೆಯನ್ನು ಬದಲಿಸಿದ ಮಾರ್ಗದಲ್ಲಿ ಹೋಗಲು ಪೊಲೀಸರು ಸೂಚಿಸಿದರು. ಮೆರವಣಿಗೆಯಲ್ಲಿದ್ದವರು ಇದಕ್ಕೆ ಎಡೆಗೊಡಲಿಲ್ಲ, ಕೆಲವರು ಅತ್ಯುತ್ಸಾಹದಲ್ಲಿ ಸ್ವೇಚ್ಛಾಚಾರಕ್ಕಿಳಿದರು. ಪೊಲೀಸರು ಲಾಠಿಪ್ರಹಾರ, ಅಶ್ರುವಾಯು ಪ್ರಯೋಗ ಮಾಡಿದರು. ಅಂದು ಶಂಕರಪುರದ ಬಳಿ ನಡೆದ ಗೋಲಿಬಾರ್‌ನಲ್ಲಿ ಅರಸಪ್ಪ ಎಂಬ ಮುಗ್ಧ ಕಾರ್ಮಿಕ ಅಸುನೀಗಿದ.

ಸಭೆಯು ವ್ಯವಸ್ಥೆಯಾಗಿದ್ದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು. ಅಚ್ಚುಕಟ್ಟಾದ ವ್ಯವಸ್ಥೆಯೂ ಆಗಿತ್ತು. ಬೆಳಗಿನಿಂದಲೇ ಜನ ಸೇರತೊಡಗಿದರು. ಬಳಗವು ಸಭೆಯಲ್ಲಿ ಹಣ ಸಂಗ್ರಹಿಸಿ, ಸಭೆಯ ಖರ್ಚು ಸರಿದೂಗಿಸಿ ಉಳಿದ ಹಣದಿಂದ ಮುಂದಿನ ಚಳವಳಿಗೆ ಬಳಸುವ ಉದ್ದೇಶದಿಂದ ಹತ್ತಾರು ಹುಂಡಿಗಳನ್ನು ಸಿದ್ಧಪಡಿಸಿ ಸಂಗ್ರಹ ಪ್ರಾರಂಭವಾಗಿತ್ತು. ಇದ್ದಕ್ಕಿದ್ದಂತೆಯೇ ಕಲ್ಲು ತೂರಾಟ ಪ್ರಾರಂಭವಾಯಿತು. ಕೆಲವರು ಸಭೆ ಕೆಡಿಸಲೆಂದೇ ಬಂದಂತಿತ್ತು. ಧ್ವನಿವರ್ಧಕದಿಂದ ಚಿದಾನಂದಮೂರ್ತಿಯವರು ಕಳಕಳಿಯಿಂದ ಕನ್ನಡ ಚಳವಳಿಗೆ ಕೆಟ್ಟ ಹೆಸರು ತರಬಾರದೆಂದು ಮನವಿ ಮಾಡಿದರು. ಆದರೆ ಗಲಾಟೆ ನಿಲ್ಲಲೇ ಇಲ್ಲ, ಪೊಲೀಸರು ಇಂಥದೇ ಅವಕಾಶಕ್ಕಾಗಿ ಕಾಯುತ್ತಿದ್ದವರಂತೆ ಅಶ್ರುವಾಯು ಸಿಡಿಸಲಾರಂಭಿಸಿದರು. ಜನ ವೇದಿಕೆಯಲ್ಲಿ ಜಮಾಯಿಸಿದರು. ನೂಕುನುಗ್ಗಲು ಹೆಚ್ಚಿದಾಗ ಪೊಲೀಸರು ನಿಷ್ಕರುಣೆಯಿಂದ ಬೆತ್ತಪ್ರಹಾರ ನಡೆಸಿದರು. ನೂಕುನುಗ್ಗಲಿಲ್ಲಿ ಚಿದಾನಂದಮೂರ್ತಿ ಯವರಿಗೆ ಹೊಡೆತ ಬಿತ್ತು. ಸಾಕಷ್ಟು ನೋವಾಯಿತು. ಕೊನೆಯವರೆಗೂ ವೇದಿಕೆಯಲ್ಲಿ ಉಳಿದ ನನ್ನಂತಹ ಕೆಲವರು ಬಚಾವಾದದ್ದು ಪವಾಡವೇ ಸರಿ. ಈ ಘಟನೆ ನಡೆದ ನಂತರ ಮೈದಾನವು ಯುದ್ಧ ಮುಗಿದ ರಣರಂಗದಂತಿತ್ತು. ಅನಂತರ ಮಳೆಯು ಬಂತು. ಜನ ಕರಗಿದರು. ಸಂಜೆ 4 ಘಂಟೆ ಸುಮಾರಿಗೆ ರಾಜಕುಮಾರ್ ನೇತೃತ್ವದಲ್ಲಿ ಕಲಾವಿದರು ಬಂದರು. ಸಭೆ ಪ್ರಾರಂಭವಾಯಿತು. ಅಂದಿನ ಸಭೆ ವ್ಯವಸ್ಥೆ ಮಾಡಿದ್ದು ಬಳಗವಾದರೂ ಸಭೆಯ ಹಿಡಿತ ಬಳಗದಿಂದ ಜಾರಿತ್ತು. ಬಳಗದ ಪರವಾಗಿ ಮಾತನಾಡಿದ ಚಿದಾನಂದಮೂರ್ತಿ, ಜಿ.ಕೆ.ಸತ್ಯ ಅವರುಗಳು ಆಡಿದ ಮತುಗಳು ಮನ ಮಿಡಿಯುವಂತಿತ್ತು. ಸಭೆ ವಿಜಯೋತ್ಸವವಾಗಲಿಲ್ಲ, ಅಸುನೀಗಿದ ಅರಸಪ್ಪನ ಸಂತಾಪ ಸೂಚಕ ಸಭೆಯಾಗಿ, ಏಟುತಿಂದ ನೊಂದ ಕನ್ನಡಿಗರನ್ನು ಸಂತೈಸುವ ಸಭೆಯಾಗಿ ಮಾರ್ಪಟ್ಟಿತು.

ಸಭೆಯಲ್ಲಿ ಕುರ್ಚಿಗಳು ನಾಶವಾದವು, ಜಮಖಾನಗಳು ಕಾಣೆಯಾದವು. ಹಣ ಸಂಗ್ರಹಿಸಬಹುದೆಂಬ ನಿರೀಕ್ಷೆಯಂತೂ ಸಂಪೂರ್ಣ ಹುಸಿಯಾಯಿತು.

■

# ದಿಕ್ಕು ಬದಲಾದ ಸಂಘರ್ಷ

ಕನ್ನಡವನ್ನು ಪ್ರಧಾನವಾಗಿ ಅಧ್ಯಯನ ನಡೆಸಿದವರಿಗೆ ಸರ್ಕಾರದಲ್ಲಿ ಕೆಲಸಗಳು ಸಿಗಬೇಕು ಎಂಬ ಬೇಡಿಕೆಯೊಂದಿಗೆ ಆರಂಭವಾದದ್ದು ಕನ್ನಡ ಸಂಘರ್ಷ ಸಮಿತಿ. ಕಳೆದ ಶತಮಾನದ ಎಪ್ಪತ್ತರ ದಶಕದ ಕೊನೆಯ ವರ್ಷಗಳಲ್ಲಿ ಅಸ್ತಿತ್ವಕ್ಕೆ ಬಂದ ಸಮಿತಿಗೆ ಆರಂಭದಲ್ಲಿ ಕನ್ನಡ ಎಂಎ ಪದವೀಧರರು, ಕನ್ನಡವನ್ನು ಪ್ರಧಾನ ವಿಷಯವನ್ನಾಗಿ ಅಧ್ಯಯನ ನಡೆಸಿದ ಆನರ್ಸ್ ಪದವೀಧರರು ಮತ್ತು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಗ್ರಾಮೀಣ ಪದವೀಧರರನ್ನು ಒಳಗೊಳ್ಳುವ ಉದ್ದೇಶವಿತ್ತು. ಕಲ್ಲೂರು ಮೇಘರಾಜ ಕನ್ನಡ ಆನರ್ಸ್ ಮತ್ತು ಎಂ.ಎ. ಪದವಿ ಗಳಿಸಿದ್ದರೂ ಆಗ ತಾತ್ಕಾಲಿಕ ನೆಲೆಯಲ್ಲಿ 'ಗಾಂಧಿ ಕೃಷಿ ವಿಜ್ಞಾನ ಕೇಂದ್ರ'ದಲ್ಲಿ ಸಹಾಯಕನಾಗಿದ್ದ. ಯಾವುದಾದರೊಂದು ಸಾಮಾಜಿಕ ವಿಷಯದ ಬಗ್ಗೆ ಕಾರ್ಯೋನ್ಮುಖರಾಗುವ ಸ್ವಭಾವದ ಮೇಘರಾಜ ಕನ್ನಡ ಎಂಎ ಮಾಡಿ ಕೊಂಡವರು. ಕನ್ನಡ ಮಾಧ್ಯಮದಲ್ಲಿ ಪದವಿವರೆಗೆ ಓದಿದ ಗ್ರಾಮೀಣ ವಿದ್ಯಾರ್ಥಿಗಳನ್ನು ಸಂಘಟಿಸಿ ಸರ್ಕಾರದ ಗಮನ ಸೆಳೆಯುವ ಅಗತ್ಯವನ್ನು ಮನಗಂಡರು.

ಚಿಂತನೆ ನಡೆದಿರುವಾಗಲೇ ಜೊತೆಯಾದವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿದ್ದ ಶಿವರಾಮೇಗೌಡ ನಾಗವಾರ, ಕನ್ನಡಪರ ಚಿಂತನೆ ನಡೆಸುತ್ತಿದ್ದ ಹೈಸ್ಕೂಲು ಶಿಕ್ಷಕ ರಹಮಾನ್ ಖಾನ್, ಬಿ.ಎ. (ಆನರ್ಸ್), ಎಂ.ಒ. ಪದವಿ ಗಳಿಸಿದ್ದರೂ ಇನ್ನೂ ಉದ್ಯೋಗಕ್ಕಾಗಿ ಪರದಾಡುತ್ತಿದ್ದ ಮಂಡ್ಯದ ಶಿವರಾಮ ಕೀಲಾರ ಮೊದಲಾದವರು. ಸೆಂಟ್ರಲ್ ಕಾಲೇಜು ಗ್ರಂಥಾಲಯ ಎದುರಿನಲ್ಲಿ ಹುಲ್ಲುಹಾಸಿನಲ್ಲಿ ಕನ್ನಡದ ಪದವೀಧರರನ್ನು ಸಂಘಟಿಸಲು ನಡೆದ ಅನೇಕ ಸಭೆಗಳಿಗೆ ಆಗ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸುತ್ತಿದ್ದ ಸತ್ಯನಾಥ್ ಕೂಡ ಹಾಜರಾಗಿದ್ದರು. ಆಡಳಿತದಲ್ಲಿ ಕನ್ನಡವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರತಿ ತಾಲೂಕಿಗೆ ಒಬ್ಬರಂತೆ ಕನ್ನಡ ಅಧಿಕಾರಿಗಳನ್ನು ನೇಮಿಸಬಹುದೆಂಬ ಸಲಹೆಯೂ ಸೇರಿದಂತೆ ಸರ್ಕಾರದ ಯಾವ ಯಾವ ಇಲಾಖೆಗಳಲ್ಲಿ ಎಲ್ಲೆಲ್ಲಿ ಕನ್ನಡವನ್ನೇ ಪ್ರಧಾನವಾಗಿ ಅಧ್ಯಯನ ನಡೆಸಿದ ಪದವೀಧರರು ಸೂಕ್ತವಾಗಲಿದ್ದಾರೆ ಎಂಬ ಚಿಂತನೆಯೂ ನಡೆದಿತ್ತು.

ಕನ್ನಡ ಪದವೀಧರರ ವೇದಿಕೆಯೊಂದನ್ನು ರಚಿಸಬೇಕು ಎಂಬ ಸಲಹೆಗೆ ಮೊದಲು ಹೊಳೆದದ್ದು 'ಕನ್ನಡ ಸಂಘರ್ಷ ಸಮಿತಿ' ಎಂಬ ಹೆಸರು. ಪ್ರಾಯಶಃ ದಲಿತ ಸಂಘರ್ಷ ಸಮಿತಿ

ಆಗ ಚುರುಕಾಗಿದ್ದ ಕಾರಣ ತಕ್ಷಣ ಹೊಳೆದ ಹೆಸರಿರಬೇಕು. ಚರ್ಚೆಗೆ ಬಂದವರೆಲ್ಲ ಅದಕ್ಕೆ ಸಹಮತ ವ್ಯಕ್ತಪಡಿಸಿದರು. ಕಲ್ಲೂರು ಮೇಘರಾಜ ಈ ಸಂಘಟನೆಗೆ ಆತ್ಮಾಸಕ್ತಿ ತಾಳಿದರೂ ಸಭೆಯಲ್ಲಿ ಇದ್ದವರ್ಯಾರೋ ಶಿವರಾಮೇಗೌಡ ನಾಗವಾರರ ಹೆಸರನ್ನು ತಾತ್ಕಾಲಿಕ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಕಲ್ಲೂರು ಮೇಘರಾಜ ಪ್ರಧಾನ ಕಾರ್ಯದರ್ಶಿ ಯಾಗಿ ನೇಮಕವಾದರು. ಕನ್ನಡ ಎಂ.ಎ. ಗಳಿಸಿದ್ದ ಗೀತಾ, ಆಗ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿದ್ದು ಕನ್ನಡ ಹೋರಾಟಗಳಲ್ಲಿ ಆಸಕ್ತಿ ವಹಿಸುತ್ತಿದ್ದ ರಾಮಣ್ಣ ಕೋಡಿಹೊಸಳ್ಳಿ ಅವರೂ ನಮಗೆ ಬೆಂಬಲಿಸಿದ್ದರು.

'ಕನ್ನಡ ಸಂಘರ್ಷ ಸಮಿತಿ' ಯ ತಾತ್ಕಾಲಿಕ ಸಮಿತಿ ರಚನೆಯಾಗಿದ್ದರೂ ಅದು ಪೂರ್ಣ ಸಮಿತಿಯಂತೆ ಕಾರ್ಯೋನ್ಮುಖವಾಯಿತು. ಕೆಲವೇ ದಿನಗಳಲ್ಲಿ ಅದು ಸಂಘಟಿಸಿದ ರಾಜ್ಯಮಟ್ಟದ ಸಮಾವೇಶಕ್ಕೆ ನಾಲ್ಕು ಸಾವಿರ ಮಂದಿ ಕನ್ನಡದ ಪದವೀಧರರು ಭಾಗವಹಿಸಿದರು. ಇದರಿಂದ ರಾಜ್ಯ ಸರ್ಕಾರಕ್ಕೆ ತಮ್ಮನ್ನು ನಿರ್ಲಕ್ಷಿಸಲಾಗದೆಂಬ ಸಂದೇಶ ರವಾನಿಸಿದಂತಾಯಿತು. ಆ ವೇಳೆಗೆ ಕನ್ನಡದ ಪರ ಹೋರಾಟಕ್ಕೆ ಹೊಸ ಬೇಡಿಕೆಗಳು ಹುಟ್ಟಿಕೊಂಡಿದ್ದವು. ಅವುಗಳಲ್ಲಿ ಪ್ರಮುಖವಾಗಿದ್ದುದು 'ಕರ್ನಾಟಕ ಲೋಕಸೇವಾ ಆಯೋಗ' ದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯುವುದಕ್ಕೆ ಅವಕಾಶ ಇರಬೇಕು ಎಂಬುದಾಗಿತ್ತು. ರಾಜ್ಯ ಏಕೀಕರಣವಾಗಿ (1956) ಅಂದಿಗೆ 23 ವರ್ಷಗಳಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಅವಕಾಶ ಇಲ್ಲವೆಂಬ ಸಂಗತಿ ಆಗಿನ ಹಿರಿಯ ಸಾಹಿತಿ ಕಲಾವಿದರ ಸಾಕ್ಷಿಪ್ರಜ್ಞೆಯನ್ನು ಬಡಿದೆಬ್ಬಿಸಿತು. ಐಎಎಸ್ ಅಧಿಕಾರಿಯಾಗಿದ್ದು ಕನ್ನಡಿಗರಲ್ಲಿ ಪ್ರೀತಿ ಗೌರವ ಪಡೆದಿದ್ದ ಸಿದ್ಧಯ್ಯ ಪುರಾಣಿಕರು ಈ ಕುರಿತು ಹೋರಾಟಕ್ಕೆ ಬೆಂಬಲ ಕೊಟ್ಟರು. ಮೈಸೂರಿನಿಂದ ದೇ.ಜವರೇಗೌಡರು ಆಗಮಿಸಿದರು. ಹಿರಿಯರಿಬ್ಬರ ನೇತೃತ್ವದಲ್ಲಿ 1979ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಎದುರು ನಡೆದ ಒಂದು ದಿನದ ಧರಣಿ ಸತ್ಯಾಗ್ರಹ ಎಷ್ಟು ಪರಿಣಾಮಕಾರಿ ಆಯಿತೆಂದರೆ ಹೈದರಾಬಾದ್ ಕರ್ನಾಟಕದ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ದೇವರಾಜ ಅರಸು ಅಲ್ಲಿದ್ದಾಗಲೇ ಕನ್ನಡದಲ್ಲಿ ಲೋಕಸೇವಾ ಆಯೋಗದ ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನಿಸಿದೆ ಎಂದು ಪ್ರಕಟಿಸಿದರು. ಸರ್ಕಾರದ ಪ್ರಕಟಣೆಯ ಆದೇಶವನ್ನು ಧರಣಿನಿರತ ಹಿರಿಯರಿಗೆ ಅದೇ ದಿನ ತಲುಪಿಸುವ ಸಜ್ಜನಿಕೆಯನ್ನು ದೇವರಾಜ ಅರಸು ಸರ್ಕಾರ ತೋರಿಸಿತ್ತು.

'ಕನ್ನಡ ಸಂಘರ್ಷ ಸಮಿತಿ' ನಂತರ ನಡೆಸಿದ್ದು ಕನ್ನಡ ಅಧ್ಯಯನ ಮಾಡಿದವರು ಜೀವನಕ್ಕಾಗಿ ಬೀದಿಯಲ್ಲಿ ಕುಳಿತು ಬೂಟ್ ಪಾಲಿಷ್ ಮಾಡುವ ಸ್ಥಿತಿಗೆ ಬಂದಿದ್ದಾರೆ ಎಂಬುದನ್ನು ಸಾಂಕೇತಿಕವಾಗಿ ತೋರಿಸುವ ಚಳವಳಿ. ಬೂಟ್ ಪಾಲಿಷ್ ಮಾಡುವುದು ಗೌರವದ ಕೆಲಸ ಎಂಬುದಲ್ಲಿ ನಮ್ಮಲ್ಲಿ ಗೊಂದಲ ಇರಲಿಲ್ಲ. ಅದನ್ನಾದರೂ ಮಾಡಿ ಹೊಟ್ಟೆ ಹೊರೆದುಕೊಳ್ಳುವ ಸ್ಥಿತಿ ಅನಿವಾರ್ಯವಾದರೆ ಕನ್ನಡದ ಅಧ್ಯಯನದ ಪಠ್ಯಕ್ರಮದಲ್ಲಿ ಬೂಟ್

ಪಾಲಿಷ್ ಮಾಡುವುದನ್ನು ಸೇರಿಸಬೇಕು ಎಂಬುದನ್ನು ಪರೋಕ್ಷವಾಗಿ ಸೂಚಿಸುವ ಚಳವಳಿ. ನಮ್ಮ ಈ ಚಳವಳಿಯ ಸೂಚನೆಗೆ ಪತ್ರಕರ್ತರು, ಸಾಹಿತಿಗಳು, ಕಲಾವಿದರಲ್ಲಿ ಎಷ್ಟು ಬೆಂಬಲ ವ್ಯಕ್ತವಾಯಿತೆಂದರೆ ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ ಅವರೇ ಬ್ರಶ್ ಹಿಡಿದು ಬೂಟ್ ಪಾಲಿಷ್ ಚಳವಳಿಯ ಉದ್ಘಾಟನೆಗೆ ನಿಂತರು. ಜಿ.ಎಸ್.ಶಿವರುದ್ರಪ್ಪ, ಪಿ.ಲಂಕೇಶ್ ಸೇರಿದಂತೆ ಗಣ್ಯ ಸಾಹಿತಿಗಳು ಸಕ್ರಿಯವಾಗಿ ಪಾಲುಗೊಂಡರು. ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಜನತಾ ಬಜಾರ್ ಎದುರಿಗೆ ಆರಂಭವಾದ ಬೂಟ್ ಪಾಲಿಷ್ ಕಾರ್ಯಕ್ರಮ ಕನ್ನಡ ಪರ ಹೋರಾಟಕ್ಕೆ ಹೊಸ ಆಯಾಮ ನೀಡಿತು. ಕನ್ನಡ ಪರ ಹೋರಾಟವನ್ನು ಅದುವರೆಗೆ ದೂರದಿಂದ ನೋಡುತ್ತಿದ್ದ ಸಾಹಿತ್ಯ ವಲಯ ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯ ಅಕಡೆಮಿಕ್ ವಲಯ ಸಕ್ರಿಯವಾಗಿ ಬೀದಿಗೆ ಇಳಿಯುವ ಮೂಲಕ ಕನ್ನಡದ ಪರ ನಿಂತರು. ದೂರದರ್ಶಿತ್ವ, ಸ್ವಂತಿಕೆ, ಭಾಷೆ ಸಂಸ್ಕೃತಿ ಕುರಿತ ಸ್ವತಂತ್ರ ನಿಲುವು ಇಲ್ಲದವರು ಅಧಿಕಾರ ಸೂತ್ರ ಹಿಡಿದರೆ ನಾಡಿನ ಸಾಮಾಜಿಕ ಬದುಕು ಎಷ್ಟು ನಾಜೂಕಿನ ಸ್ಥಿತಿ ಮುಟ್ಟುತ್ತದೆ ಎಂಬುದನ್ನು ಬುದ್ಧಿಜೀವಿ ವರ್ಗ ಅರ್ಥ ಮಾಡಿಕೊಂಡದ್ದನ್ನು ಪ್ರದರ್ಶಿಸಿತು ಆ ಕಾರ್ಯಕ್ರಮ.

ಕನ್ನಡ ಪರ ಹೋರಾಟಕ್ಕೆ ಮೌಲಿಕತೆಯನ್ನು ತಂದುಕೊಟ್ಟಿದ್ದ 'ಕನ್ನಡ ಸಂಘರ್ಷ ಸಮಿತಿ' ಯಲ್ಲಿ ನಂತರ ಸಕ್ರಿಯವಾಗಲು ನನಗೆ ವೃತ್ತಿ ಸಂಬಂಧದ ಕಾರಣ ಸಾಧ್ಯವಾಗಲಿಲ್ಲ. ಕಲ್ಲೂರು ಮೇಘರಾಜ, ಶಿವರಾಮೇಗೌಡ ನಾಗವಾರ ಅವರು ಬೆಂಗಳೂರು ತೊರೆಯಬೇಕಾಯಿತು. ಅದರ ಸ್ಥಾಪನೆಯ ಕಾಲಕ್ಕಿದ್ದ ಧ್ಯೇಯ ಧೋರಣೆಗಳು ನೇಪಥ್ಯಕ್ಕೆ ಸರಿದವು. ಅಲ್ಲಿಂದೀಚೆಗೆ ಕನ್ನಡ ಸಂಘರ್ಷ ಸಮಿತಿ ಅಸ್ತಿತ್ವದಲ್ಲಿದೆಯಾದರೂ ಅದರ ಸ್ವರೂಪ ಕಾರ್ಯಕ್ರಮಗಳು ಬೇರೆಯಾಗಿವೆ. 'ನಾಡು ನುಡಿಗೆ ಧಕ್ಕೆ ಬಂದಾಗ ಪ್ರತಿಭಟನೆಯ ಸಂಘಟಿಸುತ್ತೇವೆ. ಅದಕ್ಕಾಗಿ ಬೀದಿಗಿಳಿದು ಹೋರಾಟ ನಡೆಸುತ್ತೇವೆ' ಎಂದು ಹೇಳುವ ಸಮಿತಿಯ ಇಂದಿನ ಪದಾಧಿಕಾರಿಗಳು ವರ್ಷಕ್ಕೆ ಮೂರು ಕಾರ್ಯಕ್ರಮಗಳನ್ನು ಮಾಡುತ್ತಾರೆ. ಸಮಿತಿಯು ಈಗ ಕುವೆಂಪು ಜನ್ಮದಿನಕ್ಕೆ ಪ್ರಬಂಧ ಸ್ಪರ್ಧೆ. ಮಂ.ಗೋವಿಂದ ಪೈ ಅವರ ಜನ್ಮದಿನಕ್ಕೆ ಕವನ ಸ್ಪರ್ಧೆ ಮತ್ತು ಅನುಪಮಾ ನಿರಂಜನ ಜನ್ಮದಿನಕ್ಕೆ ಕಥಾ ಸ್ಪರ್ಧೆಗಳನ್ನು ನಡೆಸುತ್ತಿದೆ. ಅಕ್ಷರಮಟ್ಟಿಗೆ ಸಮಿತಿಯ ಆದ್ಯತೆಗಳು ಬದಲಾಗಿವೆ.

-ಕೃಪೆ: ಮಯೂರ

## ಕಂಗಾಲಾದ ಕನ್ನಡ ಸ್ನಾತಕರು

ಕನ್ನಡದಲ್ಲಿ ಎಂ.ಎ., ಪದವಿ ಪಡೆದ ನೂರಾರು ತರುಣ ತರುಣಿಯರು ಕಂಗಾಲು. ಅವರಿಗೆ ಉದ್ಯೋಗವೇ ಸಿಗುತ್ತಿಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಸಿಗುತ್ತಿರುವ ಮರ್ಯಾದೆ ಹೀಗೆ.

ಎಲ್ಲರಿಗೂ ಕಾಲೇಜುಗಳಲ್ಲಿ ಅಧ್ಯಾಪಕರಾಗಲು ಅವಕಾಶವಿಲ್ಲ. ಮೂರು ವಿಶ್ವವಿದ್ಯಾನಿಲಯಗಳಲ್ಲೂ ಪ್ರತಿವರ್ಷ ನೂರಾರು ಮಂದಿ ಪದವಿ ಪಡೆಯುತ್ತಾರೆ. ಹೊರ

ವ್ಯಾಸಂಗದಿಂದ ಪದವೀಧರರಾಗುವವರೂ ಉಂಟು. ಅವರಲ್ಲಿ ಬಹುಪಾಲು ಪದವೀಧರರಿಗೆ ಕೆಲಸವೇ ಸಿಗುತ್ತಿಲ್ಲ.

ಕನ್ನಡದ ಸ್ನಾತಕೋತ್ತರ ಪದವಿ ಪಡೆಯುವವರನ್ನು ಶಾಲೆಗಳಲ್ಲೂ ಕನ್ನಡ ಕಲಿಸಲು ನೇಮಿಸಿಕೊಳ್ಳುವುದಿಲ್ಲವಂತೆ. ಅವರಿಗೆ ಬಿ.ಎಡ್., ಆಗಲೇಬೇಕಂತೆ. ಇದೆಲ್ಲ ವಿಚಿತ್ರ ನಿಯಮ. ಕಾಲೇಜಿನಲ್ಲೂ ಇಲ್ಲ, ಶಾಲೆಯಲ್ಲೂ ಕೆಲಸ ಇಲ್ಲ. ಇತರ ಇಲಾಖೆಗಳಲ್ಲಿ? ಲೋಕಸೇವಾ ಆಯೋಗದ ಪರೀಕ್ಷೆಗಳು ಕನ್ನಡದಲ್ಲಿ ನಡೆಯುವುದಿಲ್ಲ. ಅಲ್ಲೂ ಈ ಪದವೀಧರರು ತಮ್ಮ ಅದೃಷ್ಟ ಪರೀಕ್ಷಿಸಿಕೊಳ್ಳುವುದೂ ಅಸಂಭವ.

ಅದಕ್ಕೇ ಈ ಪದವೀಧರರೆಲ್ಲ ಸೇರಿ ಕನ್ನಡ ರಾಜ್ಯೋತ್ಸವದಂದು "ಬೂಟ್ ಪಾಲಿಷ್" ಮಾಡಲಿದ್ದಾರೆ. ಇದೇನೋ ಸಾಂಕೇತಿಕ ಚಳವಳಿ. ಅವರ ಸಮಸ್ಯೆಯತ್ತ ಗಮನ ಸೆಳೆಯುವುದೇ ಗುರಿ. ಆಡಳಿತಗಾರರು ಸ್ವಲ್ಪವಾದರೂ ಇತ್ತ ಚಿತ್ತ ಹರಿಸಲಿ.

ಈಗಂತೂ ನವೆಂಬರ್ 1ರಿಂದ ಎಲ್ಲ ಹಂತಗಳಲ್ಲೂ ಕನ್ನಡ ಭಾಷೆಯ ಬಳಕೆ. ಇದು ಬರಿಯ ಪವಿತ್ರ ನಿರ್ಧಾರ ಆಗಿ ಉಳಿಯಬಾರದು. ಹಾಗಾದರೆ ಕನ್ನಡದಲ್ಲಿ ಎಂ.ಎ., ಪದವಿ ಪಡೆದವರೆಲ್ಲರಿಗೂ ಸರಕಾರದಲ್ಲೇ ಸಮಂಜಸ ಉದ್ಯೋಗ ಸಿಗಬೇಕು. ಇತರ ವಿಷಯದಲ್ಲಿ ಪಡೆದವರಿಗಿಂತ ಕನ್ನಡ ಪದವೀಧರರಿಗೇ ಆದ್ಯತೆ ಸಲ್ಲಲಿ. ಆಗ ಆಡಳಿತದಲ್ಲಿ ಕನ್ನಡದ ಬಳಕೆ ಸುಲಭ ಸಾಧ್ಯ.

ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಲು ಏನು ಅಡ್ಡಿ? ಇದಂತೂ ಅರ್ಥವೇ ಆಗದ ಸಮಸ್ಯೆ. ಕರ್ನಾಟಕದಲ್ಲಿ ಕನ್ನಡದಲ್ಲೇ ಈ ಪರೀಕ್ಷೆಗಳು ನಡೆಯುವುದು ಯುಕ್ತ. ಇತರ ರಾಜ್ಯಗಳು ಈ ವಿಷಯದಲ್ಲಿ ನಮಗಿಂತ ಮುಂದು. ಇತರ ವಿಷಯಗಳನ್ನು ಕಲಿತವರಿಗೆ ಆಸ್ಪದ ಇರಬಾರದೆಂದಲ್ಲ, ಅವುಗಳನ್ನೂ ಕನ್ನಡದಲ್ಲೇ ಕಲಿತು ಉತ್ತೀರ್ಣರಾದವರಿಗೆ ಪ್ರಾಶಸ್ತ್ಯ ಸಿಗಬೇಕು.

ಕನ್ನಡ-ಸಂಸ್ಕೃತಿ ನಿರ್ದೇಶನಾಲಯ ಇದೆ. ವಾರ್ತಾ ಇಲಾಖೆ ಇದೆ. ಈ ಎರಡೂ ಇಲಾಖೆಗಳಲ್ಲಿ ಕನ್ನಡ ಎಂ.ಎ., ಪದವೀಧರರಿಗೇ ಆದ್ಯತೆ ಸಿಗಲಿ. ಕೇರಳದಂಥ ರಾಜ್ಯದಲ್ಲಿ ಪ್ರತಿ ತಾಲ್ಲೂಕಿಗೂ ಒಬ್ಬ ಭಾಷಾಧಿಕಾರಿ ಇರುವರಂತೆ. ನಮ್ಮಲ್ಲೂ ಹಾಗೆಯೇ ಮಾಡಲಿ. ಈ ಪದವೀಧರರನ್ನೇ ಆ ಕೆಲಸಕ್ಕೆ ನೇಮಿಸಲಿ.

ಇಂದಿನ ವಿದ್ಯೆಯೇ ತಕ್ಕುದಲ್ಲ, ನಿರುದ್ಯೋಗ ಹೆಚ್ಚುತ್ತಲೇ ಹೋಗುತ್ತಿರುವ ಅರ್ಥ ವ್ಯವಸ್ಥೆ ನಮ್ಮ ಯೋಜನೆಗಳಲ್ಲೂ ಸಾಕಷ್ಟು ತಪ್ಪುಂಟು. ಇದನ್ನೆಲ್ಲ ನಿವಾರಿಸದೆ ಎಲ್ಲರಿಗೂ ಉದ್ಯೋಗ ನೀಡಿಕೆ ಅಸಾಧ್ಯ. ನಮ್ಮ ದೇಶದಲ್ಲಿ ನಿರುದ್ಯೋಗಿಗಳಿಗೆ ಭತ್ಯೆ ಕೊಡುವ ಸಾಮಾಜಿಕ ಭದ್ರತೆಯ ಕ್ರಮವೂ ಇಲ್ಲ.

ಕನ್ನಡ ಎಂ.ಎ., ಪದವೀಧರರೂ ಸರಕಾರೀ ಉದ್ಯೋಗಕ್ಕೇ ಕಾಯಬಾರದು. ಸ್ವಉದ್ಯೋಗ ನಿರತರಾಗಲು ಪ್ರಯತ್ನಿಸಬೇಕು. ತಾಯಿನುಡಿ ಕಲಿತದ್ದಕ್ಕೆ ಪಶ್ಚಾತ್ತಾಪ ಪಡಬೇಕಿಲ್ಲ, ಸದ್ಯದ ಸಂಕಟ ಪರಿಹಾರ ಆಗಿಯೇ ತೀರೀತು.

ಖಾದ್ರಿ ಶಾಮಣ್ಣ ಅವರ ಕನ್ನಡ ಪ್ರಭ ಸಂಪಾದಕೀಯ

14.10.79

# ಕನ್ನಡ ಜಾಗೃತಿಗೆ ಸ್ಪಷ್ಟ ನೆಲೆ

## ಮತ್ತೆ ಪ್ರಾರಂಭವಾದ ಚಳವಳಿ

ಕನ್ನಡವನ್ನು ಒಂದನೇ ತರಗತಿಯಿಂದ ಕಲಿಸುವ ಹೊಸ ಭಾಷಾಸೂತ್ರವು ಸಂವಿಧಾನ ವಿರೋಧಿ ಎಂದು ಅಲ್ಪಸಂಖ್ಯಾತರು ನ್ಯಾಯಾಲಯಕ್ಕೆ ಹೋಗಿ ತಡೆ ಆಜ್ಞೆ ತಂದರು. ಸರ್ಕಾರ ಈ ತಡೆ ಆಜ್ಞೆ ತೆರವು ಮಾಡಿಸಲಿಲ್ಲ. ಇದನ್ನು ಪ್ರತಿಭಟಿಸಿ ಬಳಗವು ಭಾಷಾಸೂತ್ರದ ಬಗ್ಗೆ ನ್ಯಾಯಾಲಯದಲ್ಲಿರುವ ತಡೆ ಆಜ್ಞೆಯನ್ನು ತೆರವು ಮಾಡಿಸುವ, ಸ್ವತಂತ್ರ ಕನ್ನಡ ದೂರದರ್ಶನಕ್ಕೆ ಒತ್ತಾಯಿಸುವ ಉದ್ದೇಶಗಳಿಂದ ಸರ್ಕಾರದ ಗಮನ ಸೆಳೆಯಲು ಗೋಪಾಲಗೌಡ ವೃತ್ತದ ಬಳಿ ನವೆಂಬರ್ 1, 1982ರಂದು ಸಾಕೇಂತಿಕ ಧರಣಿ ನಡೆಸಿತು. ಎಂ.ವಿ.ಸೀ., ಎಲ್.ಎಸ್.ಎಸ್., ಲಂಕೇಶ್, ಬರಗೂರು ರಾಮಚಂದ್ರಪ್ಪ ಸೇರಿದಂತೆ ಹಲವು ಗಣ್ಯ ಸಾಹಿತಿಗಳು ಧರಣಿದಲ್ಲಿ ಪಾಲ್ಗೊಂಡಿದ್ದರು.

ಜನಪರ ಚಳವಳಿಗಳ ಫಲಶ್ರುತಿಯಿಂದ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರವೂ ಕನ್ನಡದ ವಿಚಾರದಲ್ಲಿ ಹಿಂದಿನ ಸರ್ಕಾರಕ್ಕಿಂತ ಭಿನ್ನವಲ್ಲ ಎಂಬುದು ತಿಳಿ ಯಲು ಬಹಳ ದಿನ ಬೇಕಾಗಲಿಲ್ಲ. ಸರ್ಕಾರ ಕನ್ನಡ ಕಾರ್ಯಕರ್ತರ ಮೇಲಿನ ಮೊಕದ್ದಮೆ ಹಿಂದಕ್ಕೆ ಪಡೆಯಲಿಲ್ಲ. ಭಾಷಾಸೂತ್ರವನ್ನು ನ್ಯಾಯಾಲಯದಿಂದ ಮುಕ್ತಿಗೊಳಿಸುವ ಪ್ರಯತ್ನ ನಡೆಯಲೇ ಇಲ್ಲ. ಕನ್ನಡದ ಯಾವುದೇ ಸಮಸ್ಯೆ ಬಗೆಹರಿಯಲಿಲ್ಲ.

ಸರ್ಕಾರದ ಚಿತ್ತವನ್ನು ಕನ್ನಡದತ್ತ ಸೆಳೆಯಲು 28.3.83ರಂದು ಸಾಹಿತಿಗಳ ಕಲಾವಿದರ ಬಳಗವು ಮೌನ ಮೆರವಣಿಗೆ ನಡೆಯಿಸಿತು. ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಮೆರವಣಿಗೆ ಸ್ಥಳಕ್ಕೆ ಬಂದು ಕನ್ನಡ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಶೈಕ್ಷಣಿಕ ವರ್ಷ ಪ್ರಾರಂಭವಾದರೂ ಸರ್ಕಾರ ಕ್ರಿಯಾಶೀಲವಾಗದಿದ್ದರಿಂದ ಮೇ 25ರಂದು ಬಳಗದ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಭಾಷಾಸೂತ್ರದ ಅನುಷ್ಠಾನಕ್ಕೆ ಒತ್ತಾಯಿಸಿ 31.5.83ರ ಒಳಗೆ ಜಾರಿಗೊಳಿಸದಿದ್ದರೆ ಜೂನ್ 5ನೇ ತಾರೀಖಿನಿಂದ ಸರದಿ ಉಪವಾಸದ ಮೂಲಕ ಚಳವಳಿಯನ್ನು ಪುನರಾರಂಭಿಸಬೇಕಾಗುತ್ತದೆ ಎಂದು ಹೇಳಿದಾಗ, ಜೂನ್ 6ರಂದು ಸಂಪುಟದ ಸಭೆ ನಡೆಯಲಿದ್ದು ಅಂದು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವು ದಾಗಿ ತಿಳಿಸಿ ಚಳವಳಿಯನ್ನು ಮುಂದೂಡುವಂತೆ ಹೆಗಡೆಯವರು ತಿಳಿಸಿದರು.

## ಹುಸಿಯಾದ ಭರವಸೆ - ನಿರಶನ ಆರಂಭ

ಸರ್ಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಸಾಹಿತಿಗಳ ಕಲಾವಿದರ ಬಳಗವು 19.6.1983ರ ಭಾನುವಾರ ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆಯಲ್ಲಿ ಹೊರಟು ಗೋಪಾಲಗೌಡ ವೃತ್ತದ ಬಳಿ ನಿರ್ಮಿಸಿದ್ದ 'ಕನ್ನಡದ ಗುಡಿಸಲಿ'ನಲ್ಲಿ ಅನಿರ್ದಿಷ್ಟ ಸರದಿ ಉಪವಾಸವನ್ನು ಪ್ರಾರಂಭಿಸಿತು. ಮೊದಲ ದಿನ ಡಾ||ಎಂ.ಚಿದಾನಂದಮೂರ್ತಿ, ಕೋಡಿಹೊಸಹಳ್ಳಿ ರಾಮಣ್ಣ ಹಾಗೂ ಇತರರು ಧರಣಿಯಲ್ಲಿ ಪಾಲ್ಗೊಂಡಿದ್ದರು.

ಧರಣಕ್ಕೆ ಮುನ್ನ ನಡೆದ ಮೆರವಣಿಗೆಯಲ್ಲಿ ಎಲ್.ಎಸ್.ಶೇಷಗಿರಿರಾವ್, ಬರಗೂರು ರಾಮಚಂದ್ರಪ್ಪ, ಪಿ.ವಿ.ನಾರಾಯಣ, ಹಿ.ಮ.ನಾಗಯ್ಯ, ಜಿ.ಕೆ.ಸತ್ಯ, ಸುಮತೀಂದ್ರ ನಾಡಿಗ್, ಮಾವಿನಕೆರೆ ರಂಗನಾಥ್, ಜಾನುಪ್ರಿಯ, ದೊಡ್ಡರಂಗೇಗೌಡ ಮುಂತಾದ ಗಣ್ಯರು ಚಳವಳಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಬೆ.ರಾ.ನಾಗರಾಜ, ಮು.ಲೋಕನಾಥ, ರೆಹಮಾನ್ ಖಾನ್, ಜೆ.ಸಿ.ನಾರಾಯಣ, ಬಿ.ಸಿ.ಜಯರಾಂ, ಅಶೋಕ ಕಿಣಿ, ಅಶೋಕಬಾಬು, ಸಿದ್ಧಯ್ಯ, ವಲ್ಲಣ್ಣ ಮುಂತಾದವರೂ ಇದ್ದರು. ನಾನೂ ಅಂದಿನ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದೆ

ಚಳವಳಿಗೆ ಗೋಪಾಲಕೃಷ್ಣ ಅಡಿಗ, ಶ್ರೀರಂಗ, ಎಂ.ವಿ.ಸೀ., ಶಿವರುದ್ರಪ್ಪ, ಲಂಕೇಶರಂತಹ ಹಿರಿಯರು ಬೆಂಬಲ ಸೂಚಿಸಿ, ಈ ಚಳವಳಿಯನ್ನು ಕನ್ನಡ ಜನತೆ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಕನ್ನಡ ಸಂಘರ್ಷ ಸಮಿತಿ ಮಲ್ಲೇಶ್ವರದಲ್ಲಿ ಧರಣ ಪ್ರಾರಂಭಿಸುವ ಮೂಲಕ ಬೆಂಗಳೂರಿನ ಬಡಾವಣೆಗಳಿಗೆ ಧರಣ ವ್ಯಾಪಿಸಿತು. ದಿನದಿಂದ ದಿನಕ್ಕೆ 'ಕನ್ನಡ ಗುಡಿಸಲು' ಕನ್ನಡ ಕಾರ್ಯಕರ್ತರಿಗೆ ದೇಗುಲವಾಯಿತು. ಆದರೆ ಸರ್ಕಾರ ಮಾತ್ರ ಗಮನ ಕೊಡಲಿಲ್ಲ.

ಚಳವಳಿಯನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಜೂನ್ 26ರಂದು ರಾಜ್ಯಮಟ್ಟದ ಕನ್ನಡ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಕಾರ್ಯಕರ್ತರ ಬೃಹತ್ ಸಮಾವೇಶವು ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಬಳಗದ ಪ್ರಧಾನ ಸಂಚಾಲಕ ಪಿ.ವಿ.ನಾರಾಯಣರು ಆಶಯ ಭಾಷಣದಲ್ಲಿ ಭಾಷಾಸೂತ್ರದ ಜೊತೆಗೆ ಇತರ ಕನ್ನಡ ಸಮಸ್ಯೆಗಳನ್ನು ಈ ಚಳವಳಿ ತೆಗೆದುಕೊಳ್ಳಬೇಕೆಂದರು. ಸಭೆಯಲ್ಲಿ ಪಿ.ಲಂಕೇಶ್, ಸುಮತೀಂದ್ರ ನಾಡಿಗ್, ಚಿ.ಸು.ಕೃಷ್ಣಸೆಟ್ಟಿ ಮಹದೇವ ಪ್ರಕಾಶ್, ಕಟ್ಟೆ ಬಳಗದ ಸತ್ಯ, ಕ್ರೈಸ್ತಸಂಘದ ಪರೇರಾ, ಬಿ.ಇ.ಎಲ್.ನ ಸಿದ್ಧಯ್ಯ, ರೆಹಮಾನ್ ಖಾನ್ ಮಾತನಾಡಿದರು. ಸಭೆಯಲ್ಲಿ ಬರಗೂರು ರಾಮಚಂದ್ರಪ್ಪ, ಎಸ್.ದಿವಾಕರ್, ಕಪ್ಪಣ್ಣ ಹಿ.ಮ.ನಾಗಯ್ಯ, ಡಾ||ಶ್ರೀನಿವಾಸಗೌಡ, ಕೋಡಿಹೊಸಹಳ್ಳಿ ರಾಮಣ್ಣ ಸೇರಿದಂತೆ ಹಲವು ಪ್ರಮುಖ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಸಭೆಯಲ್ಲಿ ಸ್ವೀಕರಿಸಿದ ನಿರ್ಣಯಗಳು

1. ಗೋಕಾಕ್ ಭಾಷಾಸೂತ್ರಕ್ಕೆ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಯನ್ನು ತಕ್ಷಣವೇ ತೆರವು ಮಾಡಿಸಿ, ಈ ವರ್ಷದಿಂದಲೇ ಅದನ್ನು ಜಾರಿಗೆ ತರಬೇಕು. ಇಲ್ಲಿಯವರೆಗೆ ಹಿಂದಿನ ಮತ್ತು ಇಂದಿನ ಸರ್ಕಾರಗಳು ನಡೆಯಿಸಿಕೊಂಡು ಬಂದಿರುವ ವಿಳಂಬ ತಂತ್ರ ಸಂಪೂರ್ಣವಾಗಿ ಖಂಡನಾರ್ಹವಾಗಿದೆ.

2. ಕನ್ನಡವನ್ನು ಕಡ್ಡಾಯ ಆಡಳಿತ ಭಾಷೆಯಾಗಿ ಸರ್ಕಾರವು ಫೆಬ್ರವರಿ 15,1983ರಿಂದ ಘೋಷಿಸಿದ್ದರೂ, ಅದರ ಉಸ್ತುವಾರಿಗಾಗಿ ಕಾವಲು ಸಮಿತಿಯೊಂದನ್ನು ನೇಮಿಸಿದ್ದರೂ, ಯಾವುದೂ ಇನ್ನೂ ಕಟ್ಟುನಿಟ್ಟಾಗಿ ಜಾರಿಗೆ ಬಂದಿಲ್ಲ. ಈ ಮಧ್ಯೆ ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ಕಛೇರಿಗಳೊಡನೆ ವ್ಯವಹರಿಸುವಾಗ ಕನ್ನಡ ಪತ್ರದ ಜೊತೆ ಅದರ ಇಂಗ್ಲಿಷ್ ಅನುವಾದನ್ನೂ ಇಡಬೇಕೆಂದು ಸುತ್ತೋಲೆಯನ್ನು ಹೊರಡಿಸಿದೆ. ಆ ಸುತ್ತೋಲೆಯನ್ನು ತಕ್ಷಣ ವಾಪಸ್ ತೆಗೆದುಕೊಳ್ಳಬೇಕು. ಕರ್ನಾಟಕ ಲೋಕಸೇವಾ ಆಯೋಗದ ಎಲ್ಲ ಪರೀಕ್ಷೆಗಳು ಮತ್ತು ಇಲಾಖಾ ಪರೀಕ್ಷೆಗಳು ಕೇವಲ ಕನ್ನಡದಲ್ಲಿಯೇ ನಡೆಯಬೇಕೆಂದು ಈ ಸಭೆ ಒತ್ತಾಯಿಸುವುದಲ್ಲದೆ, ಯಾವುದೇ ರೀತಿಯಲ್ಲೂ ತನ್ನ ನಿಲುವನ್ನು ಬದಲಾಯಿಸಕೂಡದೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತದೆ. ಕನ್ನಡ ಮಾಧ್ಯಮದಲ್ಲಿ ಅಭ್ಯಸಿಸಿರುವ ಅಭ್ಯರ್ಥಿಗಳಿಗೆ ಸರ್ಕಾರದ ಉದ್ಯೋಗಗಳಲ್ಲಿ ಆದ್ಯತೆ ನೀಡಬೇಕು; ಹಾಗೂ ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಬೇಕು.

3. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗಗಳು ದೊರಕುತ್ತಿಲ್ಲವೆಂಬ ಸಕಾರಣವಾದ ಕೂಗು ಎಲ್ಲೆಲ್ಲೂ ಕೇಳಿ ಬರುತ್ತಿದೆ. ಬ್ಯಾಂಕುಗಳಲ್ಲಿ, ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಈ ಬಗ್ಗೆ ಇರುವ ಸಮಸ್ಯೆಯ ಸ್ವರೂಪ ಮತ್ತು ಪರಿಹಾರಗಳನ್ನು ಕುರಿತು ವಿಚಾರಣೆ ನಡೆಯಿಸಿ ಅಂತಿಮ ವರದಿಯನ್ನು ಕೊಡಲು ಒಂದು ಉನ್ನತ ಸಮಿತಿಯನ್ನು ಸರ್ಕಾರವು ರಚಿಸಿ, ಅದು ಒಂದು ತಿಂಗಳೊಳಗಾಗಿ ತನ್ನ ವರದಿಯನ್ನು ಸಲ್ಲಿಸುವಂತೆ ಮಾಡಬೇಕು. (ಆ ಸಮಿತಿ ಬೆಂಗಳೂರಿನಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿದರೂ ಸಾಕು.) ಕೇಂದ್ರ ಕಚೇರಿಗಳು, ಕಾರ್ಖಾನೆಗಳಲ್ಲಿ ಎಂಟನೂರು ರೂಪಾಯಿಗಳಿಗಿಂತ ಕಡಿಮೆ ಸಂಬಳದ ಉದ್ಯೋಗಗಳು ಸ್ಥಳೀಯರಿಗೇ ದೊರೆಯಬೇಕೆಂಬ ಕೇಂದ್ರ ಸರ್ಕಾರದ ಆದೇಶವು ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರವು ತನ್ನ ಪ್ರಭಾವವನ್ನು ಬೀರಬೇಕು.

4. ಯಾವುದೇ ಕಾರಣದಿಂದ ಇನ್ನು ಮುಂದೆ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಹೊಸದಾಗಿ ತೆರೆಯಲು ಅವಕಾಶ ಕೊಡದೆ ಕಾಲಕ್ರಮೇಣ ಈಗಿರುವ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಬೇಕು.

5. ಕೇಂದ್ರ ಸರ್ಕಾರವು ಒಪ್ಪಿಕೊಂಡಿರುವಂತೆ ಇನ್ನು ಒಂದು ತಿಂಗಳೊಳಗಾಗಿ ಬೆಂಗಳೂರು ದೂರದರ್ಶನ ಕೇಂದ್ರದಿಂದ ಸ್ವತಂತ್ರ ಕನ್ನಡ ಕಾರ್ಯಕ್ರಮಗಳ ಪ್ರಸಾರ ಪ್ರಾರಂಭವಾಗದಿದ್ದರೆ ಬೆಂಗಳೂರಿನ ಮರುಪ್ರಸಾರವನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಸ್ಪಷ್ಟವಾಗಿ ಹೇಳಬೇಕು; ಬೆಂಗಳೂರಿಗೆ ಷಾರ್ಟ್‌ವೇವ್ ಆಕಾಶವಾಣಿ ಬೇಗ ಲಭ್ಯವಾಗುವಂತೆ ಕೇಂದ್ರದ ಮೇಲೆ ಒತ್ತಾಯ ತರಬೇಕು.

6. ಪೋಪ್ ಜಗದ್ಗುರುಗಳು ನೇಮಿಸಿದ ಆರ್ಚ್‌ಬಿಷಪ್‌ಗಳ ಅತ್ಯುನ್ನತ ಆಯೋಗವು ಕೊಟ್ಟ ತೀರ್ಪಿನ ಮೇಲೆ ಬೆಂಗಳೂರಿನ ಆರ್ಚ್‌ಬಿಷಪ್ ಅವರು ತಮ್ಮ ಧರ್ಮಪ್ರಾಂತದ ಭಾಷಾನೀತಿಯನ್ನು ಒಂದು ಸುತ್ತೋಲೆಯ (3:83, 24-2-1983) ಮೂಲಕ ಪ್ರಕಟಿಸಿ ಅದನ್ನು ಜಾರಿಗೆ ತರಲು ಕಂಕಣಬದ್ಧರಾಗಿದ್ದಾರೆ. ಅವರು ಜಾರಿಗೆ ತರಲು ಅನುಕೂಲ ವಾತಾವರಣವನ್ನು ಕರ್ನಾಟಕ ಸರ್ಕಾರ ನಿರ್ಮಿಸಬೇಕೇ ಹೊರತು ಈ ವಿಷಯದಲ್ಲಿ ಅನಗತ್ಯವಾಗಿ ದುಡುಕಬಾರದು.

7. ಕರ್ನಾಟಕ ಸರ್ಕಾರ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೊರಗಿನವರನ್ನು ಆಹ್ವಾನಿಸದೆ ಕರ್ನಾಟಕದ ಕಲಾವಿದರನ್ನೇ ಕರೆಯಬೇಕು.

ಈ ಬೇಡಿಕೆಗಳನ್ನು ಕರ್ನಾಟಕ ಸರ್ಕಾರವು ಒಪ್ಪಿ ಅವುಗಳನ್ನು ಜುಲೈ ಐದನೇ ತಾರೀಕಿನೊಳಗೆ ಕಾರ್ಯಗತ ಮಾಡದಿದ್ದರೆ, ಅಂದಿನಿಂದ ಚಳವಳಿಯನ್ನು ತೀವ್ರಗೊಳಿಸಲಾಗುವುದೆಂದೂ, ಅಲ್ಲಿಯವರೆಗೆ ಕನ್ನಡ ಗುಡಿಸಿಲಿನಲ್ಲಿ ಸರದಿ ಉಪವಾಸ ಮುಂದುವರೆಯುವುದೆಂದೂ ಡಾ||ಎಂ.ಚಿದಾನಂದಮೂರ್ತಿ ತಿಳಿಸಿದರು.

## ಜಿ.ಕೆ.ಸತ್ಯ ಅವರಿಂದ ಅನಿರ್ದಿಷ್ಟ ನಿರಶನ

ಈ ಚಳವಳಿಯನ್ನು ಬೆಂಬಲಿಸಿ ಧಾರವಾಡದಲ್ಲಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ನಿರಶನವನ್ನು ಪ್ರಾರಂಭಿಸಿತು. ಬೆಂಗಳೂರಿನಲ್ಲಿ ಪಾದಚಾರಿ ವ್ಯಾಪಾರಿಗಳು, ವಿದ್ಯಾರ್ಥಿಗಳು, ಕಾರ್ಮಿಕರು ಪ್ರತಿದಿನ ಮೆರವಣಿಗೆ ಪ್ರಾರಂಭಿಸಿದರು. ಕೊಟ್ಟ ಗಡುವು ಮುಗಿಯುತ್ತಾ ಬಂದಾಗಲೂ ಸರ್ಕಾರ ಕಾರ್ಯಪ್ರವೃತ್ತವಾಗಲಿಲ್ಲ. ಬಳಗವು ಚಳವಳಿಯನ್ನು ತೀವ್ರಗೊಳಿಸುವ ಕ್ರಮದ ಮೊದಲ ಹಂತವಾಗಿ ಅದರ ಪ್ರಧಾನ ಸಂಚಾಲಕರಲ್ಲೊಬ್ಬರಾದ ಹಿರಿಯ ಕಲಾವಿದ, ಪತ್ರಕರ್ತ ಜಿ.ಕೆ.ಸತ್ಯ ಅವರು 6-7-83ರಿಂದ ಅನಿರ್ದಿಷ್ಟ ಅವಧಿಯ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಲು ನಿರ್ಧರಿಸಿದರು. ರಾಜ್ಯಮಟ್ಟದ ಸಮಾವೇಶವಾದ ಮೇಲೆ ಸಚಿವರುಗಳಾದ ಬೊಮ್ಮಾಯಿ, ರಾಚಯ್ಯ, ರಘುಪತಿ ಅವರುಗಳು ನಿರಶನ ಸ್ಥಳಕ್ಕೆ ಬಂದು ಚಳವಳಿ ನಿಲ್ಲಿಸುವಂತೆ ಕೋರಿದರು. ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳದಿದ್ದುದರಿಂದ 6ರ ಭಾನುವಾರ ಜಿ.ಕೆ.ಸತ್ಯ ಅನಿರ್ದಿಷ್ಟ ನಿರಶನ ಆರಂಭಿಸಿದರು.

ಚಳವಳಿಗೆ ಬೆಂಬಲ ಸೂಚಿಸಿ ಕಟ್ಟೆ ಬಳಗದ ಸತ್ಯನಾರಾಯಣ, ಸುಧೀಂದ್ರ, ರಮೇಶಬಾಬೂ ಸೇರಿದಂತೆ 10 ಜನ ಯುವಕರು ನರಸಿಂಹರಾಜ ಕಾಲೋನಿಯಿಂದ ಕನ್ನಡ ಗುಡಿಸಲಿನವರೆಗೆ 4 ಮೈಲಿಗಳು ಉರುಳುಸೇವೆ ಮಾಡಿದರು.

ಜುಲೈ 7ರಂದು ಮುಖ್ಯಮಂತ್ರಿಗಳು ಹೋರಾಟಗಾರರನ್ನು ಆಹ್ವಾನಿಸಿ ಬಹುತೇಕ ಬೇಡಿಕೆಗಳನ್ನು ಕಾರ್ಯಗತಗೊಳಿಸುವ ಭರವಸೆಯನ್ನು ನೀಡಿದರು. ಆದರೆ ನಿಯೋಗವು 10ನೇ ತಾರೀಕು ಮೈಸೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಮಾವೇಶದಲ್ಲಿ ಚರ್ಚಿಸಿದ ನಂತರವೇ ಅಂತಿಮ ತೀರ್ಮಾನಕ್ಕೆ ಬರುವುದಾಗಿ ತಿಳಿಸಿತು. ಈ ಸಮಾಲೋಚನಾ ಸಭೆಯಲ್ಲಿ ಮೈಸೂರು ಕನ್ನಡ ಕ್ರಿಯಾಸಮಿತಿಯ ಅಧ್ಯಕ್ಷ ಪ.ಮಲ್ಲೇಶ ಅವರು ಪಾಲ್ಗೊಂಡಿದ್ದರು. ಮೈಸೂರಿನ ಸಮಾವೇಶಕ್ಕೆ ಬೆಂಗಳೂರಿನಿಂದ ಒಂದು ಬಸ್ಸಿನಲ್ಲಿ ಕಾರ್ಯಕರ್ತರು ತೆರಳಿದರು. ಮೈಸೂರಿನ ಸಭೆಯ ನಿರ್ಣಯ ಹಾಗೂ ನಾಡಿನ ಗಣ್ಯರ ಮನವಿಯನ್ನು ಪರಿಗಣಿಸಿ, ಜಿ.ಎಸ್.ಶಿವರುದ್ರಪ್ಪ ಪ್ರಜಾವಾಣಿ ಎಂ.ಬಿ.ಸಿಂಗ್ ನಿರಶನ ನಿಲ್ಲಿಸುವಂತೆ ಕೋರಿ, ನೀಡಿದ ಹಣ್ಣಿನ ರಸವನ್ನು ಸೇವಿಸಿದ ಸತ್ಯ ಸಂಘಟನೆಯ ಶಿಸ್ತಿಗೆ ಬದ್ಧರಾಗಿ ತಮ್ಮ ಆರು ದಿನಗಳ ನಿರಶನವನ್ನು ನಿಲ್ಲಿಸುತ್ತಿರುವುದಾಗಿ 11.7.83ರಂದು ಪ್ರಕಟಿಸಿದರು.

ಬಳಗದ 22 ದಿನಗಳ ಸರದಿ ಉಪವಾಸವನ್ನು ಹೆಗಡೆ ಅವರು ಕಾಲಾವಕಾಶ ಕೇಳಿರುವುದರಿಂದ ಜುಲೈ 25ರವರೆಗೆ ಮುಂದುವರಿಸುವುದಾಗಿಯೂ ನಂತರ ಬೇಡಿಕೆಗಳು ಈಡೇರದಿದ್ದರೆ ಚಳವಳಿಯನ್ನು ತೀವ್ರಗೊಳಿಸಬೇಕೆಂದೂ ಸಭೆ ನಿರ್ಣಯಿಸಿತು.

ಸರದಿ ಉಪವಾಸ ಮುಂದುವರೆಯಿತು. ಬಳಗದ ಶಿಸ್ತುಬದ್ಧ ಚಳವಳಿಗೆ ಸರ್ಕಾರ ಮಣಿಯಿತು. ಏಳು ಹಕ್ಕೊತ್ತಾಯಗಳಲ್ಲಿ ಐದನ್ನು ಒಪ್ಪಿತು. 48 ದಿನಗಳ ಅನಿರ್ದಿಷ್ಟ ಚಳವಳಿ 6.8.83ರಂದು ನಿಂತಿತು. ಈ ಸರದಿ ಉಪವಾಸದಲ್ಲಿ 425 ಮಂದಿ ಪಾಲ್ಗೊಂಡಿದ್ದರು. ಬಿ.ಇ.ಎಲ್.ನ ವಲ್ಲಣ್ಣ ನಿರಂತರ 48 ಗಂಟೆಗಳು, ಬೆ.ರಾ.ನಾಗರಾಜ್, ರಾ.ನಂ.ಚಂದ್ರಶೇಖರ ಎರಡು ದಿನ ಉಪವಾಸ ಮಾಡಿದರು. ಈ ಚಳವಳಿಯ ಪರಿಣಾಮವಾಗಿ ಮಹಿಷಿ ಆಯೋಗ ನೇಮಕವಾಯಿತು.

## 'ಕನ್ನಡ ದೂರದರ್ಶನ' - ದಶಕದ ಯಶಸ್ವಿ ಹೋರಾಟ

1981ರಲ್ಲಿ ಪ್ರಾರಂಭವಾದ ಬೆಂಗಳೂರು ದೂರದರ್ಶನ ಮರುಪ್ರಸಾರ ಕೇಂದ್ರದಿಂದ ಕನ್ನಡಿಗರ ಮೇಲೆ ತಮಿಳು, ಮರಾಠಿ ಮತ್ತು ಹಿಂದಿಯನ್ನು ಬಲವಂತವಾಗಿ ಹೇರಲಾಯಿತು. 'ರಾಜ್ಯೋತ್ಸವ'ದ ಕೊಡುಗೆಯಾಗಿ ಕನ್ನಡವಿಲ್ಲದ ದೂರದರ್ಶನ ಕೇಂದ್ರವನ್ನು ನೀಡಿದ ಕೇಂದ್ರ ಸರ್ಕಾರದ ನಿಲುವನ್ನು ಕನ್ನಡಪರ ಸಂಘಟನೆಗಳು ಖಂಡಿಸಿದವು. 'ಗೋಕಾಕ್ ಚಳವಳಿ' ಕಾಲದಲ್ಲಿ ಕನ್ನಡ ದೂರದರ್ಶನಕ್ಕೆ ಒತ್ತಾಯಿಸಲಾಯಿತು. ನಂತರ ಸಾಹಿತಿಗಳ ಕಲಾವಿದರ ಬಳಗವು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ಶಾಶ್ವತ ವ್ಯವಸ್ಥೆಯಾಗುವವರೆಗೆ ಓ.ಬಿ.ವ್ಯಾನ್‌ಗಳ ಮೂಲಕ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲು ತುರ್ತುಕ್ರಮ ಕೈಗೊಳ್ಳಬೇಕೆಂದೂ, ಮಾರ್ಚಿ 83ರ ಒಳಗೆ ಕ್ರಮ ಕೈಗೊಳ್ಳದಿದ್ದರೆ, ಕನ್ನಡ ಸಾಹಿತಿಗಳು, ಕಲಾವಿದರು ಆಕಾಶವಾಣಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವರು ಎಂದು ಎಚ್ಚರಿಸಿತು.

### ಸಾಹಿತಿಗಳು ಕಲಾವಿದರಿಂದ ಆಕಾಶವಾಣಿ ಕಾರ್ಯಕ್ರಮಗಳಿಗೆ ಬಹಿಷ್ಕಾರ

ಕನ್ನಡಿಗರ ಬಗ್ಗೆ ಕೇಂದ್ರವು ತೋರುತ್ತಿರುವ ಅವಜ್ಞೆ ಮತ್ತು ನಿಲ್ಲದ ಅನ್ಯಭಾಷಾ ಕಾರ್ಯಕ್ರಮಗಳನ್ನು ಪ್ರತಿಭಟಿಸಿ ಕುವೆಂಪು, ಗೋಕಾಕ್, ಪುತಿನ, ಶ್ರೀರಂಗ, ಅನಂತಮೂರ್ತಿ, ಲಂಕೇಶ, ವೈಕುಂಠರಾಜು, ಚಿದಾನಂದಮೂರ್ತಿ, ಕಲಬುರ್ಗಿ ಸೇರಿದಂತೆ ಬಹಳಷ್ಟು ಸಾಹಿತಿಗಳು-ಕಲಾವಿದರು ಆಕಾಶವಾಣಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ಪತ್ರಕ್ಕೆ ಸಹಿ ಹಾಕಿದರು. ಈ ಕಾರ್ಯ ಮಾಡಿದ್ದು ಬಳಗವೇ. ಈ ಮನವಿ ಪತ್ರ ಸಿದ್ಧಪಡಿಸಿ ಸಹಿ ಪಡೆಯಲು ಬಳಗ ಪಟ್ಟ ಪ್ರಯತ್ನ ಅಗಾಧವಾದುದ್ದು. ಬಂಡಾಯ ಸಾಹಿತ್ಯ ಸಂಘಟನೆ, ಹಲವು ನಾಟಕ ತಂಡಗಳು ಬಹಿಷ್ಕಾರಕ್ಕೆ ಬೆಂಬಲ ಸೂಚಿಸಿದವು. ಚಳವಳಿಗೆ ತೀವ್ರತೆ ತರುವ ನಿಟ್ಟಿನಲ್ಲಿ ದೂರದರ್ಶನ ಗೋಪುರದ ಎದುರು 13.4.83ರಂದು ಬೃಹತ್ ಧರಣವನ್ನು ಬಳಗವು ವ್ಯವಸ್ಥೆ ಮಾಡಿತು. ನಂತರ ಭಾಷಾಸೂತ್ರಕ್ಕೆ ಒತ್ತಾಯಿಸಿ ನಡೆದ 49 ದಿನಗಳ ಚಳವಳಿ ಸಂದರ್ಭದಲ್ಲಿ ಇದ್ದ ಏಳು ಹಕ್ಕೊತ್ತಾಯಗಳಲ್ಲಿ ಕನ್ನಡ ದೂರದರ್ಶನವೂ ಸೇರಿತ್ತು.

### 'ಎಂಜಲು ಟಿವಿ ಉಗಿದು ಬಿಡಿ; ಕನ್ನಡ ಟಿವಿ ತಂದುಕೊಡಿ'

ಕೇಂದ್ರ ಸರ್ಕಾರವು ಅಪೇಕ್ಷಿಸಿದ ಎಲ್ಲ ನೆರವನ್ನು ರಾಜ್ಯಸರ್ಕಾರವು ನೀಡಿದ್ದರೂ ಕನ್ನಡ ಕಾರ್ಯಕ್ರಮಗಳ ಪ್ರಸಾರ ಮುಂದೂಡುತ್ತಾ ಹೋಗುತ್ತಿರುವುದನ್ನು ರಾಜ್ಯ ಸರ್ಕಾರ

ಪ್ರತಿಭಟಿಸಬೇಕು; ಆಗಸ್ಟ್ 15ರೊಳಗೆ ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡದಿದ್ದರೆ, ಎಲ್ಲಾ ಮರು ಪ್ರಸಾರಗಳನ್ನು ನಿಲ್ಲಿಸಬೇಕು ಎಂದು ಕೇಂದ್ರಕ್ಕೆ ಸ್ಪಷ್ಟವಾಗಿ ಹೇಳಬೇಕು ಎಂಬ ಅಭಿಪ್ರಾಯವನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಒಪ್ಪಿ ಕೇಂದ್ರಕ್ಕೆ ಪತ್ರ ಬರೆದರು. ಸರ್ಕಾರಗಳ ಮೇಲೆ ಇನ್ನೂ ಒತ್ತಡ ತರುವ ಉದ್ದೇಶದಿಂದ 'ಎಂಜಲು ಟಿವಿ ಉಗಿದುಬಿಡಿ; ಕನ್ನಡ ಟಿವಿ ತಂದುಕೊಡಿ' ಎಂಬ ಘೋಷಣೆಯೊಡನೆ ಮರುಪ್ರಸಾರ ಕೇಂದ್ರ ಮುಂದೆ ಬಳಗವು ಪ್ರತಿದಿನ ಪ್ರತಿಭಟನೆಯನ್ನು ಆರಂಭಿಸಿತು. ಮುಖ್ಯಮಂತ್ರಿಗಳು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರ ಮಾತು ನಂಬಿ ಆಗಸ್ಟ್ 15ರಂದು ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ ಎಂದರು. ಕನ್ನಡ ಪ್ರಸಾರವಾಗದಿದ್ದರೆ 'ಪ್ರಧಾನಿಯವರ ಸ್ವಾತಂತ್ರ್ಯೋತ್ಸವ ಭಾಷಣ'ವನ್ನು ತಡೆಯುವುದಾಗಿ ಬಳಗವು ಪ್ರಕಟಿಸಿತು.

## ಪ್ರಧಾನಿ ಪ್ರಸಾರ ಭಾಷಣ ತಡೆದ ಧೀರ ಕನ್ನಡ ಕಾರ್ಯಕರ್ತರು

ಸ್ವಾತಂತ್ರ್ಯೋತ್ಸವ ಸಮೀಪಿಸಿದರೂ ಬೆಂಗಳೂರಿನಿಂದ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುವ ಸೂಚನೆ ಕಾಣದಿದ್ದಾಗ ಸಾ.ಕ.ಬಳಗವು ಆಗಸ್ಟ್ 15ನ್ನು 'ಕರಾಳದಿನ'ವನ್ನಾಗಿ ಆಚರಿಸಲು ನಿರ್ಧರಿಸಿತು. ಅಂದು ನಡೆದ ಪ್ರತಿಭಟನೆಯಲ್ಲಿ ಅನೇಕ ಸಾಹಿತಿಗಳು ಕಲಾವಿದರು ಸೇರಿದ್ದರು. ಸರ್ಕಾರದ ಮೇಲೆ ತೀವ್ರ ಒತ್ತಡ ತರಬೇಕಾದರೆ ಉಗ್ರಕ್ರಮ ಅನಿವಾರ್ಯ ಎಂದು ಅರಿತಿದ್ದ ಬಳಗದ ಕಾರ್ಯಕರ್ತರು 14ರ ಇಡೀ ರಾತ್ರಿ ಹಲವು ಯೋಜನೆಗಳನ್ನು ನಡೆಸಿದರು. ಜಿ.ಸಿ.ನಾರಾಯಣ ಮುಂತಾದವರು ರಾತ್ರಿಯೆಲ್ಲ ಕಾರಿನಲ್ಲಿ ಕೂತು ಸಂಚು ಮಾಡಿದರು. ಯೋಜನೆ ಕೈಕೊಟ್ಟಿತು. ಆಗ ದೂರದರ್ಶನ ಕೇಂದ್ರಕ್ಕೆ ವಿದ್ಯುತ್ ಸರಬರಾಜನ್ನು ತಡೆಯುವ ಸಾಹಸವನ್ನು ಬೆ.ರಾ.ನಾಗರಾಜ, ಗೋಪಿನಾಥ್, ಸತ್ಯನಾರಾಯಣರಾವ್ ಮಾನೆ ಮತ್ತು ರಘುಕುಮಾರ್‌ರವರು ಮಾಡಿದರು. ಅವರು ಪಕ್ಕದಲ್ಲೇ ಇದ್ದ ವಿದ್ಯುತ್ ಸರಬರಾಜು ನಿಯಂತ್ರಣ ಕೊಠಡಿಗೆ ಹೋಗಿ 'ಸ್ವಿಚ್ ಆಫ್' ಮಾಡಿದರು. ಇಂದಿರಾಗಾಂಧಿ ಭಾಷಣ ದೂರದರ್ಶನದಲ್ಲಿ ಪ್ರಸಾರವಾಗಲಿಲ್ಲ. ಕೊಠಡಿ ಬಾಗಿಲು ಒಡೆದು ಕನ್ನಡ ಕಾರ್ಯಕರ್ತರನ್ನು ಬಂಧಿಸಿದರು. ಇದು ಕಾರ್ಯಕರ್ತರ ಕನ್ನಡ ಪ್ರೇಮ, ಧೈರ್ಯದಿಂದ ಸಾಧ್ಯವಾಯಿತು. ನಂತರ ಅಂದು ಸಂಜೆ ಪ್ರಸಾರವಾಗಬೇಕಿದ್ದ ತಮಿಳುನಾಡು ಮುಖ್ಯಮಂತ್ರಿ ಎಂ.ಜಿ.ಆರ್. ಭಾಷಣವನ್ನು ಶ.ಅಶೋಕಬಾಬು ತಂಡ (ಕಾರ್ಯಕರ್ತರ ಹೆಸರು ಸಿಗುತ್ತಿಲ್ಲ) ಯಶಸ್ವಿಯಾಗಿ ತಡೆಯಿತು. ಅಂದೇ ಮಾಲೂರು ಬಳಿ ಟೆಲಿಲಿಂಕ್‌ನ್ನು ಕಡಿದುದರಿಂದ ಇಡೀ ದಕ್ಷಿಣ ಭಾರತಕ್ಕೆ ಕೆಲವು ಕ್ಷಣ ಕಾರ್ಯಕ್ರಮ ಪ್ರಸಾರವಾಗಲಿಲ್ಲ. ಈ ಘಟನೆ ರಾಷ್ಟ್ರಾದ್ಯಂತ ದೊಡ್ಡ ಸುದ್ದಿ ಆಯಿತು. 17.8.83ರ 'ಕನ್ನಡಪ್ರಭ'ದ ಸಂಪಾದಕೀಯದಲ್ಲಿ 'ಭಲರೇ ಭಲಾ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿ ಕನ್ನಡ ಕಾರ್ಯಕರ್ತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಸಂಪಾದಕ ಖಾದ್ರಿ ಶಾಮಣ್ಣನವರ ಕನ್ನಡ ಪ್ರೇಮ ಅಪೂರ್ವವಾದದ್ದು. 'ಕನ್ನಡ ಚಳವಳಿ' ಬೆಳೆಯಲು ಅವರ ಬರವಣಿಗೆ

ನೆರವಾಯಿತು. ಈ ತಡೆಗೆ ದೂರದರ್ಶನ ಅಧಿಕಾರಿಯಾಗಿದ್ದ ಆರ್.ಎಸ್.ಎನ್.ಗೌಡರ ಸಲಹೆ, ನೆರವು ಮುಖ್ಯ ಕಾರಣ ಎಂಬುದು ಮರೆಯುವಂತಹದ್ದಲ್ಲ. ಈ ಪ್ರತಿಭಟನೆಯಿಂದ ನವೆಂಬರ್ ಒಂದರಿಂದ ಬೆಂಗಳೂರು ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದೆಂದು ಕೇಂದ್ರ ವಾರ್ತಾ ಸಚಿವ ಎಚ್.ಕೆ.ಎಲ್.ಭಗತ್ ತಿಳಿಸಿದರು.

ರಾಜ್ಯ ಸರ್ಕಾರದ ಪಿತೂರಿ, ಪ್ರಚೋದನೆಯಿಂದ ದೂರದರ್ಶನ ಕಾರ್ಯಕ್ರಮಗಳನ್ನು ಕನ್ನಡ ಕಾರ್ಯಕರ್ತರು ಸ್ಥಗಿತಗೊಳಿಸಿದರು ಎಂದು ವಿರೋಧಪಕ್ಷದ ನಾಯಕ ವೀರಪ್ಪ ಮೊಯಿಲಿ ಸದನದಲ್ಲಿ ಹೇಳಿದರು. ಈ ಹೇಳಿಕೆಯಿಂದ ಕೆರಳಿದ ಬಳಗದ ಕಾರ್ಯಕರ್ತರು ವಿಧಾನಸೌಧದ ಮುಂದೆಯೇ ಮೊಯಿಲಿ ಅವರ ಭೂತದಹನ ಮಾಡಿ ಪೊಲೀಸರ ಬಂಧನಕ್ಕೊಳಗಾದರು. ಕನ್ನಡಿಗರ ಹಿತರಕ್ಷಣೆಗೆ ಹೋರಾಡಲು ಸರ್ಕಾರ ಹಿಂಜರಿಯದು ಎಂದು ಸರ್ಕಾರದ ಪರವಾಗಿ ಸಚಿವ ಬೊಮ್ಮಾಯಿ ತಿಳಿಸಿದರು.

ಕೇಂದ್ರ ಸರ್ಕಾರದ ಅಧಿಕೃತ ಹೇಳಿಕೆ ಬರದಿದ್ದಾಗ ಸಾಹಿತಿಗಳ ಕಲಾವಿದರ ಬಳಗದವರು 24.9.83ರಂದು ಬೃಹತ್ ಧರಣವನ್ನು ನಡೆಸಿದರು. ಚಳವಳಿ ಜನರ ಗಮನ ಸೆಳದಂತೆ ಕೇಂದ್ರ ಸಚಿವರು ಬೆಂಗಳೂರಿಗೆ ಬಂದರು.

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಮಂತ್ರಿ ಎಚ್.ಕೆ.ಎಲ್.ಭಗತ್ ಬೆಂಗಳೂರಿನಲ್ಲಿ 12.10.83ರಂದು ಒಂದು ಪ್ರಾತಿನಿಧಿಕ ಸಭೆ ಕರೆದು ಈ ನಿಟ್ಟಿನಲ್ಲಿ ಚರ್ಚಿಸಿದರು. ಆ ಸಂದರ್ಭದಲ್ಲಿ ಕೆಲವು ಸಾಹಿತಿಗಳು ಸ್ಪಷ್ಟವಾಗಿ ಏನೂ ಹೇಳದೆ ಸುಮ್ಮನಿದ್ದರು. ಪಿ.ವಿ.ನಾರಾಯಣ, ಜಿ.ಕೆ.ಸತ್ಯ ಸಮರ್ಥವಾಗಿ ಕನ್ನಡ ದೂರದರ್ಶನದ ಅಗತ್ಯವನ್ನು ಪ್ರತಿಪಾದಿಸಿದರು. ಇದಕ್ಕೂ ಮುನ್ನ ಸಚಿವರು ದೂರದರ್ಶನ ಕೇಂದ್ರಕ್ಕೆ ಪ್ರಗತಿಯನ್ನು ಪರಿಶೀಲಿಸಲು ಬಂದಾಗ ಬಳಗವು ಮನವಿ ಅರ್ಪಿಸಿತು. ಆ ಸಂದರ್ಭದಲ್ಲಿ ಕಾರ್ಯಕರ್ತರು ಮುಗಿಲು ಮುಟ್ಟುವ ಘೋಷಣೆ ಕೂಗಿದರು. ಸಚಿವರು ಕಾರು ತಡೆದರು. ಪೊಲೀಸರು ಕಾರು ಚಲಿಸಲು ದಾರಿ ಮಾಡಿದಾಗ ಚಲಿಸುವ ಕಾರನ್ನೇ ಹಿಡಿದು ನಿಂತ ಬಿ.ಸಿ.ಜಯರಾಂರವರ ಸಾಹಸ ಮರೆಯಲು ಸಾಧ್ಯವಿಲ್ಲದ್ದು.

ಬೆಂಗಳೂರಿನಿಂದ ದೆಹಲಿಗೆ ಹೊರಡುವ ಮುನ್ನ ಸಚಿವ ಭಗತ್‌ರವರು ನವೆಂಬರ್ 19ರಿಂದ ಕನ್ನಡದಲ್ಲಿ ದೂರದರ್ಶನ ಪ್ರಸಾರ ಪ್ರಾರಂಭವಾಗುವುದೆಂದರು. ಸಚಿವರ ಮಾತು ಜಾರಿಗೆ ಬಂತು. ಪ್ರತಿದಿನ ಅರ್ಧ ಘಂಟೆಯ ಕನ್ನಡ ಕಾರ್ಯಕ್ರಮಗಳು ಬೆಂಗಳೂರಿನಿಂದ ಬಿತ್ತರಗೊಳ್ಳಲು ಪ್ರಾರಂಭವಾದವು.

### ವಿಫಲ ಯತ್ನ

ಕನ್ನಡ ಕಾರ್ಯಕ್ರಮಗಳ ಗುಣಮಟ್ಟ ಅಭಿವೃದ್ಧಿಪಡಿಸಲು, ಪ್ರಸಾರ ಅವಧಿ ಹೆಚ್ಚಿಸಲು ಸಾತ್ವಿಕ ಹೋರಾಟ ನಡೆಯುತ್ತಲೇ ಇತ್ತು. ನಿರೀಕ್ಷಿತ ಪರಿಣಾಮ ಬೀರದಿದ್ದಾಗ 1985ರ

ಸ್ವಾತಂತ್ರ್ಯೋತ್ಸವದಂದು ಪ್ರಧಾನಿ ರಾಜೀವಗಾಂಧಿಯವರ ಭಾಷಣವನ್ನು ತಡೆಯುವ ಉದ್ದೇಶದಿಂದ ಸಾಹಿತಿಗಳ ಕಲಾವಿದರ ಬಳಗದ ಕಾರ್ಯಕರ್ತರು ಬೆಂಗಳೂರು ದೂರದರ್ಶನ ಕೇಬಲ್‌ನ್ನು ಕತ್ತರಿಸಿದರು. ಬದಲಿ ವ್ಯವಸ್ಥೆಯಿದ್ದುದರಿಂದ ಪ್ರಧಾನಿ ಭಾಷಣ ಪ್ರಸಾರವಾಯಿತು. ಆದರೂ ಇದು ದೂರದರ್ಶನ ಸಿಬ್ಬಂದಿಗಳ ಮೇಲೆ ಪರಿಣಾಮ ಬೀರಿತು.

## ಕನ್ನಡಕ್ಕಾಗಿ ಬಾಂಬ್ ಬೇಕಾದರೂ ಹಾಕಿ

'ಕನ್ನಡಿಗರ ಭಾವನೆಗಳನ್ನು ಅರ್ಥಮಾಡಿಕೊಳ್ಳದಿರುವ, ಕನ್ನಡಕ್ಕೆ ಅವಮಾನ ಮಾಡುತ್ತಿರುವ ಬೆಂಗಳೂರು ದೂರದರ್ಶನ ಕೇಂದ್ರಕ್ಕೆ ಬಾಂಬ್ ಬೇಕಾದರೆ ಹಾಕಿ ನಾನು ನಿಮ್ಮೊಡನೆ ಬರುತ್ತೇನೆ' ಎಂದು ಖ್ಯಾತ ಸಂಶೋಧಕ ಎಂ.ಚಿದಾನಂದಮೂರ್ತಿಯವರು 'ದೂರದರ್ಶನ ಮತ್ತು ಕರ್ನಾಟಕ' ಕುರಿತು ಸಾಹಿತಿಗಳ ಕಲಾವಿದರ ಬಳಗ 25.12.87ರಂದು ಏರ್ಪಡಿಸಿದ್ದ ವಿಚಾರಗೋಷ್ಠಿಯಲ್ಲಿ ಹೇಳಿದರು. ಸಂಸತ್ ಸದಸ್ಯ ವಿ.ಎಸ್.ಕೃಷ್ಣ ಅಯ್ಯರ್, ಪತ್ರಿಕಾ ಅಕಾಡೆಮಿ ಅಧ್ಯಕ್ಷ ಜಿ.ನಾರಾಯಣ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಆರ್.ಎಂ.ಹಡಪದ್, ಡಾ॥ಎಂ.ಎಂ.ಮರುಳಸಿದ್ಧಯ್ಯ, ಆರ್.ಎಸ್.ಎನ್.ಗೌಡ, ನಾಟಕ ಅಕಾಡೆಮಿ ಅಧ್ಯಕ್ಷ ಬಿ.ವಿ.ವೈಕುಂಠರಾಜು, ಅವರುಗಳು ಮಾತನಾಡಿ ದೂರದರ್ಶನದಲ್ಲಿ ಕನ್ನಡಕ್ಕಾಗಿರುವ ಅನ್ಯಾಯವನ್ನು ತಿಳಿಸಿದರು. ಈ ಸಭೆಯಲ್ಲಿ 5 ನಿರ್ಣಯಗಳನ್ನು ಕೈಗೊಳ್ಳಲಾಯಿತು.

## ಹಕ್ಕೊತ್ತಾಯಗಳು

1. ಕರ್ನಾಟಕದ ಎಲ್ಲೆಡೆ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗಲಿ.
2. ಕನ್ನಡ ಚಲನಚಿತ್ರಗಳು ಭಾನುವಾರಗಳಂದು ಪ್ರಸಾರಗೊಳ್ಳಲಿ.
3. ಹಿಂದಿ ಸುದ್ದಿ ಬೇಡ; ರಾತ್ರಿ 8.40ಕ್ಕೆ ಕನ್ನಡ ಸುದ್ದಿಗಳ ಪ್ರಸಾರವಾಗಲಿ.
4. ದೂರದರ್ಶನದಲ್ಲಿ ಕನ್ನಡಿಗರೇ ನೇಮಕಗೊಳ್ಳಲಿ.
5. ಸಂಜೆ 5.30 ರಿಂದ ರಾತ್ರಿ 9.00 ಗಂಟೆಯವರೆಗೆ ಕನ್ನಡ ಕಾರ್ಯಕ್ರಮಗಳೇ ಪ್ರಸಾರವಾಗಲಿ.

ಈ ನಿರ್ಣಯಗಳ ಅನುಷ್ಠಾನಕ್ಕೆ ಹಲವು ಪ್ರತಿಭಟನೆ ನಡೆದವು. ಚಿದಾನಂದ ಮೂರ್ತಿಯವರ ಹೇಳಿಕೆಗೆ 'ಕೆರಳೋಣ' ಎಂಬ ಸಂಪಾದಕೀಯ ಕನ್ನಡಪ್ರಭದಲ್ಲಿ ಪ್ರಕಟವಾಯಿತು. ಈ ಸಭೆ ಕನ್ನಡ ದೂರದರ್ಶನ ಚಳುವಳಿಗೆ ಹೊಸ ಸ್ಫೂರ್ತಿ ನೀಡಿತು.

1988ರ ಹೊಸವರ್ಷದ ಕಾರ್ಯಕ್ರಮ ಕನ್ನಡ ಸಂಸ್ಕೃತಿಗೆ ಅಪಮಾನ ಮಾಡುವಂತಿತ್ತು. ಇದರಿಂದ ಕೆರಳಿದ ಸಾ.ಕ. ಬಳಗ ಜನವರಿ 1ರಂದು ಪತ್ರಿಕಾಗೋಷ್ಠಿ ಕರೆದು ಕನ್ನಡಿಗರು

ದೂರದರ್ಶನ ಕೇಂದ್ರದಿಂದ ಏನನ್ನು ನಿರೀಕ್ಷಿಸುತ್ತದೆ ಎಂದು ತಿಳಿಸಿತು. ಅದೇ ಬೆಂಗಳೂರಿನ ಹತ್ತು ಜನ ಗಣ್ಯರ ತಂಡ ದೂರದರ್ಶನ ನಿರ್ದೇಶಕ ಗುರುನಾಥರನ್ನು ಭೇಟಿ ಮಾಡಿ ಬಳಗದ ಹಕ್ಕೊತ್ತಾಯವನ್ನು ಈಡೇರಿಸಬೇಕೆಂದು ಇಲ್ಲವಾದರೆ ಟಿ.ವಿ. ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುವಂತೆ ಕೋರಿದರು. ತಂಡದಲ್ಲಿ ಎಂ.ಚಿದಾನಂದಮೂರ್ತಿ, ಎಂ.ವಿ. ಸೀತಾರಾಮಯ್ಯ, ಎಲ್.ಎಸ್.ಶೇಷಗಿರಿರಾವ್, ಎಚ್.ಎಂ.ಮರುಳಸಿದ್ಧಯ್ಯ, ಪಿ.ವಿ. ನಾರಾಯಣ, ತೀ.ಶ್ರೀ.ನಾಗಭೂಷಣ, ಷಣ್ಮುಗಂ, ಅಶೋಕ ದೊಡ್ಡಮೇಟಿ, ವಿಂಗ್ ಕಮಾಂಡರ್ ರಾವ್, ರಾ.ನಂ.ಚಂದ್ರಶೇಖರ, ಅಶೋಕ ಕಿಣಿ ಇದ್ದರು.

### ಪ್ರಕಟವಾದ ಅಸಮಾಧಾನ ಆಕ್ರೋಶ

'ದೂರದರ್ಶನ ಮತ್ತು ಕರ್ನಾಟಕ' ಸಭೆಯ ನಂತರ ರಾಜ್ಯಾದ್ಯಂತ ದೂರದರ್ಶನ ಕೇಂದ್ರದ ಬಗ್ಗೆ ಅಸಮಾಧಾನ, ಪ್ರತಿಭಟನೆ ಪ್ರಾರಂಭವಾದವು. ಪತ್ರಿಕೆಗಳಲ್ಲಿ ಓದುಗರು ಆಕ್ರೋಶ ವ್ಯಕ್ತಪಡಿಸಿದರು. ಈ ಬೆಳವಣಿಗೆಯನ್ನು ಬಳಸಿಕೊಂಡು ದೂರದರ್ಶನ ವಿಚಾರದ ಹೋರಾಟಕ್ಕೆ ತೀವ್ರತೆಯನ್ನು ನೀಡುವ ಉದ್ದೇಶದಿಂದ 1988 ಫೆಬ್ರವರಿ 22ರಂದು 'ಕನ್ನಡಿಗರ ಒಳಿತಿಗೆ-ದೂರದರ್ಶನಕ್ಕೆ ಮುತ್ತಿಗೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಲಕ್ಷಾಂತರ ಕರಪತ್ರ ಹಂಚಲಾಯಿತು. ಜನಗಳು ಸ್ವ-ಇಚ್ಛೆಯಿಂದ ಕರಪತ್ರ ಮುದ್ರಿಸಿ ಹಂಚಿದರು. ಜನರಿಂದ ಕರಪತ್ರ ಮುದ್ರಿಸಿಕೊಡುವಲ್ಲಿ ಹೆ.ಮ.ದೊಡ್ಡಕಣ್ಣಯ್ಯ ಅವರು ವಹಿಸಿದ ಪಾತ್ರ ಮಹತ್ವದ್ದು. ಕೆ.ವಿ.ನಾಗರಾಜಮೂರ್ತಿ ಹಾಡು-ಬೀದಿನಾಟಕಗಳಿಂದ ಜನರನ್ನು ತಲುಪಲು ಪ್ರಯತ್ನಿಸಿದರು. ನೂರಾರು ಬೀದಿ ಸಭೆಗಳು ನಡೆದವು. ಸಾರ್ವಜನಿಕ ಸಭೆಗಳು ನಡೆದವು. ನಿರೀಕ್ಷೆ ಮೀರಿ ಕನ್ನಡ ಜನ ಸಭೆಗೆ ಬರಲಾರಂಭಿಸಿದರು.

### ಟಿ.ವಿ. ಕೇಂದ್ರಕ್ಕೆ ಲಗ್ಗೆ : 'ರಾಮಾಯಣಕ್ಕೆ ಅಡ್ಡಿ'

ಚಳವಳಿಯನ್ನು ನಿರ್ಣಾಯಕ ಘಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಇನ್ನೊಂದು ಘಟನೆ ನಡೆಯಿತು. ಸಾಹಿತಿಗಳ ಕಲಾವಿದರ ಬಳಗದ ಮೂಲಕ ಅತ್ಯಂತ ಜನಪ್ರಿಯ ಧಾರಾವಾಹಿ 'ರಾಮಾಯಣ'ವನ್ನು 31.1.1988ರಂದು ತಡೆಯಲಾಯಿತು. ಬೆಳಗ್ಗೆ ಆರು ಘಂಟೆಗೆ ಡಾ||ಎಂ.ಚಿದಾನಂದಮೂರ್ತಿ, ಪಿ.ವಿ.ನಾರಾಯಣ ಮತ್ತು ನಾನು ಮುನಿರೆಡ್ಡಿಪಾಳ್ಯದ ದೂರದರ್ಶನ ಕೇಂದ್ರದ ಹತ್ತಿರ ಹೋದೆವು. ಅಂದು ರಾಮಾಯಣ ತಡೆಯುವ ಆರು ಜನರ ತಂಡವೂ ಬಂದಿತು. (ಆ ತಂಡದಲ್ಲಿ ಹಿರಿಯೂರು ರಾಘವೇಂದ್ರ, ನಾ.ಸು.ಗಣೇಶ ಪ್ರಸಾದ್. ಬೆಂ.ವ.ಯೋಗೀಶ, ಜಗನ್ನಾಥ, ಶ್ರೀಧರ ಮತ್ತು ರಾಮಕೃಷ್ಣ ಇದ್ದರು. ತಂಡ ಹೇಗೆ ಕಾರ್ಯನಿರ್ವಹಿಸಬೇಕೆಂಬ ಬಗ್ಗೆ ಎಲ್ಲವೂ ಒಂದು ವಾರದಿಂದ ಸಿದ್ಧತೆ ನಡೆದಿತ್ತು. ಈ ಯೋಜನೆಯನ್ನು ಮಾಡಿದ್ದವರು ಆರ್.ಎಸ್.ಎನ್.ಗೌಡ.) ಹತ್ತಿರದಲ್ಲಿದ್ದ ಹೋಟೆಲ್‌ಗೆ ಹೋಗಿ ತಿಂಡಿ ತಿಂದೆವು. ಎಲ್ಲವು ಸಂಕೇತದಲ್ಲಿಯೇ ನಡೆಯಿತು. ತಂಡ ಸುಮಾರು 8 ಗಂಟೆಗೆ ಒಳಗೆ ಹೋಯಿತು. ನಾವು ಎಲ್ಲವನ್ನು ಗಮನಿಸಿದೆವು. ರಾಮಾಯಣ ಪ್ರಸಾರವಾಯಿತೋ

ಇಲ್ಲವೊ ಎಂಬುದನ್ನು ತಿಳಿಯುವ ಕಾತುರ. ದೂರದರ್ಶನದಲ್ಲಿ ರಾಮಾಯಣ ಪ್ರಸಾರವಾಗುವ ಸಮಯ ಬಂದ 10 ನಿಮಿಷದಲ್ಲಿ ರಾಜಕುಮಾರ್, ಜಿ.ಸಿ.ನಾರಾಯಣ ಬಂದು ವಿಷಯ ತಿಳಿಸಿದರು. ರಾಜಕುಮಾರ್‌ಗೆ ಪರಿಚಯವಿದ್ದವರ ಮನೆಗೆ ಪಿ.ವಿ.ನಾರಾಯಣ ಮತ್ತು ನಾನು ಹೋಗಿ ರಾಮಾಯಣ ಪ್ರಸಾರವಾಗದಿದ್ದುದನ್ನು ಕಂಡು ರೋಮಾಂಚನಗೊಂಡೆವು. ಮತ್ತೆ ದೂರದರ್ಶನ ಕೇಂದ್ರದ ಹತ್ತಿರ ಬಂದೆವು. ಒಂದೆರಡು ಗಂಟೆಗಳಲ್ಲಿ ನಂತರ ಪೊಲೀಸರು ಅವರನ್ನು ಬಂಧಿಸಿಕೊಂಡು ಬಂದರು. ಅವರೆಲ್ಲರನ್ನು ಬಿಡಿಸಿಕೊಂಡು ಮನೆ ತಲುಪಿದಾಗ ರಾತ್ರಿ 12ಗಂಟೆ. ಇಡೀ ಘಟನೆ ಒಂದು ಉತ್ತಮ ಪತ್ತೇದಾರಿ ಚಿತ್ರದಂತೆ ನಡೆಯಿತು. ಮಾರನೇ ದಿನ ರಾಷ್ಟ್ರದೆಲ್ಲಡೆ ಪತ್ರಿಕೆಗಳಲ್ಲಿ ಸುದ್ದಿಯಾಯಿತು.

ದೂರದರ್ಶನ ಕೇಂದ್ರದೊಳಗೆ ನುಗ್ಗಿ ಕಾರ್ಯಕ್ರಮದ ಪ್ರಸಾರ ನಿಲ್ಲಿಸಿದ್ದು ಇಡೀ ದೇಶದಲ್ಲಿಯೇ ಇದು ಮೊದಲನೆಯ ಬಾರಿ. ಯಾವುದೇ ಹಿಂಸೆಯಿಲ್ಲದೇ ಆಸ್ತಿ ನಾಶಮಾಡದೆ ಕೇವಲ ಬುದ್ಧಿವಂತಿಕೆ ಚಮತ್ಕಾರದಿಂದ ಈ ಸಾಧನೆ ಮಾಡಿದ ಕಾರ್ಯಕರ್ತರು ಕನ್ನಡಿಗರೆಲ್ಲರ ಮೆಚ್ಚುಗೆಗೆ ಪಾತ್ರರಾದರು.

### ಕನ್ನಡಿಗರ ಒಳಿತಿಗೆ ದೂರದರ್ಶನಕ್ಕೆ ಮುತ್ತಿಗೆ

ರಾಮಾಯಣ ತಡೆದ ನಂತರ ದೂರದರ್ಶನ ಮುತ್ತಿಗೆಗೆ ನಾಡಿನ ಎಲ್ಲೆಡೆಯಿಂದ ಬೆಂಬಲ ಬರತೊಡಗಿತು. ಬೀದಿ ಸಭೆಗಳಿಗೆ ಹೆಚ್ಚು ಜನ ಬರತೊಡಗಿದರು. ಕನ್ನಡಾಭಿಮಾನಿಗಳ ಒತ್ತಡ ಹೆಚ್ಚಿದ್ದರಿಂದ ಕೋಲಾರ, ಕನಕಪುರ ಮುಂತಾದ ಊರಿನಲ್ಲಿ ಸಭೆ ನಡೆಸಲು ಹೋಗಬೇಕಾಯಿತು. ನಾನು ಕೋಲಾರಕ್ಕೆ ಹೋಗಿ ಸಭೆಯಲ್ಲಿ ಮಾತನಾಡಿದೆ. ಕೆಲವು ಸಂಘಟನೆಗಳು ಪತ್ರಿಕೆಗಳಿಗೆ ಜಾಹಿರಾತು ಕೊಟ್ಟವು. ಈ ಕಾರ್ಯಕ್ರಮಕ್ಕೆ ಕಾರ್ಯಕರ್ತರು ಎಲ್ಲ ಸಾಧ್ಯತೆಗಳನ್ನು ಬಳಸಿ ಪ್ರಚಾರ ನೀಡಿದರು.

ಫೆಬ್ರವರಿ 21ರ ಬೆಳಿಗ್ಗೆ 7ರಿಂದಲೇ ಜನ ಬರತೊಡಗಿದರು. ಕೆಲವು ಸಂಘನೆಗಳು ವಾಹನದಲ್ಲಿ ವಾದ್ಯದೊಂದಿಗೆ ಮೆರವಣಿಗೆ ಬಂದರು. ರಾಜ್ಯದ ವಿವಿಧ ಮೂಲೆಗಳಿಂದ ಜನ ಬಂದರು. ಉದ್ಘಾಟನೆ ಆಗುವುದಕ್ಕೆ ಮುನ್ನವೆ ಕಾರ್ಯಕರ್ತರು ದೂರದರ್ಶನಕ್ಕೆ ನುಗ್ಗುವ ಪ್ರಯತ್ನದಲ್ಲಿದ್ದಾಗ ಬಳಗದ ಪ್ರದಾನ ಸಂಚಾಲಕ ಚಿದಾನಂದಮೂರ್ತಿ ಶಾಂತಿಯಿಂದಿರುವಂತೆ ಮನವಿ ಮಾಡಬೇಕಾಯಿತು. ಲೋಕಸಭಾ ಸದಸ್ಯ ಡಾ||ವಿ.ವೆಂಕಟೇಶ್ ಉದ್ಘಾಟಿಸಿದರು. ಲಂಕೇಶ್ ಮಾತನಾಡಿ ಹೊರಟರು. ನಂತರ ತಂಡದ ನಾಯಕರು ಮಾತನಾಡಿ ಮುತ್ತಿಗೆಗೆ ಪ್ರಯತ್ನಿಸಿ ಬಂಧನಕ್ಕೊಳಗಾದರು ತಂಡಗಳ ನಾಯಕತ್ವವನ್ನು ಎಲ್.ಎಸ್.ಶೇಷಗಿರಿರಾವ್, ಚಿದಾನಂದಮೂರ್ತಿ, ನಟ ಅಶೋಕ, ಮುಖ್ಯಮಂತ್ರಿ ಚಂದ್ರು, ಡಾ||ಪಿ.ವಿ.ನಾರಾಯಣ ವಹಿಸಿದ್ದರು. ಅಂದು ಹಲವು ನಗರ ಸಭಾಸದಸ್ಯರೂ, ಕಲಾವಿದರೂ ಬಂಧನಕ್ಕೊಳಗಾದರು. ಜನರ ಉತ್ಸಾಹ ನಿಲ್ಲಲೇ ಇಲ್ಲ.

ಕೆಲವೃಕ ಕಾರ್ಯಕರ್ತರ ಆಕ್ರೋಶ ಹೆಚ್ಚಾದಾಗ ಪೊಲೀಸರು ಲಾಠಿಪ್ರಹಾರ ನಡೆಸಿದರು. ಸಾವಿರಾರು ಮಂದಿ ಬಂಧನಕ್ಕೊಳಗಾದರು. ಈ ಕಾರ್ಯಕ್ರಮಕ್ಕೆ ರಾಜ್ಯಾದ್ಯಂತ ಬೆಂಬಲ ವ್ಯಕ್ತವಾಯಿತು. ಈ ಕಾರ್ಯಕ್ರಮದ ಯಶಸ್ಸು ಕನ್ನಡ ಶಕ್ತಿ ಕೇಂದ್ರದ ಉದಯಕ್ಕೆ ನಾದಿಯಾಯಿತು.

# ಖಾದ್ರಿ ಸಂಪಾದಕೀಯ ಲೇಖನಗಳು

ಸಮಾಜವಾದಿ, ಸರ್ವೋದಯ, ರೈತ ಹಾಗೂ
ಗೋಕಾಕ್ ಚಳವಳಿಗಳಲ್ಲಿ ಖಾದ್ರಿ ಶಾಮಣ್ಣ ವ್ಯಕ್ತಿ ಮತ್ತು
ವಿಚಾರಪೂರ್ವಕ ತೊಡಗಿಸಿಕೊಂಡವರು. ರೈತರಿಗೆ
ದನಿಯಾದರು ಬರಹಗಳ ಮೂಲಕ.

## ಅವಿರತ ಹೋರಾಟ

ಸರ್ಕಾರದ ಸೂತ್ರ ಕನ್ನಡಿಗರಿಗೆ ಸಮ್ಮತವಲ್ಲ. ಕೆಲವರು ಸ್ವಾಗತಿಸಿರಬಹುದು. ಕನ್ನಡ ಜನಪದದ ಇಚ್ಛೆ ಅದಲ್ಲ.

ಇದು ಕೇವಲ ಶಾಲಾ ಕಲಿಕೆಯ ಮಾತು ಮಾತ್ರವಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಸಲ್ಲುವ ಸ್ಥಾನ–ಮಾನದ ಪ್ರಶ್ನೆ. ಅದು ನಿಸ್ಸಂದಿಗ್ಧವಾಗಿ ಸರ್ವೋನ್ನತ. ಅದನ್ನು ಗ್ರಹಿಸದ ಸರ್ಕಾರವೂ ಒಂದು ಸರಕಾರವೇ?

ಕನ್ನಡಕ್ಕೆ ಅಗ್ರಸ್ಥಾನಕ್ಕಾಗಿ ನಡೆಯುವ ಚಳವಳಿ ಅಲ್ಪಸಂಖ್ಯರ ವಿರುದ್ಧ ಹೇಗಾದೀತು? ಅಲ್ಪಸಂಖ್ಯರ ವಿಷಯದಲ್ಲಿ ಸರಕಾರಕ್ಕೆ ಇರುವಷ್ಟೇ ಕಳಕಳಿ, ತವಕ ಕನ್ನಡಕ್ಕಾಗಿ ಹೋರಾಡುವವರಲ್ಲಿಯೂ ಇದೆ. ಬಹುಶಃ ಸ್ವಲ್ಪ ಹೆಚ್ಚೇ ಹೌದು. ಸಕಾರದ ನಡೆಸುವ ರಾಜಕೀಯ ಪಕ್ಷಕ್ಕೆ ಮತಗಳಿಕೆಯ ಆಮಿಷ. ಕನ್ನಡದ ಕಟ್ಟಾಳುಗಳಿಗೆ ಎಲ್ಲ ಭಾರತೀಯ ಭಾಷೆಗಳ ಬಗೆಗೂ ಅಮಿತ ಗೌರವ.

ಕನ್ನಡದ ರಕ್ಷೆ ಎಲ್ಲ ಭಾರತೀಯ ಭಾಷೆಗಳಿಗೂ ರಕ್ಷೆ. ಇದೇ ಈ ಆಂದೋಲನದ ಮಹತ್ವ. ಎಲ್ಲ ಭಾರತೀಯ ಭಾಷೆಗಳನ್ನು ತುಳಿದಿಟ್ಟಿರುವ ಇಂಗ್ಲಿಷ್ ಭಕ್ತರಿಗೆ ಮಾತ್ರ ಮೈನಡುಕ, ಸಿಂಹಸ್ವಪ್ನ ಅಂತಲೇ ಅವರಿಂದ ನಾನಾ ಬಗೆಯ ಅಡ್ಡಿ. ಎಲ್ಲವೂ ಮಿಥ್ಯಾವಾದ. ಒಂದರಲ್ಲೂ ಹುರುಳಿಲ್ಲ.

ಗೋಕಾಕ್ ಸಮಿತಿ ಶಾಲಾ ಶಿಕ್ಷಣದಲ್ಲಿ ಕನ್ನಡ ಸ್ಥಾನ–ಮಾನ ಕುರಿತು ಸಲಹೆ ಮಾಡಿತು. ಅಲ್ಲಿಂದ ಕನ್ನಡದ ವಾತಾವರಣ ಹುಟ್ಟಲಿ ಎಂಬ ಆಶಯ. ಆದರೆ, ಅಲ್ಲೇ ನಮಗೆ ಕುತ್ತು. ಶಾಲೆಯಲ್ಲಿ ಕಲಿಯುವ ಮಕ್ಕಳ ಮೇಲೆ ಮೂರು ಭಾಷೆಗಳ ಹೊರೆ. ಮುನ್ನೂರೈವತ್ತು ಅಂಕ. ಸಹಜವಾಗಿ ಬೇಸರ. ಯಾವ ಭಾಷೆಯ ವಿಷಯದಲ್ಲೂ ಉತ್ಸಾಹ ಉಕ್ಕದು. ಇದೇ ಈ ಸೂತ್ರದ ವಿಷಫಲ.

ಕವಿ ನಿಸಾರ್ ಅಹಮದ್ ಆಡಿರುವ ನುಡಿ ಮನನೀಯ. ಕನ್ನಡಕ್ಕೆ ಇದರಿಂದ ಅನ್ಯಾಯ, ಅಪಮಾನ. ಕನ್ನಡ ನಾಡಿನಲ್ಲಿ ಕನ್ನಡ ಏಕೈಕ ಪ್ರಥಮ ಭಾಷೆಯಾಗಬೇಕೇ ಹೊರತು ಹತ್ತರಲ್ಲಿ ಹನ್ನೊಂದಲ್ಲ. ಕಡ್ಡಾಯ ಮಾಡಿದ್ದೇವೆ ಎಂಬ ಹಮ್ಮು. ನೂರು ಅಂಕಗಳ ಬದಲು ನೂರೈವತ್ತು ಆಗಿದ್ದರೆ ಗಂಟೇನು ಹೋಗುತ್ತಿತ್ತು? ಪ್ರಥಮ ಭಾಷೆ ಎಂದು ಕರೆದಿದ್ದರೆ ಇವರ ಅಜ್ಜನ ಆಸ್ತಿ ಸೂರೆಯಾಗುತ್ತಿತ್ತೇ?

ವಿಧಾನಸೌಧದಲ್ಲಿ ಕುಳಿತಿರುವ ಕುಟಿಲ ಅಧಿಕಾರಿಗಳ ಸಂಚು. ಅವರಲ್ಲಿ ಬಹುಮಂದಿ ಇಂಗ್ಲಿಷ್ ತೊತ್ತುಗಳು. ಅಂತಲೇ ಈ ಚೌಕಾಶಿ. ಅವರನ್ನು ಆಳುವ ಶಕ್ತಿ ಮುಖ್ಯಮಂತ್ರಿಗೂ ಇಲ್ಲ, ಯಾವ ಮಂತ್ರಿಗೂ ಇಲ್ಲ. ಅವರ ಸೆರೆಯಲ್ಲಿ ಈ ಜನ.

ಕನ್ನಡಕ್ಕಾಗಿ ಹೋರಾಟ. ಶಾಲೆಯ ಕಲಿಕೆಯ ವಿಷಯ ಮಾತ್ರವಲ್ಲ, ಅಲ್ಲಿಗೇ ನಿಲ್ಲದು. ಕರ್ನಾಟಕದಲ್ಲಿ ಎಲ್ಲ ರಂಗಗಳಲ್ಲೂ ಕನ್ನಡ ಸಾರ್ವಭೌಮವಾಗಿರಲೇಬೇಕು. ಶಿಕ್ಷಣ ಮಾಧ್ಯಮ ಕನ್ನಡವೇ ಆಗಿರತಕ್ಕದ್ದು. ಆಡಳಿತ ಭಾಷೆ ಎಲ್ಲ ಹಂತಗಳಲ್ಲೂ ಕನ್ನಡವೇ. ನ್ಯಾಯ ನಿರ್ವಹಣೆ ಕನ್ನಡದಲ್ಲೇ. ಜನಜೀವನದ ಎಲ್ಲ ವ್ಯವಹಾರ ಕನ್ನಡದಲ್ಲೇ.

ಈ ಮಾತು ಅವರವರ ರಾಜ್ಯದಲ್ಲಿ ಅವರವರ ಭಾಷೆಗೂ ಅನ್ವಯ. ಆಗಲೇ ನಿಜವಾದ ಸ್ವರಾಜ್ಯದ ಆರಂಭ. ಕಡೆಗಣಿಸಲ್ಪಟ್ಟ ಜನಕೋಟಿಯ ಅರಳುವಿಕೆಗೆ ನಾಂದೀ. ಜನಭಾಷೆಗಾಗಿ ಹೋರಾಡುವ ಹೋರಾಟ ಜನರ ಎಲ್ಲ ಹಕ್ಕುಗಳಿಗಾಗಿ ನಡೆಯುವ ಸಂಘರ್ಷ. ಜನತಂತ್ರದ ಸಮರದ ಒಂದು ಅಂಗ. ಇದನ್ನು ಅರಿಯದಿದ್ದರೆ ಮತಿಭ್ರಮೆ.

ಧಾರವಾಡದ ಧೀರರು ಒಳ್ಳೆ ಘೋಷಣೆ ಹುಟ್ಟಿಸಿದ್ದಾರೆ. ''ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ''. ಕನ್ನಡ ಜನಪದದ ಉಸಿರನ್ನಾಗಿಸುವ ಸಂಜೀವಿನೀ ಕನ್ನಡವೇ. ಮತ್ತಾವ ಭಾಷೆಯೂ ಅಲ್ಲ. ನೆರೆಯ ರಾಜ್ಯಗಳಲ್ಲಿ ಸದ್ದುಗದ್ದಲ ಇಲ್ಲದೆ ನೆರವೇರಿಬಿಟ್ಟಿದೆ. ಕರ್ನಾಟಕದಲ್ಲಿ ಮಾತ್ರ ಅಲ್ಪಸಂಖ್ಯಾತರ ರಕ್ಷಣೆಯ ಪಿಸು ಮಾತು. ಇದು ಬರಿಯ ಕುತರ್ಕ. ಎಲ್ಲ ರಾಜ್ಯಗಳಿಗೂ ಅನ್ವಯಿಸುವ ವಿಷಯ. ಕರ್ನಾಟಕಕ್ಕೂ ಅನ್ವಯಿಸೀತು.

ಒಂದು ಮಾತನ್ನು ಎಲ್ಲರೂ ನೆನಪಿಡತಕ್ಕದ್ದು. ಆಧುನಿಕ ಜ್ಞಾನವಾಹಿನಿ ಇಂಗ್ಲೀಷ್ ಒಂದೇ ಅಲ್ಲ. ಜರ್ಮನ್, ಜಪಾನೀ, ಚೀನೀ, ರಷ್ಯನ್, ಫ್ರೆಂಚ್ ಭಾಷೆಗಳೂ ಆಗಬಲ್ಲವು. ಭಾರತದಲ್ಲಿ ಇಂಗ್ಲಿಷ್ ಸಾಮ್ರಾಜ್ಯವಾದದ ಒಂದು ಪಳೆಯುಳಿಕೆ. ಅರವತ್ತೆಂಟು ಕೋಟಿಯಲ್ಲಿ ಎಷ್ಟು ಮಂದಿಗೆ ಗೊತ್ತು? ನೂರರಲ್ಲಿ ಇಬ್ಬರಿಗೆ ಮಾತ್ರ ತಪ್ಪು ಇಂಗ್ಲಿಷ್ ಗೊತ್ತು. ಇವರ ಕಪಿಮುಷ್ಟಿಯಲ್ಲಿ ನಮ್ಮ ದೇಶದ ಸಕಲ ವ್ಯವಹಾರ. ಇದನ್ನು ತಪ್ಪಿಸಲೆಂದೇ ಭಾರತೀಯ ಭಾಷೆಗಳಿಗೆ ಸರ್ವೋಚ್ಚಸ್ಥಾನ.

ಈ ಪ್ರಶ್ನೆ ಕೇವಲ ಹಿಡಿಯಷ್ಟು ಮಂದಿಯ ಸಮಸ್ಯೆ ಅಲ್ಲ. ಎಲ್ಲರ ಬಡತನ, ಅಜ್ಞಾನ ಕರಗಬೇಕಾದರೆ ಭಾರತೀಯ ಭಾಷೆಗಳೇ ಅಗ್ರಪಟ್ಟಕ್ಕೆ ಬರತಕ್ಕದ್ದು. ಅಂತರರಾಜ್ಯ ವ್ಯವಹಾರಕ್ಕೆ ಅನುಕೂಲಕರ ಭಾರತೀಯ ಭಾಷೆಯೇ ಇರತಕ್ಕದ್ದು. ಆಗಲೇ ನಮ್ಮ ರಾಷ್ಟ್ರಕ್ಕೆ ಗೌರವ. ವಿಶ್ವಸಂಸ್ಥೆಯ ವೇದಿಕೆಯಲ್ಲಿ ಹಿಂದೀ ಭಾಷೆಯಲ್ಲಿ ಮಾತನಾಡಿದ ಅಟಲ ಬಿಹಾರಿ ವಾಜಪೇಯಿ ಅಂಥವರಿಂದಲೇ ಭಾರತಕ್ಕೆ ನಿಜವಾದ ಗೌರವ.

ಇದನ್ನು ಅರಿಯದವರು ನೂರು ನೆಪ ಹೇಳಿಯಾರು. ಅವೆಲ್ಲವೂ ಜಳ್ಳು. ಕನ್ನಡದ ಹೋರಾಟ ಎಲ್ಲ ಭಾರತೀಯ ಭಾಷೆಗಳ ಪರವಾದ ಹೋರಾಟ. ಅಂತಲೇ ಕನ್ನಡ

ನಾಡಿನಲ್ಲಿರುವ ಎಲ್ಲ ಜನರೂ ಕನ್ನಡವನ್ನೇ ಪ್ರಥಮ ಭಾಷೆಯಾಗಿ ಕಲಿಯತಕ್ಕದ್ದು. ಉಳಿದ ಭಾಷೆ ಅನಂತರ ಕಲಿಯಲು ಯಾರ ಅಡ್ಡಿಯೇನು? ವಿದೇಶ ಭಾಷೆಗಳಲ್ಲಿ ಯಾವುದನ್ನು ಬೇಕಾದರೂ ಮೇಲಿನ ಹಂತದಲ್ಲಿ ಕಲಿಯಲಿ.

ಕರ್ನಾಟಕ ಸರ್ಕಾರಕ್ಕೆ ತಿಳಿಯಾದ ಈ ಮಾತು ಹೊಳೆಯದು. ಕೆಲವೊಮ್ಮೆ ಬಿಸಿ ಮುಟ್ಟಲೇಬೇಕು. ಅಂಥದೊಂದು ಸಂದರ್ಭ ಈಗ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಕ್ಷೇತ್ರದಿಂದ ವಿಧಾನಸಭೆಗೆ ಮರುಚುನಾವಣೆ. ಆಡಳಿತ ಪಕ್ಷದ ಇದಿರಾಗಿ ಪ್ರತಿಪಕ್ಷಗಳೆಲ್ಲ ಒಬ್ಬನೇ ಹುರಿಯಾಳನ್ನು ನಿಲ್ಲಿಸಲಿ. ಚಿತ್ರದುರ್ಗದಲ್ಲಿ ಮಡಿದ ಮೂವರು ಹುತಾತ್ಮರ ಹೆಸರಲ್ಲಿ ಹೋರಾಟ ನಡೆಯಲಿ. ಜನರಿಗೆ ತಿಳಿಯ ಹೇಳಲಿ. ಸತ್ವ ಪರೀಕ್ಷೆ ಆಗಲಿ.

ಯಾವುದೇ ಹೋರಾಟ ಹಿಂಸಾತ್ಮಕ ಆಗತಕ್ಕದ್ದಲ್ಲ. ಹಿಂಸಾಚಾರಕ್ಕೆ ಪ್ರಚೋದನೆ ಪೊಲೀಸರಿಂದಲೇ ಬಂದೀತು. ಎಲ್ಲ ಸರ್ಕಾರಗಳ ಸಂಚೂ ಹೀಗೆಯೇ. ಅದಕ್ಕೆ ಜನ ಬಲಿಯಾಗದಿರಲಿ. ಸಂಪೂರ್ಣ ಶಾಂತಿಯು ಸತ್ಯಾಗ್ರಹ ರಾಜ್ಯದ ಆದ್ಯಂತ ಬಿರುಗಾಳಿಯಂತೆ ಬೀಸಲಿ. ಕನ್ನಡ ನಾಡಿನ ಎಲ್ಲ ಜಿಲ್ಲೆಗಳಲ್ಲೂ ಹೋರಾಟದ ಹುಮ್ಮಸ್ಸು ಸೂರ್ಮಡಿಯಾಗಲಿ. ಕನ್ನಡ ತಾಯಿಗೆ ಪಟ್ಟ ಕಟ್ಟುವವರೆಗೆ ನಮಗಾರಿಗೂ ಬಿಡುವಿಲ್ಲ, ಉಳಿವೂ ಇಲ್ಲ.

## ವಿಧಿಲಿಖಿತ

ಗೋಕಾಕ್ ವರದಿಯ ಜಾರಿಯಿಂದ ಉರ್ದು ಭಾಷೆಗೆ ಯಾವ ಧಕ್ಕೆಯೂ ಇಲ್ಲ. ಉರ್ದು ಕೇವಲ ಮುಸ್ಲಿಮರ ಭಾಷೆಯೂ ಅಲ್ಲ. ಗಣನೀಯ ಸಂಖ್ಯೆಯ ಮುಸ್ಲಿಂ ಬಾಂಧವರಿಗೆ ಉರ್ದು ಗೊತ್ತಿಲ್ಲ.

ನಿರಕ್ಷರರ ಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣವೂ ಹೆಚ್ಚು. ಕಡು ಬಡವರ ಸಾಲಿನಲ್ಲಿಯೂ ಅವರೇ ಹೆಚ್ಚು. ಇಂಥ ಮುಗ್ಧ ಅಮಾಯಕ ಜನರನ್ನು ಕರ್ನಾಟಕದಲ್ಲಿ ಕನ್ನಡದ ವಿರುದ್ಧ ಎತ್ತಿ ಕಟ್ಟುವುದು ಎಷ್ಟು ಸರಿಯಲ್ಲ. ಕನ್ನಡ ನಾಡಿನ ಜನಜೀವನ ಪ್ರವಾಹದಲ್ಲಿ ಅವರು ಕೂಡಿಕೊಳ್ಳಲೇಬೇಕು. ಅದಕ್ಕಾಗಿ ಅವರು ಕನ್ನಡವನ್ನು ಕಲಿಯಬೇಕಾದುದು ಅನಿವಾರ್ಯ.

ಉರ್ದು ತುಂಬ ಸೊಗಸಾದ ಭಾಷೆ. ಅದರ ಸವಿಯನ್ನು, ಸೊಗಸನ್ನು ಬಲ್ಲವರಷ್ಟೇ ಬಲ್ಲರು. ಆದನ್ನು ಇಂಥವರೇ ಕಲಿಯಬೇಕೆಂಬ ನಿರ್ಬಂಧವೂ ಇರಬೇಕಿಲ್ಲ. ಯಾರು ಬೇಕಾದರೂ ಕಲಿಯಬಹುದು. ಏನೂ ತಪ್ಪಿಲ್ಲ. ಹಾಗೆ ನೋಡಿದರೆ ಕನ್ನಡದ ಶಬ್ದ ಸಂಪತ್ತು, ಸಂಸ್ಕೃತ, ಫಾರಸೀ ಹಾಗೂ ಉರ್ದು ಶಬ್ದಗಳಿಂದ ಹೆಚ್ಚಿದೆ. ಹಿಂದಿನ ಕಾಲದ ಆಡಳಿತದ ಭಾಷೆಯಲ್ಲಂತೂ ಸಾಕು ಬೇಕಾದಷ್ಟು ಉರ್ದು ಶಬ್ದಗಳಿದ್ದವು.

ಕರ್ನಾಟಕದ ಮುಸ್ಲಿಂ ಬಾಂಧವರಲ್ಲಿ ಬೇಕೆಂತಲೇ ತಪ್ಪು ತಿಳಿವಳಿಕೆ ಹಬ್ಬಿಸುತ್ತಿದ್ದಾರೆ. ಇದು ಸ್ವಾರ್ಥಿಗಳ ಕಾಯಕ. ಗೋಕಾಕ್ ವರದಿಯ ಪ್ರಕಾರ ಉರ್ದು ಕಲಿಯಲು ಮಾತ್ರವಲ್ಲ, ಯಾರ ಮಾತೃಭಾಷೆಯನ್ನು ಕಲಿಯಲೂ ಯಾವ ಅಡ್ಡಿಯೂ ಇಲ್ಲ. ಕನ್ನಡವನ್ನು ಮಾತ್ರ ಎಲ್ಲರೂ ಕಲಿಯಲೇಬೇಕು.

ಇದರಲ್ಲಿ ಯಾವ ಉದ್ವೇಗ? ತರ್ಕ ಇಲ್ಲವೇ? ತರ್ಕ ಎಂಬುದು ಕೇವಲ ಕೆಲವರ ಗುತ್ತಿಗೆಯಲ್ಲ. ರಾಷ್ಟ್ರಕವಿ ಕುವೆಂಪು ಅವರಾಗಲೀ, ಮತ್ತಾವ ಶ್ರೇಷ್ಠ ಸಾಹಿತಿಯೇ ಆಗಲಿ ತರ್ಕ ಬಾಹಿರರಾದವರೇ? ಅಲ್ಪಸಂಖ್ಯಾತರ ಭಾಷೆಯ ನೆಪದಲ್ಲಿ ಕನ್ನಡದ ಅಭಿಮಾನಿಗಳನ್ನು ಭಾಷಾಂಧರೆಂದು ಜರಿಯುವುದು ಸರ್ವಥಾ ಅಸಾಧು. ಇದು ಬೈಗುಳ. ತರ್ಕವಂತೂ ಇಲ್ಲ.

ಕನ್ನಡದ ಪ್ರಸಿದ್ಧ ಲೇಖಕರಲ್ಲಿ ಯು.ಆರ್. ಅನಂತಮೂರ್ತಿ ಒಬ್ಬರು. ಅವರ ಇತ್ತೀಚಿನ ನಿಲುವು ಅತ್ಯಂತ ಶೋಚನೀಯ. ಕನ್ನಡಕ್ಕಾಗಿ ಗಟ್ಟಿಯಾಗಿ ನಿಲ್ಲುವುದು ಸಾಮೂಹಿಕ ಹುಚ್ಚು ಹೇಗಾದೀತು? ಇಂಗ್ಲಿಷಿನ ಪಲ್ಲಕ್ಕಿಯನ್ನು ಹೊರತು ನಾವು ಇನ್ನೆಷ್ಟು ದಿನ

ಜೀತದಾಳುಗಳಾಗಿರಬೇಕು? ಒಂದು ಕಾಲಕ್ಕೆ ಇಂಗ್ಲಿಷ್ ವ್ಯಾಮೋಹದ ಕಡು ವಿರೋಧಿಯಾಗಿದ್ದ ಡಾ. ಅನಂತಮೂರ್ತಿ ಅವರ ಅಧಃಪತನ ಅತ್ಯಂತ ವಿಷಾದಕರ.

ಕರ್ನಾಟಕ ಇಡೀ ಭಾರತಕ್ಕೇ ಈಗ ಮಾರ್ಗದರ್ಶಿ. ಅವರವರ ರಾಜ್ಯದಲ್ಲಿ ಅವರವರ ಭಾಷೆ ಸಾರ್ವಭೌಮ. ಆ ಸ್ಥಾನವನ್ನು ಇಂಗ್ಲಿಷ್ ಇನ್ನು ಮುಂದೆ ಹೊಂದದು. ಅದೇ ಕನ್ನಡನಾಡನ್ನು ಆವರಿಸಿರುವ ಸನ್ನಿವೇಶದ ಅರ್ಥ. ಜನಪದದ ಭಾಷೆ ಎಲ್ಲ ಉದ್ದೇಶಗಳಿಗೂ ಬಳಗೆ ಆಗತಕ್ಕದ್ದು. ಆಗ ಮಾತ್ರವೇ ಇಡೀ ಜನಸಮುದಾಯದ ಏಳಿಗೆ. ಇಲ್ಲದಿದ್ದರೆ ಇಂದಿನಂತೆ ಹಿಡಿಯಷ್ಟು ಮಂದಿಯ ಕಪಿಮುಷ್ಟಿ

ಕನ್ನಡ ನಾಡಿನಲ್ಲಿ ಬೇರೆ ಬೇರೆ ಮನೆ ಮಾತು ಉಂಟು. ಕೊಡವರು, ತುಳುವರು, ಕೊಂಕಣಿಗಳು, ತಮಿಳು, ತೆಲುಗು, ಮರಾಠಿ, ಗುಜರಾತಿ, ಸಿಂಧಿ, ಹಿಂದೀ ಮಾತನಾಡುವ ಮಂದಿ ಇದ್ದಾರೆ. ಇವರಲ್ಲಿ ಕೊಡವರು, ತುಳುವರು ಹಾಗೂ ಕೊಂಕಣಿಗಳು ಕನ್ನಡವನ್ನು ತುಂಬ ಚೆನ್ನಾಗಿ ಅರಗಿಸಿಕೊಂಡಿದ್ದಾರೆ. ಕನ್ನಡಕ್ಕೆ ತಮ್ಮ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಮರಾಠಿ, ತಮಿಳು ಹಾಗೂ ತೆಲುಗು ಮನೆ ಮಾತಾಗಿರುವ ಅನೇಕರು ಕನ್ನಡದ ಸೇವೆಯನ್ನು ಅತ್ಯಂತ ಆಸ್ಥೆಯಿಂದ ಮಾಡಿದ್ದಾರೆ. ಅವರ ಮಾದರಿ ಅನುಕರಣೀಯವೇ ಹೊರತು ಬೆಂಗಳೂರಿನ ಇತ್ತೀಚಿನ ಅಲ್ಪಸಂಖ್ಯಾಕರದಲ್ಲ

ಬೆಂಗಳೂದು ದಂಡು ಪ್ರದೇಶ ಹಿಂದೊಮ್ಮೆ ಬ್ರಿಟಿಷರ ವಸಾಹತು. ಅಲ್ಲಿ ಆಗಲೂ ಈಗಲೂ ತಮಿಳರೇ ಹೆಚ್ಚು. ಮಲೆಯಾಳಿಗಳಂತೂ ಎಲ್ಲ ಕಡೆಯೂ ತಲೆಮಾರುಗಳಿಂದ ಬೆಂಗಳೂರಿನಲ್ಲಿ ಇದ್ದರೂ ಕನನಡ ಕಲಿಯರು. ಎದೇ ನಿಜಕ್ಕೂ ಅಪಾಯಕರ. ಅವರಿಗೇನು ಕಷ್ಟ? ಇತ್ತೀಚೆಗೆ ಬಂದ ಸಿಂಧಿ, ಗುಜರಾತಿ ಮಂದಿ ಕನಿಷ್ಠಪಕ್ಷ ಪೇಟೆಯಲ್ಲಾದರೂ ಕನ್ನಡ ಮಾತಾಡಬಲ್ಲರು. ತಮಿಳು ಜನ ಅದನ್ನೂ ಮಾಡರಲ್ಲ? ಕನ್ನಡದ ವರಕವಿ ಪು.ತಿ.ನ ಅವರ ಮಾತಿನಲ್ಲಿ ಅಪಾರ ಅರ್ಥ.

ಕನ್ನಡ ನಾಡಿನಲ್ಲಿ ಎಲ್ಲೆಡೆಯೂ ಕನ್ನಡದ ವಾತಾವರಣ ನಿರ್ಮಾಣ ಅತ್ಯಗತ್ಯ. ಅದಕ್ಕೆ ಮುನ್ನ ಬೆಂಗಳೂರು ಕನ್ನಡಿಗರ ಕೈವಶ ಆಗತಕ್ಕದ್ದು. ಎಂದರೆ ಇಲ್ಲಿರುವವರೆಲ್ಲ ಮನೆಯಲ್ಲಿ ಯಾವ ಮಾತನ್ನೇ ಆಡಿಕೊಳ್ಳಲಿ, ಹೊರಗೆ ಮಾತ್ರ ಕನ್ನಡವನ್ನೇ ಬಳಸತಕ್ಕದ್ದು. ಇದು ಭಾಷಾಂಧತೆಯೇ? ತರ್ಕರಹಿತ ನಿಲುವೇ? ಸಾಮೂಹಿಕ ಹುಚ್ಚೇ?

ಕರ್ನಾಟಕದಲ್ಲಿ ಯಾವ ಭಾಷಾ ಅಲ್ಪಸಂಖ್ಯಾಕರಿಗೂ ಗಂಡಾಂತರ ಇಲ್ಲ. ಅದೊಂದು ಗೊಗ್ಗಯ್ಯ. ಕೆಲವರಿಂದ ಬೇಕೆಂತಲೇ ಅದರ ಸೃಷ್ಟಿ. ಅವರಿಗೇನೋ ಸ್ವಾರ್ಥ. ಅದಕ್ಕಾಗಿ ಕನ್ನಡವನ್ನೇಕೆ ಬಲಿಕೊಡಬೇಕು?

ನೆರೆಯ ತಮಿಳುನಾಡಿನಲ್ಲಿ, ಮಹಾರಾಷ್ಟ್ರದಲ್ಲಿ, ಕೇರಳದಲ್ಲಿ ಕನ್ನಡಕ್ಕೆ ಎಷ್ಟು ಸ್ಥಾನ-ಮಾನ? ಮುಂಬೈ ಮಹಾನಗರದಲ್ಲಿ ಎಂಟು ಲಕ್ಷ ಕನ್ನಡಿಗರು. ಎಷ್ಟು ಕನ್ನಡ

ಶಾಲೆಗಳಿವೆ? ಸೊಲ್ಲಾಪುರ, ಕೊಲ್ಲಾಪುರ, ಸಾಂಗಲಿ, ಅಕ್ಕಲಕೋಟೆ, ಜತ್ತಿ ಮುಂತಾದ ಎಡೆಗಳಲ್ಲಿ ಎಷ್ಟು ಕನ್ನಡಕ್ಕೆ ಪ್ರೋತ್ಸಾಹ? ಹೊಸೂರಿನಲ್ಲಿ ಕನ್ನಡಕ್ಕೆ ಯಾವ ಸ್ಥಾನ? ಮದರಾಸು ನಗರದಲ್ಲಿ ಕನ್ನಡ ಶಾಲೆಗೆ ಎಷ್ಟು ಸರಕಾರದ ಸಹಾಯ? ಇವೆಲ್ಲ ಪ್ರಶ್ನೆಗಳಿಗೆ ಉತ್ತರ ಬರಲಿ.

ಇತರ ರಾಜ್ಯಗಳಿಗಿಂತ ಕರ್ನಾಟಕ ಭಾಷಾ ಅಲ್ಪಸಂಖ್ಯಾಕರ ವಿಷಯದಲ್ಲಿ ನಡೆದುಕೊಂಡಿರುವ ಬಗೆ ಅತ್ಯಂತ ಮಾದರಿಯದು. ಯಾರೂ ಅಲ್ಲಗಳೆಯುವಂತಿಲ್ಲ. ಅತಿರೇಕಕ್ಕೆ ಹೋಗಿ ಮನೆಮುರುಕರಾಗುವ ಪರಿಸ್ಥಿತಿ! ಇದನ್ನೇ ಈಗ ಬೇಡ ಎನ್ನುತ್ತಿರುವುದು.

ಇಂದು ಏಪ್ರಿಲ್ 15. ಅಖಿಲ-ಕರ್ನಾಟಕ ಕನ್ನಡ ಕ್ರಿಯಾ ಸಮಿತಿ ಗೊತ್ತುಪಡಿಸಿದ ಗಡುವು. ಇಂದೇ ತೀರ್ಮಾನ ಆಗತಕ್ಕದ್ದು, ಅದೇ ಶ್ರೇಯಸ್ಸಿನ ಹಾದಿ. ಯಾವ ವೇದಿಕೆಯ ಮೇಲೆ ಯಾರೊಡನೆ ಬೇಕಾದರೂ ಕನ್ನಡದ ಬುದ್ಧಿವಂತರು ವಾದ ಹೂಡಿ ಗೆಲ್ಲಬಲ್ಲರು. ಇದನ್ನು ತರ್ಕಬಾಹಿರ ಎಂದು ಕರೆಯುವುದು ತಿಳಿಗೇಡಿತನ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕನ್ನಡ ನಾಡಿನ ಪಾತ್ರ ಅತ್ಯದ್ಭುತ. ಏಕೀಕರಣಕ್ಕಾಗಿ ನಾವು ನಡೆಸಿದುದು ಉಜ್ವಲ ಹೋರಾಟ. ಕನ್ನಡಕ್ಕಾಗಿ ಈಗ ನಡೆಯುತ್ತಿರುವುದು ಸಾತ್ತ್ವಿಕ ಸಂಘರ್ಷ. ಇದನ್ನು ಅರಿತುಕೊಳ್ಳದೆ ಮಾತನಾಡಿದರೆ, ಬರೆದರೆ ಏನು ಪ್ರಯೋಜನ? ಅಂಥವರ ಬಣ್ಣಗೇಡು.

ತಿಳಿಯಾಗಿ, ತಣ್ಣಗೆ ಯೋಚಿಸಬೇಕಾದ ಕಾಲ. ಗಟ್ಟಿಮುಟ್ಟಾಗಿ ಕೆಲಸ ಮಾಡಬೇಕಾದ ಪರ್ವಕ್ಷಣ. ರಾಜಿಗೆ ಎಡೆಯಿಲ್ಲ, ಚರ್ಚೆಗೆ ಸಿದ್ಧ ಮನವರಿಗೆ ಮಾಡಿಕೊಡುವುದು ಸೂರ್ಯನ ಬೆಳಕಿನಷ್ಟು ಸ್ಪಷ್ಟ. ನಾವೇಕೆ ಅಂಜಬೇಕು? ನಮ್ಮ ನಿಲುಮೆ ನ್ಯಾಯಸಮ್ಮತ. ಅಂತಲೇ ಸತ್ತ್ವಪೂರ್ಣ. ಇದಕ್ಕೆ ಗೆಲವು ವಿಧಿಲಿಖಿತ.

■

# ಜೀವಧ್ವನಿ

ಕನ್ನಡದ ನಟಸಾರ್ವಭೌಮ ರಾಜಕುಮಾರ್ ಅವರ ಘನ ನೇತೃತ್ವ ಕನ್ನಡಕ್ಕೆ ಸಾರ್ವಭೌಮ ಸ್ಥಾನ ಸಿಗುವವರೆಗೆ ಶಾಂತಿಯುತ ಹೋರಾಟದ ಕರೆ. ಚಲಚ್ಚಿತ್ರ ಕಲಾವಿದರ ಕರ್ನಾಟಕದ ಮುಖ್ಯ ಪಟ್ಟಣಗಳ ಜಾಥಾ ಮುಕ್ತಾಯ.

ಡಾ॥ ರಾಜಕುಮಾರ್ ಅವರ ಮಾತು ಅತ್ಯಂತ ಗಮನಾರ್ಹ. ಅರ್ಥಗರ್ಭಿತ. ಇದು ಕನ್ನಡದ ಅಂಧ ಅಭಿಮಾನ ಅಲ್ಲ, ನಾಲ್ಕು ಕೋಟಿ ಕನ್ನಡಿಗರ ಜೀವಧ್ವನಿ. ಇದನ್ನು ಹೀಗಳೆಯುವವರು ಉದಾರಮತವಾದಿಗಳೆಂದುಕೊಳ್ಳುತ್ತಾರೆ. ನಮ್ಮ ಪಾಲಿಗೆ ಅದು ಮನೆಮುರುಕುತನ.

ಶಾಲಾ ಪಠ್ಯಕ್ರಮದಲ್ಲಿ ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆ ಮಾಡುವುದು ತೀರಾ ಸಣ್ಣ ವಿಷಯ. ಅದು ಆರಂಭ ಮಾತ್ರ. ಕನ್ನಡ ನಾಡಿನಲ್ಲಿ ಕನ್ನಡದ ವಾತಾವರಣವನ್ನು ಎಲ್ಲೆಲ್ಲೂ ನಿರ್ಮಿಸುವುದೇ ಮುಖ್ಯ ಉದ್ದೇಶ.

ಇದರಲ್ಲೇನು ತಪ್ಪು? ಭಾರತೀಯ ಭಾಷೆಗಳಿಗೆ ಸ್ವರಾಜ್ಯದಲ್ಲಿ ತಕ್ಕ ಸ್ಥಾನ ಸಿಕ್ಕಿಲ್ಲ. ಹಿಡಿಯಷ್ಟು ಮಂದಿ ತಪ್ಪು ಇಂಗ್ಲಿಷ್ ಬಲ್ಲ ಜನರದೇ ಸರ್ವಾಧಿಕಾರ. ದೇಶ ಭಾಷೆಗಳು ಉನ್ನತ ಸ್ಥಾನಕ್ಕೆ ಬರುವುದು ಎಂದರೆ ಸಮಸ್ತ ಜನಪದಕ್ಕೆ ನಾಲಗೆ ಬಂದಂತೆ. ಇದನ್ನು ವಿರೋಧಿಸುವುದೆಂದರೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವ ಮನೋಧರ್ಮ.

ಭಾಷೆ ಜನರ ಜೀವನಾಡಿ. ಅದರ ಮೂಲಕವೇ ಅವರ ಹೃದಯಸ್ಪಂದನ. ನಮ್ಮ ನಮ್ಮ ಮಾತಿನಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವಷ್ಟು ಸುಲಭವಾಗಿ ಪರಭಾಷೆಯಲ್ಲಿ ಅಸಾಧ್ಯ. ಅಂತಲೇ ಜನತಂತ್ರದ ಸಾಫಲ್ಯಕ್ಕಾಗಿ ಭಾಷಾವಾರು ರಾಜ್ಯ.

ಪ್ರತಿ ಪ್ರಜೆಯೂ ಜನತಂತ್ರದ ವಿಧಿ ವಿಧಾನಗಳಲ್ಲಿ ಪಾಲುಗೊಳ್ಳಲೆಂಬುದೇ ಮಹದಾಶಯ. ಗಾಂಧೀಜಿಯಿಂದ ಹಿಡಿದು ಈ ತತ್ತ್ವಕ್ಕಾಗಿ ದುಡಿದ ಮಹಾನುಭಾವರೇನು ಮೂರ್ಖರೇ? ಈಗ ನಮಗೆ ಉಪದೇಶ ಮಾಡುವ ಜನ ಬಹಳ. ಯಾವ ದೇಶ ಭಾಷೆಯೂ ಒಂದಕ್ಕೆ ಮತ್ತೊಂದು ಹಗೆಯಲ್ಲ. ಪರಸ್ಪರ ಪೂರಕ. ಆದರೆ ಒಂದು ಮರ್ಯಾದೆ. ಅವರ ನಾಡಿನಲ್ಲಿ ಅವರವರ ಭಾಷೆಗೇ ಮೊದಲ ಮರ್ಯಾದೆ. ಎಲ್ಲಾ ರಾಜ್ಯಗಳಲ್ಲೂ ಅಲ್ಪಸಂಖ್ಯರು ಇದ್ದೇ ಇದ್ದಾರೆ. ಅವರ ಮಾತೃಭಾಷೆಗೆ ಧಕ್ಕೆ ಇರತಕ್ಕದ್ದಲ್ಲ, ಆದರೆ ಆ ರಾಜ್ಯದ ಭಾಷೆಯನ್ನು

ಅವರು ಕಲಿಯಬಾರದೆಂಬುದು ಯಾವ ನ್ಯಾಯ? ಅಲ್ಪಸಂಖ್ಯಿಕರ ರಕ್ಷಣೆಗೆ ಯಾವ ಕ್ರಮ ಇದು?

ಈ ಜನ ಆಂದೋಲನ ಇಲ್ಲಿಗೇ ನಿಲ್ಲತಕ್ಕದ್ದಲ್ಲ. ಕನ್ನಡ ಎಲ್ಲ ಹಂತಗಳಲ್ಲಿ ಆಡಳಿತ ಭಾಷೆ ಆಗಲೇಬೇಕು. ಆಗ ಕನ್ನಡದ ಏಳಿಗೆಗೆ ಗತಿ ಬಂದೀತು. ವೇಗ ದೊರೆತೀತು. ಇದರಲ್ಲಿ ಅರೆಮನಸ್ಸು ಈಗ. ಅಂತಲೇ ಇದೊಂದು ವಿವಾದದ ಸಂಗತಿ.

ಶಿಕ್ಷಣ ಕನ್ನಡನಾಡಿನಲ್ಲಿ ಕನ್ನಡ ಮಾಧ್ಯಮದಿಂದಲೇ. ಕರ್ನಾಟಕದ ಆಸಡ್ಡೆ ಹಾಗೂ ಆಂಗ್ಲ ಶಾಲೆಗಳು ಇರುವತನಕ ಕನ್ನಡಕ್ಕೆ ಅಗ್ರಪಟ್ಟ ಮುಗಿಲ ಮಲ್ಲಿಗೆ. ಈ ಶಾಲೆಗಳನ್ನು ಯಾರೇ ನಡೆಸುತ್ತಿರಬಹುದು. ಹಾಲುಗಲ್ಲದ ಹಸುಳೆಗಳಿಗೆ ಇಂಗ್ಲಿಷ್ ಪೂತನಿಯ ಮೊಲೆ ಹಾಲುಣಿಸುವುದು ಘೋರ ಅಪಚಾರ. ಎಷ್ಟು ಜನ ವಿದೇಶಗಳಿಗೆ ಹೋಗುತ್ತಾರೆ? ಬೆರಳೆಣಿಕೆಯಷ್ಟು ಮಂದಿ. ಅವರು ಯಾವ ಭಾಷೆಯನ್ನಾದರೂ ಕಲಿತಾರು. ಸಾರ್ವತ್ರಿಕ ಶಿಕ್ಷಣ ಇರುವುದು ಎಲ್ಲ ಜನರಿಗಾಗಿ. ಇದನ್ನು ಮರೆತುದರಿಂದಲೇ ವಿತಂಡ ವಾದ.

ಕನ್ನಡ ಜನಪದದ ಸರ್ವಾಂಗೀಣ ವಿಕಾಸ ಕನ್ನಡದಿಂದಲೇ. ಎಲ್ಲ ಜ್ಞಾನ ವಿಜ್ಞಾನ ರಾಶಿಯೂ ಅದರಲ್ಲಿ ಸಿಗುವಂತಾದಾಗಲೇ ಈ ಭಾಷೆಯ ಬೆಳವಣಿಗೆ. ಭಾಷೆ ಬರಿಯ ಅಭಿಮಾನದಿಂದ ಬೆಳೆಯದು. ಬಳಸುವುದರಿಂದ ಬೆಳೆದೀತು. ಶ್ರಮವಹಿಸಿ ಎಲ್ಲ ತಿಳಿವನ್ನೂ ಈ ಭಾಷೆಯಲ್ಲಿ ತಂದಾಗಲೇ ಅದರ ಉನ್ನತಿ.

ಈ ಕೆಲಸ ಮಾಡುವವರಾರು? ಇಂಗ್ಲಿಷ್ ವಿದ್ಯಾವಂತರು ತಾವೆಲ್ಲೋ ಪರ ನಾಡಿನಲ್ಲಿ ಹುಟ್ಟಿ ಬಂದವರಂತೆ ಬೀಗುತ್ತಾರೆ. ಕನ್ನಡ ತಿಳಿಯದು ಎಂದು ಹೇಳಿಕೊಳ್ಳುವುದೇ ಅವರಿಗೊಂದು ಗೌರವದ ಹಣೆಪಟ್ಟಿ! ಇಂಥ ಜನ ತಟವಟದ ಮಂದಿ. ಈ ಕಪಟ ಇನ್ನು ಸಾಕು.

ಜನಸ್ತೋಮದ ಉಪ್ಪನ್ನು ಉಣ್ಣುವ ಅಕ್ಷರ ಬಲ್ಲ ಜನ. ಬುದ್ಧಿವಂತರೆನಿಸಿಕೊಂಡವರು ತಮ್ಮ ತಮ್ಮ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಕನ್ನಡವನ್ನು ಸಿರಿಸಂಪದದಿಂದ ತುಂಬಿದ್ದಾರೆ? ಅವರವರೇ ಕೇಳಿಕೊಳ್ಳಲಿ.

ಕನ್ನಡಕ್ಕಾಗಿ ಹೋರಾಟ ಕುರುಡು ಕಾಳಗವಲ್ಲ. ಕನ್ನಡಿಗರ ಅಸ್ತಿತ್ವಕ್ಕಾಗಿ ನಡೆಯುತ್ತಿರುವ ಸೆಣಸಾಟ. ಆಡಳಿತದಲ್ಲಿ, ಶಿಕ್ಷಣದಲ್ಲಿ, ನ್ಯಾಯನಿರ್ವಹಣೆಯಲ್ಲಿ, ಚಲಚ್ಚಿತ್ರ, ಆಕಾಶವಾಣಿ, ದೂರದರ್ಶನಗಳಂಥ ಸಮೂಹ ಮಾಧ್ಯಮಗಳಲ್ಲಿ ಕನ್ನಡದ ಸಹಜ ಸ್ಥಾನಕ್ಕಾಗಿ ಹೂಡಿರುವ ಸಾತ್ವಿಕ ಸಂಘರ್ಷ. ಇದರಿಂದ ನಮಗೆ ಲಾಭ. ಯಾರಿಗೂ ಹಾನಿಯಿಲ್ಲ. ಇದನ್ನು ಅರಿತರೆ ಪರಿಹಾರ ಅತಿ ಸುಲಭ.

ಸರಕಾರಕ್ಕೆ ಮನದಟ್ಟಾಗಿರಬೇಕು. ಜನಮನ ಸುವ್ಯಕ್ತ. ಅದನ್ನು ಗ್ರಹಿಸುವುದೇ ಸೂಕ್ತ.

ಅರಿತೂ ಅರಿಯದಂತಿದ್ದರೆ ಅತ್ಯಂತ ಅವಿವೇಕ. ಹೊಸ ಹೊಸ ತೊಡಕುಗಳಿಗೆ ದಾರಿ. ಯಾವುದೇ ಸರಕಾರವು ಜನರ ಬಯಕೆಯನ್ನು ಧಿಕ್ಕರಿಸಿ ಬಹುಕಾಲ ಬದುಕದು.

■

## ಸಾತ್ವಿಕ ಸಂಘರ್ಷ

ಇಂದು ದಾವಣಗೆರೆಯಲ್ಲಿ ಕರ್ನಾಟಕದ ಎಲ್ಲ ಕಡೆಯ ಪ್ರತಿನಿಧಿಗಳ ಮಹಾಸಭೆ. ಕನ್ನಡ ಸ್ಥಾನ-ಮಾನ ಕುರಿತು ವಿಚಾರ ವಿನಿಮಯ. ಮುಂದೇನು? ಎಂಬ ವಿಷಯದ ತೀರ್ಮಾನ.

ಕರ್ನಾಟಕ ಸರಕಾರದಿಂದ ಕನ್ನಡಕ್ಕೆ ದ್ರೋಹ. ಘೋಷಿಸಿರುವ ಸೂತ್ರ ಕನ್ನಡಕ್ಕೆ ಕುತ್ತು. ಅಲ್ಪಸಂಖ್ಯಾತರ ಹಿತರಕ್ಷಣೆಯ ನೆಪ. ಎಲ್ಲವೂ ಜಳ್ಳು. ಮುಖ್ಯವಾಗಿ ಕೆಲ ಪಟ್ಟಭದ್ರ ಹಿತಾಸಕ್ತಿಗಳ ಮೆರೆತ.

ಚಳವಳಿ ತೀವ್ರಗೊಳ್ಳಲೇಬೇಕು. ಅಹಿಂಸಾತ್ಮಕವೇ ಆಗಿರಬೇಕು. ಅಹಿಂಸಾತ್ಮಕ ಚಳವಳಿ ನಡೆಸಿದರೂ ಸರಕಾರದ ದಬ್ಬಾಳಿಕೆ ಅವರ್ಣನೀಯ. ನಿನ್ನೆ ಬೆಂಗಳೂರಿನಲ್ಲಿ ಧರಣಿ ಕುಳಿತ ಇಬ್ಬರನ್ನು ಬಂಧಿಸಿದುದೇಕೆ? ಕನ್ನಡ ಪಕ್ಷದ ಕಾರ್ಯಕರ್ತರನ್ನು ಹಲವು ಕಾರಣಗಳ ಮೇಲೆ ಬಂಧಿಸಿ ಒಂದೊಂದು ದಿನ ಒಂದೊಂದು ಠಾಣೆಗೆ ದೂಡುತ್ತಿರುವುದೇಕೆ?

ಕರ್ನಾಟಕ ಸರಕಾರ ಕನ್ನಡ ಜನಪದದೊಡನೆ ನೇರ ಸಂಘರ್ಷಕ್ಕೆ ಸಿದ್ಧಗೊಳ್ಳುತ್ತಿದೆಯೇ? ಕನ್ನಡಿಗರು ಹೇಡಿಗಳಲ್ಲ, ಕುರಿ ಮಂದೆಯಲ್ಲ, ಕೆಲವರು ಅಂಥವರಿರಬಹುದು. ಇಂದಿನ ಎಚ್ಚೆತ್ತ ಕನ್ನಡಿಗ ವೀರಾಗ್ರಣಿ. ಕಡುಗಲಿ. ಕಡೆತನಕ ಹೋರಾಡಿಯೆ ಗೆದ್ದಾನು.

ಹಲವು ಬಾರಿ ರುಜುವಾತಾದ ಸತ್ಯ ಇದು. ಸ್ವಾತಂತ್ರ್ಯ ಸಮರದಲ್ಲಿ ಏಕೀಕರಣದ ಹೋರಾಟದಲ್ಲಿ, ನಾಮಕರಣದ ಆಗ್ರಹದಲ್ಲಿ ಗೆದ್ದಿದ್ದೇವೆ. ಕನ್ನಡ ನುಡಿಗೆ ಅಗ್ರಪಟ್ಟ ಕಟ್ಟುವುದರಲ್ಲೂ ಗೆಲ್ಲುತ್ತೇವೆ.

ಇದು ಕೇವಲ ಕನ್ನಡವನ್ನು ಪ್ರಥಮ ಭಾಷೆ ಮಾಡುವ ಚಳವಳಿ ಮಾತ್ರವಲ್ಲ, ಕರ್ನಾಟಕದಲ್ಲಿ ಎಲ್ಲ ರಂಗಗಳಲ್ಲೂ ಕನ್ನಡಕ್ಕೇ ಅಗ್ರಸ್ಥಾನ. ಅದು ಬರುವವರೆಗೆ ಈ ಹೋರಾಟಕ್ಕೆ ಕೊನೆ ಇಲ್ಲ.

ಶಿಶುವಿಹಾರದಿಂದ ಸ್ನಾತಕೋತ್ತರ ವ್ಯಾಸಂಗದವರಿಗೆ ಕನ್ನಡವೇ ಮಾಧ್ಯಮ ಆಗತಕ್ಕದ್ದು. ಅವರವರ ಮಾತೃಭಾಷೆಯನ್ನು ಒಂದು ಹಂತದವರೆಗೆ ಕಲಿಯಲು ಯಾರ ಅಡ್ಡಿಯೂ ಇಲ್ಲ. ಕನ್ನಡ ನಾಡಿನಲ್ಲೇ ಉಳಿಯ ಬಯಸುವವರು ಕನ್ನಡವನ್ನೇ ಪ್ರಧಾನವಾಗಿ ಕಲಿಯತಕ್ಕದ್ದು. ಎಲ್ಲ ವ್ಯವಹಾರಕ್ಕೂ ಅದನ್ನೇ ಬಳಸತಕ್ಕದ್ದು. ಆಡಳಿತದಲ್ಲಿ, ನ್ಯಾಯನಿರ್ವಹಣೆಯಲ್ಲಿ, ಜನ

ಜೀವನದ ಎಲ್ಲ ವ್ಯವಹಾರದಲ್ಲಿ ಕನ್ನಡ ತಾನೇ ತಾನಾಗಿ ಮೆರೆಯಲಿ.

ಕನ್ನಡಿಗರು ಎಂದೂ ರಾಷ್ಟ್ರಪ್ರೇಮಿಗಳು. ಇತರರಿಂದ ದೇಶಭಕ್ತಿ ಕಲಿಯಬೇಕಾದ ದುಸ್ಥಿತಿಯಲ್ಲಿ ನಾವಿಲ್ಲ. ಹಾಗೆ ನೋಡಿದರೆ ಬೇರೆಯವರಿಗೆ ನಾವು ಮಾದರಿ. ನಮ್ಮ ಮನೆಯೇ ಹತ್ತಿ ಉರಿಯುತ್ತಿರುವಾಗ ಅದನ್ನು ಉಳಿಸುವುದೇ ನಮ್ಮ ಪರಮಧರ್ಮ. ಪ್ರಥಮ ಕರ್ತವ್ಯ. ಇದೇ ಈ ಹೋರಾಟದ ಮರ್ಮ.

ಕನ್ನಡಕ್ಕಾಗಿ ನಡೆಯುತ್ತಿರುವ ಈ ಸಂಘರ್ಷ ಎಲ್ಲ ಭಾರತೀಯ ಭಾಷೆಗಳ ಪರವಾದ ಸಮರ. ಹಿಡಿಯಷ್ಟು ಮಂದಿಯ ದಬ್ಬಾಳಿಕೆಯನ್ನು ಹರಿದೊಗೆಯುವ ಜನಪದದ ಹೋರಾಟ. ಕಡೆಗಣಿಸಲ್ಪಟ್ಟ ಕಟ್ಟ ಕಡೆಯ ಮನುಷ್ಯನಿಗಾಗಿ ಹೂಡಿರುವ ಚಳವಳಿ. ಇದು ಸರಿಯಾಗಿ ತಿಳಿಯಬೇಕಾದ ವಿಚಾರ.

ಬರಿಯ ಆವೇಶದ ಆಂದೋಲನವಲ್ಲ, ವಿಚಾರಭರಿತವಾದ, ಅತ್ಯಂತ ಸ್ಫುಟವಾದ ಹೋರಾಟ. ಇಲ್ಲಿ ರಾಜಿಗೆ ಎಡೆಯಿಲ್ಲ. ಕನ್ನಡಕ್ಕೆ ಕೇಡು ಬಗೆದಿರುವ ಆಡಳಿತಗಾರರೊಡನೆ ರಾಜಿಯೇ? ಕನ್ನಡದ ಮುಖವಾಡ ಧರಿಸಿ ಸ್ವಾರ್ಥ ಸಾಧಿಸುತ್ತಿರುವ 'ಮೀರ್ ಸಾದಿಕ್'ರೊಡನೆ ಸಂಧಿಯೇ? ಖಂಡಿತ ಸಾಧ್ಯವಿಲ್ಲ.

ವಿಶ್ವ ಕನ್ನಡ ಸಮ್ಮೇಳನವಂತೆ! ಆರು ಕೋಟಿ ರೂಪಾಯಿಗಳ ವೆಚ್ಚ, ಬಡ ಬೋರೇಗೌಡನ ಬೆವರಿನಿಂದ ಬಂದ ಮೊತ್ತ ಅಲ್ಲವೇ ಅದು? ಇದನ್ನು ಆಮಿಷವಾಗಿ ಒಡ್ಡಿ ಕನ್ನಡ ಸಾಹಿತಿಗಳನ್ನು, ಕಲಾವಿದರನ್ನು ಕೊಂಡುಕೊಳ್ಳುವ ಒಳಸಂಚು. ನಮಗೆ ಬೇಕಿಲ್ಲ ಈ ಸಮ್ಮೇಳನ. ಯಾವ ಪುರುಷಾರ್ಥಕ್ಕಾಗಿ, ಯಾರನ್ನು ಮೆರೆಸಲಿಕ್ಕಾಗಿ? ಕನ್ನಡ ಸಾಹಿತಿಗಳು ಮಾರಾಟಕ್ಕಿಲ್ಲ. ಮಾರಿಕೊಳ್ಳುವವರು ಕನ್ನಡದ ಹಗೆಗಳು.

ಕೆಲವರಿಗೆ ಪ್ರಜ್ಞಾವಾದ. ಸರಕಾರದ ನಿರ್ಧಾರದಲ್ಲಿ ಮುಖ ಉಳಿಸಿಕೊಳ್ಳಬೇಕೆಂಬ ಚಪಲ. ಪದವಿ-ಪೀಠಗಳ ಮೋಹ. ಇಂಥವರಿಂದ ಕನ್ನಡಕ್ಕೆ ಸೇವೆ ಸಲ್ಲದು. ನಯವಂಚನೆಯೇ ಇವರ ತಂತ್ರ. ಅಂತಲೇ ಕನ್ನಡ ಜನ ಇಂಥವರನ್ನು ಎಂದಿಗೂ ಮೆಚ್ಚರು. ಇಂಥ ಸಮಯಸಾಧಕರು ಯಾವಾಗಲೂ, ಎಲ್ಲ ಆಂದೋಳನಗಳಲ್ಲೂ ಇದ್ದೇ ಇರುತ್ತಾರೆ. ಅವರನ್ನು ಕಡೆಗಣಿಸುವುದೇ ಲೇಸು. ಈ ಚಳವಳಿಯಲ್ಲಿ ಭಾಗವಹಿಸದ ಮಂದಿ ಯಾವ ಗೌರವಕ್ಕೂ ಪಾತ್ರರಲ್ಲ.

ದಾವಣಗೆರೆಯ ಸಭೆ ಗಟ್ಟಿ ಮುಟ್ಟಾದ ನಿರ್ಧಾರಕ್ಕೆ ಬಂದೇ ಬಂದೀತು. ಸಾತ್ವಿಕ ಸಂಘರ್ಷವನ್ನು ಪ್ರಬಲಗೊಳಿಸೀತು. ಅನುಮಾನವಿಲ್ಲ, ಎಲ್ಲ ಕನ್ನಡಿಗರೂ ಏಕಪುರುಷನಂತೆ ಎದ್ದುನಿಲ್ಲಬೇಕಾದ ಪರ್ವಸಮಯ. ಇದೊಂದು ಐತಿಹಾಸಿಕ ಹೋರಾಟ. ಅದಕ್ಕೆ ಬೆಂಬಲವಾಗಿ ನಿಲ್ಲುವವರು ಕನ್ನಡದ ಕಟ್ಟಾಳುಗಳೆನಿಸಿಕೊಂಡಾರು. ನಿಲ್ಲದವರು ಇತಿಹಾಸದ ತಿಪ್ಪೆಗೆ ಸೇರಿಯಾರು.

■

## ಕನ್ನಡಕ್ಕೆ ಕುತ್ತು

ಇದು ಒಂದು ವಿಡಂಬನೆ. ಗೋಕಾಕ್ ಸಮಿತಿಯ ವರದಿಯ ಅಣಕ. ಪ್ರಥಮ ಭಾಷೆಯಾಗಿ ಕರ್ನಾಟಕದಲ್ಲಿ ಕನ್ನಡ ಸಾರ್ವತ್ರಿಕ ಆಗದು. ಕನ್ನಡ ಮಾತೃಭಾಷೆ ಆಗಿರುವವರಿಗೆ ಮಾತ್ರ ಕನ್ನಡ ಕಡ್ಡಾಯ ಪ್ರಥಮಭಾಷೆಯಂತೆ. ಹಿಂದೀ ತೆಲುಗು ತಮಿಳು ಉರ್ದು ಮರಾಠೀ ಇಂಗ್ಲಿಷ್ ಮಾತೃಭಾಷೆಯವರಿಗೆ ಅವರವರ ಮಾತೃಭಾಷೆಯೇ ಪ್ರಥಮ ಭಾಷೆಯಂತೆ. ನೂರೈವತ್ತು ಅಂಕಗಳಂತೆ.

ಇದಕ್ಕೆ ಯಾವ ಕನ್ನಡಿಗನ ಒಪ್ಪಿಗೆಯೂ ಇಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಪಟ್ಟ ಸಿಗಲಿಲ್ಲ. ಇದು ಮೋಸದ ಮಾಯಾಜಾಲ. ಮಾತೃಭಾಷೆಯ ನೆಪದಲ್ಲಿ ಕನ್ನಡಕ್ಕೆ ಮಹಾದ್ರೋಹ. ತರ್ಕಕ್ಕೆ ನಿಲುಕುವಂಥದಲ್ಲ. ಈ ಭಾಗ್ಯಕ್ಕೆ ಗೋಕಾಕ್ ಸಮಿತಿಯನ್ನು ನೇಮಿಸಬೇಕಾಗಿಯೇ ಇರಲಿಲ್ಲ.

ಕನ್ನಡವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳದ ಇತರ ಭಾಷಿಕರು ಎರಡನೆಯ ಪಟ್ಟಿಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ತೆಗೆದುಕೊಳ್ಳುವರಂತೆ. ಇದೊಂದು ಕಣ್ಣೊರೆಸುವ ಕ್ರಮ. ಈ ಎರಡು ವಿಷಯಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪರೀಕ್ಷಾ ವಿಷಯಗಳು.

ಕನ್ನಡೇತರ ಮಾಧ್ಯಮ ಶಾಲೆಗಳಲ್ಲಿ ಮೂರನೆಯ ತರಗತಿಯಿಂದ ಕನ್ನಡವನ್ನು ಕಲಿಸಲು ಐದು ಸಾವಿರ ಕನ್ನಡ ಶಿಕ್ಷಕರ ಹುದ್ದೆಗಳಂತೆ. ಎರಡು ತಿಂಗಳಲ್ಲಿ ಅವರ ನೇಮಕ. ಹೆಚ್ಚಿನ ಸಂಖ್ಯೆಯಲ್ಲಿರುವ ಉರ್ದು ಶಾಲೆಗಳಲ್ಲಿ ಈ ವ್ಯವಸ್ಥೆ, ಬರುವ ಶಿಕ್ಷಣ ವರ್ಷದಿಂದ ಪ್ರಾರಂಭ. ಪ್ರೌಢ ಶಾಲೆಗಳಲ್ಲಿ ಭಾಷಾ ಅಭ್ಯಾಸ ವಿಧಾನ 1988-89ರಿಂದ.

ಒಟ್ಟಿನಲ್ಲಿ ಅಲ್ಪಸಂಖ್ಯಾಕರ ಭಾಷೆಗಳ ಹೆಸರಿನಲ್ಲಿ ಕನ್ನಡಕ್ಕೆ ಪರಮ ಅನ್ಯಾಯ. ಇದನ್ನು ಸಹಿಸಿಕೊಳ್ಳುವುದೆಂದರೆ ಕನ್ನಡವನ್ನು ಕೈಬಿಟ್ಟತೆಯೇ. ಸಂಸ್ಕೃತವನ್ನು ಪ್ರಥಮ ಭಾಷೆಯ ಪಟ್ಟಿಯಿಂದ ತೆಗೆದುದು ಒಂದೇ ಪರಾಕ್ರಮ. ಕನ್ನಡಕ್ಕಂತೂ ನ್ಯಾಯ ಸಲ್ಲಲಿಲ್ಲ.

ತೆಲುಗು, ತಮಿಳು, ಉರ್ದು, ಮರಾಠಿ, ಕನ್ನಡ ಬದಲು ಪ್ರಥಮ ಭಾಷೆ ಆದರೆ ಕನ್ನಡಕ್ಕೆ ಕುತ್ತು. ಕರ್ನಾಟಕದಲ್ಲಿ ಕನ್ನಡ ಮನೆ ಒಡತಿ ಆಗುವ ಕನಸು ಚೂರು ಚೂರು.

ಇಂಥ ಹುಳುತಿಂದ ಹರಕು-ಮುರಕು ಸೂತ್ರವನ್ನು ಒಪ್ಪಿದರೆ ಕನ್ನಡಿಗರ ಆತ್ಮಹತ್ಯೆಯೇ

ಸರಿ. ಇದನ್ನು ವಿರೋಧಿಸಲೇಬೇಕು. ಕನ್ನಡಕ್ಕೆ ಅಗ್ರಸ್ಥಾನಕ್ಕಾಗಿ ಬಿಡುವಿಲ್ಲದ ಹೋರಾಟ ಸಾಗಲೇಬೇಕು.

ಗೋಕಾಕ್ ಸಮಿತಿಯ ವರದಿಯ ತಿರುಳನ್ನು ಒಪ್ಪಿರುವರಂತೆ! ಆ ವರದಿಯ ತಿರುವು-ಮುರುವು ಇದು. ಸರಳ ಸೂತ್ರ ಹೋಗಿ ಗೊಂದಲ ಎಬ್ಬಿಸುವ ದುಷ್ಟಸಂಚು ಯಾವ ಕನ್ನಡಿಗರೂ ಇದಕ್ಕೆ ತಲೆದೂಗತಕ್ಕದ್ದಲ್ಲ. ಇದು ಮಹಾಮೋಸ.

## ಕೆಂಡದೊಡನೆ ಸರಸ

ಚಿತ್ರದುರ್ಗದಲ್ಲಿ ಶನಿವಾರ ಗೋಳೀಬಾರು. ಮೂವರು ಆಹುತಿ. ಶಾಂತಿಯುತ ಸತ್ಯಾಗ್ರಹಿಗಳ ಮೇಲೆ ಟ್ರಕ್ ಓಡಿಸಲು ಪ್ರಯತ್ನ. ಕನ್ನಡ ವಿರೋಧಿಗಳ ಕುತಂತ್ರ.

ಕಳ್ಳನಿಗೆ ಒಂದು ಪಿಳ್ಳೆ ನೆವ–ಗೋಳೀಬಾರು. ಅಮಾಯಕರ ಬಲಿ. ಎಲ್ಲ ದಬ್ಬಾಳಿಕೆ ಸರಕಾರಗಳೂ ನಡೆಸುವ ಕುತಂತ್ರ.

ಬೆಂಗಳೂರಿನಲ್ಲಿ ನಡೆದದ್ದಾದರೂ ಏನು? ಅಪಾರ ಜನಸಮೂಹ ಸೇರುವ ಕಡೆ ತಕ್ಕ ವ್ಯವಸ್ಥೆ ಬೇಡವೇ? ಇಲ್ಲಿಯೂ ಬೇಕೆಂತಲೇ ಬಲಪ್ರಯೋಗ. ಜನತೆಯನ್ನು ಯಾರೂ ಪ್ರಚೋದಿಸಬೇಕಿಲ್ಲ, ಪೊಲೀಸರೇ ಸಾಕು.

ಕಳೆದ ಒಂದೆರಡು ವಾರದಿಂದ ಎಲ್ಲವೂ ಪ್ರಶಾಂತ. ಚಳವಳಿ ನಿಯಮಬದ್ಧ. ಅದಕ್ಕೆ ಮಸಿ ಬಳಿಯುವ ಕುತಂತ್ರ. ಕನ್ನಡವನ್ನು ಬೆಂಬಲಿಸಿದ ಯಾವ ನಾಯಕರೂ ತಪ್ಪಿಯೂ ಹಿಂಸಾಚಾರಕ್ಕೆ ಉದ್ರೇಕಿಸಿಲ್ಲ. ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿಲ್ಲ. ನಿಜಕ್ಕೂ ಶ್ರೇಷ್ಠ ಸತ್ಯಾಗ್ರಹ. ಅದನ್ನು ಸಭ್ಯವಾಗಿ ಎದುರಿಸುವ ಈ ಎಲ್ಲ ಹಿಂಸಾಚಾರ.

ಸರಕಾರದ ನಡೆ ಅಕ್ಷಮ್ಯ. ನಿಷೇಧಾಜ್ಞೆಯು ನಿಜಕ್ಕೂ ದಬ್ಬಾಳಿಕೆಯ ಕ್ರಮ. ಗಾಂಧೀ ಮಾತು ನೆನಪಿರಲಿ. ''ಶಾಸನವೇ ಶಾಸನಬಾಹಿರವಾದಾಗ ಉಲ್ಲಂಘನೆಯೇ ಕರ್ತವ್ಯ''. ಇದನ್ನು ವಯೋವೃದ್ಧ ಶ್ರೀರಂಗರಾದಿಯಾಗಿ ಎಲ್ಲ ಚಳವಳಿಕಾರರೂ ಅನುಸರಿಸಿದ್ದು.

ಈ ಘನ ವಿದ್ವಾಂಸರುಗಳನ್ನು ಕಲಾವಿದರನ್ನು ಬೀದಿಗಿಳಿಯುವಂತೆ ಮಾಡಿದವರಾರು? ಸರಕಾರವೇ ತಾನೇ? ತನ್ನ ಕೈ ಮೀರಿಹೋದಾಗ ಇಂಥ ದಬ್ಬಾಳಿಕೆಯ ಕ್ರಮ ಕೈಗೊಳ್ಳುವುದು ಎಲ್ಲ ಕೆಟ್ಟ ಸರಕಾರಗಳ ಹೆಗ್ಗುರುತು.

ಯಾರನ್ನು ಅಂಜಿಸುತ್ತಿದ್ದಾರೆ? ಕನ್ನಡ ಜನಪದ ಕೆರಳಿ ನಿಂತಿದೆ. ಕನಲಿದೆ. ಕೆಂಡವಾಗಿದೆ. ಅದರೊಡನೆ ಸರಸ ಸಲ್ಲ, ಎಚ್ಚರವಿರಲಿ! ಜನತೆಯನ್ನು ಎದುರು ಹಾಕಿಕೊಂಡ ಯಾವ ಸರಕಾರವೂ ಇದುವರೆಗೆ ಉಳಿದಿಲ್ಲ, ಅಂತೆಯೇ ಇಂದಿನದೂ.

ಇಷ್ಟಾದರೂ ಎಲ್ಲ ಕಡೆ ಜನರ ಚಳವಳಿ ಆಯ ತಪ್ಪಿಲ್ಲ, ಹಿಂಸೆಗೆ ಎಡೆ ಕೊಟ್ಟಿಲ್ಲ. ಶಾಂತಿಯು ಪ್ರತಿಭಟನೆ ನಿಂತಿಲ್ಲ. ಸರಕಾರಕ್ಕೆ ಇದೊಂದು ದೊಡ್ಡ ಪಾಠ. ಬಲಪ್ರಯೋಗದಿಂದ ಜನತಾ

ಆಂದೋಲನವನ್ನು ಮುರಿಯಲಾರಿರಿ. ಜನರ ಬೆನ್ನು ಮೂಳೆ ಮುರಿಯಬಲ್ಲಿರಿ. ಅದು ಸುಂಟರಗಾಳಿಯಾದೀತು. ನಿಮ್ಮನ್ನೇ ಎತ್ತಿ ಬಿಸಾಡೀತು!

ಹೌದು. ರೊಚ್ಚಿಗೆದ್ದ ಜನರಿಂದ ಬೆಂಗಳೂರಿನಲ್ಲಿ ಸಾಕಷ್ಟು ಆಸ್ತಿಪಾಸ್ತಿಗೆ ನಷ್ಟ. ಇಂಥ ಕೆಲಸ ಮಾಡತಕ್ಕದ್ದಲ್ಲ. ಸುಟ್ಟ ಬಸ್ಸುಗಳು ಅಥವಾ ಇತರ ವಾಹನಗಳು ನಮ್ಮ ಆಸ್ತಿಯೇ. ಅದಕ್ಕೆ ಪರಿಹಾರವನ್ನು ನಾವೇ ಕೊಡಬೇಕಾದೀತು. ಆ ಹೊರೆ ನಮ್ಮ ಮೇಲೆಯೇ ಬಿದ್ದೀತು. ಕೆಟ್ಟ ಹೆಸರು ನಮಗೇ ಬಂದೀತು. ಎಂಥ ಪ್ರಚೋದನೆಯ ಇದಿರಿನಲ್ಲೂ ಶಾಂತಿಯುತ ಚಳವಳಿಯೇ ಸರಿಯಾದ ಹಾದಿ.

■

# ಎದ್ದು ನಿಲ್ಲೋಣ

ಕನ್ನಡ ಕುಲಕೋಟಿಯ ಅಭಿಮಾನದ ಪುತ್ಥಳಿ ಡಾ॥ರಾಜಕುಮಾರ್. ಈ ಮಾತಿಗೆ ಅಕ್ಷರಶಃ ಅರ್ಹರು. ಅವರು ಇತ್ತಿರುವ ಹೇಳಿಕೆ ಕನ್ನಡ ನಾಡಿನ ಎಲ್ಲೆಡೆಯ ಜನರಲ್ಲಿ ಕೆಚ್ಚು ಮೂಡಿಸೀತು. ಶಾಂತಿಯು ಚಳವಳಿಗೆ ಹುರುಪು- ಹುನ್ನಾರು ಒದಗಿಸೀತು. ಇದೇ ಕೆಲಸವನ್ನು ಎಷ್ಟೋ ಮಂದಿ ಸಾಹಿತಿವರೇಣ್ಯರು ಮಾಡಬಹುದಿತ್ತು. ಅವರೇಕೋ ತೆಪ್ಪಗೆ.

ಸರಕಾರ ಸಿದ್ಧಪಡಿಸಿರುವ ಸೂತ್ರ ಕನ್ನಡಕ್ಕೆ ಕುತ್ತು. ಕನ್ನಡ ಜನಕೋಟಿಗೆ ಆಪತ್ತು. ಅದರಲ್ಲಿಯೂ ಹಳ್ಳಿಗಾಡಿನಲ್ಲಿರುವ ಕನ್ನಡದ ಮಣ್ಣಿನ ಮಕ್ಕಳಿಗೆ ನಿಜಕ್ಕೂ ಅನಾಹುತವೇ ಸರಿ. ಯಾರೋ ಕೆಲವರಿಗಾಗಿ ಇಡೀ ನಾಡನ್ನೇ ಬಲಿಕೊಡುವ ಈ ತಂತ್ರ ಅತ್ಯಂತ ಖಂಡನಾರ್ಹ.

ಗಾಂಧೀ ಹೇಳಿದರು: "ಈ ದೇಶ ಇರುವುದು ಹಳ್ಳಿಗಳಲ್ಲಿ" ಈಗಿನ ಸರಕಾರಗಳು ಮಾಡುತ್ತಿರುವುದು ಕೇವಲ ಹಿಡಿಯಷ್ಟು ಮಂದಿ ಪಟ್ಟಣಿಗರ ಹಿತಸಾಧನೆ. ಅದರಲ್ಲೂ ಪಟ್ಟಣದ ಮಂದಿಗೆಲ್ಲ ನ್ಯಾಯ ಕನಸು. ಕೆಲವರಿಗೆ ಮಾತ್ರ ಎಲ್ಲ ರಿಯಾಯಿತಿ. ಬಹುಸಂಖ್ಯರ ಹಿತ ಬಲಿಗೊಟ್ಟು ಅಲ್ಪಸಂಖ್ಯರ ಹಿತ ಎತ್ತಿ ಹಿಡಿಯಬೇಕೆಂದು ಯಾವ ಶಾಸ್ತ್ರದಲ್ಲಿ ಹೇಳಿದೆ? ಇದು ಯಾವ ರಾಜನೀತಿ? ಮುಖ್ಯಮಂತ್ರಿಯ ಹುರುಳಿಲ್ಲದ ಮನವಿ. ಹೊಸದುರ್ಗ ಬಿದರೆಗಳಲ್ಲಿ ಮರುಚುನಾವಣೆಯ ನೆಪ. ಅಲ್ಲಿಯತನಕ ಕನ್ನಡ ನಾಡು ಉರಿಯಬೇಕೇ? ಕನ್ನಡ ಜನತೆಯ ಮಾನ ಸೂರೆ ಆಗಬೇಕೇ? ಚುನಾವಣೆಗಿಂತ ಮುಖ್ಯ ಕೆಲಸ ಇದು. ಈ ಪರಿವೆಯೇ ಇಲ್ಲದ ರಾಜ್ಯ ಸರಕಾರ.

ಅಲ್ಲಲ್ಲಿ ಶಾಸಕರಿಗೆ, ಮಂತ್ರಿಗಳಿಗೆ ಮುತ್ತಿಗೆ. ಜನರನ್ನು ಎದುರಿಸಲೂ ಧೈರ್ಯವಿಲ್ಲದ ಆಡಳಿತಗಾರರು! ಭದ್ರವಾದ ಪೊಲೀಸ್ ಪಹರೆಯಲ್ಲಿ ತಿರುಗಾಡಬೇಕಾದ ಶೋಚನೀಯ ಸ್ಥಿತಿ. ಇಂಥವರನ್ನು ಆಳುವವರನ್ನಾಗಿ ಪಡೆದಿರುವ ಕನ್ನಡಿಗರ ದುರವಸ್ಥೆ ಹೇಳತೀರದು.

ಹೊಸದುರ್ಗ, ಬಿದರೆಗಳಲ್ಲಿ ಕನ್ನಡವೇ ಪ್ರಶ್ನೆಯಾಗಲಿ, ಒಂದು ಜನಪದಕ್ಕೆ ತಮ್ಮ ಭಾಷೆಯೇ ಜೀವದ ಉಸಿರು. ಅದಕ್ಕೇ ಕುತ್ತು ಕವಿದಾಗ ಜನಸ್ತೋಮ ಉಸಿರಾಡುವುದಾದರೂ ಹೇಗೆ? ಅವರಿಗೆ ಸಲ್ಲಬೇಕಾದ ನ್ಯಾಯ ಸಿಗದಾದಾಗ ಅವರೇಕೆ ಇಂಥ ಸರಕಾರದ ಪಕ್ಷಕ್ಕೆ ಮತ ಕೊಡಬೇಕು?

ಇತ್ತ ಕನ್ನಡದ ಪರವಾದ ಚಳವಳಿ. ಅವನ್ನು ಹತ್ತಿಕ್ಕಲು ಎಲ್ಲೆಡೆ ನಿಷೇದಾಜ್ಞೆ, ಬಂಧನದ ಸುದ್ದಿ ಅನುದಿನದ ವಾರ್ತೆ. ಪೊಲೀಸರ ದೌರ್ಜನ್ಯಕ್ಕೆ ಮಿತಿಯೇ ಇಲ್ಲ. ಅತ್ತ ನೋಡಿದರೆ ರೈತ ಚಳವಳಿ. ಅದರ ಮುಂದಾಳುಗಳನ್ನು ಡಕಾಯಿತರಂತೆ ನೋಡುತ್ತಿರುವ ದುಷ್ಟ ಸರಕಾರ. ಅವರಿಗೂ ಕಣ್ಣೊರೆಸುವಂಥ ಕುಟಿಲ ಹೇಳಿಕೆ.

ರಾಜಿಗಾಗಿ ಎಷ್ಟೋ ಸೂತ್ರಗಳು. ಒಂದರಲ್ಲೂ ಅರ್ಥವಿಲ್ಲ. ಇವೆಲ್ಲವನ್ನೂ ಅಳೆದು, ಸುರಿದು ತೂಗಿನೋಡಿದ ಬಳಿಕವೇ ಗೋಕಾಕ ಸಮಿತಿಯ ವರದಿ. ಅಲ್ಲಿ ನಡೆದ ಚರ್ಚೆಗಿಂತ ಮತ್ತಾವ ಚರ್ಚೆ ಬೇಕು? ಅದರಲ್ಲಿರುವ ಸತ್ವಕ್ಕಿಂತ ಮತ್ತಾವುದು ಹೆಚ್ಚು ಸತ್ವಶಾಲಿ?

ಎಂದೋ ಒಂದು ದಿನ ಮಾತುಕತೆ ನಡೆಸುವರಂತೆ. ಅವರಿಗೆ ಬಿಡುವಾದಾಗ, ಚಳವಳಿ ಪ್ರಬಲ ಆಗುತ್ತಿರುವಾಗ ಮಾಡಬೇಕಾದ ಕೆಲಸ ಮುಂದೊಂದು ಕಾಲದಲ್ಲಿ ನಡೆದರೆ ಯಾರು ಬಂದಾರು? ಎಂದಮೇಲೆ ಹತ್ತನೆಯ ದಿನಾಂಕದ ತರುವಾಯ ತೆಪ್ಪಗೆ ಕುಳಿತುಕೊಳ್ಳುವುದು ತಪ್ಪಾದೀತು.

ಕರ್ನಾಟಕದಲ್ಲಿ ಅನೇಕ ಮಂದಿ ನಾಗರಿಕ ಸ್ವಾತಂತ್ರ್ಯ ಪ್ರೇಮಿಗಳು. ಈಗ ನಡೆದಿರುವುದು ನಾಗರಿಕ ಸ್ವಾತಂತ್ರ್ಯ ಅಪಹರಣ ಅಲ್ಲವೇ? ಸಭೆ ನಡೆಸುವಂತಿಲ್ಲ, ಇಬ್ಬರು ಸಹ ಧರಣಿ ಕುಳಿತುಕೊಳ್ಳುವಂತಿಲ್ಲ, ಪ್ರೇಕ್ಷಕರನ್ನೂ ಸೆರೆ ಹಿಡಿಯುವ ದುರಂಹಕಾರ. ಗಡೀಪಾರಿನ ಬೆದರಿಕೆ. ಇವೆಲ್ಲ ನಾಗರಿಕ ಸ್ವಾತಂತ್ರ್ಯಗಳ ನೇರ ನಿರಾಕರಣೆ. ಈ ದುಷ್ಕೃತ್ಯಗಳನ್ನು ಖಂಡಿಸಬೇಕಾದುದು ಪ್ರತಿಯೊಬ್ಬ ಜನತಂತ್ರ ಪ್ರೇಮಿಗಳ ಕರ್ತವ್ಯ. ನಾಗರಿಕ ಸ್ವಾತಂತ್ರ್ಯಗಳ ವಿಷಯದಲ್ಲಿ ತವಕ ಉಳ್ಳ ಎಲ್ಲ ಸಂಸ್ಥೆಗಳ ಆದ್ಯಕರ್ತವ್ಯ.

ಆದೇಶದ ಮಾತಲ್ಲ, ಅತಿರೇಕದ ನಡೆಯಲ್ಲ. ಕನ್ನಡ ನಾಡಿನಲ್ಲಿ ಕನ್ನಡ ಉಳಿಯಬೇಕಾದರೆ ಪ್ರತಿಯೊಬ್ಬ ಕನ್ನಡಿಗನೂ ಕಣಕ್ಕೆ ಇಳಿಯಲೇಬೇಕು. ಮನೆ ಮಾತು ಯಾವುದೇ ಇದ್ದೀತು. ಕನ್ನಡಕ್ಕಾಗಿ ಒಕ್ಕೊರಲಿನ ದನಿ ಎತ್ತಬೇಕಾದ ಕಾಲ. ಏಕಪುರುಷನಂತೆ ಎದ್ದು ನಿಲ್ಲಬೇಕಾದ ಕ್ಷಣ.

■

## ಕನ್ನಡದ ಕಳಕಳಿ

ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ಕೆಲಸವನ್ನು ತೀವ್ರವಾಗಿ ಮುಂದುವರಿಸಲಾಗುತ್ತಿದೆ. ಅರ್ಥಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಈ ಮಾತನ್ನು ಓದಿದವರಿಗೆಲ್ಲ ಸಂತೋಷವಾಗುತ್ತದೆ ನಿಜ. ಆದರೆ ಅದು ಎಷ್ಟುಪಾಲು ಕೃತಿಯಲ್ಲಿ ಇಳಿದಿದೆ? ಕೆಲಮಟ್ಟದ ನ್ಯಾಯಾಲಅಜಿಯಿರಿಗಳಲ್ಲಿ ನಡವಳಿಕೆ ಎಲ್ಲ ಕನ್ನಡದಲ್ಲೇ ನಡೆಯಬೇಕೆಂದು ಹೇಳಲಾಗಿದೆ. ಜಿಲ್ಲೆ ಮತ್ತು ವಿಭಾಗೀಯ ಮಟ್ಟದಲ್ಲಿ ಸರ್ಕಾರೀ ನೌಕರರು ಟಿಪ್ಪಣಿಗಳನ್ನು ಪತ್ರವ್ಯವಹಾರವನ್ನು ಕನ್ನಡದಲ್ಲಿ ಮಾಡಲು ತರಬೇತಿಯನ್ನು ಕೊಡಲಾಗುತ್ತಿದೆಯಂತೆ. ಕಚೇರಿಯ ಕ್ರಮಗಳಿಗೆ ಮಾರ್ಗದರ್ಶಿಯಾಗಲು ಮೈಸೂರು ವಿಶ್ವವಿದ್ಯಾಲಯ 'ಕಚೇರಿ ಕೈಪಿಡಿ' ಎಂಬ ಹೊತ್ತುಗೆಯನ್ನು ಪ್ರಕಟಿಸಿದೆ. ಸಂವಿಧಾನದ ಕನ್ನಡ ಆವೃತ್ತಿ 33 ಇಲಾಖೆಗಳಿಗೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳ ಕೋಶ, ಕಾನೂನು ಕಟ್ಟಳೆಗೆ ಸಂಬಂಧಿಸಿದ ಶಬ್ದಕೋಶ, ಕರ್ನಾಟಕ ಹಣಕಾಸು ಸಂಹಿತೆ, ಕರ್ನಾಟಕ ಬೊಕ್ಕಸ ಸಂಹಿತೆ. ಇತ್ಯಾದಿ ಪುಸ್ತಕಗಳನ್ನು ಅಚ್ಚು ಮಾಡುವ ಪ್ರಯತ್ನವೂ ನಡೆದಿದೆ. ರಾಜ್ಯದ ಇಪ್ಪತ್ತೈದು ಶಾಸನಗಳನ್ನು 33 ಕೇಂದ್ರೀಯ ಶಾಸನಗಳನ್ನು ಕನ್ನಡದಲ್ಲಿ ಭಾಷಾಂತರಿಸಲಾಗಿದೆ. ಈ ಮಾತುಗಳೆಲ್ಲ ಹರ್ಷದಾಯಕವೆ.

ಕನ್ನಡವನ್ನು ಆಡಳಿತ ಮಾಧ್ಯಮವಾಗಿ ಜಾರಿಗೆ ತರುವ ಕೆಲಸದಲ್ಲಿ ಇನ್ನೂ ಸಾಕಷ್ಟು ವೇಗ ತೋರಿ ಬಂದಿಲ್ಲ. ಇದು ನಿಜಸ್ಥಿತಿ. ಇದಕ್ಕೆ ಉನ್ನತ ಅಧಿಕಾರಿಗಳ ಆಲಸ್ಯ, ವಿರೋಧ ಎರಡೂ ಕಾರಣ. ಇತ್ತೀಚಿನ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತಪಟ್ಟಿದೆ. ಈ ವರ್ಗದ ಅಧಿಕಾರಿಗಳು ತಮ್ಮದೇ ಆದ ದಂತದ ಗೋಪುರದಲ್ಲಿ ಕುಳಿತಿರುತ್ತಾರೆ. ಸರಕಾರ ಇರುವುದು ಶ್ರೀಸಾಮಾನ್ಯನಿಗೆ ಎಂಬ ಪರಿವೆ ಎಷ್ಟು ಎಚ್ಚರಗೊಳ್ಳಬೇಕೋ ಅಷ್ಟು ಇವರಲ್ಲಿ ಆಗಿಲ್ಲ. ಇವರಿಗೆ ಪಟ್ಟಭದ್ರಹಿತವೂ ಉಂಟು. ಜನತೆಗೆಲ್ಲ ಸರಕಾರಿ ಆಡಳಿತ ಸುಲಭವಾಗಿ ಅರ್ಥವಾಗಿ ಬಿಟ್ಟರೆ ತಮ್ಮ ಮಹಿಮೆ ಕರಗಿ ಹೋದೀತೆಂಬ ಭಯ ಇರಲಿಕ್ಕೂ ಸಾಕು. ಸರಕಾರ ಎಲ್ಲಕ್ಕಿಂತ ಮೊದಲು ಈ ಅಧಿಕಾರಿಗಳಿಗೆ ಕನ್ನಡ ಬಳಕೆಯನ್ನು ಕಡ್ಡಾಯ ಪಡಿಸಬೇಕು. ಎಲ್ಲ ಉನ್ನತ ಅಧಿಕಾರಿಗಳೂ ಇವೇ ಪ್ರವೃತ್ತಿಯವರೆಂದು ಹೇಳುವಂತಿಲ್ಲ. ಬೆರಳಮೇಲೆ ಎಣಿಸುವಷ್ಟು ದೊಡ್ಡ ಅಧಿಕಾರಿಗಳು ಕನ್ನಡದ ಕಳಕಳಿ ಉಳ್ಳವರಿದ್ದಾರೆ. ಆದರೆ ಅವರು ಈ ವರ್ಗದ ನಾಯಕತ್ವದಲ್ಲಿಲ್ಲ. ಆದುದರಿಂದ ಸಚಿವ ಮಹೋದಯರು ತಾವೇ ಮುಂದಾಗಿ ಕನ್ನಡವನ್ನು ಕಟ್ಟುನಿಟ್ಟಾಗಿ ಬಳಸಬೇಕು. ಕಡೆಗೆ ಮಂತ್ರಿಗಳ ಅಂಜಿಕೆಯಿಂದಲಾದರೂ ಒಲ್ಲದ ಅಧಿಕಾರಿ ಗಣ ಹಾದಿಗೆ ಬಂದೀತು.

ಕನ್ನಡ ಬೆರಳಚ್ಚು ಯಂತ್ರಗಳ ಅಭಾವ ಒಂದು ನಿಜವಾದ ಅಡ್ಡಿ. ಎರಡು ಸಾವಿರ ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆಗೆ ಎರಡು ಸಂಸ್ಥೆಗಳನ್ನು ಕೋರಲಾಗಿದೆ ಎಂಬುದು ಸಂತಸದ ಸುದ್ದಿ. ತೀರಾ ಅಭಾವಕ್ಕಿಂತ ಈ ಸಂಖ್ಯೆ ಲೇಸು. ಆದರೆ ಸಮಗ್ರ ಕರ್ನಾಟಕದ ಅಗತ್ಯ ಎರಡು ಸಾವಿರ ಯಂತ್ರಗಳಾದರೂ ಬೇಕಾಗಬಹುದು. ಇಲ್ಲಿ ಸರಕಾರೀ ಕಚೇರಿಗಳ ಬೇಡಿಕೆ ಮಾತ್ರವಲ್ಲ ಖಾಸಗೀ ಕಾರ್ಯಾಲಯಗಳ, ವ್ಯಾಪಾರೋದ್ಯಮಿಗಳ ಅಗತ್ಯವನ್ನು ಗಮನಿಸಬೇಕು.

ಕನ್ನಡವನ್ನು ಆಡಳಿತದ ಎಲ್ಲ ಮಜಲುಗಳಲ್ಲಿ ಜಾರಿಗೆ ತರಬೇಕಾದುದು ಬರೀ ಅಭಿಮಾನದ ಮಾತೆಂದು ತಿಳಿಯಬಾರದು. ಜನ ತಂತ್ರದಲ್ಲಿ ಮತದಾರ ಪ್ರಭುವಿಗೆ ತಿಳಿಯುವ ಭಾಷೆಯಲ್ಲೇ ಆಡಳಿತ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡವೇ ಆ ಭಾಷೆ. ಇದು ಅನಿವಾರ್ಯ ಅಗತ್ಯ. ಇದನ್ನು ಜಾರಿಗೆ ತರದೆ ಕುಂಟು ನೆಪಗಳನ್ನು ಒಡ್ಡುವುದು ಜನತೆಗೆ ಎಸಗುವ ಮಹಾದ್ರೋಹ. ಇದು ಎಲ್ಲರು ಅರಿತು ನಡೆಯಬೇಕಾದ ಸಂಗತಿ.

## ಸಿಂಹಸ್ವಪ್ನ

ಹಿಂದೀ ರಾಷ್ಟ್ರ ಭಾಷೆ ಆಗಿರಬೇಕೆಂದು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿಯೇ ನಿಶ್ಚಯವಾಗಿತ್ತು. ನಮ್ಮ ಸಂವಿಧಾನ ಬರೆದವರು 1965ರಿಂದ ಹಿಂದಿಗೆ ಅಧಿಕೃತ ಭಾಷೆಯ ಸ್ಥಾನಮಾನ ಸಿಗಬೇಕೆಂದು ನಿಶ್ಚಯಿಸಿದರು. ವಿದೇಶೀ ಆಳ್ವಿಕೆಯಿಂದ ಬಿಡುಗಡೆ ಹೊಂದಿದ ಯಾವ ದೇಶವೂ ಪರಕೀಯರ ಭಾಷೆಯನ್ನು ನಾವು ಹೊತ್ತು ಮೆರೆಸಿರುವಷ್ಟು ಮೆರೆಸಿಲ್ಲ. ಇಂದಿಗೂ ಇಂಗ್ಲಿಷ್ ಭಾಷೆಯ ಸಮರ್ಥಕರಾದ ಹಿಡಿಯಷ್ಟು ಮಂದಿ ಸದಾ ಸರ್ವದಾ ಹಿಂದೀ ಭಾಷೆಯನ್ನು ಹಳಿಯುವುದೇ ತಮ್ಮ ಪರಮೋದ್ದೇಶವಾಗಿರಿಸಿಕೊಂಡಿದ್ದಾರೆ. ಕೇಂದ್ರ ಸರಕಾರದ ಪ್ರವಾಸೋದ್ಯಮ ಸಚಿವ ಶಾಖೆ ಹಿಂದಿ ಮಾತನಾಡುವ ರಾಜ್ಯಗಳು ತನ್ನೊಡನೆ ಹಿಂದೀ ಭಾಷೆಯಲ್ಲೇ ವ್ಯವಹರಿಸಬಹುದೆಂದು ಸೂಚಿಸಿದೆ. ಇದರಲ್ಲಿ ಆಕ್ಷೇಪಾರ್ಹವಾದುದು ಏನು? ವಿನಾಕಾರಣ ಇದನ್ನೇ ಆಧಾರವಾಗಿಟ್ಟುಕೊಂಡು ಹಿಂದೀ ವಿರೋಧಿಗಳು ಅಬ್ಬರಿಸುತ್ತಿದ್ದಾರೆ. ನಿಜ ಹೇಳುವುದಾದರೆ ಈ ಜನ ಎಲ್ಲ ಭಾರತೀಯ ಭಾಷೆಗಳಿಗೂ ವಿರುದ್ಧವೆ. ಹಿಂದೀ ಭಾಷೆಯ ವಿರುದ್ಧ ಕತ್ತಿ ಕಟ್ಟುವಾಗ ಹಿಂದೀಅಜ್ಞರಿರಿತರ ರಾಜ್ಯಗಳ ''ನ್ಯಾಯವಾದ' ತಮಿಳಿನಲ್ಲೋ, ಕರ್ನಾಟಕ ಕನ್ನಡದಲ್ಲೋ ಪತ್ರ ಬರೆಯಬಹುದೆಂದು ಇವರು ಒಪ್ಪುವುದಿಲ್ಲ. ಇವರ ವಾದ ಜನತಂತ್ರದ ಮನೋಧರ್ಮಕ್ಕೆ ಎಷ್ಟೂ ಸಂಗತವಲ್ಲ. ಜನಸ್ತೋಮದ ನಿಜವಾದ ಹಿತದ ಪಕ್ಷಪಾತಿಗಳಲ್ಲ ಇವರು.

ಜನತಂತ್ರದಲ್ಲಿ ಆಡಳಿತವೆಲ್ಲ ಜನರಿಗೆ ತಿಳಿಯುವ ಭಾಷೆಯಲ್ಲೇ ನಡೆಯಬೇಕು. ಇನ್ನೂರು ವರ್ಷಗಳ ಕಾಲ ನಮ್ಮ ಮೇಲೆ ಇಂಗ್ಲಿಷ್ ಭಾಷೆಯನ್ನು ಹೇರಿದರೂ ಸಹ ನೂರರಲ್ಲಿ ಇಬ್ಬರು ಭಾರತೀಯರಿಗೆ ಮಾತ್ರ ತಪ್ಪು ಇಂಗ್ಲಿಷ್ ಗೊತ್ತು. ಇಂಗ್ಲಿಷ್ ಕಲಿತ ಪಾಮರ ಜನಕೋಟಿಯ ಅಜ್ಞಾನವನ್ನೇ ತಮ್ಮ ಬಂಡವಾಳವನ್ನಾಗಿಸಿಕೊಂಡಿದ್ದಾರೆ ವೃತ್ತಿನಿರತರಾದವರು.

ಈ ಬಲದಿಂದಲೇ ಉಳಿದ ಜನರನ್ನು ಸುಲಿಯುತ್ತಿದ್ದಾರೆ. ಆಡಳಿತದಲ್ಲಿ, ಶಿಕ್ಷಣದಲ್ಲಿ, ನ್ಯಾಯ ನಿರ್ವಹಣೆಯಲ್ಲಿ ದೇಶಭಾಷೆಗಳ ಬದಲು ಇಂಗ್ಲಿಷನ್ನೇ ಕಾಯ್ದಿರಿಸಿಕೊಳ್ಳುವ ತಂತ್ರದಲ್ಲಿ ಪಟ್ಟಭದ್ರ ಹಿತಾಸಕ್ತಿ ಇದೆ. ಬಹುಜನ ಸಮಾಜವನ್ನು ರಾಷ್ಟ್ರೀಯ ಜೀವನದ ಧಾರೆಯಿಂದ ದೂರವಿಡುವುದೇ ಈ ಸನ್ನಾಹ ಹಾಗೆಂದೇ ಈ ಇಂಗ್ಲಿಷ್ ಭಕ್ತರಿಗೆ ಹಿಂದಿಯನ್ನು ಕಂಡರೆ ದೇಶ ಭಾಷೆಗಳನ್ನು ಕಂಡರೆ ಸಿಂಹಸ್ವಪ್ನ, ಮರಣ ಭಯ.

ಹಿಂದೀ ಹಾಗೂ ಇತರ ಭಾರತೀಯ ಭಾಷೆಗಳಿಗೆ ಯಾವ ಅಂತರ ವಿರೋಧವೂ ಇಲ್ಲ. ಇಂಗ್ಲಿಷಿನ ಗದ್ದುಗೆ ಅಲ್ಲಾಡತೊಡಗಿರುವಾಗ ಭಾರತೀಯ ಭಾಷೆಯವರೆಲ್ಲ ಒಂದಾಗಬೇಕು. ಆಯಾ ರಾಜ್ಯದಲ್ಲಿ ಆಯಾ ಭಾಷೆಗೇ ಸಾರ್ವಭೌಮ ಸ್ಥಾನ. ಸಂಪರ್ಕ ಭಾಷೆಯಾಗಿ ಮಾತ್ರ ಹಿಂದೀ ಅರಳಬೇಕು. ಹಿಂದೀ ಸಾಕಷ್ಟು ಬೆಳೆದಿಲ್ಲ ಎಂಬುದೊಂದು ಆಕ್ಷೇಪ ಅವಕಾಶ ದೊರೆತರೆ, ಎಲ್ಲ ಉದ್ದೇಶಗಳಿಗೂ ಅದನ್ನು ಬಳಸಿದರೆ ಮಾತ್ರವೇ ಒಂದು ಭಾಷೆ ಬೆಳೆದೀತು. ಬ್ರಿಟಿಷರು ಸಾಮ್ರಾಜ್ಯ ಕಟ್ಟಿ ಆಳದೇ ಹೋಗಿದ್ದರೆ ಭಾರತದಲ್ಲಿ ಇಂಗ್ಲಿಷ್ ಎಲ್ಲಿರುತ್ತಿತ್ತು? ಫ್ರೆಂಚರ ವಸಾಹತುಗಳಲ್ಲಿ ಫ್ರೆಂಚ್, ಡಚ್ಚರ ಅಧಿಪತ್ಯಗಳಲ್ಲಿ ಡಚ್, ಪೋರ್ಚುಗೀಸರ ಸ್ವಾಸ್ಥ್ಯಗಳಲ್ಲಿ ಪೋರ್ಚುಗೀಸ್ ಭಾಷೆಗಳು ವಿಜೃಂಭಿಸಿದವು ಎಂದರೆ ಭಾರತದಲ್ಲಿ ಇಂಗ್ಲೀಷ್ ಕೇವಲ ಒಂದು ಐತಿಹಾಸಿಕ ಅವಶೇಷ. ಅದರ ಪ್ರಯೋಜನ ಪ್ರಯೋಗ ಶಾಲೆಯಲ್ಲಿ, ಗ್ರಂಥ ಭಂಡಾರದಲ್ಲಿ ಖಂಡಿತ ಉಂಟು. ಆದರೆ ವಿಧಾನಸೌಧದಲ್ಲಿ, ವಿದ್ಯಾಲಯಗಳಲ್ಲಿ, ಕೋರ್ಟು ಕಚೇರಿಗಳಲ್ಲಿ ಹಾಗೂ ಪೇಟೆ ಮಾರುಕಟ್ಟೆಗಳಲ್ಲಿ ಖಂಡಿತ ಇಲ್ಲ. ಇದು ಅಭಿಮಾನದ ಆಡಂಬರದ ಪ್ರಶ್ನೆ ಅಲ್ಲ. ಜನತಂತ್ರಾತ್ಮಕ ಜೀವನದ ಅನಿವಾರ್ಯ ಅಗತ್ಯ. ಎಲ್ಲಿಯವರೆಗೆ ಇಂಗ್ಲೀಷಗ ಭಾಷೆಗೆ ನಾವು ಪಟ್ಟಕಟ್ಟಿರುತ್ತೇವೆಯೋ ಅಲ್ಲಿಯವರೆಗೆ ಭಾರತೀಯ ಭಾಷೆಗಳೆಲ್ಲ ಕುಗ್ಗಿಯೇ ಇರುತ್ತವೆ. ಕಮರಿಯೂ ಹೋಗಬಹುದು. ಇದು ರಾಷ್ಟ್ರದ ಆತ್ಮ ಗೌರವದ ಪ್ರಶ್ನೆ, ಸಹಜ ಅನುಕೂಲದ ಪ್ರಶ್ನೆ, ಎಲ್ಲರಿಗೂ ತಿಳಿಯಬೇಕಾದ ವಿಚಾರದ ಪ್ರಶ್ನೆ. ಯಾವ ಲೆಕ್ಕದಿಂದಲೇ ತೆಗೆದುಕೊಂಡರೂ ಈ ದೇಶದಲ್ಲಿ ಇನ್ನೆಷ್ಟು ಕಾಲ ಹೊರಿಸಿದರೂ ಹಿಂದೀ ಅಥವಾ ಮತ್ತಾವುದೇ ಭಾರತೀಯ ಭಾಷೆ ತಿಳಿದಿರುವಷ್ಟು ಸಂಖ್ಯೆಯಲ್ಲಿ ಇಂಗ್ಲೀಷ್ ಬಲ್ಲವರು ಹೆಚ್ಚಲಾರರು ಎಂದ ಮೇಲೆ ಹಿಂದೀ ಸಂಪರ್ಕ ಭಾಷೆ ಆಗಲೇ ಬೇಕು. ಆಯಾ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳು ಸಾರ್ವಭೌಮ ಸ್ಥಾನ ಪಡೆಯಬೇಕು. ಇದು ಭಾರತಕ್ಕೆ ಅತ್ಯಂತ ತರ್ಕಬದ್ಧ ಸಮಂಜಸ ಭಾಷಾ ನೀತಿ.

## ಕನ್ನಡದ ಕಟ್ಟಾಳು

ಕನ್ನಡಕ್ಕಾಗಿ, ಕನ್ನಡ ನಾಡಿನ ಏಕೀಕರಣಕ್ಕಾಗಿ ಕಟ್ಟಾಳುಗಳಾಗಿ ಹೋರಾಡಿದ ಕಲಿಗಳು ಅನೇಕರು ಆ ಪಂಕ್ತಿಯಲ್ಲಿ ಕೀತಿಶೇಷ ಶಿವಮೂರ್ತಿ ಶಾಸ್ತ್ರಿಗಳು ನಿಜಕ್ಕೂ ಒಬ್ಬರು. ಸುಮಾರು ಅರ್ಧ ಶತಮಾನ ಕಾಲ ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಕರ್ನಾಟಕ ಏಕೀಕರಣ

ಚಳವಳಿಯಲ್ಲಿ ಅವರು ಅಗ್ರಗಾಮಿಗಳಾಗಿದ್ದರು. ಆ ಕಾಲದಲ್ಲಿ ಅತ್ಯಂತ ಜನಪ್ರಿಯ ಸಂಪರ್ಕ ಮಾಧ್ಯಮ ಆಗಿದ್ದ ಕೀರ್ತನಕಲೆಯ ಮೂಲಕ ಜನಜಾಗೃತಿಯನ್ನೂ ರಾಷ್ಟ್ರ ಹಾಗೂ ನಾಡು ನುಡಿಗಳ ಪ್ರೇಮವನ್ನೂ ಉಂಟುಮಾಡಿದ ಕೀರ್ತಿ ಅರ್ಹವಾಗಿ ಶಾಸ್ತ್ರಿಗಳಿಗೆ ಸಲ್ಲುತ್ತದೆ. 'ಶರಣ ಸಾಹಿತ್ಯ' ಹಾಗೂ 'ಸ್ವತಂತ್ರ್ಯ ಕರ್ನಾಟಕ' ಪತ್ರಿಕೆಗಳ ಮೂಲಕವೂ ಅವರು ಅತ್ಯಂತ ಅಪೂರ್ವ ರೀತಿಯ ಈ ಕೆಲಸವನ್ನು ಮುಂದುವರಿಸಿದರು. ಕನ್ನಡ ನಾಡಿ ಉದ್ದಗಲಕ್ಕೂ ಸಂಚರಿಸಿ ತಮ್ಮ ವಾಕ್ ವೈಭವದಿಂದ ಜನರನ್ನು ಬಡಿದೆಬ್ಬಿಸಿದರು. ಹಲವು ಆಡಳಿತ ಘಟಕಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಸೀಮೆಯನ್ನು ಒಂದುಗೂಡಿಸುವ ಕೆಲಸ ಹಗುರವಾದುದಾಗಿರಲಿಲ್ಲ. ಅನೇಕ ರೀತಿಯ ಪಟ್ಟಭದ್ರ ಹಿತಗಳು ಬೇರೆ ಬೇರೆ ವೇಷ ಧರಿಸಿ ಏಕೀಕರಣಕ್ಕೆ ಅಡ್ಡಿ ಒಡ್ಡಿದವು. ಅವೆಲ್ಲ ಕನ್ನಡ ಜನಪದ ಸಂಕಲ್ಪ, ಶಕ್ತಿಯ ವಿರುದ್ಧ ಕರಗುವಂತೆ ಮಾಡಿದ ಶ್ರೇಯಶಸ್ಸು ಶಾಸ್ತ್ರಿಗಳಂಥ ನಿಷ್ಠಾವಂತರಿಗೆ ಸಲ್ಲುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶಿವಮೂರ್ತಿ ಶಾಸ್ತ್ರಿಗಳು ಕರ್ತವ್ಯ ನಿರ್ವಹಿಸಿ ರೀತಿ ಕಂಡು ಕೆಲವರು ಅಸಂತುಷ್ಟರಾಗಿರಬಹುದು. ಆದರೆ ಕನ್ನಡದ ಕೆಲಸದಲ್ಲಿ ಅವರು ತೋರಿಸಿದ ಅನನ್ಯ ಶ್ರದ್ಧೆ ಕಾರ್ಯಸಾಧನೆಯ ಛಲ, ಮೂಡಿಬಂದ ಫಲಿತಾಂಶ ಯಾರನ್ನಾದರೂ ಬೆರಗುಗೊಳಿಸುವಂಥದೇ. ನಿಘಂಟಿನ ಕೆಲಸವಾಗಲೀ, ಗಡಿಯ ಪ್ರದೇಶಗಳ ಸೇರ್ಪಡೆಯ ಹೋರಾಟವೇ ಆಗಲೀ ಶಾಸ್ತ್ರಿಗಳು ಸದಾ ಮುಂಚೂಣಿಯಲ್ಲೇ. ಎಂಥ ಉನ್ನತ ಅಧಿಕಾರ ಸ್ಥಾನವೂ ಅವರಿಗೆ ಭಯ ಹುಟ್ಟಿಸುತ್ತಿರಲಿಲ್ಲ. ಕನ್ನಡದ, ಕನ್ನಡನಾಡಿನ ಪಕ್ಷವನ್ನು ಪ್ರತಿಪಾದಿಸಲು ತಮ್ಮ ಎಲ್ಲ ಶಕ್ತಿಯನ್ನು ವ್ಯಯ ಮಾಡುತ್ತಿದ್ದರು. ಇಂಥ ಶ್ರದ್ಧಾಳುಗಳ ಅವಿರತ ಶ್ರಮದ ಫಲವಾಗಿ ನಾಡು ಒಂದಾಯಿತು. ನುಡಿಯೂ ಬೆಳೆಯಿತು.

**ಕನ್ನಡದ ಕಳಕಳಿ**

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ದೇ.ಜವರೇಗೌಡರ ಕನ್ನಡದ ಕಳಕಳಿ ಸುಪ್ರಸಿದ್ಧ. ಕನ್ನಡ ನಾಡಿನಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಕನ್ನಡವೇ ಸಾರ್ವಭೌಮವಾಗಿರಬೇಕು. ಈ ಮಾತನ್ನು ಯಾರೂ ತಳ್ಳಿಹಾಕುವುದು ಸಾಧ್ಯವಿಲ್ಲ. ಶಿಕ್ಷಣ, ಆಡಳಿತ, ನ್ಯಾಯ ನಿರ್ವಹಣೆ ಈ ಕೆಲಸಗಳೆಲ್ಲ ಕನ್ನಡದಲ್ಲಿಯೇ ನಡೆಯಬೇಕು. ಇದನ್ನು ಸರ್ಕಾರ ಅಕ್ಷರಶಃ ಒಪ್ಪಿದೆ. ಜಾರಿ ವಿಳಂಬವಾಗುತ್ತದೆ. ಈ ಮಧ್ಯಂತರ ಸ್ಥಿತಿಯಲ್ಲಿ ಅನೇಕ ಅಡ್ಡಿ- ಆತಂಕಗಳು ಎದುರಾಗುತ್ತಿವೆ. ಕರ್ನಾಟಕದ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆ ಕನ್ನಡದಲ್ಲಿ ನಡೆಯುತ್ತಿಲ್ಲ. ಕೇಂದ್ರದ ಲೋಕಸೇವಾ ಆಯೋಗವೂ ರಾಜ್ಯಭಾಷೆಗಳಲ್ಲಿ ತನ್ನ ಪರೀಕ್ಷೆಗಳನ್ನು ನಡೆಸಬೇಕೆಂಬ ಸಲಹೆ ನೆನಗುದಿಗೆ ಬಿದ್ದಿದೆ. ಈ ಲೋಪಗಳನ್ನು ಜವರೇಗೌಡರು ಎತ್ತಿ ತೋರಿಸಿರುವುದು ತುಂಬ ಸಮಂಜಸ. ಈ ಲೋಕಸೇವಾ ಆಯೋಗಗಳು ಕನ್ನಡದಲ್ಲಿ ಪರೀಕ್ಷೆ ನಡೆಸಲು ಏನು ಅಡ್ಡಿ? ಪರೀಕ್ಷಕರಿಲ್ಲವೇ? ಅಥವಾ ಆಯೋಗದ ಸದ್ಯರಲ್ಲಿ ಕನ್ನಡ ತಿಳಿದವರಿಲ್ಲವೇ? ಇಲ್ಲವೆ

ಮಾನಸಿಕ ಆಲಸ್ಯವೇ? ನಮ್ಮ ದೃಷ್ಟಿಯಲ್ಲಿ ಈ ಮೂರನೆಯ ಕಾರಣವೇ ಪ್ರಬಲವೆಂದು ತೋರುತ್ತದೆ. ಕನ್ನಡವನ್ನು ಬಳಸಬೇಕಾಗಿರುವುದು ಬರಿಯ ಅಭಿಮಾನಕ್ಕಾಗಿ ಅಲ್ಲ. ಅಭ್ಯರ್ಥಿ ಇಂಗ್ಲೀಷ್‌ಗಿಂತ ಕನ್ನಡದಲ್ಲಿ ಅಂಜಿಕೆ ಇಲ್ಲದೆ ತನ್ನ ತಿಳುವಳಿಕೆಯನ್ನು ವ್ಯಕ್ತಪಡಿಸಬಲ್ಲ. ನಾಳೆ ಆಯ್ಕೆಯಾಗಿ ತನ್ನ ಹುದ್ದೆಯನ್ನು ನಿರ್ವಹಿಸುವಾಗ ಆತ ವ್ಯವಹರಿಸಬೇಕಾದುದು ಇಂಗ್ಲೀಷ್ ಬಾರದ ಕನ್ನಡ ಮಾತ್ರ ಗೊತ್ತಿರುವ ಜನಜಂಗುಳಿಯೊಂದಿಗೆ ಎಂದ ಮೇಲೆ ಆತನ ಪರೀಕ್ಷೆ ನಡೆಯಬೇಕಾದುದು ಕನ್ನಡದಲ್ಲಿಯೇ.

ಈ ಪರಿವರ್ತನೆ ಸಂಭವಿಸಬೇಕಾದರೆ ಕನ್ನಡದ ಪ್ರಜ್ಞೆ ನಮ್ಮ ಆಡಳಿತಗಾರರಲ್ಲಿ, ಪ್ರಾಧ್ಯಾಪಕ ವರ್ಗದಲ್ಲಿ, ಬುದ್ಧಿಜೀವಿಗಳಲ್ಲಿ ಮೂಡಬೇಕಾಗಿದೆ. ಒಂದು ಪಕ್ಷ ಸ್ವಪ್ರೇರಣೆಯಿಂದ ಮೂಡದಿದ್ದರೆ ನಿಯಮಗಳ ಒತ್ತಡದಿಂದಲಾದರೂ ಮೂಡುವಂತೆ ಮಾಡಬೇಕು. ಈ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಕಲಿಯದ ಅಧ್ಯಾಪಕರಿಗೆ ವರ್ಷ ವರ್ಷವೂ ನೀಡುವ ಸಂಬಳದ ಬಡತಿ ನಿಲ್ಲಿಸುವ ನಿರ್ಧಾರ ಅತ್ಯಂತ ಸಮರ್ಥನೀಯ. ಕನ್ನಡದ ನೆಲದಲ್ಲಿದ್ದು, ಕನ್ನಡದ ಉಪ್ಪನ್ನು ತಿಂದು, ಕನ್ನಡವನ್ನೇ ಕಲಿಯುವುದಿಲ್ಲ ಎನ್ನುವುದು ಯಾವ ನ್ಯಾಯ? ಬೇರೆ ರಾಜ್ಯಗಳಲ್ಲಿ ನೆಲೆಸಿರುವ ಕನ್ನಡಿಗರು ಈ ವಿಷಯದಲ್ಲಿ ಇತರ ಭಾಷಾ ಬಾಂಧವರಿಗೆ ಮಾದರಿಯಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಮರಾಠಿ, ಗುಜರಾತಿನಲ್ಲಿ ಗುಜರಾತಿ, ಬಂಗಾಳದಲ್ಲಿ ಬಂಗಾಳಿ, ತಮಿಳುನಾಡಿನಲ್ಲಿ ತಮಿಳು, ಆಂಧ್ರಲ್ಲಿ ತೆಲುಗು ಹೀಗೆ ಆಯಾ ರಾಜ್ಯದಲ್ಲಿ ಅಲ್ಲಲ್ಲಿಯ ಭಾಷೆಯನ್ನು ತಾವೂ ಕಲಿಯುತ್ತಾರೆ. ತಮ್ಮ ಮಕ್ಕಳಿಗೂ ಕಲಿಸುತ್ತಾರೆ. ಇದನ್ನು ನಮ್ಮ ಇತರ ಭಾಷಾ ಬಾಂಧವರು ತ್ವರೆಯಿಂದ ಅನುಸರಿಸಬೇಕು. ಮುಖ್ಯವಾಗಿ ಬೆಂಗಳೂರು ಮಹಾನಗರದಲ್ಲಿರುವ ತಮಿಳರು ಮತ್ತು ಮಲೆಯಾಳಿಗಳು ಒಡನೆಯೇ ಕನ್ನಡ ಕಲಿಯಬೇಕು. ಸರಕಾರಿ ನೌಕರರಂತೂ ಕನ್ನಡ ಕಲಿಯುವುದು ಕಡ್ಡಾಯವೇ ಆಗಬೇಕು.

ಕರ್ನಾಟಕದಲ್ಲಿ ಮೂರು ವಿಶ್ವವಿದ್ಯಾಲಯಗಳಿವೆ. ಮತ್ತೊಂದು ಕೃಷಿ ವಿಶ್ವವಿದ್ಯಾಲಯವಿದೆ. ಈ ವಿದ್ಯಾಪೀಠಗಳಲ್ಲೆಲ್ಲ ಕನ್ನಡ ಮಾಧ್ಯಮಕ್ಕೆ ಆದ್ಯತೆ ದೊರೆಯಬೇಕು. ಸುದೈವದಿಂದ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿರುವ ಡಾ|| ನರಸಿಂಹಯ್ಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಆರ್. ಸಿ. ಹಿರೇಮಠರು ಕನ್ನಡದ ಕಟ್ಟಾಳುಗಳು. ಅವರಿಂದ ಕನ್ನಡದ ಪ್ರಜ್ಞೆ ಸಾರ್ವತ್ರಿಕವಾದೀತೆಂದು ನಂಬಬಹುದು.

**ಕೆಚ್ಚಿನ ವ್ಯಕ್ತಿ**

ಬ್ರಿಟಿಷರ ನೇರ ದಬ್ಬಾಳಿಕೆಯನ್ನು ಎದುರಿಸಿ ಹೋರಾಡಿದ ಕನ್ನಡ ವೀರರು ಅನೇಕ ಮಂದಿ. ಬ್ರಿಟಿಷ್ ಸಾಮ್ರಾಜ್ಯಶಾಹಿ ಶಕ್ತಿಯಿಲ್ಲದೆ ಅವರು ತೊತ್ತುಗಳಾಗಿದ್ದ ದೇಶೀಯ ಅರಸರ ವಿರುದ್ಧವೂ ಹೋರಾಡಬೇಕಾಗಿ ಬಂದವರು ಮತ್ತೆ ಕೆಲವು ಮಂದಿ. ಇಬ್ಬಗೆಯ

ದಬ್ಬಾಳಿಕೆಯನ್ನು ಎದುರಿಸಿ ಹೋರಾಡಿದ ಕನ್ನಡದ ಕಡುಗಲಿಗಳಲ್ಲಿ ಕಪಟರಾಳ ಕೃಷ್ಣರಾಯರು ಖಂಡಿತವಾಗಿಯೂ ಒಬ್ಬರು. ಕೃಷ್ಣರಾಯರ ಕೆಚ್ಚು ಬಹು ಅಸಾಮಾನ್ಯ. ಕನ್ನಡಕ್ಕಾಗಿ, ಕನ್ನಡ ನಾಡಿನ ಏಕೀಕರಣಕ್ಕಾಗಿ ಕಲಬುರ್ಗಿ ಸೀಮೆಯಲ್ಲಿ ಅವಿಶ್ರಾಂತವಾಗಿ ಶ್ರಮಿಸಿದವರಲ್ಲಿ ಕಪಟರಾಳರ ಹೆಸರು ಚಿರವಾಗಿ ಉಳಿಯುತ್ತದೆ. ಹೈದರಾಬಾದಿನ ನಿಜಾಂಶಾಹಿಯ ಅಡಿಯಲ್ಲಿ ಕನ್ನಡ ಹೈದರಾಬಾದ್ ಕರ್ನಾಟಕದಲ್ಲಿ ಉಡುಗಿ ಹೋಗಿತ್ತು. ಆಡುಮಾತಾಗಿ ಉಳಿದಿದ್ದರೂ ಓದಿ ಬರೆಯುವ ಭಾಷೆಯಾಗಿ ಇರಲಿಲ್ಲ. ಅಂಥ ಸ್ಥಿತಿಯಲ್ಲಿ ತಾವು ಮೂವತ್ತೈದು ವರ್ಷದವರಿದ್ದಾಗ ಕನ್ನಡ ಓದು-ಬರಹವನ್ನು ಅವರು ಕಲಿತರು. ಅಸಂಖ್ಯ ಮಂದಿಗೆ ಕಲಿಸಿದರು. ತಮ್ಮ ಭಾಗದಲ್ಲಿ ಕನ್ನಡವನ್ನು ಬೆಳೆಸಿದರು.

ಕಪಟರಾಳ ಕೃಷ್ಣರಾಯರಿಗೆ ಇತಿಹಾಸ ಸಂಶೋಧನೆ ಮತ್ತೊಂದು ಬಲವಾಗಿತ್ತು. ವಿಜಯನಗರ ಸಾಮ್ರಾಜ್ಯ, ಬಹಮನೀ ರಾಜ್ಯ, ಸುರಪುರದ ಇತಿಹಾಸ ಮುಂತಾದ ವಿಷಯಗಳಲ್ಲಿ ಅವರ ತಿಳುವಳಿಕೆ ಅಸಾಧಾರಣ ಮಟ್ಟದ್ದಾಗಿತ್ತು. ಇತಿಹಾಸ ಸಂಶೋಧನೆಯಲ್ಲಿ ಅವರು ಅಮಿತ ಆಸಕ್ತಿಯನ್ನು ವಹಿಸಿದ್ದರು. ಇಳಿವಯಸ್ಸಿನಲ್ಲಿಯೂ ಅವರ ವ್ಯಾಸಂಗ ಶ್ರದ್ಧೆ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಗಾಂಧೀಜಿ ಪ್ರತಿಪಾದಿಸಿದ ನಿರ್ಮಾಣ ಕಾರ್ಯಕ್ರಮದಲ್ಲಿ ಅವರಿಗೆ ಅನನ್ಯ ಶ್ರದ್ಧೆ ಇತ್ತು. ತಮ್ಮ ಜೀವನದಲ್ಲಿಯೂ ಅವನ್ನು ಆಚರಿಸುತ್ತಿದ್ದರು. ತಮ್ಮ ರಾಜಕೀಯ ಚಟುವಟಿಕೆಗಳ ದೆಸೆಯಿಂದ ಅನೇಕ ಬಾರಿ ಕಾರಾಗೃಹವಾಸ ಅನುಭವಿಸಬೇಕಾಯಿತು. ಹೀಗೆ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಹಿತ್ಯ ರಂಗಗಳಲ್ಲಿ ಅಪರೂಪವಾದ ಕೆಲಸ ಮಾಡಿ ಕಪಟರಾಳ ಕೃಷ್ಣರಾಯರು ಇಂದಿನ ಪೀಳಿಗೆಗೆ ಸ್ಫೂರ್ತಿ ನೀಡುವ ವ್ಯಕ್ತಿಯಾಗಿ ಉಳಿಯುತ್ತಾರೆ.

## ಕನ್ನಡದ ಹೆಮ್ಮೆ

ಕನ್ನಡ ಚಲನಚಿತ್ರಗಳು ಸಮಗ್ರ ಭಾರತದಲ್ಲೇ ಅತಿಶ್ರೇಷ್ಠವೆನಿಸುವ ದಿನ ಬಂದುದಕ್ಕೆ ಕನ್ನಡಿಗರೆಲ್ಲ ಹೆಮ್ಮೆ ಪಡಲೇಬೇಕು. ಈ ಬಾರಿಯ ರಾಷ್ಟ್ರೀಯ ಪ್ರಶಸ್ತಿಗಳಲ್ಲಿ ಅಗ್ರಸ್ಥಾನ 'ಚೋಮನದುಡಿ'ಗೆ ಸಂದಿರುವುದು ಅರ್ಹತೆಗೆ ಸಿಕ್ಕ ಮನ್ನಣೆ. ನಲವತ್ತು ವರ್ಷಕ್ಕೂ ಹಿಂದೆ ಬರೆದ ಶಿವರಾಮಕಾರಂತರ ಕಥೆ ಇಂದಿಗೂ ಎಷ್ಟು ಸಂಗತ ಎಂಬುದು ಎದ್ದು ಕಾಣುತ್ತದೆ. ಅದರಲ್ಲಿರುವ ಸಾಮಾಜಿಕ ಸ್ಪಂದನ ಯಾರ ಹೃದಯವನ್ನಾದರೂ ಮಿಡಿದೀತು. ಆ ಕಥೆಯನ್ನು ಅಷ್ಟೇ ಭಾವಪೂರ್ಣವಾಗಿ ತೆರೆಯ ಮೇಲೆ ತಂದ ನಿರ್ದೇಶಕರ ಬಿ.ವಿ.ಕಾರಂತರು ತಮ್ಮ ಪರಿಣತಿಯ ಶಿಖರಕ್ಕೇ ಏರುತ್ತಿದ್ದಾರೆ. ಬಿ.ವಿ.ಕಾರಂತರು ನಮ್ಮ ದೇಶದ ಅಗ್ರಮಾನ ನಿರ್ದೇಶಕರ ಪಂಕ್ತಿಗೆ ಸೇರಿರುವುದು ಕರ್ನಾಟಕಕ್ಕೆ ಅತ್ಯಂತ ಅಭಿಮಾನಾಸ್ಪದ. ಅಂತೆಯೇ 'ಚೋಮನ' ಪಾತ್ರವನ್ನು ಅತ್ಯಂತ ಚಿತ್ರವತ್ತಾಗಿ ಅಭಿನಯಿಸಿದ ವಾಸುದೇವರಾಯರು ಅತಿ ಶ್ರೇಷ್ಠ ನಟರೆಂಬ ಕೀರ್ತಿಗೆ ಪಾತ್ರರಾದುದು ಎಷ್ಟೂ ಉತ್ಪ್ರೇಕ್ಷೆ ಅಲ್ಲ. ಚೋಮನದುಡಿಯಲ್ಲಿ

ಪಾಲುಗೊಂಡಿರುವ ಉಳಿದೆಲ್ಲ ಕಲಾವಿದರೂ ಆ ಚಿತ್ರದ ಒಟ್ಟಾರೆ ಶ್ರೇಷ್ಠತೆಗೆ ತಮ್ಮ ಕಿರುಕಾಣಿಕೆ ಸಲ್ಲಿಸಿಯೇ ಇದ್ದಾರೆ. ಅವರಿಗೆಲ್ಲ ಪ್ರಶಸ್ತಿ ಸಿಗದಿದ್ದರೂ ಅತ್ಯುತ್ತಮ ಚಿತ್ರವೆಂಬ ಕೀರ್ತಿಯಲ್ಲಿ ಅವರೆಲ್ಲರೂ ಪಾಲುಗಾರರೇ.

ಪ್ರಾದೇಶಿಕ ಚಿತ್ರಗಳ ಪೈಕಿ 'ಹಂಸಗೀತೆ' ಮೊದಲ ಸ್ಥಾನಗಳಿಸಿದರೂ ಆಶ್ಚರ್ಯಕರವಲ್ಲ. ಈ ಚಿತ್ರದಲ್ಲಿ ಹಿನ್ನೆಲೆ ಗಾಯಕರಾಗಿದ್ದ ಡಾ||ಬಾಲಮುರಲಿಕೃಷ್ಣ ಅವರಿಗೆ ರಾಷ್ಟ್ರೀಯ ಪ್ರಶಸ್ತಿಯೂ ಸಂದಿದೆ. ಅನಂತಲಕ್ಷ್ಮೀ ಫಿಲಂನ ಶ್ರೀ ಜಿ.ವಿ.ಅಯ್ಯರ್ ಅವರು ಪಟ್ಟ ಶ್ರಮ ನಿಜಕ್ಕೂ ಸಾರ್ಥಕ. ಒಟ್ಟಿನಲ್ಲಿ ಕನ್ನಡ ಚಿತ್ರಗಳು ದೇಶದಲ್ಲೇ ಅತ್ಯುತ್ತಮ ಮಟ್ಟದವು ಎಂಬ ಹೆಮ್ಮೆಯನ್ನು ನಾವು ಉಳಿಸಿಕೊಳ್ಳಲೇಬೇಕು. ಕನ್ನಡ ಚಿತ್ರಗಳಿಗೆ ರಾಷ್ಟ್ರೀಯ ಪ್ರಶಸ್ತಿ ದೊರೆತಿರುವುದು ಇದೇ ಮೊದಲಲ್ಲ. ಆದರೂ ಕನ್ನಡದಲ್ಲಿ ಸಮಯಕ್ಕೆ ತಕ್ಕಂತೆ ಚಲಚ್ಚಿತ್ರ ಪ್ರತಿಭೆ ಅರಳುತ್ತಿರುವುದನ್ನು ತುಂಬ ಸಂತೋಷದ ಸಂಗತಿ. ಈ ಪ್ರಯತ್ನ ಮುಂದೆಯೂ ಸಾಗುತ್ತಾ ಹೋಗಬೇಕು ಹಾಗೆಂದ ಮಾತ್ರಕ್ಕೆ ಕನ್ನಡದಲ್ಲಿ ತೆರೆಕಾಣುತ್ತಿರುವ ಎಲ್ಲ ಚಿತ್ರಗಳೂ ಬೇಕಾದಷ್ಟು ಬರುತ್ತಿವೆ. ಸಮಕಾಲೀನ ಸಂವೇದನೆ ಇಲ್ಲದ ಚಿತ್ರಗಳೂ ಶ್ರೇಷ್ಠವಾಗಿಯೇ ಇವೆ. ಚಲನಚಿತ್ರ ಮಾಧ್ಯಮ ಅತ್ಯಂತ ಪ್ರಬಲ. ಪ್ರಭಾವಶಾಲಿಯೂ ಹೌದು. ಬಹು ಜನ ನಿರಕ್ಷರರಿರುವ ನಮ್ಮ ದೇಶದಲ್ಲಿ ಈ ಸಂಪರ್ಕ ಮಾಧ್ಯಮವನ್ನು ಜನಮಾನಸದ ನಿರ್ಮಾಣಕ್ಕಾಗಿ ಬಳಸಿಕೊಳ್ಳಬೇಕು. ಕೇವಲ ಮನರಂಜನೆ ಮಾತ್ರವೇ ಚಿತ್ರಗಳ ಉದ್ದೇಶವಲ್ಲ. ಆಧುನಿಕ ಕಾಲಕ್ಕೆ ಬೇಕಾದ ಸದಭಿರುಚಿ ಹಾಗೂ ವಿಚಾರಪ್ರಜ್ಞೆಯನ್ನು ಮಾಡುವ ಕನ್ನಡ ಆ ಚಿತ್ರಗಳು ಅಗ್ರಗಾಮಿಯಾಗಬೇಕು.

## ಸಂಕಲ್ಪದ ದಿನ

ಕನ್ನಡನಾಡು ಒಂದುಗೂಡಿ ನಾಳೆಗೆ ಇಪ್ಪತ್ತು ವರ್ಷ. ಮನುಷ್ಯನ ಜೀವಮಾನದಲ್ಲಿ ಎರಡು ದಶಕ ಸಾಕಷ್ಟು ಸಮಯ ನಿಜ. ಒಂದು ರಾಜ್ಯಕ್ಕೆ ಅದು ಅಲ್ಪ ಅವಧಿ. ಈ ಇಪ್ಪತ್ತು ವರ್ಷಗಳಲ್ಲಿ ಕರ್ನಾಟಕ ಎಷ್ಟು ದೂರ ಸಾಗಿದೆ? ಪ್ರತಿಯೊಬ್ಬ ಕನ್ನಡಿಗನೂ ವಿವೇಚಿಸಬೇಕಾದ ಪ್ರಶ್ನೆ

ಕರ್ನಾಟಕ ಭಾರತದ ಅವಿಭಾಜ್ಯ ಅಂಗ. ಭಾರತದ ಪ್ರಗತಿ ಬೇರೆ ಅಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ ಹೊಸ ವ್ಯವಸ್ಥೆಯೊಂದನ್ನು ನಿರ್ಮಿಸಹೊರಟಿದ್ದೇವೆ. ಅದು ಎಂಥದಾಗಿರಬೇಕೆಂಬ ಕಲ್ಪನೆ ನಮಗಿದೆ. ಅದನ್ನು ಸಾಕಾರಗೊಳಿಸಲು ಕೇವಲ ಸರಕಾರದಿಂದ ಮಾತ್ರ ಸಾಧ್ಯವಿಲ್ಲ. ಸಮಸ್ತ ಜನಪದ ಈ ಕೆಲಸದಲ್ಲಿ ತೊಡಗಬೇಕು. ತೊಡಗುವಂತೆ ಮಾಡಬೇಕು.

ಎಲ್ಲ ಬಗೆಯ ಶೋಷಣೆಗೂ ಪೂರ್ಣ ವಿರಾಮ ಹಾಕುವುದು ನಮ್ಮ ಗುರಿ. ಬೇಸಾಯದಲ್ಲಿ ಉದ್ಯಮರಂಗದಲ್ಲಿ ದುಡಿಮೆಗಾರರೇ ಪಡೆಯುವವರೂ ಆಗಬೇಕು.

ಉತ್ಪಾದನೆಯ ಉಪಕರಣ ಉತ್ಪಾದಕನ ಕೈಯಲ್ಲಿರಬೇಕು. ಈ ಹೊಸ ವ್ಯವಸ್ಥೆಯಿಂದ ನಾನಿನ್ನೂ ಬಹುದೂರ ಇದ್ದೇನೆ. ಕೈಗೊಂಡಿರುವ ಭೂಸುಧಾರಣೆ ಪರಿಪೂರ್ಣವಲ್ಲ. ಬಂಡವಾಳಶಾಹಿ ವ್ಯವಸ್ಥೆ ಇದ್ದೇ ಇದೆ. ಇವೆಲ್ಲ ಒಂದು ದಿನದಲ್ಲಿ ಮಾಯವಾಗುವುದಿಲ್ಲ. ಆ ದಿಕ್ಕಿನಲ್ಲಿ ದೃಢವಾದ ಹೆಜ್ಜೆ ಇಡಲೇಬೇಕು.

ಕರ್ನಾಟಕ ಸಂಪದ್ಭರಿತ ರಾಜ್ಯ. ನಿಸರ್ಗ ಬೊಗಸೆಬೊಗಸೆಯಾಗಿ ನಮಗೆ ಇತ್ತಿದೆ. ಆ ಸಿರಿಯನ್ನೆಲ್ಲ ಅಭ್ಯುದಯಕ್ಕೆ ಹೂಡುವ ಪ್ರಯತ್ನ ಆಗಬೇಕು. ಅರಣ್ಯ, ಖನಿಜ, ಜಲಸಂಪತ್ತು ಎಲ್ಲವೂ ನಮ್ಮ ಏಳಿಗೆಗೆ ಉಪಯೋಗವಾಗಬೇಕು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಆಹಾರ ಮನುಷ್ಯಬಲವನ್ನು ಪರಿಪೂರ್ಣವಾಗಿ ಬಳಸಿಕೊಳ್ಳಬೇಕು. ಇದೆಲ್ಲ ಆಗಬೇಕಾದರೆ ನಮ್ಮ ಸಮಾಜ ತನ್ನ ತನವನ್ನು ಕಂಡುಕೊಳ್ಳಬೇಕು.

ಕರ್ನಾಟಕಕ್ಕೆ ಭವ್ಯಗತವೈಭವವಿದೆ. ಅಷ್ಟು ಮಾತ್ರದಿಂದಲೇ ಕೃತಕೃತ್ಯರಾಗೆವು. ಭವ್ಯತರ ವರ್ತಮಾನವನ್ನೂ ಭವ್ಯತಮ ಭವಿಷ್ಯವನ್ನೂ ನಿರ್ಮಿಸಬೇಕು. ಸತತ ಪರಿಶ್ರಮದಿಂದ, ಅಮಿತ ಕತೃನಿಷ್ಠ ಶಕ್ತಿಯಿಂದ ಮಾತ್ರ ಅದು ಈಡೇರೀತು.

ಕನ್ನಡನಾಡಿನಲ್ಲಿ ಕನ್ನಡವೇ ಸಾರ್ವಭೌಮ ಆಗಬೇಕು. ಆಡಳಿತ ಭಾಷೆಯಾಗಿ ಅಂಗೀಕರಿಸಿದ್ದೇವೆ. ಅದು ಎಲ್ಲ ಮಟ್ಟದಲ್ಲೂ ಜಾರಿಯಲ್ಲಿ ಬಂದಿಲ್ಲ. ಆಡಳಿತಗಾರರಿಗೆ ಕವಿದಿರುವ ಕತ್ತಲೆ ಕರಗಿಲ್ಲ. ಇಂಗ್ಲೀಷ್ ಮೋಹ ತೊಲಗಿಲ್ಲ. ಇದು ಬರಿಯ ಅಭಿಮಾನದ ಮಾತಲ್ಲ. ಇಡೀ ಕನ್ನಡ ಜನಪದ ಎಚ್ಚರಗೊಳ್ಳಲು ಇದೊಂದೇ ದಾರಿ. ಬಹುಜನ ಸಮಾಜ ತನ್ನ ಪಾತ್ರ ನಿರ್ವಹಿಸಲು ಅದಕ್ಕೆ ಅವಕಾಶ ತೆರೆಯಬೇಕು. ಗ್ರಾಮಪಂಚಾಯಿತಿಯಿಂದ ವಿಧಾನಸೌಧದವರೆಗೆ, ಶಿಶುವಿಹಾರದಿಂದ ಸ್ನಾತಕೋತ್ತರ ವ್ಯಾಸಂಗದವರೆಗೆ ಕನ್ನಡವನ್ನು ಮಾಧ್ಯಮವಾಗಿ ಕಡ್ಡಾಯಪಡಿಸಬೇಕು. ನ್ಯಾಯನಿರ್ವಹಣೆ, ವ್ಯಾಪಾರ-ವ್ಯವಹಾರ. ಜನಜೀವನದ ಸಕಲ ಆಗುಹೋಗೂ ಕರ್ನಾಟಕದಲ್ಲಿ ಕನ್ನಡದಲ್ಲೇ ಆಗಬೇಕು. ಇದಕ್ಕಾಗಿ ವಾದಿಸಬೇಕಾದ ಪರಿಸ್ಥಿತಿ ಖೇದಕರ. ನಮಗೆ ನಿಜವಾದ ಸಮಾಜವಾದ ಕನ್ನಡದ ಮೂಲಕವೇ ಇಳಿದು ಬಂದೀತು. ವಿಶುದ್ಧ ಜನತಂತ್ರ ಕನ್ನಡದ ಬಳಕೆಯಿಂದಲೇ ಸಾಕಾರ. ಪಟ್ಟಭದ್ರ ಹಿತಗಳ ವಿಸರ್ಜನೆ ಕನ್ನಡ ಸಾರ್ವಭೌಮ ಸ್ಥಾನ ಅಲಂಕರಿಸಿದಾಗ ಮಾತ್ರ ಸಾಧ್ಯ. ಕನ್ನಡನಾಡಿನ ಪ್ರತಿ ಪ್ರಜೆಯ ಪರಿಪೂರ್ಣ ವಿಕಾಸ ಕನ್ನಡದಿಂದಲೇ ಸಂಭವ. ಇದುವರೆಗೆ ತಳೆದ ಆಲಸ್ಯ ತೊರೆಯೋಣ. ಕನ್ನಡಕ್ಕೆ ಪಟ್ಟಕಟ್ಟೋಣ. ಕನ್ನಡಿಗನ ಪರಮಾಧಿಕಾರವನ್ನು ವಿಜೃಂಭಣೆಯಿಂದ ಮೆರೆಸೋಣ.

**ಡಾ|| ಎಸ್.ವಿ.ರಂಗಣ್ಣ**

ಶಿವಮೊಗ್ಗೆಯಲ್ಲಿ ನಡೆಯಲಿರುವ 49ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠಕ್ಕೆ ಡಾ|| ಎಸ್.ವಿ.ರಂಗಣ್ಣ ಅವರನ್ನು ಆರಿಸಿ ಅರ್ಹತೆ, ಅನುಭವ, ಪಾಂಡಿತ್ಯಗಳಿಗೆ ಕನ್ನಡ ಸಾಹಿತ್ಯ

ಪರಿಷತ್ತು ಮನ್ನಣೆ ನೀಡಿದೆ. ಕನ್ನಡ ಕಣ್ವರೆನಿಸಿದ್ದ ಬಿ.ಎಂ.ಶ್ರೀಕಂಠಯ್ಯನವರ ಪರಂಪರೆಯಲ್ಲಿ ಅರಳಿದವರು ಡಾ||ರಂಗಣ್ಣ ವೃತ್ತಿಯಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರು. ಮೈಸೂರಿನ ಖ್ಯಾತಿವೆತ್ತ ಮಹಾರಾಜಾ ಕಾಲೇಜಿನ ಪ್ರಾಚಾರ್ಯರೂ ಆಗಿದ್ದರು. ಅನೇಕ ಕೃತಿಗಳನ್ನು ರಚಿಸಿ ರಂಗಣ್ಣನವರು ಕನ್ನಡ ಜನಕೋಟಿಯ ಮೆಚ್ಚಿಗೆಗೆ ಪಾತ್ರರು. ಸಾಹಿತ್ಯದ ವಿಮರ್ಶಾ ಕ್ಷೇತ್ರದಲ್ಲಿ ಅವರ ಹೆಸರು ತುಂಬ ವಿಖ್ಯಾತ ಅವರು ಬರೆದಿರುವ ಶೈಲಿಯನ್ನು ಕುರಿತಾದ ಗ್ರಂಥ ತುಂಬ ಅಪರೂಪ ಬಗೆಯದು. ಇಳಿವಯಸ್ಸಿನಲ್ಲಿರುವ ಅವರನ್ನು ಅಧ್ಯಕ್ಷಪೀಠಕ್ಕೆ ಆರಿಸಿದುದು ಸಮಯೋಚಿತವೂ ಹೌದು.

ರಂಗಣ್ಣನವರು ಸರಳಸಜ್ಜನಿಕೆಯ ಸಾಕಾರಮೂರ್ತಿ. ಅಸಂಖ್ಯ ಶಿಷ್ಯಕೋಟಿಯನ್ನು ತಯಾರುಮಾಡಿದ್ದಾರೆ. ತಮ್ಮ ಅನೇಕ ವಿದ್ಯಾರ್ಥಿಗಳಲ್ಲಿ ಅಪಾರ ವಾತ್ಸಲ್ಯವನ್ನು ಹೊಂದಿದ್ದಾರೆ. ಅವರ ಸ್ವಭಾವ ತುಂಬಿದ ಕೊಡದಂತೆ, ಯಾರಿಗೂ ಎಂದೂ ಕೇಡನ್ನು ಬಯಸಿದವರಲ್ಲ. ಒಂದು ರೀತಿಯಲ್ಲಿ ಅವರನ್ನು ಅಜಾತಶತ್ರು ಎಂದರೂ ಸಂದೀತು. ಸಾಹಿತ್ಯ ಪ್ರಪಂಚದಲ್ಲಿ ವಿವಿಧ ತಂಡಗಳು, ವಾದಗಳು ಪಂಥಗಳು ಇವೆ. ಇವೆಲ್ಲದರಿಂದ ಅಲಿಪ್ತರು ಅವರು. ಎಲ್ಲವನ್ನೂ ಅಳೆದು ತೂಗಿ ನೋಡುವ ಸ್ವಭಾವ. ಆದುದರಿಂದ ಅವರು ಎಲ್ಲರಿಗೂ ಬೇಕಾದವರು.

ಕನ್ನಡ ಸಾಹಿತ್ಯ ಬೆಳೆಯುತ್ತಿದೆ. ವಿಚಾರ ಸಾಹಿತ್ಯದ ಕ್ಷೇತ್ರದಲ್ಲಿ ಇನ್ನೂ ಬಹಳ ದೂರ ಸಾಗಬೇಕಾಗಿದೆ. ಎರಡಕ್ಷರ ಬರೆದವರೆಲ್ಲ ಸಾಹಿತಿಗಳು ಎಂಬ ವರ್ಗದ ಕಲ್ಪನೆಯೂ ಅನೇಕರಲ್ಲಿ ಇದೆ. ಆಳವಾದ ಅಧ್ಯಯನ ವಿಶೇಷಪಾಂಡಿತ್ಯ ಪರಿಶ್ರಮದ ದಿನಗಳು ಕಳೆದುಹೋದುವೇನೋ ಎಂದು ಒಮ್ಮೊಮ್ಮೆ ಅನಿಸುತ್ತದೆ. ಆದರೂ ಇಂದಿನ ಪೀಳಿಗೆಯ ಬರಹಗಾರರಲ್ಲಿ ಹೊಸ ಭರವಸೆ ಮೂಡಿಬಂದಿದೆ. ಸಮಾಜದ ದೀನ ದುರ್ಬಲರ ಬಗೆಗೆ ಕಳಕಳಿ ಕುದಿಯುತ್ತಿದೆ. ಹೊಸ ಬದುಕಿನ ಹೊಸದೊಂದು ಆಯಾಮ ಗೋಚರಿಸುತ್ತಿದೆ. ಈ ಸವಾಲುಗಳನ್ನು ಎದುರಿಸಲು ಕನ್ನಡದ ಬರಹಗಾರರಿಗೆ ಡಾ||ರಂಗಣ್ಣನವರು ಮಾರ್ಗದರ್ಶನ ನೀಡಬಲ್ಲರು. ಸ್ಫೂರ್ತಿಯನ್ನೂ ಕೊಡಬಲ್ಲರು.

## ಕನ್ನಡದ ಸ್ಥಾನ-ಮಾನ

ನಲವತ್ತೊಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಡಾ||ಎಸ್.ವಿ.ರಂಗಣ್ಣ ಅವರು ಮಾಡಿರುವ ಭಾಷಣ ಅಂಥ ಅದ್ಭುತ ಎನಿಸದಿದ್ದರೂ ಕನ್ನಡಿಗರ ಮುಂದಿರುವ ಸಮಸ್ಯೆಗಳ ಸ್ಪಷ್ಟ ವಿವೇಚನೆ ಆಗಿದೆ. ಹಿಂದಿನ ಅಧ್ಯಕ್ಷರ ಮಾತುಗಳನ್ನು ಸಮಯೋಚಿತವಾಗಿ ಹೊಂದಿಸಿ ಉಲ್ಲೇಖಿಸಿದ್ದಾರೆ. ಕನ್ನಡದ ಸ್ಥಾನ-ಮಾನ ಕುರಿತು ಅವರು ಆಡಿರುವ ಬಿಚ್ಚುನುಡಿ ಉದ್ಧರಿಸಲು ಅರ್ಹ:

''ಮುಂದೆ ಏನಾಗುತ್ತದೆಯೋ ಅದನ್ನು ಗುಣಿಸಿ ನಿರ್ಣಯಿಸುವುದಕ್ಕೆ ಇಂದು

ಆಗುತ್ತಿರುವುದೇ ಸ್ಪಷ್ಟಸಮಂಜಸ ಜಾತಕ. ಈ ಹೊತ್ತು ನಮ್ಮ ಸತ್ಯ ಸೊತ್ತು. ನಾಳೆಯೂ ಅಲ್ಲ, ಈ ಹೊತ್ತೆ ಕನ್ನಡಿಗರೆಲ್ಲರೂ ಎಂದರೆ ಬಿಡಿ ವ್ಯಕ್ತಿಗಳು, ವಿದ್ಯಾಪೀಠಗಳು, ಅಧಿಕಾರಿಗಳು, ಇಲಾಖೆಗಳು, ಸರಕಾರ-ಎಲ್ಲರೂ ಎಲ್ಲವೂ ಚುರುಕಾಗಿ ಹುರುಪಿನಿಂದ ಏಕೀಭಾವದಿಂದ ತಮ್ಮ ತಮ್ಮ ರೀತಿಯಲ್ಲಿ ತಮ್ಮ ತಮ್ಮ ಶಕ್ತಿಸಾಮರ್ಥ್ಯಗಳನ್ನು ಧಾರೆ ಎರೆಯುತ್ತ ದಕ್ಷ ಕರ್ತವ್ಯಪಟುಗಳಾಗಬೇಕು. ಮನೆ ಮನೆಗಳಿಂದ ಬೀದಿ ಬೀದಿಗಳಿಂದ ಕನ್ನಡ ಸೊಲ್ಲು ಎದ್ದು ಬರುವುದೊಂದೇ ಅಲ್ಲ, ಅಂಗಡಿ ಗಡಂಗುಗಳಿಂದ ಕನ್ನಡ ಕಸ್ತೂರಿಯ ಕಂಪು ಬೀರತಕ್ಕದ್ದು, ಗಿರಣಿ ಕಾರ್ಖಾನೆಗಳಿಂದ ಕನ್ನಡ ಸದ್ದು ಗುಡುಗತಕ್ಕದ್ದು, ಎಲ್ಲ ದರ್ಜೆಯ ವಿದ್ಯಾ ಶಾಲೆಗಳಿಂದ ಪಾಠ-ಪ್ರವಚನದ ಕನ್ನಡ ಹಾಡಾಗತಕ್ಕದ್ದು! ಅಷ್ಟೇ ಅಲ್ಲದೆ, ಗಾಳಿಯಲ್ಲಿ ಕನ್ನಡ ಬೀಸುತ್ತಿದೆಯೇ, ನೀರಿನ ಮೇಲೆ ಕನ್ನಡ ಮೋಜಿನಿಂದ ತೇಲಾಡುತ್ತಿದೆಯೇ, ಬೆಳಕಿನಲ್ಲಿ ಕನ್ನಡ ಪ್ರಜ್ವಲಿಸುತ್ತಿದೆಯೇ ಆಕಾಶದಿಂದ ಕನ್ನಡ ಮೋಹಾಗಿ ಮಿನುಗುತ್ತಿದೆಯೇ ಕೊನೆಗೆ ಕತ್ತಲಿನಲ್ಲಿ ಕನ್ನಡ ಹರಡಿಕೊಂಡಿದೆಯೇ ಎಂಬ ಅನಿಸಿಕೆ ಪ್ರತಿಯೊಬ್ಬ ಕನ್ನಡಿಗನಿಗೂ ಮಂದಟ್ಟಾಗಬೇಕು. ಮನಸ್ಸಿದ್ದರೆ ಮಾರ್ಗ, ಸಾಹಸ ಮಾಡಿದರೆ ಸಲಾಕಿಯನ್ನೂ ನುಂಗಬಹುದು! ಕನ್ನಡ ಭಾಷೆ ಸಾಕಾದಷ್ಟು ಶ್ರೀಮಂತಿಕೆಯನ್ನು ಇನ್ನೂ ಹೊಂದಿಲ್ಲ ಎಂದು ಕೆಲವರಿಗೆ ತೋರಿಬಂದರೆ ನಾವು ಸಿಟ್ಟೇಳಬೇಕಾದ್ದಿಲ್ಲ, ಅವರಿಗೆ ಜವಾಬು ಈಯೋಣ; ಪಾರಿಭಾಷಿಕ ಶಬ್ದಗಳಾಗಲಿ ಇತರ ಅವಶ್ಯಕ ಸಮಾಜ ಪದಗಳಾಗಲಿ ಪಠ್ಯ ಪುಸ್ತಕಗಳಾಗಲಿ ಆಧಾರ ಗ್ರಂಥಗಳಾಗಲಿ ಮೇಲಿಂದ ದೈವಿಕವಾಗಿ ಉದುರುವುದಿಲ್ಲ, ಆಕಸ್ಮಿಕವಾಗಿ ಮಣ್ಣಿನಿಂದ ಚಿಗುರುವುದಿಲ್ಲ; ಪುರುಷ ಪ್ರಯತ್ನದಿಂದಲೇ ಅವು ಉತ್ಪತ್ತಿಗೊಳ್ಳುತ್ತವೆ'

ಈ ಮಾತುಗಳು ಕನ್ನಡ ನಾಡಿನ ಮೂಲೆ ಮೂಲೆಯಲ್ಲೂ ಮಾರ್ದನಿಗೊಳ್ಳಬೇಕು. ಎಲ್ಲ ಕಡೆ ಕನ್ನಡ ತಾನೆ ತಾನಾಗಿ ಮೆರೆಯಬೇಕಾದರೆ ಇಂದು ನಾವು ಇಂಗ್ಲೀಷ್‌ಗೆ ಕಟ್ಟಿಕೊಂಡಿರುವ ಪಟ್ಟಿ ಕೊನೆಗೊಳ್ಳಬೇಕು. ಈ ಮಾತನ್ನು ಸಮ್ಮೇಳನಾಧ್ಯಕ್ಷರು ಸ್ಪಷ್ಟವಾಗಿ, ಖಂಡಿತವಾಗಿ ಹೇಳಿದ್ದರೆ ಇವಕ್ಕೆ ಅರ್ಥ ಬರುತ್ತಿತ್ತು. ಆಡಳಿತದಲ್ಲಿ, ಜನಜೀವನದಲ್ಲಿ, ಶಿಕ್ಷಣದಲ್ಲಿ, ನ್ಯಾಯ ನಿರ್ವಹಣೆಯಲ್ಲಿ ಕನ್ನಡವೇ ರಾರಾಜಿಸುವಂತಾದರೆ ಮಾತ್ರ ಡಾ॥ ರಂಗಣ್ಣನವರ ಸದಾಶಯ ಸತ್ಯವಾದೀತು. ಇಂಗ್ಲೀಷು ಎಲ್ಲ ವಿದೇಶಿ ಭಾಷೆಗಳಂತೆ ಒಂದು. ಗ್ರಂಥಾಲಯದಲ್ಲಿರಲಿ, ಪ್ರಯೋಗಶಾಲೆಯಲ್ಲಿರಲಿ, ಅತಿಥಿಯಾಗಿರಲಿ, ಒಡೆಯನಾಗುವುದು ಬೇಡ. ಇನ್ನೂರು ವರ್ಷಗಳ ಕಾಲ ನಮ್ಮ ಮೇಲೆ ಹೊರಿಸಿದ ಬಳಿಕವೂ ಶೇಕಡಾ ಇಬ್ಬರಿಗೆ ಮಾತ್ರ ತಪ್ಪು ಇಂಗ್ಲೀಷ್ ಗೊತ್ತು. ಈ ಸಂಖ್ಯೆಯನ್ನು ಐದಕ್ಕೋ ಹತ್ತಕ್ಕೋ ಏರಿಸುವ ಅಪೇಕ್ಷೆ ವ್ಯರ್ಥ. ಹಾಗೆ ಕಲಿಯಬೇಕಾದ ಪ್ರವೀಣರು ರಷ್ಯನ್, ಜರ್ಮನ್, ಚೀನೀ, ಜಪಾನ್ ಭಾಷೆಯನ್ನು ಕಲಿಯಬೇಕಾದೀತು.

ಸಂಪರ್ಕ ಭಾಷೆ ಕುರಿತು ಅಧ್ಯಕ್ಷರು ಆಡಿರುವ ಮಾತು 'ವೈಯಕ್ತಿಕ ಜವಾಬ್ದಾರಿ' ಆಗುವುದು ಸಾಧ್ಯವಿಲ್ಲ. ಹಿಂದಿ ಭಾಷೆಯೇ ಭಾರತಕ್ಕೆ ಸಂಪರ್ಕ ಭಾಷೆ. ಬಹುಜನ

ಸಮುದಾಯಕ್ಕೆ ಅದು ಗೊತ್ತು. ಸುಲಭವಾಗಿ ಕಲಿಯಬಹುದು. ವ್ಯವಹಾರಕ್ಕೆ ಕಷ್ಟವಿಲ್ಲ. ವೃಥಾ ಹಿಂದಿ ಹಗೆ ಬೆಳೆಸಿಕೊಳ್ಳುವುದು ತಪ್ಪು. ಹಿಂದೆ ಹೈದರಾಬಾದಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ದಿ|| ಪ್ರೊ|| ಎ.ಆರ್.ಕೃಷ್ಣಶಾಸ್ತ್ರಿಗಳು ಇಂಥ ವಿವಾದದ 'ಜೇನುಗೂಡಿಗೆ' ಕೈ ಇಕ್ಕಿದ್ದರು. ಜೇನು ಎದ್ದಿತ್ತು. ಮತ್ತೊಬ್ಬ ಸಾಹಿತ್ಯ ಸಮ್ಮೇಳನಾಧ್ಯಕ್ಷ ದಿ|| ತಿ.ತಾ.ಶರ್ಮರು ಶಾಸ್ತ್ರಿಗಳ ವಾದವನ್ನು ಕತ್ತರಿಸಿ ಹಾಕಿದ್ದರು. ಅವರು ಮಂಡಿಸಿದ ತರ್ಕ ಇಂದಿಗೂ ಸಲ್ಲುತ್ತದೆ.

ಉಳಿದಂತೆ ಸೃಜನಶೀಲ ಸಾಹಿತ್ಯ ವಿಚಾರ, ಸಾಹಿತ್ಯ ವಿಮರ್ಶೆ ವಿಚಾರ ರಂಗಣ್ಣನವರ ಭಾಷಣದ ಅಂಶಗಳು ಮನನೀಯ. ರಸಜ್ಞರಿಗೆ, ವಿಮರ್ಶಕರಿಗೆ ಅವರು ನೆನಪಿಸಿರುವ ಸೂತ್ರಗಳು ಸುಸಂಗತ. ಕನ್ನಡ ಭಾಷೆಗೆ ಕನ್ನಡಿಗರಿಗೆ ಹೊಸ ಹುಟ್ಟೊಂದನ್ನು ತರುವ ಕಲ್ಪನೆಯೇ ಆಹ್ಲಾದದಾಯಕ. ಆ ಕೆಲಸ ಎಂದಿಗಿಂತ ಮಿಗಿಲಾಗಿ ನಡೆದರೆ ಮತ್ತೇನು ಬೇಕು?

### ಗಡವು ಗೊತ್ತುಪಡಿಸಿ

ಎಲ್ಲ ಮಹತ್ವದ ಕಾರ್ಯಕ್ರಮಗಳಿಗೂ ಇರುವಂತೆ ಆಡಳಿತ ಭಾಷೆಯ ಬಳಕೆಗೂ ವಿವಿಧ ಹಂತಗಳಿಗೆ ನಿಶ್ಚಿತಕಾಲ ಮಿತಿ ನಿಗದಿಗೊಳಿಸಿ ಕನ್ನಡವನ್ನೇ ಕಡ್ಡಾಯವಾಗಿ ಬಳಸುವಂತೆ ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನ ಸಮಯೋಚಿತ ಕರೆ ಕೊಟ್ಟಿದೆ. ಆ ಕಾಲಾವಧಿಯ ಅನಂತರ ಇಂಗ್ಲೀಷ್ ಬಳಸದಿರಲು ಸ್ಪಷ್ಟ ಆದೇಶ ನೀಡಬೇಕೆಂದೂ ರಾಜ್ಯ ಸರಕಾರಕ್ಕೆ ಸಮ್ಮೇಳನ ತಗಾದೆ ಹೂಡಿದೆ. ಎಷ್ಟೋ ವರ್ಷಗಳ ಮುಂಚೆಯೇ ಆಗಬೇಕಾಗಿದ್ದ ಕೆಲಸ ಇದು. ಯಾವ ಸ್ವತಂತ್ರ ದೇಶವೂ ಪರಭಾಷೆಯನ್ನು ಹೊತ್ತು ಮೆರೆಸುವುದಿಲ್ಲ. ಭಾರತದ ದುರ್ದೈವ ನಮ್ಮ ರಾಜ್ಯಕರ್ತರ ಮಾನಸಿಕ ಆಲಸ್ಯ. ನಮ್ಮ ಭಾಷೆಗಳು ಕೊರಗಿ ಸೊರಗುತ್ತಿವೆ. ಇದಕ್ಕೆಲ್ಲ ನಮ್ಮ ಆಡಳಿತ ಯಂತ್ರದಲ್ಲಿ ಇಂದಿಗೂ ಪಟ್ಟಭದ್ರರಾಗಿರುವ ಸಾಹೇಬರುಗಳೇ ಕಾರಣ. ಅವರು ಜನತೆಯ ಆಸೆ-ಆಕಾಂಕ್ಷೆಗಳನ್ನು ಗುರುತಿಸಿಕೊಂಡಿಲ್ಲ. ತಮ್ಮ ಸಂಬಳ ಸಾರಿಗೆ, ಸ್ಥಾನಮಾನಗಳಲ್ಲೇ ಹೂತು ಹೋಗಿದ್ದಾರೆ. ಜನತಂತ್ರದಲ್ಲಿ ಜನತೆಯ ಭಾಷೆಯಲ್ಲಿ ಆಡಳಿತ ನಡೆಯಬೇಕಾದುದು ಸ್ವಯಂಸಿದ್ಧ ಸತ್ಯ. ಇದ್ಕಾಗಿ ವಾದಿಸಬೇಕಾಗಿಲ್ಲ. ಚಳುವಳಿಯೂ ಬೇಕಾಗಿರಲಿಲ್ಲ. ಬೆಳಕಿನಷ್ಟು ತಿಳಿಯಾದ ಈ ಸತ್ಯವನ್ನು ಪದೇ ಪದೇ ಸಾರಿ ಹೇಳಬೇಕಾಗಿದೆ.

ವಿಭಾಗ ಮತ್ತು ಇಲಾಖೆಗಳ ಮಟ್ಟದಲ್ಲಿ ಸಹ ಕನ್ನಡ ಕೂಡಲೇ ಜಾರಿಗೆ ಬಂದರೆ ಅದರ ಪರಿಣಾಮ ಕೆಳಗಿನ ಹಂತದಲ್ಲೂ ಆಗುತ್ತದೆ. ಆದಕಾರಣ ವಿಭಾಗ ಮಟ್ಟದಲ್ಲಿ ಕೂಡಲೇ ಕನ್ನಡದ ಬಳಕೆಗೆ ಆದೇಶ ನೀಡಬೇಕೆಂದೂ ಸಮ್ಮೇಳನ ಒತ್ತಾಯಿಸಿದೆ. ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲೂ ಕನ್ನಡವನ್ನೇ ಬಳಕೆಗೆ ತರಬೇಕೆಂದು ಈಗಾಗಲೇ ಅಪ್ಪಣೆ ಹೊರಟಿದೆ. ಅದರ ಪಾಲನೆ ಎಷ್ಟು ಮಟ್ಟಿಗೆ ಆಗಿದೆ? ಉತ್ತರ ನಿರಾಶಾದಾಯಕ. ಎಷ್ಟೋ ಸರಕಾರಿ ಆಜ್ಞೆಗಳಂತೆ ಇವು ಮೂಲೆ ಗುಂಪಾಗಿ ಕುಳಿತಿದೆ. ಮುಖ್ಯವಾಗಿ ಸರಕಾರದ ಹಿರಿಯ ಅಧಿಕಾರಿಗಳಲ್ಲಿ ಕನ್ನಡದ ಕಳಕಳಿ ಮೂಡಬೇಕು. ಆದರೂ ಹಳೆಯ ಕಾಲದ ತಮ್ಮ

ಸಾಹೇಬಗಿರಿಯನ್ನು ತೊರೆಯಬೇಕು. ಸರಕಾರ ಇರುವುದು ಜನರಿಗಾಗಿ. ಅಧಿಕಾರಿಗಳಿಗೆ ಸಂಬಳ ಕೊಡುವವರು ಸಾಮಾನ್ಯ ಜನ ಅಂಥವರ ಸೇವೆಗಾಗಿ ಇರುವ ಆಡಳಿತವೆಲ್ಲ ಅವರಿಗೆ ತಿಳಿಯುವ ಭಾಷೆಯಲ್ಲೇ ನಡೆಯಬೇಕು. ಜನತೆಯ ಕಣ್ಣಂಕೆಯಲ್ಲೇ ಸರಕಾರದ ವ್ಯವಹಾರ ಸಾಗಿದರೆ ಆಡಳಿತದಲ್ಲಿ ಶುದ್ಧಿ ಇರುತ್ತದೆ. ಭ್ರಷ್ಟಾಚಾರ ಕಡಿಮೆಯಾಗುತ್ತದೆ.

ಕನ್ನಡ ಆಡಳಿತ ಭಾಷೆಯಾಗಲು ಆಗಬೇಕಾದ ಸಿದ್ಧತೆ ಎಲ್ಲ ಈಗಾಗಲೇ ಆಗಿದೆ. ಕಾನೂನು ಪದಕೋಶವಿದೆ. ಕಚೇರಿ ಕೈಪಿಡಿಗಳಿವೆ. ಬೆರಳಚ್ಚು ಯಂತ್ರ, ಶೀಘ್ರಲಿಪಿಕಾರರು ಎಲ್ಲರೂ ಇದ್ದಾರೆ. ಯಾವುದು ಇಲ್ಲ? ಆಡಳಿತಗಾರರ ಮಾನಸಿಕ ಸಿದ್ಧತೆಯೇ ಇಲ್ಲವಾಗಿರುವುದು. ಇದು ಎರಡು ರೀತಿಯಿಂದ ಬರಲು ಸಾಧ್ಯ. ಸ್ವಪ್ರೇರಣೆಯಿಂದ ಇಲ್ಲವೇ ಬಲಾತ್ಕಾರದಿಂದ. ಸ್ವಪ್ರೇರಣೆಗೆ ಕಾದು ಕುಳಿತಾಯಿತು. ಫಲಿತಾಂಶ ಸಂತೋಷಜನಕ ಆಗಲಿಲ್ಲ. ಬಲಾತ್ಕಾರವೊಂದೇ ಉಳಿದಿರುವ ಹಾದಿ. ಈಗ ಅದನ್ನೇ ಅನುಸರಿಸಬೇಕು. ಲೋಕಸೇವಾ ಆಯೋಗ ಹಾಗೂ ಇತರ ಇಲಾಖೆಗಳು ನಡೆಸುವ ಪರೀಕ್ಷೆಗಳಲ್ಲಿ ಕನ್ನಡದಲ್ಲೇ ಉತ್ತರ ಬರೆಯಲು ಅವಕಾಶ ಮಾಡಿಕೊಡಲು ಯೋಚಿಸಲಾಗಿದೆ. ಸಂಬಂಧಪಟ್ಟ ನಿಯಮಗಳ ತಿದ್ದುಪಡಿ ಬೇಗನೆ ಆಗಲಿರುವುದು ಸಂತಸದ ಸುದ್ದಿ. ಇದರಿಂದ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಪಡೆದ ಲಕ್ಷ-ಲಕ್ಷ ವಿದ್ಯಾರ್ಥಿಗಳಿಗೆ ಹಿತ ಆದೀತು. ಕರ್ನಾಟಕದಲ್ಲಿ ಕನ್ನಡದಲ್ಲಿ ಬರೆಯುವುದು ಕಡ್ಡಾಯವಾಗಿ ಇತರ ಯಾವುದೇ ಭಾಷೆಯಲ್ಲಿ ಬರೆಯುವುದು ಐಚ್ಛಿಕವಾಗಬೇಕು.

ಆಡಳಿತದಲ್ಲಿ ಮತ್ತು ನ್ಯಾಯಾಂಗದಲ್ಲಿ ಕನ್ನಡವನ್ನೇ ಬಳಸುವಂತೆ ನಿಸ್ಸಂದಿಗ್ಧ ಶಬ್ದಗಳಲ್ಲಿ ಆದೇಶ ಹೊರಡಿಸಬೇಕೆಂದು ಸಮ್ಮೇಳನ ಕೇಳಿದೆ. ಅಲ್ಪ-ಸ್ವಲ್ಪ ಅನುಮಾನ ಉಳಿದರೂ ಇಂಗ್ಲೀಷ್ ಬಳಕೆಗೆ ಅಧಿಕಾರಿಗಳು ಅವನ್ನು ಉಪಯೋಗಿಸಿಕೊಳ್ಳುತ್ತಾರೆ. ಅದಕ್ಕಾಗಿ ಸ್ವಲ್ಪವೂ ಶಂಕೆಗೆ ಎಡೆ ಇಲ್ಲದಂತೆ ಸರಕಾರ ಆದೇಶ ನೀಡಬೇಕು. ಇದೆಲ್ಲ ಕ್ರಮಗಳನ್ನೂ ಒಟ್ಟಿಗೆ ಜಾರಿಗೆ ತಂದರೆ ರಾಜ್ಯದಲ್ಲಿ ಕನ್ನಡ ವಾತಾವರಣ ಹದವಾಗಿ ಮೂಡುತ್ತದೆ. ಆಗ ಇತರ ಸಮಸ್ಯೆಗಳು ತಾವಾಗಿಯೇ ಬಗೆಹರಿದಾವು. ಎಂಬತ್ತು ಲಕ್ಷ ರೂಪಾಯಿಗಳ ಬೆಲೆಯ ಪುಸ್ತಕಗಳು ಮಾರಾಟವಾಗದೇ ಉಳಿದಿರುವ ಸಮಸ್ಯೆಗೂ ಪರಿಹಾರ ಸಿಕ್ಕೀತು. ಕನ್ನಡಕ್ಕೆ ಪಟ್ಟ ಕಟ್ಟಿದರೆ ಮಾತ್ರ ಇದೆಲ್ಲ ಸಾಧ್ಯ.

■

## ಎಚ್ಚರಿಕೆಯ ಗಂಟೆ

ಕಲ್ಬುರ್ಗಿಯಲ್ಲಿ ಸಮಾವೇಶಗೊಂಡಿರುವ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಅನೇಕ ದೃಷ್ಟಿಯಿಂದ ಗಮನಾರ್ಹ. 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಸುವಿಖ್ಯಾತರಾಗಿರುವ, ಉತ್ತಮ ಆಡಳಿತಗಾರ ಎಂಬ ಕೀರ್ತಿ ಪಡೆದ ಡಾ.ಸಿದ್ಧಯ್ಯ ಪುರಾಣಿಕ ಅವರು ಬಾರಿಸಿರುವುದು ದಿಟವಾಗಿಯೂ ಎಚ್ಚರಿಕೆಯ ಗಂಟೆ.

'ಕನ್ನಡ ನಾಡಿಗೆ ವಲಸೆ ಬರುವವರನ್ನು ತಡೆಗಟ್ಟದಿದ್ದರೆ ಕನ್ನಡಿಗರು ಇಲ್ಲಿ ಅಸಹಾಯಕ ಅಲ್ಪಸಂಖ್ಯಾತರಾದಾರು. ಕನ್ನಡ ನಾಡು ಭಾರತದ ಗೋಮಾಳವಾದೀತು. ಅನಾಹ್ವಾನಿತ, ಆಕ್ರಮಿಶೀಲ ಅತಿಥಿಗಳ ಧರ್ಮಶಾಲೆಯಾದೀತು... ಹೊರಗಿನ ಸೂರೆಗಾರರ ವಸಾಹತು ಆದೀತು''.

ಈ ದಿಟ್ಟನುಡಿಗಳಲ್ಲಿ ಸಮ್ಮೇಳನಾಧ್ಯಕ್ಷರು ಸಮಸ್ತ ಕನ್ನಡಿಗರ ಒಕ್ಕೊರಲ ಅಭಿಮತವನ್ನು ಮಾರ್ಮೊಳಗಿಸಿದ್ದಾರೆ. ಕನ್ನಡ ನಾಡು ಅನ್ಯಾಕ್ರಾಂತ ಆಗುವ ಅಪಾಯದ ವಿರುದ್ಧ ದನಿ ಎತ್ತಿದ್ದಾರೆ. ಈ ಮಾತುಗಳು ಕರ್ನಾಟಕ ಸರಕಾರವನ್ನೂ ಕನ್ನಡ ಜನಪದವನ್ನೂ ಬಡಿದೆಬ್ಬಿಸಿದರೆ ಎಷ್ಟೋ ಸಾರ್ಥಕ. ಅಂತರರಾಜ್ಯ ವಲಸೆ ನಿಯಂತ್ರಣಕ್ಕೆ ರಾಜ್ಯ ಸರಕಾರಗಳಿಗೂ ಅಧಿಕಾರ ಕೊಡಬೇಕೆನ್ನುವ ಒತ್ತಾಯ ಅವರದು. ಒಂದೇ ಸಂವಿಧಾನ ಪಡೆದಿರುವ ಏಕ ರಾಷ್ಟ್ರವಾದ ಭಾರತದಲ್ಲಿ ಇದನ್ನು ಜಾರಿಗೆ ತರಲು ಎಷ್ಟು ವ್ಯವಹಾರ ಸಾಧ್ಯ? ಈ ಪ್ರಶ್ನೆಯಂತೂ ಜಟಿಲವಾಗಿ ನಮ್ಮ ಮುಂದೆ ಎದ್ದು ನಿಲ್ಲುತ್ತದೆ. ಭಾರತದ ನೆಲದಲ್ಲಿ ಹುಟ್ಟಿದವರು ಈ ದೇಶದಲ್ಲಿ ಎಲ್ಲಿ ಬೇಕಾಗಿ ಹೋದರೂ ನೆಲಸಬಹುದು. ಡಾ.ಸಿದ್ಧಯ್ಯ ಪುರಾಣಿಕರ ಮನೋಗತವನ್ನು ಅರಿಬೇಕೇ ಹೊರತು ಅಕ್ಷರಶಃ ಅದನ್ನು ಅಂಗೀಕರಿಸಬೇಕೆಂದು ತಥ್ಯವೇನೂ ಇಲ್ಲ. ಬೇರೆ ರಾಜ್ಯಗಳವರು ಕನ್ನಡ ನಾಡಿಗೆ ಬರಲಿ. ಇಲ್ಲಿ ಬಂದ ಬಳಿಕ ಕನ್ನಡಿಗರಾಗಿಬಿಡಲಿ. ಕನ್ನಡನಾಡು-ನುಡಿಗಳೊಡನೆ ಹಾಲಲ್ಲಿ ಸವಿ ಬೆರೆತಂತೆ ಬೆರೆತುಹೋಗಲಿ. ಇದೇ ಸಮ್ಮೇಳನಾಧ್ಯಕ್ಷರ ಇಂಗಿತ.

**ಗುರಿ**

''ಕನ್ನಡೀಕರಣವೇ ಏಕೀಕರಣದ ಗುರಿ. ರೈತ, ಕಾರ್ಮಿಕ, ದಲಿತ, ದುರ್ಬಲರ ಏಳಿಗೆಗೆ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ, ಕನ್ನಡದಲ್ಲೇ ಎಲ್ಲ ಹಂತಗಳಲ್ಲಿ ಆಡಳಿತ. ಕನ್ನಡದಲ್ಲೇ ಎಲ್ಲ ಸ್ತರಗಳಲ್ಲಿ ನ್ಯಾಯ ನಿರ್ಣಯ ನಡೆದಾಗ ಮಾತ್ರ ಸಾಧ್ಯ.''

ಕನ್ನಡಿಗರ ಮುಂದಿನ ಗುರಿಯನ್ನು ಅತ್ಯಂತ ಸ್ಫುಟವಾಗಿ ಮುಂಡಿಸಿದ್ದಾರೆ. ಸಮ್ಮೇಳನಾಧ್ಯಕ್ಷರು. ಈ ಮಾತುಗಳಿಗೆ ಯಾರಿಗೂ ಎರಡಾಡುವುದು ಸಾಧ್ಯವಿಲ್ಲ. ಕನ್ನಡಿಗರ ಹಿತಸಾಧನೆ, ಪರಮಾರ್ಥ ಸಾಧನೆ ಎಲ್ಲವೂ ಕನ್ನಡದ ಮೂಲಕವೇ. ಇದೇ ಕರ್ನಾಟಕ ಏಕೀಕರಣದ ಅರ್ಥ. ಕನ್ನಡ ನಾಡು ಒಂದಾದುದರ ಮಥಿತಾರ್ಥ. ಸಾಹಿತ್ಯ ಸಮ್ಮೇಳನಾಧ್ಯಕ್ಷರು ಅತ್ಯುತ್ತಮ ಶಬ್ದಗಳಲ್ಲಿ ಕನ್ನಡಿಗರ ಧ್ವನಿಯನ್ನು ಲೋಕದ ಮುಂದೆ ಸಾರಿ ಸಾರಿ ಹೇಳಿದ್ದಾರೆ. ಇದು ಕನ್ನಡಿಗರಿಗೆ ದೀಕ್ಷಾ ಮಂತ್ರ. ಕನ್ನಡ ನಾಡಿನ ಆಡಳಿತಗಾರರಿಗೆ ದಿಕ್ಸೂಚಿ. ನಮ್ಮೆಲ್ಲರ ಪವಿತ್ರ ಕರ್ತವ್ಯ.

''ಇಂಗ್ಲಿಷ್ ಬಲ್ಲವರನ್ನೇ ಅವಲಂಬಿಸಿ ಪರಾವಲಂಬನ ನರಕದಲ್ಲೇ ಇಂದೂ ಇರಬೇಕೆಂದು ವಾದಿಸುವವರು ಶ್ರೀಸಾಮಾನ್ಯನ ಹಗೆಗಳೇ. ನಿರಕ್ಷರತೆ ನಿರ್ಮೂಲವಾದರೆ ತಮಗೆ ಹೋಳಿಗೆ ತುಪ್ಪ ತಪ್ಪುವುದೆಂದು ಜನರನ್ನು ಇನ್ನೂ ನಿರಕ್ಷರಿಗಳನ್ನಾಗಿ ಉಳಿಸಿದ ಶೋಷಕ ಶಕ್ತಿಗಳು ಅವರನ್ನು ಈಗಲೂ ಇಂಗ್ಲಿಷ್ ಬಲ್ಲವರ ಕಪಿಮುಷ್ಟಿಯಲ್ಲಿಡಲು ಕೊನೆಯ ಪ್ರಯತ್ನ ಮಾಡುತ್ತಿದ್ದರೆ ಆಶ್ಚರ್ಯವೇನಿಲ್ಲ''

ಈ ನಿಸ್ಸಂದಿಗ್ಧ ನುಡಿಗಳಲ್ಲಿ ಕನ್ನಡೀಕರಣದ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ. ಕನ್ನಡೀಕರಣ ತುಳಿತಕ್ಕೆ ಒಳಗಾದ ಎಲ್ಲ ದಲಿತ–ದುರ್ಬಲರ ಹೊಸ ಹುಟ್ಟಿನ ಹೋರಾಟ ಎಂದು ವ್ಯಾಖ್ಯಾನ ಮಾಡಿದ್ದಾರೆ. ಈ ಹೊಸ ಹುಟ್ಟಿಗಾಗಿ ಹೋರಾಡುವುದೇ ಪ್ರತಿಯೊಬ್ಬ ಎಚ್ಚೆತ್ತ ಕನ್ನಡಿಗನ ಕರ್ತವ್ಯಕರ್ಮ. ಇಂದು ಅದು ನಮಗೆ ಪರಮಧರ್ಮ. ಶೋಷಕ ಭಾಷೆಗಳ ಹೊಸ ಪೋಷಾಕಿನ ವಿಚಾರದಲ್ಲಿ ಡಾ. ಸಿದ್ಧಯ್ಯ ಪುರಾಣಿಕ ಅವರದು ಸ್ಪಷ್ಟ ಎಚ್ಚರಿಕೆ. ಅವರೆನ್ನುತ್ತಾರೆ: ''ಹಿಂದುಳಿದವರು ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನೇ ಬೇಡುವಷ್ಟು ಇಂಗ್ಲಿಷ್ ಮೋಹವನ್ನು ಹರಡಿದವರಾರು? ಹರ್ಡೇಕರ್ ಮಂಜಪ್ಪ, ಕುವೆಂಪು ಅಂತಹವರು ಸಂಸ್ಕೃತವನ್ನು ಕಲಿಯಲು ಹಂಬಲಿಸಿದಾಗ ನಿರಾಕರಿಸಿದವರೇ ಇಂದು ಹಳ್ಳಿಯಿಂದ ದಿಳ್ಳಿಯವರೆಗೆ ಆಕಾಶವಾಣಿಯ ದುರುಪಯೋಗದವರೆಗೂ ಸಂಸ್ಕೃತದ ಪ್ರಸಾರಕ್ಕಾಗಿ ಶಕ್ತಿಮೀರಿ ಹೋರಾಡುತ್ತಿರುವುದಕ್ಕೆ ಕಾರಣವೇನು? ಬೇಕಾದವರಿಗೆ, ಬೇಡವಾದವರಿಗೆಲ್ಲ ಹಿಂದೀ ಕಲಿಸಿಯೇ ತೀರುವ ಹಟದ ಹಿಂದಿನ ಇಂಗಿತವೇನು?'' – ಇದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಪ್ರಶ್ನೆ. ನಾಡಿನ ದಲಿತ – ದುರ್ಬಲರಿಗೆಲ್ಲ ಸೂಕ್ತ ಉತ್ತರ ಬೇಕೆನ್ನುತ್ತಾರೆ ಸಮ್ಮೇಳನಾಧ್ಯಕ್ಷರು.

## ಅಚ್ಚುಕಟ್ಟು

ಕನ್ನಡ ನಾಡು ನುಡಿಗಳ ಸ್ಥಿತಿಯನ್ನು ತಮ್ಮದೇ ವಿಶಿಷ್ಟ ಮಾತುಗಳಲ್ಲಿ ಡಾ. ಪುರಾಣಿಕರು ಬಹಳ ಅಚ್ಚುಕಟ್ಟಾಗಿ ವರ್ಣಿಸಿದ್ದಾರೆ. ಪರಿಸ್ಥಿತಿಯ ಸುಧಾರಣೆಗೆ ಕರೆ ಇತ್ತಿದ್ದಾರೆ. ಗಡಿ ವಿವಾದದಲ್ಲಿ ಮಹಾಜನ್ ಆಯೋಗದ ನಿರ್ಣಾಯಕ ತೀರ್ಪನ್ನು ಅನುಷ್ಠಾನದಲ್ಲಿ

ತರಬೇಕೆನ್ನುತ್ತಾರೆ. ಇದಕ್ಕಾಗಿ ಪಕ್ಷಭೇದವಿಲ್ಲದೆ ಎಲ್ಲರೂ ಹೋರಾಡಬೇಕೆಂದು ಕರೆ ಕೊಟ್ಟಿದ್ದಾರೆ.

ಕನ್ನಡಿಗರು ವಾಣಿಜ್ಯೋದ್ಯಮಗಳಲ್ಲಿ ಮುಂದಾಗುವಂತೆ ವಿಶೇಷ ಪ್ರೋತ್ಸಾಹ ಸರಕಾರದಿಂದ ಬರಲಿ. ಲಕ್ಷಗಟ್ಟಲೆ ಉದ್ಯೋಗಾವಕಾಶ ಕನ್ನಡಿಗರಿಗೆ ಸಿಗಲಿ. ಡಾ.ಸರೋಜಿನಿ ಮಹಿಷಿ ಅವರ ಸಮಿತಿಯ ವರದಿಯನ್ನು ವಿಳಂಬವಿಲ್ಲದೆ ಸ್ವೀಕರಿಸಿ ಸದ್ದುಗದ್ದಲವಿಲ್ಲದೆ ಕಾರ್ಯಗತ ಮಾಡಲಿ. ಒಡಕು ಸ್ವರಕ್ಕೆ ಕಿವಿಗೊಡುವುದು ಬೇಡ. ಸಮ್ಮೇಳನಾಧ್ಯಕ್ಷರ ಈ ಕಳಕಳಿಯ ಮನವಿಗೆ ಯಾರು ಮರುನುಡಿಯಬಲ್ಲರು? ಅಕ್ಷರ ಕ್ರಾಂತಿಯನ್ನು ಕನ್ನಡ ಸಂಸ್ಥೆಗಳು, ಗ್ರಾಮಸಭೆ, ಮಂಡಲ ಪಂಚಾಯತಿಗಳು ಕೈಗೊಂಡು ಶೀಘ್ರದಲ್ಲೇ ಆಗುಮಾಡಿಸಬೇಕೆಂಬ ಕರೆ. ಗಡಿ ಪ್ರದೇಶದಲ್ಲಿ 1991 ರ ಜನಗಣತಿಗೆ ಈಗಲೇ ಸಜ್ಜಾಗಬೇಕೆಂಬ ಸಲಹೆ.

ಆಡಳಿತ ಕನ್ನಡೀಕರಣವನ್ನು ಕಟ್ಟುನಿಟ್ಟಾಗಿ ಸಾಧಿಸಲು ಲೋಕಸೇವಾ ಆಯೋಗ, ನೇಮಕ ಸಮಿತಿಗಳ ಮೂಲಕ ಕನ್ನಡ ಕಲಿತವರನ್ನು ಮಾತ್ರ ಆಡಳಿತರಂಗಕ್ಕೆ ತರುವಂತೆ ಮಾಡಲು ಸಲಹೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ದ್ವಿತೀಯ ಪಥ ಇರಬೇಕೆಂದೂ ಆಗ್ರಹ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡಿನ ಏಕಮೇವ ಸಾಂಸ್ಕೃತಿಕ ವಿಶ್ವವಿದ್ಯಾಲಯವಾಗಬೇಕು. ಎಲ್ಲ ಭಾಷೆಗಳ ಅಭಿಮಾನ ಕೇಂದ್ರ ಆಗಬೇಕು. ಕನ್ನಡ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ತರುವ ಮಹಾಕೇಂದ್ರ ಆಗಬೇಕು ಎಂಬ ಅಪೇಕ್ಷೆ.

ಕನ್ನಡ ಸಾಹಿತ್ಯ ಪ್ರಸಾರ ನಿಗಮ, ಹಳ್ಳಿಗಳಲ್ಲಿ ಐದು ಸಾವಿರ ಗ್ರಂಥಾಲಯಗಳು - ವಾಚನಾಲಯಗಳ ಜಾಲ. ಸಮ್ಮೇಳನಾಧ್ಯಕ್ಷರು ಮಾಡಿರುವ ಅತ್ಯುತ್ತಮ ಸಲಹೆಗಳು. ಕಲ್ಬುರ್ಗಿಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದಿಂದ ನಿದ್ರಿಸುತ್ತಿರುವವರಿಗೆಲ್ಲ ಎಚ್ಚರಿಕೆಯ ಗಂಟೆಯನ್ನು ಬಲು ಜೋರಾಗಿ ಬಾರಿಸಿದ್ದಾರೆ. ಕರ್ತವ್ಯ ಪಥದ ಕಿ ನ ಕ ಮಾಡಿ ತೋರಿಸಿದ್ದಾರೆ. ಕನ್ನಡಿಗರ ಏಳಿಗೆಗೆ ದಾರಿ ಯಾವುದೆಂಬುದನ್ನು ನಿಚ್ಚಳವಾಗಿ ದಿಗ್ದರ್ಶಿಸಿದ್ದಾರೆ. ಈ ಮಾತುಗಳು ಕಿವುಡು ಕಿವಿಗಳ ಮೇಲೆ ಬೀಳದಿರಲಿ. ನಮ್ಮೆಲ್ಲರನ್ನೂ ದಿಟವಾಗಿಯೂ ಕನ್ನಡ ಹೋರಾಟದ ಕಲಿಗಳನ್ನಾಗಿಸಲಿ.

■

# ಅನನ್ಯ ನಮನ

**ಜೆ.ಪಿ. ಅವರ ಮಾನಸಪುತ್ರ ಖಾದ್ರಿ ಶಾಮಣ್ಣ, ಹಲವಾರು ಸಂದರ್ಭಗಳಲ್ಲಿ ಜೆ.ಪಿ. ಲೋಹಿಯಾ ಕುರಿತು ಅವರ ಲೇಖನಗಳು ಪ್ರಕಟವಾಗಿವೆ. ಈ ಸಂಪಾದಕೀಯ ಜೆ.ಪಿ. ನಿಧನರಾದಾಗ ಖಾದ್ರಿ ಬರೆದದ್ದು.**

---

ಈತ ಅಜಾನುಬಾಹು ಅಕ್ಷರಶಃ. ಮೈ ಎತ್ತರ. ಮನಸ್ಸೂ ಬಹು ಎತ್ತರ. ಹೃದಯವಂತೂ ಅತಿ ವಿಶಾಲ. ವಜ್ರಸಂಕಲ್ಪ ಕುಸುಮ ಕೋಮಲ ಮಾರ್ದವತೆ, ಮಾನವರಲ್ಲಿ ಅತಿ ಅಪರೂಪ. ಇಷ್ಟು ಧವಳಚರಿತ್ರ.

ಜೆ.ಪಿ. ಅರವತ್ತೈದು ಕೋಟಿ ಭಾರತೀಯರಿಗೆ ಮಂತ್ರ ಸಮಾನ ಹೆಸರು. ಅಸಂಖ್ಯ ತರುಣರನ್ನು ಸತತ ಹುರಿದುಂಬಿಸಿದ ಸ್ಫೂರ್ತಿಪುರುಷ. ಗಾಂಧೀಜಿ ಪ್ರತಿಪಾದಿಸಿದ ಮೌಲ್ಯಗಳ ಸಂಕೇತರೂಪ. ಸ್ವಾತಂತ್ರ್ಯ-ಸಮತೆಗಳೆರಡನ್ನೂ ಎತ್ತಿಹಿಡಿದ ಸಮನ್ವಯಕಾರ.

ಸ್ವರಾಜ್ಯ ಸಂಗ್ರಾಮದಲ್ಲಿ ಉಜ್ವಲ ಪಾತ್ರ. 'ಚಲೇಜಾವ್' ಚಳವಳಿಯನ್ನು ಕ್ರಾಂತಿಯಾಗಿ ಪರಿವರ್ತಿಸಿದ ಬಂಡಾಯಗಾರ. ಜೀವದ ಹಂಗು ತೊರೆದು ಜೈಲುಹಾರಿ 'ಮಾಡು ಇಲ್ಲವೆ ಮಡಿ' ಮಂತ್ರವನ್ನು ದೇಶದ ದಶದಿಕ್ಕುಗಳಿಗೂ ಮುಟ್ಟಿಸಿದ ವೀರಾಗ್ರಣಿ. ಬಾಪೂ ಹೇಳಿದರು: ''ಜಯಪ್ರಕಾಶ್‌ಗಿಂತ ಧೀರ ಮತ್ತೊಬ್ಬರಿಲ್ಲ'' ಎಂದು.

ಅಮೆರಿಕದಲ್ಲಿ ಕೂಲಿಯಾಗಿ ದುಡಿದು ಕಾಲೇಜು ಕಲಿತರು. ಮಾರ್ಕ್ಸ್‌ವಾದದ ಮೊದಲ ದೀಕ್ಷೆ ಅಲ್ಲೇ. ಮಾರ್ಕ್ಸ್‌ನ ಹೆಸರಲ್ಲಿ ಆಣೆ ಹೊತ್ತು ನಡೆದವರ ರೀತಿ ಹೇಸಿಗೆ ಹುಟ್ಟಿಸಿತು. ಶೋಧ ಶುರು ಆಯಿತು. ಸ್ವಾತಂತ್ರ್ಯ ಸಮರದ ಮೂಸೆಯಲ್ಲಿ ಎಲ್ಲರ ಬಣ್ಣವೂ ಬಯಲು. ಅನಂತರ ದಾರಿ-ಗುರಿಗಳೆರಡರ ನೇರ ನಂಟು ಅರಿವಾಯಿತು. ಕಾರ್ಲ್‌ಮಾರ್ಕ್ಸ್‌ನ ಉತ್ಕಟ ವಿಚಾರಕ್ಕೆ ಮಹಾತ್ಮ ಗಾಂಧೀಜಿಯ ಸಭ್ಯ ಪರಾಕ್ರಮದ ಎರಕ. ಜೆ.ಪಿ. ಭಾರತದ ಮಣ್ಣಲ್ಲಿ ಮೂಡಿಬಂದ ಅತಿ ಚೊಕ್ಕ ಸತ್ಯಾಗ್ರಹೀ ಸಮಾಜವಾದಿ.

ಹೊರನೋಟಕ್ಕೆ ವಿರೋಧಾಭಾಸ, ತಿರುಳು ತರ್ಕಬದ್ಧ, ಡಾಂಭಿಕತೆಯಿಂದ ಬಹುದೂರ. ಸತ್ಯದ ಮುಖವನ್ನು ಮುಚ್ಚಿಟ್ಟ ಚಿನ್ನದ ಪಾತ್ರೆಯನ್ನು ದೂರ ಸರಿಸಿದ ಕೆಚ್ಚು. ಸತ್ಯಶೋಧನೆಯಲ್ಲಿ ಕಡೆಯ ಮಾತೇ ಇಲ್ಲ ಎಂದರು ಬಾಪೂ. ಅದರ ಮೈವೆತ್ತ ಮಾದರಿಯಾಗಿ

ನಿಂತಿದೆ ಜೆ.ಪಿ.ಯವರ ವಿಚಾರಯಾತ್ರೆ. ಅದು ವಿಚಾರದ ವಿಕಾಸಯಾತ್ರೆ. ಲೋಕದ ವಿಚಾರಧಾರೆಗಳೆಲ್ಲದರ ರಸಭಟ್ಟಿಯಾಗಿ ಇಳಿದ ಮಹಾಪರಿಪಾಕ.

ಜಯಪ್ರಕಾಶರದು ಅವಿಶ್ರಾಂತ ಚೇತನ. ಭಾರತದ ಸಮಾಜವಾದೀ ಆಂದೋಲನ ಅನೇಕ ಚೈತನ್ಯಶಾಲೀ ನಾಯಕರನ್ನು ಮೇಲೆ ಎಸೆಯಿತು. ರಾಮಮನೋಹರ ಲೋಹಿಯಾ ಮತ್ತೊಬ್ಬ ಮೇರು ವಿಚಾರವಂತ. ಜಗತ್ತಿನ ಸಮಾಜವಾದೀ ಚಿಂತನಕ್ಕೆ, ಕ್ರಿಯೆಗೆ ಈ ಸೋದರ ಚೇತನಗಳು ಸಲ್ಲಿಸಿದ ಕೊಡುಗೆ ನಿಜಕ್ಕೂ ಎಣೆಯಿಲ್ಲದ್ದು. ಅಪರೂಪ ಬಗೆಯದು. ಇತ್ತೀಚಿನ ವರ್ಷಗಳಲ್ಲಂತೂ ಲೋಕಸಂಘರ್ಷಕ್ಕೆ ಲೋಹಿಯಾ ಕಲ್ಪಿಸಿಕೊಂಡಿದ್ದ ಹೊಸ ಆಯಾಮ ನೀಡಿದವರು ಜೆ.ಪಿ. ತಮ್ಮ ಸಂಗಾತಿ ಬದುಕಿದ್ದಾಗ ತೀರಿಸಲಾಗದ ಶ್ರದ್ಧಾ ಋಣವನ್ನು ತೀರಿಸಿಬಿಟ್ಟರು.

ಐವತ್ತು ವರ್ಷ ದೇಶದ ಬದುಕಿನಲ್ಲಿ ಅಲ್ಪ, ವ್ಯಕ್ತಿಯ ಬಾಳಿನಲ್ಲಿ ಸುದೀರ್ಘ. ಸ್ವಯಂ ಸೇವಕತನದಿಂದ ಭರತ ಭೂಮಿಯ 'ಮನಸ್ಸಾಕ್ಷಿ'ಯೇ ಆಗುವವರೆಗಿನ ಸೇವೆಯ ಸಮರ್ಪಿತ ಬದುಕು. ಅಧಿಕಾರ, ಹಣ, ಲೋಕದ ಯಾವ ಭೋಗಭಾಗ್ಯವೂ ಅವರನ್ನು ಸೆಳೆಯಲಿಲ್ಲ. ಕಟ್ಟಕಡೆಯ ದಟ್ಟದರಿದ್ರನೇ ಆರಾಧ್ಯದೈವ. ದಂಡಶಕ್ತಿಯನ್ನು ಜನಶಕ್ತಿಯಿಂದ ಹದ ಮಾಡುವ ಹಟ. ವ್ಯವಸ್ಥೆ ಬದಲಿಸಲು ತೊಟ್ಟ ಪಣ. ವ್ಯಕ್ತಿ ಪರಿವರ್ತನೆಯ ಪರಮ ಅಗತ್ಯ ಅರಿತುಕೊಂಡ ಪ್ರಬುದ್ಧ ಜೆ.ಪಿ. ಕಟ್ಟಬಯಸಿದ್ದು ಹೊಸ ಸಮಾಜ. ನಿಜ. ಹಳಸಿಹೋದ ಮನುಷ್ಯರ ಹೊಸ ಹಂದರವಲ್ಲ. ಹೊಸ ಮನುಷ್ಯನೇ ತಳಹದಿಯಾದ ಹೊಚ್ಚ ಹೊಸ ಸಮಾಜ- ಅದರ ಹೊಂಗನಸು.

ಸ್ವರಾಜ್ಯ ಬಂದ ಮೂವತ್ತು ವರ್ಷಗಳಲ್ಲಿ ಎರಡನೆಯ ಬಾರಿ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾಯಿತು. 1947ರಲ್ಲಿ ಬ್ರಿಟಿಷರಿಂದ ಬಿಡುಗಡೆ. 1977ರಲ್ಲಿ ಸ್ವದೇಶಿ ಸರ್ವಾಧಿಕಾರದಿಂದ ವಿಮೋಚನೆ. ಒಂದಕ್ಕೆ ಬಾಪೂ ಸೇನಾನಿ. ಮತ್ತೊಂದಕ್ಕೆ ಜೆ.ಪಿ. ಈ ಹೋರಾಟದಲ್ಲೇ ಜಯಪ್ರಕಾಶರ ದೇಹ ಜರ್ಝರಿತ. ಭಾರತದ ಜನಸ್ತೋಮ ಉತ್ತರಿಸಿತು. ದಬ್ಬಾಳಿಕೆಯನ್ನು ಧಿಕ್ಕರಿಸಿತು. ಜೆ.ಪಿ.ಯಲ್ಲಿ ಮತ್ತೊಬ್ಬ ಗಾಂಧೀಯನ್ನು ಕಂಡುಕೊಂಡಿತು. ಹೊಸ ಕಾಲಕ್ಕೆ ತಕ್ಕಂತೆ ಗಾಂಧೀ ತೋರಿದ ಹಾದಿಯನ್ನೇ ಬೆಳಗಿದರು. ಧ್ರುವ ತತ್ವಗಳನ್ನು ಸಾರಿ ಸಾರಿ ಹೇಳಿದರು. ಎಲ್ಲ ಮಹಾನುಭಾವರೂ ಮಾಡುವಂತೆಯೇ ಬೆಳಕು ಚೆಲ್ಲಿ ಚರಿತ್ರೆಯಲ್ಲಿ ಕರಗಿ ಹೋದರು.

ಕಡೆಯ ದಿನಗಳಲ್ಲಿ ಜೆ.ಪಿ.ಗೊಂದು ಕೆಟ್ಟ ಅನುಭವ. ಇದ್ದಿರು ಕಟ್ಟಿದ್ದ ಕೂಟ ಚೂರು ಚೂರು. ಅದರ ಹೆಸರು ಹೇಳಿ ಅಧಿಕಾರಕ್ಕೆ ಬಂದ ಜನ ಗಾಂಧೀಗೆ ಮಾಡಿದಂತೆಯೇ ಜೆ.ಪಿ.ಗೂ ಎರಡು ಬಗೆದರು. ಬಹುಶಃ ಇದು ಜೆ.ಪಿ.ಯ ಹೃದಯಕ್ಕೆ ಕಟ್ಟಕಡೆಯ ಆಘಾತ.

ಅಂತೆಯೆ 'ಸಾಯುವ ಸಮಯ ಸನ್ನಿಹಿತ' ಎಂದು ಬಾಯಿಬಿಟ್ಟು ಹೇಳಿಯೇ ಇಹ ವ್ಯಾಪಾರ ಮುಗಿಸಿಬಿಟ್ಟರು. ಎಂಥ ಘೋರ ದುರಂತ!

ಜೆ.ಪಿ. ಬಯಸಿದ್ದು, ಹೆಣಗಿದ್ದು ಬದುಕಿನ ಎಲ್ಲ ಮುಖಗಳಲ್ಲಿ ಕ್ರಾಂತಿಗಾಗಿ. ಆರ್ಥಿಕ ವಿಷಮತೆಗೆ ವೈರಿ. ಸಾಮಾಜಿಕ ಏರು ಪೇರಿಗೆ ಕಡುವಿರೋಧಿ. ರಾಜಕೀಯ ಅಧಿಪತ್ಯಕ್ಕೆ ಸೋಲರಿಯದ ಸೆಡ್ಡು. ಅವರಿಗೆ ಪ್ರಜೆ ಕೇವಲ ಸಂಖ್ಯೆ-ಸಂಕೇತ ಮಾತ್ರ ಆಗಿರಲಿಲ್ಲ. ಸಾವಿರಾರು ವರ್ಷಗಳಿಂದ ಬರಿಯ ಸೊನ್ನೆ ಆಗಿದ್ದ ಪ್ರಜೆಯನ್ನೇ ಇತಿಹಾಸದ ರಂಗಮಂಚಕ್ಕೆ ಎಳೆದು ಸೆಳೆದು ತರುವುದೇ ಅವರ ಸಂಪೂರ್ಣ ಕ್ರಾಂತಿಯ ಗುರಿ. ಈ ಉಜ್ವಲ ಆದರ್ಶದ ಸುತ್ತಲೂ ದೇಶದ ಯುವಜನ ಸ್ತೋಮವನ್ನು ಸಂಘಟಿಸಬಯಸಿದರು. ಅದರಲ್ಲೇ ಹೋಮವಾಗಿ ಹೋದರು.

ಶೋಷಣೆಯಿಂದ ಬಿಡುಗಡೆ ಪಡೆದರೆ ಸಾಲದು. ಶಾಸನದಿಂದಲೂ ಮುಕ್ತಿ ಸಿಗಬೇಕು. ಜನಶಕ್ತಿ ರಾಜ್ಯಶಕ್ತಿಯನ್ನು ನಿಯಂತ್ರಿಸಬೇಕು. ಹಣ-ಅಧಿಕಾರ ಎರಡೂ ಅತಿ ಕೆಳಗಿನ ಮಟ್ಟದಲ್ಲೂ ಹಂಚಿಹೋಗಬೇಕು. ಹೆಪ್ಪುಗಟ್ಟಿ ಒಂದೆಡೆ ಕೇಂದ್ರೀಕೃತ ಆಗಬಾರದು. ಇದೇ ನಿಜವಾದ ಜನತಂತ್ರ. ಇಂಥ ರಾಜ್ಯ ವ್ಯವಸ್ಥೆಯ ಚಿತ್ರವನ್ನು ಜೆ.ಪಿ. ದೇಶದ ಮುಂದೆ ಇಟ್ಟರು. ಇದನ್ನು ರಾಜನೀತಿ ಯಲ್ಲ, 'ಲೋಕನೀತಿ' ಎಂದು ಕರೆದರು.

ಜಯಪ್ರಕಾಶರು ಈ ಶತಮಾನದಲ್ಲಿ ಭಾರತ ಕಂಡ ಮಹಾಪುರುಷರಲ್ಲಿ ಒಬ್ಬರು. ನಿಸ್ಸಂದೇಹ. ಹಿಂದೊಮ್ಮೆ ಅವರನ್ನು ಹಳಿದು ಹೀಗಳೆದವರೂ ಈಗ ಮೆಚ್ಚುತ್ತಾರೆ. ಅವರನ್ನು ಹಾಡಿ ಹೊಗಳಿ ಹೊನ್ನಶೂಲಕ್ಕೆ ಏರಿಸಿದರೇನು ಪ್ರಯೋಜನ? ಅವರಂತೂ ಈಗ ಕೇವಲ ಕೀರ್ತಿಕಾಯರು. ಆದರೆ ಕಲ್ಪನೆಯ ಕನಸನ್ನು ನನಸುಗೊಳಿಸುವ ಸಂಕಲ್ಪವೇ ಅಗಲಿದ ನಾಯಕನಿಗೆ ನಮ್ಮ ನಿಜವಾದ ನಮನ. ಅದೇ ಅನನ್ಯ ಅಶ್ರುತರ್ಪಣ.

ಜೆ.ಪಿ.ಯ ಮಣ್ಣಿನ ಮೈ ಮರೆಯಾಯಿತು. ವಿಧಿನಿಯಾಮಕ. ಅವರು ಹಚ್ಚಿದ ಕ್ರಾಂತಿಯ ಪಂಜು ನಮಗೆಲ್ಲ ಕರ್ತವ್ಯ ಪಥಕ್ಕೆ ಎಂದೂ ನಂದದ ದಾರಿದೀಪ.

■

## ಪಣ ತೊಡೋಣ

ಇಂದು ರಾಜ್ಯೋತ್ಸವ. ಕನ್ನಡ ನಾಡು ಒಂದಾಗಿ ಇಪ್ಪತ್ತನಾಲ್ಕು ವರ್ಷ. ಇಪ್ಪತ್ತೈದರಲ್ಲಿ ಕಾಲಿಡುತ್ತಿದ್ದೇವೆ. ಒಂದು ನಾಡಿನ ಬದುಕಿನಲ್ಲಿ ದೊಡ್ಡ ಅವಧಿಯೇನೂ ಅಲ್ಲ. ಸೋಲು-ಗೆಲುವು ತೂಗಿ ನೋಡುವ ಸಂದರ್ಭ.

ನಾಡು ಒಂದಾದ ಎಷ್ಟೋ ವರ್ಷಗಳ ತರುವಾಯ ''ಕರ್ನಾಟಕ'' ಎಂಬ ನಾಮಕರಣ. ಕಳೆದ ವರ್ಷದಿಂದ ಎಲ್ಲ ಹಂತಗಳಲ್ಲಿ ಕನ್ನಡವೇ ಆಡಳಿತ ಭಾಷೆ.

ಆಡಳಿತ ದಿಟವಾಗಿಯೂ ಕನ್ನಡದಲ್ಲಿಯೇ ನಡೆಯುತ್ತಿದೆಯೇ? ಶ್ರೀಸಾಮಾನ್ಯನಿಗೆ ಹಾಗನಿಸುತ್ತಲೇ ಇಲ್ಲವಲ್ಲ? ಎಲ್ಲಿ ನೋಡಿದರೂ ತಪ್ಪು ಇಂಗ್ಲಿಷಿನ ಮೆರೆತ. ಪರಭಾಷಾ ಮೋಹ ನಮ್ಮನ್ನಿನ್ನೂ ಬಿಟ್ಟಿಲ್ಲ. ಅಚ್ಚ ಕನ್ನಡಿಗರು ನಾವಾಗಿಯೇ ಇಲ್ಲ.

ಕನ್ನಡ ಆಡಳಿತದಲ್ಲಿ ಎಲ್ಲ ಕಡೆ ವೈಭವದಿಂದ ಮೆರೆಯಲು ಸರಕಾರದ ಹಿರಿಯ ಅಧಿಕಾರಿಗಳೇ ಅಡ್ಡಿ. ಕನ್ನಡದ ಕಳಕಳಿ ಉಳ್ಳವರು ಅವರಲ್ಲಿ ಬಹು ಕಡಿಮೆ. ಕನ್ನಡ ಬಾರದ ಉನ್ನತ ಅಧಿಕಾರಿಗಳೂ ಸಾಕಷ್ಟು. ಇಂಥವರಿಂದ ಕನ್ನಡಿಗ ಶ್ರೀಸಾಮಾನ್ಯನಿಗೆ ಸೇವೆ ಎಂಬುದು ಸುಳ್ಳು.

ಆಡಳಿತದಲ್ಲಿ ಕನ್ನಡ ಕಡ್ಡಾಯ ಆಗಲೇಬೇಕು. ಮುಖ್ಯಮಂತ್ರಿಯಿಂದ ಹಿಡಿದು ಎಲ್ಲರೂ ಕನ್ನಡವನ್ನೇ ಬಳಸತಕ್ಕದ್ದು. ಆಗ ಮಾತ್ರ ಅಧಿಕಾರಿಗಳ ಸೊಕ್ಕು ಮುರಿದೀತು. ವಿಧಾನ ಮಂಡಲದ ಸದನಗಳಲ್ಲಿ ಕಲಾಪವೆಲ್ಲ ಕನ್ನಡದಲ್ಲೇ ಆಗತಕ್ಕದ್ದು. ಪ್ರಶ್ನೋತ್ತರ ಚರ್ಚೆ ಎಲ್ಲವೂ ಕನ್ನಡದಲ್ಲೇ. ಅದು ಆಗುವವರೆಗೆ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಹಬ್ಬಲಾರದು.

ಶಿಕ್ಷಣದಲ್ಲಿ ಕನ್ನಡ, ನ್ಯಾಯ ನಿರ್ವಹಣೆಯಲ್ಲಿ ಕನ್ನಡ. ಜನಜೀವನದ ಎಲ್ಲ ವ್ಯವಹಾರವೂ ಕನ್ನಡದಲ್ಲೇ. ಇದು ಈಡೇರುವವರೆಗೆ ಕರ್ನಾಟಕ ಆಗಿಯೂ ಆಗದಂತೆಯೇ.

ಕನ್ನಡಿಗರಿಗೆ ಯಾರೂ ರಾಷ್ಟ್ರಾಭಿಮಾನ ಕಲಿಸಬೇಕಿಲ್ಲ. ನಮ್ಮಷ್ಟು ಸಹನಶೀಲರು ಯಾರಿದ್ದಾರೆ? ನಮ್ಮ ತಾಳ್ಮೆಯೇ ನಮಗೆ ಈಗ ಮುಳಿವು. ಕರ್ನಾಟಕದಲ್ಲಿ ಇರಬಯಸುವವರೆಲ್ಲ ಕನ್ನಡ ಕಲಿಯಲೇಬೇಕು. ಕನ್ನಡ ಬಾರದೆ ಕನ್ನಡ ನಾಡಿನಲ್ಲಿ ಬದುಕುವು ಅಸಾಧ್ಯ. ಆಗಬೇಕು. ಕನ್ನಡಿಗರು ಈ ಪಟ್ಟು ಹಿಡಿಯದಿದ್ದರೆ ಅವರಿಗಾಗುತ್ತಿರುವ ಅನ್ಯಾಯಗಳು ನಿಲ್ಲವು.

ಪ್ರಜೆ ಪಾತ್ರ ವಹಿಸಲೆಂದೇ ಕನ್ನಡ ಆಡಳಿತ ಭಾಷೆ. ಅದನ್ನು ನೆರವೇರಿಸದಿದ್ದರೆ ಪ್ರಭುವಿಗೆ ದ್ರೋಹ. ಈ ಮಾತನ್ನು ಪ್ರತಿಯೊಬ್ಬರೂ ಅರಿತು ನಡೆದುಕೊಳ್ಳಲಿ.

ಸಮೃದ್ಧ ಕನ್ನಡ ನಾಡು, ಸಮಾನತೆಯ ಕರ್ನಾಟಕ ನಮ್ಮ ಗುರಿ. ಪ್ರಕೃತಿ ಸಂಪತ್ತಿಗೆ ಬರವಿಲ್ಲ, ಅದರ ರೂಢಣೆ ಇನ್ನೂ ಆಗಿಲ್ಲ, ಆದಾಗ ಮಾತ್ರವೇ ಸಮಗ್ರ ಅಭ್ಯುದಯ.

ಕಳೆದ ವರ್ಷದಲ್ಲಿ ಕನ್ನಡ ನಾಡಿನಲ್ಲಿ ಒಂದು ಹೊಸ ಎಚ್ಚರ. ಈಚಿನ ತಿಂಗಳುಗಳಲ್ಲಿ ನಮ್ಮ ಬೇಸಾಯಗಾರ ಸೆಟೆದು ನಿಂತ. ಬಗೆಬಗೆಯ ಅನ್ಯಾ, ಸುಲಿಗೆಗಳಿಗೆ ತಲೆಬಾಗಿದವ ತಲೆಕೊಡವಿ ನಿಂತ. ಆತನ ಹೋರಾಟ ಇನ್ನು ಸಾಗಿಯೇ ಇದೆ. ಕನ್ನಡ ನಾಡಿನ ರೈತಕೋಟಿ ಸಿಡಿದೆದ್ದಿದೆ. ಇದೊಂದು ಅತ್ಯಂತ ಆಶಾದಾಯಕ ಚಿಹ್ನೆ.

ಕರ್ನಾಟಕದಲ್ಲಿ ಮೂಡಿ ಬಂದಿರುವ ಈ ಎಚ್ಚರ ಭಾರತದ ಆದ್ಯಂತ ಹಬ್ಬಲಿ, ನ್ಯಾಯಕ್ಕಾಗಿ, ಸಮತೆಗಾಗಿ ತೊಡಗಿರುವ ಹೋರಾಟ ಸಾರ್ವತ್ರಿಕ ಆಗಲಿ.

ಕರ್ನಾಟಕ ಎಂದಿನಿಂದಲೂ ಗಾಂಧೀ ಪ್ರಾಂತ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉಜ್ವಲ ಪಾತ್ರ. ಸಮತೆಯ ಸಮರದಲ್ಲೂ ನಾವೇ ಮುಂಚೂಣಿಯಲ್ಲಿ ಸಾಗೋಣ. ಕನ್ನಡಿಗರ ಕೆಚ್ಚು ಇತರಿಗೆ ದಾರಿದೀವಿಗೆಯಾಗಲಿ. ಅಹಿಂಸಾತ್ಮಕ ವರ್ಗ ಸಂಘರ್ಷ ಕಿಡಿ ಇಲ್ಲಿಂದ ಹಾರಲಿ. ಎಲ್ಲ ರಾಜ್ಯಗಳಲ್ಲೂ ಈ ಎಚ್ಚರ ಆಂದೋಲನದ ಮಹಾಪೂರ ಆಗಲಿ.

ಇಂದಿನ ವಿಷಮ ವ್ಯವಸ್ಥೆಯನ್ನು ಅಡಿಯಿಂದ ಮುಡಿಯವರೆಗೆ ಬದಲಿಸದೆ ನಮ್ಮ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ. ನಮ್ಮನ್ನು ಕಿತ್ತು ತಿನ್ನುತ್ತಿರುವ ಪೀಡೆಗಳಿಗೆ ಪರಿಹಾರವಿಲ್ಲ. ಅಂತಲೇ ಹೊಸ ಕನ್ನಡ ನಾಡನ್ನು ಹೋರಾಟದ ಹಾದಿಯಲ್ಲಿ ಕಟ್ಟುವ ಸಂಕಲ್ಪ ನಮ್ಮದು. ಕಟ್ಟಕಡೆಯ ಮನುಷ್ಯನ ಏಳಿಗೆ ಮೊಟ್ಟ ಮೊದಲು. ಇದೇ ನಮ್ಮ ಮೂಲದ ಮಂತ್ರ.

ಇದರ ಆಧಾರದ ಮೇಲೆಯೇ ಹೊಸ ನಾಡಿನ ನಿರ್ಮಾಣ. ಈ ರಾಜ್ಯೋತ್ಸವ ಸಂಕಲ್ಪೋತ್ಸವ ಆಗಲಿ. ಸಂಘಟನೆಯ ಹಬ್ಬ ಆಗಲಿ "ಇರುವೆಲ್ಲವನು ಎಲ್ಲರಿಗು ತೆರವಾಗಿಸುವ, ಸಮ ಸುಖದ, ಸಮ ದುಃಖದ' ಸಮಾಜವನ್ನು ಕಟ್ಟಲು ಇಂದು ಪಣ ತೊಡೋಣ.

■

# ಭುಗಿಲೆದ್ದ ಹಳ್ಳಿಗಾಡು

ಕರ್ನಾಟಕದ ಹಳ್ಳಿಗಾಡು ಭುಗಿಲೆದ್ದಿದೆ. ನೇಗಿಲಯೋಗಿಗಳು, ಮಣ್ಣಿನ ಮಕ್ಕಳು ಹೋರಾಟದ ಹಾದಿಯಲ್ಲಿ, ಅನ್ಯಾಯಗಳನ್ನು ನುಂಗಿ ನುಂಗಿ ಬಸವಳಿದವರು. ಸುಲಿಗೆಯ ಚಕ್ರಕ್ಕೆ ಸಿಕ್ಕಿ ನುಚ್ಚುನೂರಾದವರು. ಸರಕಾರದ ನಿಸ್ಸೀಮ ನಿರ್ಲಕ್ಷ್ಯ. ಪಟ್ಟಣಗಳಿಂದ ಸೂರೆ, ಹಳ್ಳಿಗಳನ್ನು ಹಾಳುಗೆಡವಿ ದೊಡ್ಡ ದೊಡ್ಡ ನಗರಗಳು ಸೊಕ್ಕಿವೆ. ಹಣದ ಹೊಳೆ ಪೇಟೆ ಪಟ್ಟಣಕ್ಕೆ ಪ್ರತಿಭೆಯ ಪಲಾಯನ ಬೇರೆ, ಹಿಂಡಿ ಹಿಪ್ಪೆಯಾದವರು ಮಾತ್ರ ಹಳ್ಳಿಗಳಲ್ಲಿ.

ಎಷ್ಟು ದಿನ ನೋಯಬೇಕು ಈ ಜನ? ಅದಕ್ಕೇನು ಎಣೆಯೇ ಇಲ್ಲವೇ? ಕಾಲಾನುಕಾಲಕ್ಕೆ ಕ್ರಿಮಿಯೂ ಹೊರಳುವುದಂತೆ. ಹಳ್ಳಿಯಲ್ಲಿರುವವರು ಹೇಳಿ ಕೇಳಿ ಮನುಷ್ಯರು. ಅವರ ಸಹನೆಯೂ ಈಗ ಬರಿದು, ತಾಳ್ಮೆಗೆ ಬೆಲೆಯಿಲ್ಲ, ತೋಳ್ಬಲಕ್ಕೆ ಈಗ ಬೆಲೆ. ಗುಣಕ್ಕೆ ಗೌರವವಿಲ್ಲ, ಹಣಕ್ಕೆ ಮನ್ನಣೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ತೊಳಲುತ್ತಿದ್ದಾನೆ ನಮ್ಮ ರೈತ. ಅಂತಲೇ ಕೆರಳಿ ನಿಂತಿದ್ದಾನೆ, ಕನಲಿ ಕೆಂಡವಾಗಿದ್ದಾನೆ.

ರೈತರ ಸತ್ಯಾಗ್ರಹ ನೂರಕ್ಕೆ ನೂರರಷ್ಟು ಸತ್ಯದ ಆಗ್ರಹ. ಬುದ್ಧಿ ಇರುವ ಯಾವ ಮನುಷ್ಯನೂ ಇಲ್ಲ ಎನ್ನಲಾರ. ಆದರೆ ಸರಕಾರಗಳು ಮಾತ್ರ ಕುರುಡು. ಕಿವುಡು, ನಿರ್ಜೀವ ಅಧಿಕಾರಶಾಹಿ ರೈತ ಕೋಟಿಯ ಎದೆಯ ಮೇಲೆ ಬೂಟುಗಾಲಿಟ್ಟಿರುವ ಪೆಡಂಭೂತ. ಶೋಷಣೆಗೆ ಇವರೇ ಪುರೋಹಿತರು. ತುಳಿಯಲು ಇವರು ಸದಾ ಮುಂದು. ಎತ್ತಲು ಕೈಗಳಿಲ್ಲ ಇವರಿಗೆ. ಜೋರು–ಜಬರ್ದಸ್ತ್ ಎಷ್ಟು ದಿನ ಸಹಿಸಿಯಾರು, ಮಣ್ಣಿನ ಮಕ್ಕಳು?

ಅಧಿಕಾರಿಗಳು, ಪ್ರತಿನಿಧಿಗಳು ರಾಜ್ಯಕರ್ತರು ಮೈ ಮರೆತಿದ್ದಾರೆ. ತಮ್ಮ ಒಡೆಯನ ಚಿಂತೆ ಇವರಿಗೆ ಇಲ್ಲವೇ ಇಲ್ಲ, ಚುನಾವಣೆಯಲ್ಲಿ ಮಾತ್ರ ಬಂದು ಹಲ್ಲು ಕಿರಿಯುತ್ತಾರೆ. ಬಗೆಬಗೆಯ ಬಣ್ಣದ ಮಾತು. ಅನಂತರ ಬರಿಯ ದರ್ಪ, ದಬ್ಬಾಳಿಕೆ. ಇದು ಇಂದಿನ ರುದ್ರ ಚಿತ್ರ.

ದೇಶದಲ್ಲಿ ಧಾರಣೆಯ ದರೋಡೆ. ಬೆಳೆಯುವವನಿಗೆ ಭಾರಿ ಟೋಪಿ, ಬಳಸುವವನಿಗೆ ಮಂಕುಬೂದಿ, ದಳ್ಳಾಳಿಯದೇ ರಾಜ್ಯ. ಪ್ರಜೆಗಳೆಲ್ಲ ಪೆದ್ದರು. ಎಷ್ಟು ದಿನ ನಡೆದೀತು ಈ ಚಮತ್ಕಾರ? ಅವರ ಕರಾಮತ್ತು ಈಗ ಬಟ್ಟಬಯಲು.

ರೈತ ಕಬ್ಬು ಬೆಳೆಯುತ್ತಾನೆ. ಹತ್ತಿ ಬೆಳೆಯುತ್ತಾನೆ. ಶೇಂಗಾ, ತಂಬಾಕು ಎಲ್ಲವನ್ನೂ ಹುಟ್ಟು ಹಾಕುತ್ತಾನೆ. ಭತ್ತ, ರಾಗಿ, ಗೋಧಿ, ಜೋಳ ಎಲ್ಲವೂ ಇವನಿಂದಲೇ ಸೃಷ್ಟಿ. ಬೆಳೆಯುವವನಿಗೆ

ಲಾಭದಾಯಕ ಬೆಲೆ ಸಿಗುತ್ತಿದೆಯೇ? ಸುಗ್ಗಿಯಲ್ಲಿ ಅರಕ್ಕೆ ಮೂರಾಗಿ ಕೊಳ್ಳುತ್ತಾರೆ. ಹಬ್ಬದ ಹಂಗಾಮಿನಲ್ಲಿ ಅದನ್ನು ತುಟ್ಟಿಯಾಗಿ ರೈತನಿಗೆ ಮಾರುತ್ತಾರೆ. ಇಂದಿನ ಸರ್ಕಾರಕ್ಕೆ, ಸಮಾಜಕ್ಕೆ ಕಣ್ಣಿದೆಯೆ? ಬುದ್ಧಿ, ವಿವೇಕ ಇದೆಯೇ? ಯಾವ ನ್ಯಾಯ ಇದು? ಛೇ, ಛೇ ಇದು ಪರಮ ಅನ್ಯಾಯ, ಆದರೂ ಸಹಿಸಿಕೊಳ್ಳಬೇಕಂತೆ.

ಹತ್ತು ಎಕರೆ ಭೂಮಿ ಸರ್ಕಾರದ ವಶ. ಪರಿಹಾರ ಹದಿನೇಳು ಗಂಟೆಗೆ ಮಾತ್ರ. ತಾಲ್ಲೂಕು ಕಚೇರಿಗೆ ಎಡತಾಕಿ ಎಡತಾಕಿ ರೈತ ಎತ್ತಿನ ಮನಿಯ ಕಾಲು ಸವೆದುಹೋದವು. ಪರಿಹಾರ ಕಾಣಲಿಲ್ಲ, ಹೆಂಡರು ಮಕ್ಕಳೊಡನೆ ಉಪವಾಸ ಮಲಗಿದ. ಆಗ ಆಡಳಿತದ ಕಣ್ಣು ತೆರೆಯುತ್ತದೆ. ಹೇಗಿದ್ದರೂ ಮನೆಯಲ್ಲಿ ಉಪವಾಸ, ನ್ಯಾಯಕ್ಕಾಗಿ ಬಯಲಲ್ಲಿ ಉಪವಾಸ. ಈ ಹಟ ಎಲ್ಲ ರೈತರಲ್ಲೂ ಮೂಡಿ ಬರುತ್ತಿದೆ. ಅದಕ್ಕೆ ಅಕ್ಷರ ಕಲಿಯಬೇಕಿಲ್ಲ, ಓದು ಬರಹ ಯಾವುದೂ ಬೇಡ. ನೋಯುವ ನೋವನ್ನು ಪ್ರಾಣಿಗಳೇ ಅರಿಯುತ್ತವೆ. ಇನ್ನು ಮನುಷ್ಯ ಅರಿಯಲಾರನೇ? ಇಂಥ ದುರಂತಕ್ಕೆ ದೂಡಿದ್ದೇವೆ ಬೇಸಾಯಗಾರ ಬಳಗವನ್ನು.

ಅಣೆಕಟ್ಟು ಕಟ್ಟಿದರು, ಕಾಲುವೆ ಅಗೆದರು, ನೀರು ಹಾಯಿಸಿದರು. ಬಂದವರಿಗೆ ಬಂತು ಬಾರದವರಿಗೆ ಬರಲೇ ಇಲ್ಲ. ಅಭಿವೃದ್ಧಿಯ ತೆರಿಗೆಯ ಜಬರ್ದಸ್ತು ನೋಟೀಸು ಎಲ್ಲರಿಗೂ ತಪ್ಪದೇ ಬಂತು!

ಅಣೆಕಟ್ಟು ಕಟ್ಟಿದ್ದು ಯಾರ ಹಣದಿಂದ? ಬೊಕ್ಕಸದಲ್ಲಿರುವ ರೊಕ್ಕ ಯಾರಪ್ಪನ ಮನೆಯದು. ಬಡವ ತೆರುವ ತೆರಿಗೆ, ಅವನು ಹರಿಸುವ ಬೆವರಿನಿಂದ ಬಂದದ್ದಲ್ಲವೇ? ತೆರಿಗೆಯನ್ನೂ ತೆರಬೇಕು. ಅದರ ಮೇಲಿನ ಅಭಿವೃದ್ಧಿ ತೆರಿಗೆಯಂತೆ. ಇದೆಲ್ಲ ಅಧಿಕಾರಶಾಹಿ ಅಜ್ಞರ ಮೇಲೆ ನಡೆಸುತ್ತಿರುವ ಹೇಯ ದೌರ್ಜನ್ಯ. ಅತ್ಯಾಚಾರ ಇದು.

ಬಾರಿ ಯೋಜನೆಗಳಿಗೆ ಅಪಾರ ಹಣ ವೆಚ್ಚ, ಕಾಲು ಪಾಲು ಸರಿಯಾಗಿ ವೆಚ್ಚ, ಉಳಿದುದು ಅಪವ್ಯಯ. ಗುತ್ತಿಗೆದಾರ–ಎಂಜಿನೀಯರ್–ರಾಜಕಾರಣಿ ಮೂವರು ಸೇರಿ ನುಂಗುತ್ತಾರೆ. ಅದರ ಮೇಲೂ ಬಡ ರೈತ ಅಭಿವೃದ್ಧಿಗೆ ತೆರಿಗೆ ತೆರಲೇಬೇಕು. ಎಂಥ ಘೋರ ಅತ್ಯಾಚಾರ ಇದು?

ಹಾಗೆಂದು ಹೇಳಿದರೆ ಲಾಠಿ ಬೀಸುವಿರಾ? ಗೋಲಿ ಹಾರಿಸುವಿರಾ? ಅದಕ್ಕೆ ಹಣ ತೆತ್ತವರೂ ರೈತರೇ ಅಲ್ಲವೆ? ಇಲ್ಲಿಯವರೆಗೆ ಕೇಳುವ ನಾಲಿಗೆ ಇರಲಿಲ್ಲ, ಈಗ ಅದು ಬಂದಿದೆ. ರೈತನೇ ಈ ದೇಶದ ಒಡೆಯ. ಮಂತ್ರಿ ಮಹೋದಯರಿಂದ ಹಿಡಿದು ಎಲ್ಲರೂ ಅವನ ಆಳುಗಳು. ಆಳು ಒಡೆಯನ ಸೇವೆ ಮಾಡತಕ್ಕದ್ದು, ಇಲ್ಲದಿದ್ದರೆ ಯಜಮಾನ ಸೇವಕರನ್ನು ಬದಲಿಯಾನು? ಇದೇ ಕನ್ನಡ ನಾಡಿನ ಉದ್ದಗಲಕ್ಕೂ ಹಬ್ಬಿರುವ ಹೋರಾಟದ ಹುನ್ನಾರು.

ರೈತರಿಗೆ ಸಾಲ. ವಸೂಲಿಗೆ ತಗಾದೆ ಕೊಡದಿದ್ದರೆ ಹೊಲ, ಮನೆ ಜಪ್ತಿ, ಹಾಗಾದರೆ ಉದ್ಯಮ ಪತಿಗಳಿಗೆ ಕೊಟ್ಟಿರುವ ಸಾಲವನ್ನು ಏಕೆ ವಸೂಲಿ ಮಾಡುತ್ತಿಲ್ಲ? ಸಾವಿರದ

ಎಂಟುನೂರ ಕೋಟಿ ರೂಪಾಯಿ ಇಂಥ ಸಾಲವನ್ನು ರದ್ದುಪಡಿಸುವಂತೆ, ರೈತರ ಸಾಲವನ್ನೇಕೆ ರದ್ದುಪಡಿಸಬಾರದು? ಮಣ್ಣಿನ ಮಗ ನಿರ್ಭಾಗ್ಯ ಬೋರೇಗೌಡ ಉಣಲು ಅನ್ನವಿಲ್ಲ, ಉಡಲು ಬಟ್ಟೆಯಿಲ್ಲ, ಮುರುಕು ಮಂಟಪವೇ ಮನೆ. ಮಕ್ಕಳಿಗೆ ಓದುಬರಹ ಸೊನ್ನೆ, ಔಷಧಿ-ಉಪಚಾರ ಕನಸು. ಆದರೂ ಸಾಲ ತೀರಿಸಲೇಬೇಕಂತೆ. ಒಬ್ಬೊಬ್ಬರಿಗೆ ಒಂದೊಂದು ನ್ಯಾಯ. ಬಲ್ಲಿದವರಿಗೇ ಒಂದು. ಬಡವರಿಗೇ ಮತ್ತೊಂದು. ಇದು ಇಂದಿನ ಅಂಧ ದರಬಾರು. ಇದರ ವಿರುದ್ಧವೇ ರೈತ ಸಿಡಿದೆದ್ದಿರುವುದು.

ಸಕ್ಕರೆ ಕಿಲೋಗ್ರಾಂಗೆ 12 ರೂಪಾಯಿ. ರೈತ ಬೆಳೆಯುವ ಕಬ್ಬಿನ ಬೆಲೆ ಇದ್ದಲ್ಲೇ ಇರುತ್ತದೆ. ಬೆಳೆಗಾರನಿಗೆ ಟನ್ನಿಗೆ 300 ರೂಪಾಯಿ ಏಕೆ ಕೊಡುವುದಿಲ್ಲ? ಇಂದಿನದು ರೈತರ ಸರಕಾರವೇ? ಪ್ರಜೆಗಳ ಸರಕ್ಕಾರವೇ? ಹಾಗಾದರೆ ರೈತರಿಗೆ ಒಳ್ಳೆ ಬೆಲೆ ಕೊಡಿ. ಕಾರ್ಖಾನೆಯವರನ್ನು ಬಗ್ಗುಬಡಿಯಿರಿ. ಏನೂ ತಪ್ಪಿಲ್ಲ, ಮಾಡುವ ಎದೆಗಾರಿಕೆ ಇದೆಯೆ? ರೈತ ಚಳವಳಿ ಎಸೆದಿರುವ ಸವಾಲು ಇದು.

ನರಗುಂದ-ನವಿಲಗುಂದ ಆಯಿತು. ಸವದತ್ತಿ-ರಾಮದುರ್ಗಗಳೂ ಸೇರಿದವು. ಬೆಳಗಾವಿ ಜಿಲ್ಲೆ, ಧಾರವಾಡ ಜಿಲ್ಲೆ, ಈಗ ಶಿವಮೊಗ್ಗ ಜಿಲ್ಲೆ, ಮುಂದೆ ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ. ಮಂಡ್ಯ, ಮೈಸೂರು ಹಿಂದೆ ಬೀಳಲಿಕ್ಕಿಲ್ಲ. ಹತ್ತೊಂಬತ್ತು ಜಿಲ್ಲೆಗಳ ರೈತರೂ ಎಚ್ಚೆತ್ತಿದ್ದಾರೆ. ಸನ್ನದ್ಧರಾಗಿದ್ದಾರೆ. ಸಂಘಟಿತರಾಗಿದ್ದಾರೆ. ನ್ಯಾಯಕ್ಕಾಗಿ ತಗಾದೆ ಹೂಡಿದ್ದಾರೆ. ಇನ್ನು ಅವರು ಬೇಡುವುದಿಲ್ಲ, ತಮಗೆ ಬೇಕಾದುದನ್ನು ಪಡೆದೇ ತೀರುತ್ತಾರೆ.

ಪಟ್ಟಣಿಗರು, ಬುದ್ಧಿಜೀವಿಗಳು ಅರಿತುಕೊಳ್ಳಬೇಕು. ಅರ್ಥಮಾಡಿಕೊಳ್ಳಬೇಕು. ನಮಗೆ ಅನ್ನಕೊಡುವ ತಂದೆ ಈ ರೈತ. ನಮ್ಮ ಭೋಗಭಾಗ್ಯಗಳಿಗೆಲ್ಲ ಈತನ ಪರಮ ತ್ಯಾಗವೇ ಬುನಾದಿ. ನಮ್ಮ ಭವ್ಯ ಭವನಗಳು, ಭಾರಿ ಸೌಧಗಳು ಈತನ ಅಸ್ಥಿಪಂಜರದ ಮೇಲೆ ನಿಂತಿವೆ. ಈ ಕಹಿಸತ್ಯವನ್ನು ಮರೆಯದಿರೋಣ. ಇಷ್ಟು ದಿನ ಸೂರೆಗೊಂಡಿದ್ದಾಯಿತು. ಇನ್ನು ಮೇಲೆ ಈ ಆಟ ನಡೆಯದು. ಶತಮಾನಗಳ ಸುಲಿಗೆಯ ಸಾಲವನ್ನು ತೀರಿಸುವ ಕಾಲ ಹತ್ತಿರ ಬಂದಿದೆ. ನಮ್ಮ ಭದ್ರತೆ ನಡಗುತ್ತಿದೆ. ಬಡವ ಒಡಲಿನ ಬಡಬಾನಲ ದಳ್ಳುರಿ ಆದೀತು. ಕ್ರಾಂತಿಯ ಕಿಚ್ಚಾದೀತು. ಇತಿಹಾಸ ಸಾರುವ ಚಿರ ಸತ್ಯ ಇದು. ಅದಕ್ಕೆ ಸಾಕ್ಷಿಯಾಗಿ ನಡೆದುಕೊಳ್ಳೋಣ. ''ಸೀಜರನಿಗೆ ಸಲ್ಲಬೇಕಾದುದ್ದನ್ನು ಸಲ್ಲಿಸಿಯೇ ತೀರೋಣ.''

■

## ರಸಋಷಿ

ಈ ಬಾರಿಯ ದೀವಳಿಗೆ ಕನ್ನಡಿಗರಿಗೆ ಕ್ರೂರ. ನಾಡಿನ ವರಕವಿ ಅಂಬಿಕಾತನಯದತ್ತ ಈಗ ಕೇವಲ ಕೀರ್ತಿಕಾಯ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕವಿ ಮಾತ್ರವಲ್ಲ ನುಡಿಗಾರುಡಿಗ.

ಎಷ್ಟೋ ಮಂದಿ ಕವಿಗಳು. ಅವರಲ್ಲಿ ಈತ ಅತಿ ವಿಶಿಷ್ಟ. ಏನನ್ನು ಬರೆದರೂ ಬಾಳಿಗೆ ಅತಿ ಹತ್ತಿರ. ಅನುಭವದಲ್ಲಿ ಪರಿಪಕ್ವ.

ಎಳೆ ಹರೆಯದಿಂದಲೇ ಕವಿ. ಭಾವಜೀವಿ. ''ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ'' ಇವರಿಗೆ. ಇವರು ಕಂಡ ಬೆಳಗು ''ಬರಿ ಬೆಳಗಲ್ಲೋ ಅಣ್ಣಾ'' ಮಕ್ಕಳೊಡನೆ ಕುಣಿದಾಡಿದರು. ಹಕ್ಕಿಯಂತೆ ಹಾರಾಡಿದರು. ಬೆಳೆದವರೊಡನೆ ಸೆಣಸಾಡಿದರು. ಪಾತರಗಿತ್ತಿಯನ್ನು ಬಣ್ಣಿಸಿದರು. ದರ್ಶನವನ್ನು ಬಿಡಿಸ ಬಯಸಿದರು. ಬೇಂದ್ರೆಯವರ ಕಾವ್ಯ ಬಾನಿನಷ್ಟು ಎತ್ತರ. ಮುಗಿಲಿನಷ್ಟು ಅಗಲ. ಕಡಲಿನಷ್ಟು ಆಳ.

ಸುತ್ತಮುತ್ತಲಿಗೆ ಸ್ಪಂದಿಸಿದ ಜೀವ. ಅಂದು ಮೂವತ್ತಮೂರು ಕೋಟಿಯ ಬವಣೆ. ಎಲ್ಲವೂ ಸಂಖ್ಯೆ, ಸೊನ್ನೆ ''ಕುರುಡು ಕಾಂಚಾಣ''ದ ರಿಂಗಣಗುಣಿತ. ಪುಟ್ಟ ವಿಧವೆಯ ಅಳಲು. ಸಖಿಯೊಡನೆ ಗೀತ–ಮಧುರ ಸಂಗೀತ. ತಾಯಿ ಗಂಗೆ ಇಳಿದು ಬಂದಾಗ ''ಉದ್ಬುದ್ಧ ಶುದ್ಧ ನೀರೇ''. ಆಕೆ ''ಸಚ್ಚಿದಾನಂದ ಕನ್ಯೆ'', ಬಿದ್ದವರನ್ನು ಎತ್ತಲು ಬಂದ ಪಾವನ ಗಂಗೆ.

''ಇಗೊ ಹೊರಟೆವು ಬಿಡುಗಡೆಯಾಗಿ, ಬಹರಾರು ನಮಗಿದಿರಾಗಿ. ಇದು ನಾಡಿನ ಪಂಚಪ್ರಾಣ. ಇದು ಇಲ್ಲದ ಜನ ನಿತ್ರಾಣ'' – ದಾಸ್ಯಕ್ಕೆ ಹೊಡೆದ ಸೆಡ್ಡು, ಸೆರೆಗೆ ಅಂಜಲಿಲ್ಲ, ಉಪವಾಸಕ್ಕೆ ಹಿಂಜರಿಯಲಿಲ್ಲ, ಕವಿ ''ಕ್ರಾಂತಿದರ್ಶಿ'' ಎಂಬ ಹೆಸರಿಗೆ ತಕ್ಕಂತೆ ನಡೆ.

ಒಲವು ನಿಲುವೆಲ್ಲ ಮಾಸ್ತರರದು. ಈ ವ್ಯಕ್ತಿಯ ಮುಖದಿಂದ ಹೊರ ಹೊಮ್ಮಿದ ಮಾತು ದಭದಭೆ. ಕವಿಯನ್ನು ಹಾಡುವಾಗ ಅದೇನು ಉನ್ಮತ್ತತೆ! ''ಅರ್ಥವಿಲ್ಲ, ಸ್ವಾರ್ಥವಿಲ್ಲ ಬರಿಯ ಭಾವಗೀತಾ'' – ಭಾವನೆಯೇ ಭೋರ್ಗರೆವಂತೆ.

ಹೌದು, ಈತನದು ''ನಾದಲೀಲೆ''. ಅಷ್ಟೇ ಅಲ್ಲ, ನುಡಿಗೆ ನಾದದ ಹೊದಿಕೆಯಿತ್ತ ಅಕ್ಷರಯೋಗ. ಎಷ್ಟು ಬಣ್ಣಿಸಿದರೂ ಬೇಂದ್ರೆ ನುಡಿಯಲ್ಲಿ ಸಾಕಾರ ಆಗಲಾರರು. ಅವರು

ಬಿಟ್ಟುಹೋದ ಬಳುವಳಿ ಅಪಾರ. ಅನಂತ. ಕನ್ನಡ ಬದುಕಿರುವವರೆಗೂ ಮರೆಯಲಾರದಂಥ ಕವಿ. ಹಳ್ಳಿಯ ಹೃದರಿಗೂ ಹತ್ತಿರ. ಪಂಡಿತೋತ್ತಮರಿಗೂ ಒಗಟು. ಈ ಕವಿಯ ಹೃದಯ ಸಾಗರ ಉಕ್ಕಿ ಹರಿಯಿತು. ಅದನ್ನೆನಾವೆಲ್ಲ ಕಾವ್ಯ ಎಂದೆವು. ಪ್ರಯತ್ನ ಇಲ್ಲ, ಪ್ರಯಾಸವಂತೂ ಇಲ್ಲವೇ ಇಲ್ಲ, ಎಲ್ಲವೂ ಅನಾಯಾಸ.

ಬದುಕನ್ನು ಕಂಡ ಬಗೆ ಸಮೀಚೀನ. ''ಸರಸ ಜನನ, ವಿರಸ ಮರಣ, ಸಮರಸವೇ ಜೀವನ' –ಋಷಿ ಬೇಂದ್ರೆ ಕೊಟ್ಟ ಮಂತ್ರ. ''ತಿಂದು ಬದುಕುವುದಲ್ಲ, ತಿಳಿದು ಬಾಳುವುದು'' ಕವಿಚೇತನ ದಿಗ್ದರ್ಶಿಸಿದ ಮಾನವ ಧರ್ಮ. ಮೂವತ್ತೆಂಟು ವರ್ಷಗಳ ಹಿಂದೆ ತುಂಗಾ ತೀರದಲ್ಲಿ ಆಡಿದ ಈ ನುಡಿ ಇಂದಿಗೂ ಎಷ್ಟು ನಿಜ.!

ಕಹಿ–ಸಿಹಿ ಅವರಿಗೆ ಕಲ್ಪನೆ ಆಗಿರಲಿಲ್ಲ, ಜೀವನದಲ್ಲಿ ಹದವಾಗಿ ಬೆರೆತು ಬಂದ ಪ್ರಸಾದ. ಕಹಿಯನ್ನು ನುಂಗಿ ಸಿಹಿಯನ್ನು ಚಪ್ಪರಿಸುವ ನಿಷ್ಕಪಟ ಪ್ರವೃತ್ತಿ. ಬಂದುದನ್ನು ಬಂದಂತೆ ಸ್ವೀಕರಿಸುವ ಅನಾಸಕ್ತಿ.

ಬೇಂದ್ರೆಯವರ ಬಳಿ ಹೋದರೆ ಅದೊಂದು ದಿವ್ಯ ಅನುಭವ. ಎಂದೂ ಮರೆಯಲಾಗದ ಸರಸ ಸಜ್ಜನಿಕೆ. ಪ್ರತಿಯೊಬ್ಬರ ಮನದ ಮೇಲೆ ಒತ್ತುತ್ತಿದ್ದುದು ಅತ್ಯಂತ ಗಾಢ ಮುದ್ರೆ. ''ಕಾಡಿನಾ ನಾಡನ್ನು ಗಂಧರ್ವರಾ ಸೀಮೆ'' ಯಾಗಿ ಕಂಡರು.

ಪದವಿ, ಪ್ರಶಸ್ತಿ ಈ ವರಕವಿಯನ್ನು ಅರಸಿ ಬಂದವು. ತಮ್ಮ ಮೆರಗು ಹೆಚ್ಚಿಸಿಕೊಂಡವು. ಯಾವುದಕ್ಕೂ ಬಾಯಿ ಬಿಟ್ಟವರಲ್ಲ, ಕೈ ಚಾಚಿದವರಲ್ಲ, ಅರ್ಹತೆಯ ಅಭಿಮಾನವನ್ನು ಬಿಡಲೇ ಇಲ್ಲ. ಒಮ್ಮೊಮ್ಮೆ ಆಯತಪ್ಪಿದ್ದುಂಟು. ಸರ್ವಾಧಿಕಾರದ ನೆರಳನ್ನು ಮೋಹಿಸಿದ್ದೂ ಉಂಟು. ತಪ್ಪು ಮಾಡದವರಾರು? ಬೇಂದ್ರೆಯೂ ಮನುಷ್ಯರೇ ಅಲ್ಲವೆ?

ಕನ್ನಡ ಮುಗಿಲಲ್ಲಿ ತನ್ನದೇ ಆದ ಕ್ರಾಂತಿಯನ್ನು ಕೋರೈಸಿದ ಅದ್ಭುತ ಹಕ್ಕಿ. ಅದರಿಂದ ಹೊರಟ ಇಂಚರ ಎಣೆಯಿಲ್ಲದ್ದು, ಬಣ್ಣನೆಗೆ ನಿಲುಕದ್ದು, ಅನುಭವದಿಂದ ಮಾತ್ರ ಅರಿವಾಗಬಲ್ಲದ್ದು. ಇಂಥ ಒಬ್ಬ ರಸಋಷಿ ನಮ್ಮೊಡನೆ ಇದ್ದ. ತನ್ನ ಮೋಡಿ ಬೀರಿದ. ನಮ್ಮನ್ನೆಲ್ಲ ಮರುಳು ಮಾಡಿದ. ಇದೇ ನಮ್ಮ ಧನ್ಯತೆ.

ತುಂಬು ಬಾಳುವೆ. ಕಡೆಗೂ ಕಾಲ ತುಂಬಿ ಬಂತು. ತುಳುಕಿಯೇ ಹೋಯಿತು. ಚಿಂತೆಯಿಲ್ಲ, ಹುಟ್ಟು ಸಾವು ಎಲ್ಲರಿಗೂ ಗಟ್ಟಿ. ಬೇಂದ್ರೆಯವರೇನೂ ಹೊರತಲ್ಲ. ಅವರ ಕಾವ್ಯ ಎಂದೆಂದಿಗೂ ಸೊರಗದ ಸೊತ್ತು. ಅದನ್ನು ಉಳಿಸಬಲ್ಲೆವೇ? ಬೆಳೆಸಬಲ್ಲೆವೇ?

''ಆ ಅದೂ ತುಂಬಿ, ಈ ಇದೂ ತುಂಬಿ  
ಯಾವುದೂ ತುಂಬಿ ಇರದೆ  
ತುಂಬಿ ಉಳಿದರೂ, ತುಂಬಿ ಅಳಿದರೂ  
ತುಂಬಿ ತುಂಬಿ ಬರದೆ''.

■

# ಬೆಂಕಿ ಬಿದ್ದಿದೆ, ಬನ್ನಿ...

ಕನ್ನಡನಾಡಿನ ರಾಜಧಾನಿ ಬೆಂಗಳೂರು. ವಿಕಟ ಪರಿಸ್ಥಿತಿ. ಇಲ್ಲಿ ಕನ್ನಡಕ್ಕೆ ಕುತ್ತು. ಶಿಕ್ಷಣ ರಂಗದಿಂದ ಕನ್ನಡ ಕಣ್ಮರೆ ಆಗುವ ಅಪಾಯ. ಒಂದೇ ಒಂದು ಕಾರಣ. ಕನ್ನಡ ಜನರ ಇಂಗ್ಲಿಷ್ ವ್ಯಾಮೋಹ.

ಕನ್ನಡವೇ ಎಲ್ಲ ಹಂತಗಳಲ್ಲಿ ಆಡಳಿತ ಭಾಷೆ ಎಂದಿದ್ದೇವೆ. ಈ ಘೋಷಣೆ ಮಾಡಿದರೆ ಸಾಕೇ? ಕೃತಿಯಲ್ಲಿ ಇಳಿಯಬೇಡವೇ? ಅದೇ ತೋರಿಬರುತ್ತಿಲ್ಲ. ಅಷ್ಟೇ ಅಲ್ಲ, ಕನ್ನಡ ಮಕ್ಕಳು ಕನ್ನಡವನ್ನೇ ಕಲಿಯದಂಥ ಪರಿಸ್ಥಿತಿ.

ಇದೊಂದು ಭಾರಿ ಪಿತೂರಿ. ಶಿಕ್ಷಣ ಮಾಧ್ಯಮವಾಗಿ ಕನ್ನಡದ ಕತ್ತು ಹಿಸುಕಿಬಿಟ್ಟರೆ ಅನಂತರ ಯಾರೂ ಸೊಲ್ಲೇ ಎತ್ತರಲ್ಲ? ಇದನ್ನೇ ನಮ್ಮ ಅಧಿಕಾರಿ ವರ್ಗ ಮಾಡುತ್ತಿರುವುದು. ಇದಕ್ಕಿಂತ ಕನ್ನಡದ್ರೋಹ ಉಂಟೇ?

ಶಿಶುವಿಹಾರದಲ್ಲೂ ಇಂಗ್ಲಿಷ್ ಮಾಧ್ಯಮ. ತಮ್ಮ ಮಕ್ಕಳನ್ನು ಕನ್ನಡದ ಕೊಲೆಯ ಶಾಲೆಗಳಿಗೆ ಕಳುಹಿಸುವ ತಂದೆ ತಾಯಿಯರಿಗೆ ನಾಚಿಕೆ ಬೇಡವೇ? ಕನ್ನಡ ದ್ರೋಹದ ಪರಿವೆ ಇರಬೇಡವೇ? ಕನ್ನಡ ಕಂದಮ್ಮಗಳಿಗೆ ಇಂಗ್ಲಿಷ್ ಪೂತನಿಯ ವಿಷದ ಹಾಲನ್ನು ಉಣಿಸಿಯೂ ತೆಪ್ಪಗಿರುವ ಕನ್ನಡಿಗರ ಮಾತೃಭಾಷಾ ದ್ರೋಹಕ್ಕೆ ಏನೆನ್ನೋಣ.

ತಂದೆ-ತಾಯಿಗಳದು ಒಂದು ಪಾಲಿನ ತಪ್ಪು, ಉಳಿದೆಲ್ಲ ಪಾಲಿನ ಅಪರಾಧ ಸರ್ಕಾರದ್ದು. ಶಿಶುವಿಹಾರದಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಇನ್ನೂ ಏಕೆ ತೊಡೆದುಹಾಕಿಲ್ಲ? ಈ ಪ್ರಶ್ನೆಯನ್ನು ಅತಿ ಗಟ್ಟಿಯಾಗಿ ಕೇಳಬೇಕಾದ ಕಾಲ ಈಗ ಬಂದಿದೆ. ಕನ್ನಡ ಜನಪದದ ಉಪ್ಪು ತಿನ್ನುವ ಸರ್ಕಾರೀ ಅಧಿಕಾರಿಗಳು, ಮಂತ್ರಿ ಮಹೋದಯರು ಏಕೆ ತೆಪ್ಪಗಿದ್ದಾರೆ? ಅವರಿಗೆ ಕಣ್ಣು ಕಾಣಿಸುತ್ತಿಲ್ಲವೇ? ಕಿವಿ ಕೇಳಿಸುತ್ತಿಲ್ಲವೇ? ಹೃದಯ ಸ್ಪಂದಿಸುತ್ತಿಲ್ಲವೇ?

ರಾಜಧಾನಿಯಿಂದಲೇ ಕನ್ನಡ ಮಾಯವಾಗಿಬಿಟ್ಟರೆ ಉಳಿದ ಪಟ್ಟಣಗಳಲ್ಲಿ ಹೇಗೆ ಉಳಿದೀತು? ಇಂಗ್ಲಿಷ್ ಮಹಾಮಾರಿ ಇರುವವರೆಗೆ ಕನ್ನಡ ತಾಯಿಗೆ ಉಳಿಗಾಲವಿಲ್ಲ. ಈ ಕಟು ಸತ್ಯ ಏಕೆ ನಮಗಿನ್ನೂ ಅರಿವಾಗಿಲ್ಲ? ಕಳಕಳಿಯೇ ಇಲ್ಲವಲ್ಲ? ನಮಗೆ ಕೋಪವೇ ಬರುವುದಿಲ್ಲವಲ್ಲ? ಕನ್ನಡತನವನ್ನು ನೀಗಿಕೊಂಡ ರಣಹೇಡಿಗಳಾಗಿ ಹೋಗಿರುವೆವಲ್ಲ?

ನಗರದಲ್ಲಿ ಪ್ರಚಂಡ ಚಳವಳಿ ಆರಂಭ ಆಗಲಿ. ಪ್ರತಿಯೊಂದು ಮನೆಯ ಮಗುವನ್ನೂ ಕನ್ನಡ ಮಾಧ್ಯಮದ ಶಾಲೆಗೇ ಸೇರಿಸಬೇಕೆಂದು ಆಗ್ರಹ ತೊಡೋಣ. ಆಗ್ರಹಪಡಿಸೋಣ. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಮುಚ್ಚುವಂತೆ ಬಲಾತ್ಕರಿ ಸೋಣ. ಈ ವಿಷಯದಲ್ಲಿ ಸಾತ್ವಿಕ ರೊಚ್ಚು ನಮಗೆ ಬರಬೇಕು.

ಶಿಶುವಿಹಾರಗಳಲ್ಲಂತೂ ಇಂಗ್ಲಿಷ್ ಮಾಧ್ಯಮ ಇದ್ದರೆ ಅದಕ್ಕೆ ಮನ್ನಣೆ ಸಿಗತಕ್ಕದ್ದಲ್ಲ. ಶಾಲಾ ಹಂತದಲ್ಲಿ ಎಲ್ಲಿಯೂ ಕನ್ನಡಕ್ಕೆ ಮುಳಿವಾಗುವ ಇಂಗ್ಲಿಷ್ ಮಾಧ್ಯಮಕ್ಕೆ ಬೆಂಬಲ ಕೊಡತಕ್ಕದ್ದಲ್ಲ. ಅಂಥ ಶಾಲೆಗಳಿಗೆ ಮನ್ನಣೆ ರದ್ದಾಗಲಿ. ಸಹಾಯಧನ ನಿಲ್ಲಲಿ.

ಕಾನೂನು ಕಟ್ಟಳೆಯದು ಒಂದು ಮಗ್ಗಲು. ನಗರವಾಸಿಗಳಲ್ಲಿ ಕನ್ನಡದ ಕೆಚ್ಚನ್ನು ಹುಟ್ಟಿಸುವ ಕೆಲಸ ಬಹಳ ಮುಖ್ಯ. ದಿವಂಗತ ಅ.ನ.ಕೃ. ಮ.ರಾಮಮೂರ್ತಿ ಅವರು ಆರಂಭಿಸಿದ ಕನ್ನಡ ಚಳವಳಿ ಮತ್ತೆ ಗರಿಗಟ್ಟಿಕೊಳ್ಳಲಿ. ಕನ್ನಡದ ಹೆಸರಲ್ಲಿ ಹೊಟ್ಟೆ ತುಂಬಿಕೊಳ್ಳುವುದು ಬೇಡ. ಅಂಥವರಿಗೆ ಯಾವ ಇಂಬನ್ನೂ ಜನ ನೀಡದಿರಲಿ.

ಕನ್ನಡ ಸಾಹಿತ್ಯ ಪರಿಷತ್ತು ಇದೆ. ಬಂಡಾಯ ಸಾಹಿತ್ಯ ಸಂಘಟನೆ ಉಂಟು. ಅನೇಕ ಮಂದಿ ಕನ್ನಡ ಸಾಹಿತಿಗಳು ಬೆಂಗಳೂರಿನಲ್ಲಿ, ಅವರೆಲ್ಲರೂ ಈ ದುರಂತ ಸ್ಥಿತಿಯನ್ನು ನೋಡುತ್ತಲೇ ತೆಪ್ಪಗೆ ಕುಳಿತಿರಬೇಕೆ? ಏಕೆ ಬೀದಿ ಗಿಳಿಯಬಾರದು? ಅಲ್ಲಿಯವರೆಗೆ ಕನ್ನಡಕ್ಕೆ ಗೌರವದ ಪಟ್ಟ ಸಿಗಲಾರದು.

ಶಾಲೆಗಳಿಂದಲೇ ಕನ್ನಡ ಮಾಯವಾಗಿಬಿಟ್ಟರೆ ಇನ್ನು ಆದೆಲ್ಲಿ ಉಳಿದೀತು? ಈ ಒಳಸಂಚು ಘನಘೋರ. ಬೆಂಗಳೂರು ಪಟ್ಟಣದಲ್ಲಿ ಕನ್ನಡಕ್ಕೆ ಗೋರಿ ಕಟ್ಟಿ ಆನಂತರ ಇಂಗ್ಲಿಷ್ ರಾಕ್ಷಸಿ ಉಳಿದೆಡೆಯೂ ಮೆರೆದೀತು. ಪಶ್ಚಿಮ ಬಂಗಾಲದಿಂದ ಪಾಠ ಕಲಿಯೋಣ. ಅಲ್ಲಿನ ಸರ್ಕಾರ ಇಟ್ಟಿರುವುದು ದಿಟ್ಟ ಹೆಜ್ಜೆ, ನಾವೂ ಏಕೆ ಅನುಸರಿಸ ಬಾರದು?

ಇಂಗ್ಲಿಷ್ ಒಂದು ವಿಶಿಷ್ಟವರ್ಗದ ಪಟ್ಟಭದ್ರ ಭಾಷೆ. ಅದನ್ನು ಪೂಜಿಸ ಬಯಸುವವರು ಈ ದೇಶದ ಜನಕೋಟಿಗೆ ನಿಷ್ಠರಲ್ಲ, ಸತ್ತೆ, ಸೊತ್ತು ಎಲ್ಲವೂ ಹಿಡಿಯಷ್ಟು ಮಂದಿಯಲ್ಲೇ ಇರಬೇಕೆನ್ನುವವರಿಗೆ ಅದೊಂದು ಅತ್ಯುತ್ತಮ ಸಾಧನ. ಅಂತಲೇ ಭಾರತೀಯ ಭಾಷೆಗಳು ಸೊರಗುತ್ತಿವೆ.

ನಮ್ಮ ವಿದ್ಯಾಮಂತ್ರಿ ಏನು ಮಾಡುತ್ತಿದ್ದಾರೆ? ಅವರೇಕೆ ಎಚ್ಚೆತ್ತಿಲ್ಲ? ನಮ್ಮ ಶಾಸಕರು ಏಕೆ ನಿದ್ರೆಯಲ್ಲಿ? ಇತ್ತ ಅವರ ದೃಷ್ಟಿ ಹೊರಳಲಿಲ್ಲವೇ? ಈಗಲಾದಲೂ ಕಣ್ಣು ತೆರೆಯಲಿ. ಆಗುತ್ತಿರುವ ಅಪಾಯಕ್ಕೆ ಎಚ್ಚೆತ್ತುಕೊಳ್ಳಲಿ. ಕನ್ನಡವನ್ನು ಉಳಿಸುವ, ಬೆಳೆಸುವ ಕೆಲಸಕ್ಕೆ ಸಜ್ಜಾಗಲಿ.

ಯಾವ ವಿರೋಧವನ್ನು ಲೆಕ್ಕಿಸಬೇಕಿಲ್ಲ, ಎಲ್ಲ ವಿದೇಶೀ ಭಾಷೆಗಳ ಸಾಲಿನಲ್ಲಿ ಮಾತ್ರ

ಇಂಗ್ಲಿಷ್‌ಗೆ ಸ್ಥಾನ. ಅತ್ಯಗತ್ಯವಾದವರು ಮಾತ್ರ ಕಲಿಯಲಿ. ಐಚ್ಛಿಕ ಭಾಷೆ ಆಗಲಿ. ಸುಳ್ಳು ಸಭ್ಯತೆಯ ಸೋಗು ಆಗದಿರಲಿ. ನಮ್ಮ ಸಂಸ್ಕೃತಿಗೆ ಅದರಿಂದ ಆಗುತ್ತಿರುವಷ್ಟು ಅಪಚಾರ ಮತ್ತಾವುದರಿಂದಲೂ ಅಲ್ಲ.

ಈ ಕಾನ್ವೆಂಟ್ ಶಾಲೆಗಳು, ಇಂಗ್ಲಿಷ್ ಮಾಧ್ಯಮದ ಶಾಲೆಗಳು ನಮ್ಮ ಸತ್ವವನ್ನು ಹಿಂಡುತ್ತಿವೆ. ನಮ್ಮ ಮಕ್ಕಳ ನಾಲಗೆಯ ಮೇಲೆ ಕನ್ನಡ ನಲಿಯುವುದಿಲ್ಲ. ಚಟ್ಟೇಗಾರರ ತಪ್ಪು ಇಂಗ್ಲಿಷ್ ಮೆರೆಯುತ್ತಿದೆ! ಇದನ್ನು ನೋಡಿಯೂ ನೋಡದಂತೆ ಇರುವ ತಂದೆ– ತಾಯಿಗಳು ನಿಜಕ್ಕೂ ಪಾಪಾತ್ಮರು. ಈ ನೆಲದ ಉಪ್ಪು ಬೇಕು. ಈ ನಾಡಿನ ಭಾಷೆ ಬೇಡವೇ? ಎಂಥ ಕುಲಘಾತುಕತನ?

ಯಾವ ಮಾರುಕಟ್ಟೆಯಲ್ಲೂ ಇಂಗ್ಲಿಷ್‌ಗೆ ಕುರುಡು ಕಾಸಿನ ಬೆಲೆಯೂ ಇರತಕ್ಕದ್ದಲ್ಲ. ಆಗ ಮಾತ್ರವೇ ಈ ಸೋಗಲಾಡಿ ಜನ ಕನ್ನಡಕ್ಕೆ ಶರಣು ಬಂದಾರು. ಇದು ಬಿಡುವಿನ ವೇಳೆಯ ಕೆಲಸವಲ್ಲ. ಕನ್ನಡಮ್ಮನ ಮನೆಗೆ ಬೆಂಕಿ ಬಿದ್ದಿವೆ. ಉಳಿದೆಲ್ಲ ಕೆಲಸಗಳನ್ನೂ ತೊರೆದು ಬೆಂಕಿಯನ್ನು ನಂದಿಸುವುದೇ ಪರಮ ಧರ್ಮ. ಭೇದಗಳನ್ನು ಮರೆಯೋಣ. ಈ ವಿಷಯದಲ್ಲಿ ಭಿನ್ನಮತಕ್ಕೆ ಎಡೆಯೇ ಇಲ್ಲ. ಕನ್ನಡದ ಅಳಿವು ಉಳಿವಿನ ಪ್ರಶ್ನೆ ಇದು. ಒಗ್ಗಟ್ಟಿನಿಂದ ಒಮ್ಮತದಿಂದ ಕಲಿಗಳಂತೆ ಕಾದಿದರೆ ಮಾತ್ರ ಕನ್ನಡ ಉಳಿದೀತು. ಇಲ್ಲವಾದರೆ ಎಂದೆಂದಿಗೂ ಅಳಿದೀತು.

■

# ಅಸಮಾನ ಬೀಚಿ

ಸಾಹಿತಿಗಳಲ್ಲಿ ಅನೇಕ ಬಗೆ. ಸುಖ ವಸತಿಗಳಾಗಿದ್ದು ಮನೋಲ್ಲಾಸಕ್ಕಾಗಿ ಬರೆಯುವವರು ಕೆಲವರು. ಮನೋಲ್ಲಾಸದೊಡನೆ ಅಂತಃಕರಣವನ್ನೂ ಅರಳಿಸಬಲ್ಲ ಮನೋವಿಕಾಸದ ಬರಹಗಾರರೂ ಉಂಟು. ಇವೆರನ್ನೂ ಹದವಾಗಿ ಬೆರೆಸುವುದು ಸಾಧ್ಯ ಎಂಬುದನ್ನು ತೋರಿದವರು ರಾಯಸಂ ಭೀಮಸೇನರಾವ್ ಉರುಫ್ ಬೀಚಿ.

ಬೀಚಿ ಅಪ್ರತಿಹತ ನಗೆಗಾರ. ಮಾತು ಮಾತಿಗೂ ನಗಿಸಬಲ್ಲ ಮೋಡಿ. ನಿಜಕ್ಕೂ ಬೀಚಿ ಅಂಥ ಸಾಹಿತಿ, ನಗೆಗಾರ, ವಿಡಂಬನಕಾರ ಯಾವ ಭಾಷೆಯಲ್ಲೂ ಅಪರೂಪ.

ಒಂದು ವೈಶಿಷ್ಟ್ಯ. ಬೀಚಿ ಬದುಕನ್ನು ಬಲು ಹತ್ತಿರದಿಂದ ಕಂಡ ಎಚ್ಚರವಂತ ತಿವಿದು ನಗಿಸುವಾಗಲೂ ಶುಭ ದರ್ಶನದ ವಿಶಾಲ ದೃಷ್ಟಿ ಸಮಾಜದ ವ್ಯಕ್ತಿಗಳ ಓರೆ ಕೋರೆಗಳನ್ನು ಕಂಡಾಗಲೂ ನಂಜಿಲ್ಲದ ಕ್ರೂರದೃಷ್ಟಿ. ಬೀಚಿ ತನ್ನನ್ನು ಕಂಡು ತಾನೇ ನಗಬಲ್ಲಂಥ ತುಂಬು ಹೃದಯದ ವ್ಯಕ್ತಿ.

ಕೆಲವರ ಹಾಸ್ಯ ಇತರರ ಕುಚೋದ್ಯ. ಯಾರನ್ನು ಕುರಿತು ನಗೆ ಆಡಿದರೂ ಇಂಥ ಪ್ರವೃತ್ತಿ ಬೀಚಿಗೆ ಇರಲಿಲ್ಲ. ಅವರನ್ನು ಅರ್ಥ ಮಾಡಿಕೊಳ್ಳದ ಜನ ಕೀಟಲೆ ಮಾಡಿದ್ದುಂಟು. ಮುಯ್ಯಿ ತೀರಿಸಿಕೊಂಡದ್ದೂ ಉಂಟು. ಇದು ಕೇವಲ ವ್ಯರ್ಥ ಪೌರುಷ

ಗೆಳೆಯನಾಗಿ, ಮನುಷ್ಯನಾಗಿ ತುಂಬ ಆತ್ಮೀಯತೆ. ಹತ್ತಿರ ಬಂದವರೆಲ್ಲ ಎಷ್ಟೋ ಕಾಲದ ನೆಂಟರಿದ್ದಂತೆ. ಗರ್ವ ಇರಲಿಲ್ಲ, ಸೊಕ್ಕಿಗೆ ಎಂದೂ ಸೊಪ್ಪು ಹಾಕಲಿಲ್ಲ. ಒಳ್ಳೆಯವರಿಗೆ ಅತಿ ಒಳ್ಳೆಯವ, ಕೆಟ್ಟವರ ವಿಷಯದಲ್ಲೂ ಕನಿಕರ ತೋರಿದ ಉದಾತ್ತ ಜೀವಿ.

ಹುಟ್ಟಿದ್ದು ಗೊಡ್ಡು ಸಂಪ್ರದಾಯದ ತವರಿನಲ್ಲಿ. ಗದೆ ಎತ್ತಿದ್ದು ಬಿಲ್ಲು ಹೂಡಿದ್ದು ಎಲ್ಲ ಬಗೆಯ ಕಂದಾಚಾರದ ವಿರುದ್ಧ . ಕೆಲವರು ಬೀಚಿಯನ್ನು ನಾಸ್ತಿಕ ಎಂದು ಭ್ರಮಿಸಿದ್ದಾರೆ. ಈ ಬಣ್ಣನೆ ಸರಿಯೋ, ತಪ್ಪೋ ಗೊತ್ತಿಲ್ಲ. ನಿಜಕ್ಕೂ ಮನುಷ್ಯನ ಒಳ್ಳೆತನದಲ್ಲಿ ಅಪಾರ ನಂಬಿಕೆ ಇಟ್ಟಿದ್ದ ಪರಮ 'ಆಸ್ತಿಕ' ಈತ.

ಕುರುಡು ನಂಬಿಕೆಗೆ ಕಡು ವಿರೋಧಿ. ಎಲ್ಲ ಒಳ್ಳೆ ಮೌಲ್ಯಗಳಲ್ಲಿ ಅನನ್ಯ ಶ್ರದ್ಧೆ ಆಧುನಿಕ ದೃಷ್ಟಿ ವೈಚಾರಿಕತೆಯ ಅನುಯಾಯಿ. ಎಲ್ಲರನ್ನೂ ನಗಿಸಿದ ಈ ವ್ಯಕ್ತಿಗೆ ವಿಧಿ ಅಳುವನ್ನೂ

ಕೊಟ್ಟಿದ್ದುಂಟು. ಬದುಕಿನ ಸುಂದರ ವಿಷಯಗಳನ್ನೆಲ್ಲ ಸವಿದಿ ರಸಜೀವಿ. ಹಾಗೆಂದು ಮಾನವ ಸಂಬಂಧಗಳನ್ನು ಹೊಲಬುಗೆಡಿಸಿಕೊಳ್ಳಲಿಲ್ಲ. ಇದಿರಾಳಿಯನ್ನು ತರ್ಕದ ಅಂಚಿನಿಂದ ತಿವಿದರೂ 'ಕೊಲ್ಲುವ' ದುಷ್ಟಕಾಯಕಕ್ಕೆ ಎಂದೂ ಇಳಿಯಲಿಲ್ಲ.

ಉದಾರಮತವಾದಿ. ಇಷ್ಟವಲ್ಲದನ್ನೂ ತಾಳಿಕೊಂಡ ಮನುಷ್ಯ. ಜೀವನ ಪಥ ಸಾಗಿಸಲು ಸರಕಾರಿ ಕೆಲಸ. ಸಾಹಿತ್ಯೋಪಾಸನೆ ಆತ್ಮ ಸಂತುಷ್ಟಿಯ, ಜೀವನ ಸಾರ್ಥಕತೆಯ ಉದ್ಯಮ. ಬೀಚಿಯಂಥ ಬರಹಗಾರರೂ ವಿರಳ. ಅಂಥ ಗೆಳೆಯರೂ ಅತಿ ವಿರಳ.

■

## ದಿಟ, ದಿಟ್ಟ

ಈ ಬಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ ಅತ್ಯಪೂರ್ವ. ವರಕವಿ ಪು.ತಿ.ನ. ಪರಂಪರೆಯ ಪ್ರತಿನಿಧಿ. ಅಂತೆಯೇ ಆಧುನಿಕತೆಯ ಅವಲೋಕನವೂ ಅವರಿಗುಂಟು. ಎಲ್ಲವನ್ನೂ ಕೆದಕಿನೋಡುವ ಚಿಕಿತ್ಸಕ. ಹದವಾದ ಬುದ್ಧಿ, ಹೃದಯ. ಅಂತಲೇ ಅವರ ಭಾಷಣದಲ್ಲಿ ದಿಟ್ಟತನ, ಹಲವು ಸಂಗತಿಗಳ ಸಮ್ಯಕ್ ಚರ್ಚೆ.

ಸುತ್ತಮುತ್ತಲೆಲ್ಲ ಇಂಗ್ಲಿಷ್ ವ್ಯಾಮೋಹ. ಈ ಕೆಡುಕನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಈ ಹೊರೆ ಸಲ್ಲ ಎಂದಿದ್ದಾರೆ. ಎಷ್ಟು ಮಾರಕ ಎಂಬುದನ್ನು ಬಿಂಬಿಸಿದ್ದಾರೆ. ಸಾಮ್ರಾಜ್ಯವಾದಿಗಳು ಹೊರಿಸಿದ ಈ ಭಾಷೆ ನಮ್ಮ ಕೀಳರಿಮೆಗೆ ಕಾರಣ. ವ್ಯಕ್ತಿತ್ವದ ಅರಳುವಿಕೆಗೆ ಬಾಧಕ. ಗಾಂಧೀಜೀ, ಡಾ॥ಲೋಹಿಯಾ ಮುಂತಾದವರ ಮಾತುಗಳನ್ನು ಎತ್ತಿಹಿಡಿದ ಈ ಸಮ್ಮೇಳನಾಧ್ಯಕ್ಷರ ನಿಲುವು ಅತ್ಯಂತ ದಿಟ್ಟ.

ಇಂಗ್ಲಿಷನ್ನು ತೊಲಗಿಸದೆ ಕನ್ನಡ ಮೇಲೇರದು. ಕನ್ನಡ ಮೇಲೇರದೆ ಕನ್ನಡಜನ ಮೇಲೇರರು. ಹಿಡಿಯಷ್ಟು ಮಂದಿಯ ಹಿಡಿತ ಸಡಿಲದು, ಕನ್ನಡವೇ ತಾರಕ. ಭಾರತೀಯ ಭಾಷೆಗಳು ಪಟ್ಟಕ್ಕೆ ಏರಿದಾಗಲೇ ಜನಪದದ ಏಳಿಗೆ, ಈ ಮಾತುಗಳನ್ನು ನಿಚ್ಚಳವಾಗಿ ಸಾರಿ ಸಮ್ಮೇಳನಾಧ್ಯಕ್ಷರು ಸರಿದಾರಿ ತೋರಿದ್ದಾರೆ.

ಹಿಂದೀ, ಸಂಸ್ಕೃತ ಕನ್ನಡಕ್ಕೆ ಹಗೆಗಳಲ್ಲ, ಅವುಗಳ ಸ್ಥಾನ ಬೇರೆ ಬೇರೆ. ಯಾವ ಭಾಷೆಯೂ ಕನ್ನಡವನ್ನು ಕದಲಿಸತಕ್ಕದ್ದಲ್ಲ. ಕುದುರಿಸತಕ್ಕದ್ದು, ಇದೇ ಪು.ತಿ.ನ. ಅವರ ನಿಜವಾದ ಬಯಕೆ.

ಸಮ್ಮೇಳನಾಧ್ಯಕ್ಷರಿಂದ ಹಲವಾರು ವಿಷಯಗಳ ಪ್ರಸ್ತಾಪ. ಸಾಹಿತ್ಯವನ್ನು ಕುರಿತಷ್ಟೇ ಹೇಳಿಲ್ಲ, ಸಮಗ್ರ ಬದುಕೇ ಅವರ ಭಾಷಣದ ಪರಿಧಿಯೊಳಗೆ. ನೈಜ–ನ್ಯಾಯ–ಮೈತ್ರಿ ಅವರು ಪ್ರತಿಪಾದಿಸಿರುವ ಮೌಲ್ಯತ್ರಯ. ಯಾರು ಇಲ್ಲವೆನ್ನಲಾದೀತು? ಕವಿ ದ್ರಷ್ಟಾರನೂ ಹೌದು. ಕ್ರಾಂತಿದರ್ಶಿಯೂ ಸಹ. ಪು.ತಿ.ನ. ಈ ಮಾತುಗಳಿಗೆ ಸಾಕ್ಷಿ, ಅವರ ಭಾಷಣ ಈ ಸತ್ಯವನ್ನು ಸಿದ್ಧಪಡಿಸಿರುವ ಒಂದು ವಿಕ್ರಮ.

ಅವರು ಪ್ರತಿಪಾದಿಸಿರುವುದು ಗೊಡ್ಡು ಧರ್ಮವಲ್ಲ, ಆಧುನಿಕ ಜೀವನಕ್ಕೆ ಬೇಕಾದ ಸಮ್ಯಕ್‌ದೃಷ್ಟಿ ಅದರಲ್ಲಿ ಆನ್ವಯಿಕ ತಂತ್ರ ವಿಜ್ಞಾನದ ಪ್ರಸ್ತಾಪ. ಡಾ॥ಅಮೂಲ್ಯ ಕುಮಾರ ರೆಡ್ಡಿಯವರ ಅನುಭವದ ಉಲ್ಲೇಖ. ವಿಕೇಂದ್ರೀಕರಣ ಒಂದು ಧ್ರುವತತ್ವ. ಭಾರತಕ್ಕೆ,

ಜನಬಲ ಹೆಚ್ಚಿರುವ ನಾಡುಗಳಿಗೆ ಬೇರಾವ ಮಾರ್ಗ? ಉತ್ಪಾದನಾಸಂಬಂಧ ಬದಲಿಸಿದರೆ ಸಾಲದು. ಉತ್ಪಾದನಾತಂತ್ರವೇ ಬದಲಾಗಬೇಕು. ಅದರಿಂದಲೇ ಸಮಾನತೆ, ಸಮೃದ್ಧಿ.

ಈ ವಿಷಯದಲ್ಲೂ ಗಾಂಧೀ ಮತ್ತು ಲೋಹಿಯಾ ಪು.ತಿ.ನ. ಅವರ ಭಾಷಣದಲ್ಲಿ ಮೆರೆದಿದ್ದಾರೆ. ಆ ವಿಚಾರ ಪ್ರಭಾವ ವಿಜೃಂಭಿಸಿದೆ. ವೈಜ್ಞಾನಿಕ ಜ್ಞಾನ ತುಂಬಿ ಬರಬೇಕು. ಅದು ವೇದಾಂತದೊಡನೆ ಬೆರೆತು ಸಂಜೀವಿನಿ ಆಗಬೇಕು. ಇದಕ್ಕಿಂತ ಲೋಕಕ್ಕೆ ತಾರಕ ಮಂತ್ರ ಯಾವುದು? ಸಾಹಿತ್ಯ ಸಮ್ಮೇಳನಾಧ್ಯಕ್ಷರೊಬ್ಬರು ಈ ವಿಚಾರ ಸಾಮರಸ್ಯವನ್ನು ಬಿತ್ತಿರುವುದು, ಬಿತ್ತರಿಸಿರುವುದು ಅಪೂರ್ವ ಸಂಯೋಗ.

ಸಾಹಿತ್ಯದಲ್ಲಿ ಗುಣವೇ ಪ್ರಧಾನ. ಹೋರಾಟ ಚೀರಾಟಗಳಲ್ಲ, ಸಮನ್ವಯವೇ ರಾಜಮಾರ್ಗ. ನುಡಿಯ ಕಂಪನ್ನು ಉಳಿಸಿಬೆಳೆಸತಕ್ಕದ್ದು. ವಿಮರ್ಶೆ ತುಲನಾತ್ಮಕ, ವಸ್ತುನಿಷ್ಠ ಆಗಿರಬೇಕು. ಕವಿ ಕೃತಿಗಳ ಅಧ್ಯಯನ ನಿತ್ಯನಿರಂತರ ಸಾಗಬೇಕು. ಈಗಂತೂ ಸಾಹಿತ್ಯ ಕ್ಷೇತ್ರಕ್ಕೆ ಸಹಾಯದ ಸುಗ್ಗಿ. ಅವರ ಪರಮ ಪ್ರಯೋಜನಕ್ಕೆ ಅಧ್ಯಕ್ಷರ ಕರೆ.

ಪರಿಷತ್ತಿನ ಪ್ರಾಮುಖ್ಯವನ್ನು ಒತ್ತಿಹೇಳಬೇಕಾದುದು ಸಹಜವೇ. ಪ್ರಾಚೀನ ಕೃತಿಗಳ ಸರಳಾನುವಾದಕ್ಕೆ ಕರೆ. ಭಾಷಾಂತರ ಕಾರ್ಯಕ್ಕೆ ಆಗ್ರಹ. ಪ್ರಮುಖ ದಿನಪತ್ರಿಕೆಗಳಲ್ಲಿ ಗೋಚರಿಸುವ ಭಾಷಾಂತರದ ಪ್ರಶಂಸೆ. ಎಲ್ಲವೂ ಸ್ವಾಭಾವಿಕ. ಸಮ್ಮೇಳನಾಧ್ಯಕ್ಷರ ಭಾಷಣ ವಿಚಾರ ತುಂಬಿದ ಒಂದು ರಸಾನುಭವ. ಭಾಷೆಯ ಸ್ಥಾನಮಾನ ಇದೆ. ಗಡಿ ವಿವಾದದ ಪರಿಹಾರದ ಹೆಬ್ಬಯಕೆ ಉಂಟು. ರಾಜಕೀಯದ ಪ್ರಸ್ತಾಪಕ್ಕೆ ಹಿಂಜರಿದಿಲ್ಲ, ಮೈತ್ರಿಗಾಗಿ ತೀರದ ತವಕ ಉಂಟು. ಇವೆಲ್ಲದರ ಹಿಂದೆ ಶುದ್ಧ ಮನಸ್ಸಿನ ಕಳಕಳಿ.

ಅವರೇ ಹೇಳಿದಂತೆ 'ತಣ್ಣ' ಮನಸ್ಸಿನಲ್ಲಿ ಆಲೋಚಿಸಬೇಕಾದ ಜೀವಂತ ಸಂಗತಿಗಳಿವೆ. ಅವರ ತುಡಿತ ಮಿಡಿತ ಬಹು ನಿಚ್ಚಳ. ಅವನ್ನು ಅರಿತು ನಡೆಯುವುದರಲ್ಲೇ ಕನ್ನಡ ಜನಪದದ ಹಿತ.

■

## ಒಡೆಯರು ಬಂದಿದ್ದಾರೆ...

ಇಂದು ಬೆಂಗಳೂರಿಗೆ ರಾಜ್ಯದ ಮೂಲೆ ಮೂಲೆಯಿಂದ ರೈತರ ಮಹಾಯಾತ್ರೆ. ಅವರೇ ನಮ್ಮ ದೊರೆಗಳು. ಅವರಿಗೆ ಭವ್ಯ ಸ್ವಾಗತ ನಾಗರಿಕರ ಕರ್ತವ್ಯ. ಸಹಕಾರ ತಕ್ಕ ವ್ಯವಸ್ಥೆ ಮಾಡಲಿ.

ಬಲ ಪ್ರದರ್ಶನ, ಭದ್ರತಾ ಪಡೆಗಳ ಸಜ್ಜು ಅನಗತ್ಯ. ಅಂಜಿಕೆ ಹುಟ್ಟಿಸುವ ಯಾವ ಕ್ರಮವೂ ತಕ್ಕುದಲ್ಲ. ತಮ್ಮ ಕಷ್ಟ ದುಃಖ ತೋಡಿಕೊಳ್ಳಲು ನೂರಾರು ಮೈಲಿ ನಡೆದು ಬಂದವರು. ಪಾದರಕ್ಷೆ ಸಹ ಇಲ್ಲದ ಇಳಿವಯಸ್ಸಿನ ಹೆಣ್ಣು ಮಕ್ಕಳೂ ಬಂದಿದ್ದಾರೆ. ಹಾದಿಯಲ್ಲಿ ರೈತ ಬಾಂಧವರು ಕೊಟ್ಟ ರೊಟ್ಟಿ ತಿಂದು ಹಾದಿ ಸವೆಸಿದ್ದಾರೆ.

ಅವರಿಗೆ ಎಲ್ಲೂ ಅಡೆ ತಡೆ ಇರಬಾರದು. ಯಾವ ಪ್ರಚೋದನೆಗೂ ಅವಕಾಶ ಇರತಕ್ಕದ್ದಲ್ಲ. ಅವರ ಮೊರೆಯನ್ನು ಕಿವಿಗೊಟ್ಟು ಕೇಳುವುದು ಸರಕಾರದ ಕರ್ತವ್ಯ. ಮಂತ್ರಿ ಮಹೋದಯರು ಊರ ಹೊರಗೆ ನಿಂತು ಸ್ವಾಗತಿಸಲಿ. ಶಾಸಕರು ಸಾಲು ಗಟ್ಟಿ ನಿಲ್ಲಲಿ. ಮಹಾಜನರಿಗೆ ಸಲ್ಲಬೇಕಾದ ಗೌರವ ಸರಿಯಾಗಿ ಸಲ್ಲಲಿ.

ನಮ್ಮ ಹಳ್ಳಿಗರು ಶಾಂತ ಚಿತ್ತರು. ಸಹನೆ ಅವರ ಹೆಗ್ಗುರುತು. ಬಗೆಬಗೆಯ ಅನ್ಯಾಯ ಅಕ್ರಮಗಳನ್ನು ಶತಮಾನಗಳಿಂದ ತಾಳಿಕೊಂಡು ಬಂದಿದ್ದಾರೆ. ಸ್ವರಾಜ್ಯದ ಮೂವತ್ತ ಮೂರು ವರ್ಷಗಳಲ್ಲಿ ಅವರು ಕಂಡುಂಡುದು ಬರಿಯ ಕಣ್ಣೀರು. ಅಂಥ ನೊಂದ ಜನಕ್ಕೆ ನೆಮ್ಮದಿಯ ನುಡಿ ಹೇಳುವುದೊಂದೇ ಸರಿಯಾದ ನಡೆ.

ರೈತರೇ ಈ ದೇಶದ ಒಡೆಯರು. ಇದುವರೆಗೆ ಅದನ್ನು ಮನ್ನಿಸಿ ನಾವು ನಡೆದಿಲ್ಲ. ಇನ್ನು ಮುಂದೆ ಹೀಗೆ ನಡೆಯತಕ್ಕದ್ದಲ್ಲ. ಅವರಿಗೆ ಹಾದಿ ಬಿಡಿ. ಅವರ ಮನವಿ ಕೇಳಿ. ನ್ಯಾಯ ನೀಡಿ. ಭರವಸೆ ಮೂಡಿಸಿ. ಇಲ್ಲವಾದರೆ ಭಾರಿ ವಿಪ್ಲವಕ್ಕೆ ವೀಳಯ ಕೊಟ್ಟಂತೆ.

■

# ದಿಟ್ಟ ಹೆಜ್ಜೆ ಹಾಕೋಣ

ಇಂದು ಕನ್ನಡ ರಾಜ್ಯೋತ್ಸವ 31 ವರ್ಷಗಳ ಕೆಳಗೆ ಹರಿದು ಹಂಚಿಹೋಗಿದ್ದ ಕನ್ನಡನಾಡು ಒಂದೇ ಆಡಳಿತಕ್ಕೆ ಬಂದ ದಿನ. ಸಮಸ್ತ ಕನ್ನಡಿಗರ ಬಹುದಿನದ ಕನಸು ನನಸಾದ ದಿನ. ಭಾರತದ ನಕ್ಷೆಯಲ್ಲಿ ಕರ್ನಾಟಕ ರಾರಾಜಿಸಿದ ದಿನ.

ಈ 31 ವರ್ಷಗಳಲ್ಲಿ ಹಲವಾರು ಏಳು ಬೀಳುಗಳು. ಒಂದು ಮಾತನ್ನು ಧೈರ್ಯವಾಗಿ ಹೇಳಬಹುದು. ಆಡಳಿತ ಭಾಷೆಯಾಗಿ ಕನ್ನಡ ತನ್ನ ಅಸ್ತಿತ್ವವನ್ನು ಖಚಿತಪಡಿಸಿಕೊಂಡಿದೆ. ಸಂಪೂರ್ಣ ಕನ್ನಡೀಕರಣಕ್ಕೆ ಇನ್ನೂ ಸಾಕಷ್ಟು ದೂರ ಕ್ರಮಿಸಬೇಕು. ಆದರೂ ಕನ್ನಡ ಹಿಂದೆಂದಿಗಿಂತ ಇಂದು ಸುಭದ್ರ. ನಮ್ಮ ಆಡಳಿತದ ಸಕಲ ವ್ಯವಹಾರವೂ ಕನ್ನಡದಲ್ಲೇ ನಡೆಯಬೇಕೆಂದೇ ನಾವು ಈ ರಾಜ್ಯ ಬಯಸಿದೆವು. ಜನತಂತ್ರ ಸಾರ್ಥಕ ಆಗಬೇಕೆಂಬ ಹಂಬಲ ನಮ್ಮದು. ಜನರಿಗೆ ಅರ್ಥವಾಗುವ ಭಾಷೆಯಲ್ಲೇ ಸರಕಾರದ ಎಲ್ಲ ವ್ಯವಹಾರ. ಜನರ ಕಣ್ಣಂಕೆಯಲ್ಲೇ ಎಲ್ಲ ಆಗುಹೋಗುಗಳು. ಇದೇ ಭಾಷಾವಾರು ಪ್ರಾಂತ ವಿಭಜನೆಯ ಮೂಲ ತತ್ತ್ವ.

ಆಡಳಿತವೆಲ್ಲ ಜನರ ಭಾಷೆಯಲ್ಲೇ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡವೇ ಪರಮ ಆಗಬೇಕು. ಇದಕ್ಕೆ ಯಾವ ಅಡ್ಡಿಯೂ ಇಲ್ಲ. ಎಡರು ತೊಡರುಗಳೂ ಇಲ್ಲ. ಇಚ್ಛಾಶಕ್ತಿಯೊಂದಿದ್ದರೆ ಈ ಕೆಲಸವನ್ನು ಮಾಡಿ ತೋರಿಸಬಹುದು ಎನ್ನಲು ಸಾಕಷ್ಟು ಆಧಾರ. ಮನಸ್ಸು ಮಾಡಿದ ಅಧಿಕಾರಿಗಳು ಕನ್ನಡವನ್ನು ಭದ್ರವಾಗಿ ಸ್ಥಾಪಿಸಿದ್ದಾರೆ. ಮನಸ್ಸಿಲ್ಲದವರು ಇನ್ನೂ ಅಳುಕುತ್ತಿದ್ದಾರೆ. ನಾವು ಬಳಸುತ್ತಿರಬಹುದಾದ ಇಂಗ್ಲಿಷ್ ಭಾಷೆ ನಮ್ಮದಲ್ಲ. ಅದನ್ನು ಕಲಿಯಲು ಹತ್ತಾರು ವರ್ಷ ವ್ಯಯ ಮಾಡಬಹುದಾದರೆ ಕನ್ನಡವನ್ನು ರೂಢಿ ಮಾಡಿಕೊಳ್ಳಲು ಕೆಲವಾರು ತಿಂಗಳು ಸಾಲವೇ?

ನಮ್ಮ ವ್ಯವಹಾರವನ್ನೆಲ್ಲ ಕನ್ನಡದಲ್ಲೇ ಮಾಡಿಕೊಳ್ಳದಿದ್ದರೆ ಮತ್ತೆಲ್ಲಿ ಕನ್ನಡ ಉಳಿಯುತ್ತದೆ? ಶಿಕ್ಷಣ ಮಾಧ್ಯಮವಾಗಿ ಕನ್ನಡ ಕಡ್ಡಾಯ ಆಗಬೇಕು. ಕನ್ನಡಿಗರ ಅಳಿವು- ಉಳಿವು ಕನ್ನಡದ ಮೂಲಕವೇ. ಅನ್ಯ ಭಾಷೆಯ ಮಾಧ್ಯಮದಿಂದಲ್ಲ. ಇದಕ್ಕೆ ಲೋಕದ ಎಲ್ಲ ಶಿಕ್ಷಣ ಶಾಸ್ತ್ರಿಗಳ ಅನುಮೋದನೆ ಉಂಟು. ಜ್ಞಾನ-ವಿಜ್ಞಾನಗಳನ್ನೆಲ್ಲ ಕನ್ನಡದಲ್ಲೇ ಕಲಿಸುವುದು ಸಾಧ್ಯ. ಕಲಿಸುವುದೇ ನಮ್ಮ ಆದ್ಯ ಕರ್ತವ್ಯ. ಕನ್ನಡ ಮಾಧ್ಯಮ ಇಂದಿನ್ನೂ ವಿವಾದದ ವಸ್ತು. ಇದು ಸಿದ್ಧಾಂತ ಆಗಬೇಕು. ಎಲ್ಲ ಸ್ತರಗಳಲ್ಲಿ ಇದರ ಜಾರಿ ಬಲು ಮುಖ್ಯ. ವಾದ ವಿವಾದಕ್ಕೆ ಗ್ರಾಸ

ಇದಲ್ಲ, ಇದು ಶತಸ್ಸಿದ್ಧ ಸತ್ಯ. ಇದನ್ನು ಆಗುಮಾಡಿಸುವ ಸಂಕಲ್ಪ ನಮ್ಮದಾಗಬೇಕು. ಅದಕ್ಕೊಂದು ಕಾಲಮಿತಿ ಇಡಬೇಕು. ಆಗಲೇ ಈ ಗುರಿ ಈಡೇರುವುದು.

ನ್ಯಾಯ ನಿರ್ಣಯ ಕನ್ನಡದಲ್ಲೇ ಆಗಬೇಕು. ಕಕ್ಷಿಗಾರನಿಗೆ ಅರ್ಥವಾಗದ ಭಾಷೆಯಲ್ಲಿ ಅಲ್ಲ, ಅವನ ಅಜ್ಞಾನದ ಶೋಷಣೆ ಸಾಕಷ್ಟು ಆಗಿದೆ. ಇದಕ್ಕೆ ಕೊನೆ ಹಾಡಲೇಬೇಕು. ಜನರಿಗೆ ಅರ್ಥವಾಗದ ರೀತಿಯಲ್ಲಿ ನ್ಯಾಯಾಲಯದ ಕಾರ್ಯ ಕಲಾಪ ನಡೆದರೆ ಹೇಗೆ? ಅಂತಲೇ ನ್ಯಾಯಾಲಯದಲ್ಲಿ ಕನ್ನಡ ಸ್ಥಾಪನೆ ಆಗಬೇಕಾದುದು ಬಲು ಮುಖ್ಯ. ಇದಕ್ಕೆ ಅಡ್ಡಿ ಒಡ್ಡುವವರು ಕನ್ನಡ ಕಂಟಕರು. ಅವರನ್ನೆಲ್ಲ ಅತ್ತ ಸರಿಸುವಷ್ಟು ಬಲ ನಮ್ಮ ಶ್ರೀಸಾಮಾನ್ಯನಿಗೆ ಬರಬೇಕು. ಆಗಲೇ ದಿಟವಾಗಿ ಕನ್ನಡ ತನ್ನ ಇರವನ್ನು ಸ್ಥಾಪಿಸಿದಂತೆ.

ವರ್ಷ ವರ್ಷವೂ ರಾಜ್ಯೋತ್ಸವ ಬರುತ್ತದೆ, ಹೋಗುತ್ತದೆ. ನಾವೆಲ್ಲಿ ನಿಂತಿದ್ದೇವೆ? ಈ ಪ್ರಶ್ನೆ ಕಾಡುತ್ತಲೇ ಉಳಿಯುತ್ತದೆ. ಬರಿ ಸಂಕಲ್ಪಗಳ ಪುನರುಚ್ಚಾರದಿಂದ ಮುನ್ನಡೆ ಸಾಧ್ಯ ಇಲ್ಲ, ಮುನ್ನಡೆ ಸಾಧಿಸಬೇಕಾದ ಒಂದು ಕಾರ್ಯಕ್ರಮ. ಇದಕ್ಕೆ ನಾವೆಲ್ಲ ಸಿದ್ಧ ಆಗದೆ ಎಷ್ಟು ವರ್ಷ ರಾಜ್ಯೋತ್ಸವ ಆಚರಿಸಿದರೆ ಏನು ಫಲ? ಈಗ ನಮ್ಮ ಮುಂದೆ ಒಂದು ವರ್ಷದಲ್ಲಿ ಈಡೇರಿಸಬೇಕಾದ ಕಾರ್ಯಕ್ರಮ ಬೇಕು. ಕನ್ನಡದ ಪ್ರಗತಿಯನ್ನು ಸಾಧಿಸುವ ಯೋಜನೆ ಬೇಕು.

ಕನ್ನಡ ನಾಡಿನಲ್ಲಿ ಜಾಗೃತಿ ಉಂಟುಮಾಡಬೇಕಾದ ಕಾಲ ಆಗಿಹೋಯಿತು. ಈಗಾಗಲೇ ಸಾಕಷ್ಟು ಎಚ್ಚರ ಮೂಡಿದೆ. ಅದರ ಬಲದಿಂದ ದೃಢವಾದ ಹೆಜ್ಜೆಗಳನ್ನಿಡಬೇಕಾದುದು ಅಗತ್ಯ. ಕನ್ನಡದ ಕೆಲಸಕ್ಕೆ ಟೊಂಕ ಕಟ್ಟಿ ನಿಂತವರನ್ನು ಹಿಡಿದು ಹಿಂದಕ್ಕೆ ಜಗ್ಗುವುದು ಬೇಡ. ಅವರ ಬೆನ್ನು ತಟ್ಟಿ ಹುರುಪುಕೊಟ್ಟು ಮುನ್ನಡೆಸುವುದು ಮುಖ್ಯ.

ಬಹಳ ಕಾಲವೇನೂ ಉಳಿದಿಲ್ಲ, ತ್ವರೆಯಿಂದ ಮಾಡಿ ಮುಗಿಸಬೇಕಾದ ಕೆಲಸ ಇದು. ಅದಕ್ಕೆ ಬೇಕಾದ ಕೆಚ್ಚು ನೆಚ್ಚು ಎರಡೂ ಸಾಕಷ್ಟು ಇದೆ. ಅದರ ಪ್ರಯೋಜನ ಮಾತ್ರ ಪಡೆಯಬೇಕು.

## ವಿಚಾರಗ್ರಾಸ

ಐವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಿಸರ್ಗರಮಣೀಯ ಮಡಿಕೇರಿಯಲ್ಲಿ ಕನ್ನಡದ ಪ್ರಾಜ್ಞ, ವಿಚಾರವಂತ ಶಂ.ಬಾ. ಜೋಶಿ ಅದರ ಅಧ್ಯಕ್ಷರು. ಸಾಮಾನ್ಯ ಅರ್ಥದಲ್ಲಿ ಅವರು ಸಾಹಿತಿ ಅಲ್ಲ. ಅವರೊಬ್ಬ ಅನ್ವೇಷಕರು. ಆಳಕ್ಕೆ ಇಳಿದು ಶೋಧ ನಡೆಸುವವರು. ಅಂಥ ಮಹನೀಯರು ಅಧ್ಯಕ್ಷ ಪೀಠವನ್ನು ಅಲಂಕರಿಸಿದುದು ಒಂದು ಹೆಮ್ಮೆ.

ಎಂದಿನಂತೆ ಅಲ್ಲ ಈ ಬಾರಿಯ ಅಧ್ಯಕ್ಷ ಭಾಷಣ. ಜೋಶಿಯವರು ತಮ್ಮ ಜೀವಮಾನದ ಉದ್ದಕ್ಕೂ ಕೆಲವು ಸತ್ಯಗಳನ್ನು ಅರಸುತ್ತ ಸಾಗಿದ್ದಾರೆ. ಅಧ್ಯಕ್ಷ ಭಾಷಣದ ಮೊದಲ ಭಾಗವೆಲ್ಲ ಈ ಪ್ರಯತ್ನಕ್ಕೇ ಮೀಸಲು. ಇಪ್ಪತ್ತೆಂಟು ಪುಟಗಳಲ್ಲಿ ಅದರ ಮಥಿತಾರ್ಥವೇ ಇದೆ.

''ನಾವು ಮರಳಿ ಮಾನವರಾಗಬೇಕು, 'ಪ್ರಜ್ಞಾ'ವಂತರಾಗಬೇಕೆಂಬುದೇ ಆಗಿದೆ. ಈ ಪ್ರಜ್ಞೆಯ ಆವಿರ್ಭಾವದಿಂದ ನಾವೆಲ್ಲ ಹೊಸಬರಾಗಲು ಸಾಧ್ಯ. ನಮ್ಮನ್ನು ತುಳಿಯುತ್ತಿರುವ ಇಂದಿನ ವ್ಯಸ್ತ ಪರಂಪರೆಯನ್ನು ಮೆಟ್ಟಿ ನಾವು 'ವಿವಸ್ವನ್' ಪರಂಪರೆಯ ಸಂಸ್ಕೃತಿಯನ್ನು ''ಮಾನವ ಧರ್ಮ''ವನ್ನು ಮತ್ತೆ ಜಗತ್ತಿನಲ್ಲಿ ಕಾಣಬೇಕಿದ್ದರೆ, ಪ್ರಾಜ್ಞಸಾಹಿತ್ಯಿಕರು, ಜೀವಿತದ ಪಾತಳಿಯ ಭಾವನಾತ್ಮಕ ಭೂಮಿಕೆಯ ಸಾಹಿತ್ಯ ಕೃತಿ ರಚನೆಯ ದಿಕ್ಕನ್ನು ಬದಲಿಸಿ, ಜೀವನದ ಪಾತಳಿಯ ಮೇಲಣ, ಭಾವನಾತ್ಮಕ ಹಾಗೂ ಅನುಭವಾತ್ಮಕ ಸ್ವರೂಪದ ಸಮಾಜ; ಸಮಷ್ಟಿಯ ದರ್ಶನ ಮಾಡಿಸಬಲ್ಲ ಕೃತಿ ರಚನೆಗೆ ತೊಡಗುವುದು ಅವಶ್ಯವಾಗುತ್ತಿಲ್ಲವೇ?

ಈ ಪ್ರಶ್ನೆಯನ್ನು ಎಸೆದಿರುವ ಸಮ್ಮೇಳನಾಧ್ಯಕ್ಷರು ಅಭಿನಂದನೆಗೆ ಅರ್ಹರು. ಜೀವಿತ-ಜೀವನಗಳ ಅಂತರವನ್ನು ಎಷ್ಟು ಮಂದಿ ಅರಿತಿದ್ದಾರೆ? ಸಾಹಿತಿಗಳೆನಿಸಿ ಕೊಂಡವರಲ್ಲಿಯೂ ಎಷ್ಟು ಜನಕ್ಕೆ ಬದುಕು ಬಾಳಿನ ವ್ಯತ್ಯಾಸ ಗೊತ್ತು? ಇದು ಜೀವಾಳದ ಪ್ರಶ್ನೆ.

ಜೋಶಿಯವರ ತರ್ಕವನ್ನು ಒಪ್ಪದಿರುವವರೂ ಇದ್ದಾರು. ಆದರೆ, ಒಂದು ಸಂಗತಿ ಮಾತ್ರ ವಿವಾದಾತೀತ. ಇಂದಿನ ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರಗಳಿಗೆಲ್ಲ ಈ ಅಂತರವನ್ನು ಅರಿಯದಿರುವುದೇ ಮೂಲ ಕಾರಣ. ಹೇಗೋ ಬದುಕುತ್ತಿದ್ದೇವೆ. ನಾವು ಬಾಳುತ್ತಿಲ್ಲ, ನರರಾಗಿದ್ದೇವೆ. ಮಾನವರಾಗಿಲ್ಲ. ಈ ಮಹತ್ವದ ಸಂಗತಿಯನ್ನು ಚೊಕ್ಕವಾಗಿ ಗುರುತಿಸಿ ಜೋಶಿ ಮಹನೀಯರು ಮಾಡಿರುವ ಉಪಕಾರ ತುಂಬ ಭಾರಿ.

ಭಾಷೆ-ಸಾಹಿತ್ಯಗಳು, ಜಾತಿ-ಧರ್ಮಗಳೊಂದಿಗೆ ಬೆರೆತುಕೊಳ್ಳತಕ್ಕದ್ದಲ್ಲ. ಇಲ್ಲವೆನ್ನುವವರು ಯಾರು? ಅದಕ್ಕೆ ಮಾನವನಲ್ಲಿ ಪ್ರಜ್ಞೆ ಹುಟ್ಟಬೇಕು. ಈ ಮಾತನ್ನು ಸಮ್ಮೇಳನಾಧ್ಯಕ್ಷರು ಬಾರಿ ಬಾರಿಗೂ ಒತ್ತಿ ಹೇಳಿದ್ದಾರೆ.

''ಏನಾದರೂ ಆಗು, ಮೊದಲು ಮಾನವನಾಗು'' ಎಂಬುದರೆಡೆ ವ್ಯಕ್ತಿಗಳನ್ನು ಸಾಹಿತ್ಯ ತಿರುಗಿಸಬೇಕು. ಆಗಲೇ ಸಾಹಿತ್ಯ ಸಾರ್ಥಕ. ಇದು ಉಪದೇಶ ಅಲ್ಲ, ಸಮಷ್ಟಿ ಸಮಾಜದ ಕೋರಿಕೆ-ವಿನಯದಿಂದ ತುಂಬಿದ ಮಾತು. ಆದರೆ ಅಷ್ಟೇ ಸತ್ಯ.

ಗ್ರಂಥ ಪ್ರಕಾಶನ ಕುರಿತು ಜೋಶಿಯವರು ಆಡಿರುವ ಮಾತು ಮನನೀಯ. ಕಥೆ, ಕಾದಂಬರಿ ಪ್ರಕಟಿಸುವವರಿಗೆ ಕೊರತೆಯಿಲ್ಲ. ಅದರಲ್ಲಿ ಲಾಭದಾಯಕ ವ್ಯವಹಾರ. ಎಷ್ಟೋ ವೇಳೆ ಲೇಖಕರೇ ಪ್ರಕಾಶಕರು. ಪುಸ್ತಕಗಳ ಸಗಟು ಖರೀದಿಯೇ ಪ್ರೇರಣೆ. ನಮ್ಮ ಪ್ರಕಾಶನ ಉದ್ಯಮ ಬಹು ದೂರ ಸಾಗಬೇಕಿದೆ. ವಿಚಾರಸಾಹಿತ್ಯದ ವಿಷಯದಲ್ಲಂತೂ ಇದು ತೀರಾ ದಿಟ.

ಗ್ರಂಥಾಲಯಗಳನ್ನು ಕುರಿತು ಆಡಿರುವ ಮಾತೂ ಸರಿಯಾದುದೇ. ನಾಡಿನಲ್ಲಿ ಗ್ರಂಥಾಲಯ ಆಂದೋಲನ ಕ್ರಾಂತಿ ಮಾಡಬಲ್ಲುದು. ಕನ್ನಡ ನಾಡಿನಲ್ಲಿ ಅದು ಆಗಿಲ್ಲ, ಆಗುವುದು ಅಗತ್ಯ.

ಪತ್ರಿಕೋದ್ಯಮ ಕುರಿತು ಸಮ್ಮೇಳನಾಧ್ಯಕ್ಷರ ಮಾತು, ಅನುಭವ ಸಾಲದು. ಅವರು ಹೆಸರಿಸಿರುವ ಒಂದೆರಡು ಪತ್ರಿಕೆಗಳ ವಿಷಯ ಹಾಗಿರಲಿ. ಕನ್ನಡ ಪತ್ರಿಕೋದ್ಯಮದ ಇತ್ತೀಚಿನ ಬೆಳವಣಿಗೆಗಳ ಆಪ್ತ ಪರಿಚಯ ಸಮ್ಮೇಳನಾಧ್ಯಕ್ಷರಿಗೆ ಇನ್ನೂ ಹೆಚ್ಚು ಮನವರಿಕೆ ಆಗಿದ್ದಿದ್ದರೆ ಲೇಸಾಗುತ್ತಿತ್ತು. ಮರಾಠಿಯಲ್ಲಿ ಇರುವ ''ಸಾಧನಾ'' ಪತ್ರಿಕೆಯ ಉಲ್ಲೇಖ ಯುಕ್ತ. ವೈಚಾರಿಕ ದೃಷ್ಟಿಕೋನದ ಪತ್ರಿಕೆಗಳು ಕನ್ನಡದಲ್ಲಿ ಬರಬೇಕು. ವಿವಾದವೇ ಇಲ್ಲ.

ವಿಶ್ವವಿದ್ಯಾಲಯಗಳು ಕನ್ನಡಕ್ಕಾಗಿ ಮಾಡಬೇಕಾಗಿರುವ ಕೆಲಸ ಅಪಾರ. ಏನೂ ಕೆಲಸ ಆಗಿಲ್ಲ ಎಂದು ಯಾರೂ ಹೇಳುವಂತಿಲ್ಲ. ಆಗಿರುವುದನ್ನು ಮೆಚ್ಚೋಣ. ಆಗಬೇಕಾದುದಕ್ಕೆ ಆಶಿಸೋಣ.

ಅಕೆಡೆಮಿಗಳ ಸ್ವಾಯತ್ತಾಧಿಕಾರದಲ್ಲಿ ಕೈಹಾಕಬಾರದು. ಹಣಕಾಸಿನ ವಿಷಯದಲ್ಲಿ ಅವಕ್ಕೆ ಪೂರ್ಣಾಧಿಕಾರ ಬೇಕು. ಸಮೀಪದವರಿಗೇ ಎಲ್ಲ ಪ್ರಯೋಜನ ಸಲ್ಲ, ದೂರದವರಿಗೂ ಎಟುಕಲಿ. ನ್ಯಾಯವಾದ ಅಪೇಕ್ಷೆ.

ಕನ್ನಡ ಸಾಹಿತ್ಯ ಪರಿಷತ್ತನ್ನು, ಸಮ್ಮೇಳನವನ್ನು ಕುರಿತು ಆಡಿರುವ ಮಾತು ಯಥಾರ್ಥ. ಇವೂ ಸಹ ಕೆಲವು ಗುಂಪುಗಳ ''ಆಡುಂಬೊಲ'' ಆಗತಕ್ಕದ್ದಲ್ಲ, ಸ್ವಾರ್ಥಿಗಳ ಕೊಟ ಎನಿಸತಕ್ಕದ್ದಲ್ಲ, ಅಂದಂದಿನ ಸರಕಾರಕ್ಕೆ ಕೈಚಾಚುವ ''ಬವನಾಸಿ'' ಆಗತಕ್ಕದ್ದಲ್ಲ. ಈ ಸಂಗತಿಗಳನ್ನು ನಿಜವಾಗಿಯೂ ಒತ್ತಿ ಒತ್ತಿ ಹೇಳಬೇಕಾಗಿ ಬಂದಿರುವುದು ಕನ್ನಡಿಗರ ದುರ್ದೈವ.

ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆ ಆಗಿಲ್ಲ, ಘೋಷಣೆ ಉಂಟು. ಕೃತಿಯಲ್ಲಿ ಲೇಶವೂ ಮುನ್ನಡೆದಿಲ್ಲ. ಸಮ್ಮೇಳನಾಧ್ಯಕ್ಷರ ಟೀಕೆ ಏನೇನೂ ಸಾಲದು. ಕರ್ನಾಟಕದಲ್ಲಿ ಎಲ್ಲ ಹಂತಗಳಲ್ಲೂ ಕನ್ನಡವೇ ಸಾರ್ವಭೌಮ ಆಗದೆ ಕನ್ನಡಕ್ಕೆ ಉಳಿಗಾಲವೇ ಇಲ್ಲ.


ಶಿಕ್ಷಣ ಮಾಧ್ಯಮದಲ್ಲೂ ಅಷ್ಟೆ. ಕನ್ನಡದ ರಾಜಧಾನಿಯಲ್ಲೇ ಕನ್ನಡ ಕುಂದಿದೆ. ಕುಗ್ಗುತ್ತಿದೆ. ಇಂಗ್ಲಿಷಿನ ಹಾವಳಿ ಮಿತಿ ಮೀರಿದೆ. ಈ ಪೆಡಂಭೂತ ಇರುವವರೆಗೆ ಕನ್ನಡದಲ್ಲಿ ನಮ್ಮ ಜೀವನಾಡಿ ಇದೆ – ಎಂಬ ಅರಿವೇ ನಮಗೆ ಮೂಡದು. ಬರಿಯ ಅಭಿಮಾನದಿಂದ ಪ್ರಯೋಜನವಿಲ್ಲ. ಕನ್ನಡವನ್ನೇ ಬಳಸತಕ್ಕದ್ದು. ಈ ಹಟ ನಮಗೆ ಬೇಕು.

ವಿಶ್ವ ಕನ್ನಡ ಮೇಳ – ಅಧಿಕಾರದಲ್ಲಿರುವವ ಡಂಗುರ ಬಾರಿಸಿಕೊಳ್ಳಲು ಒಂದು ಸಂದರ್ಭ. ಬೆಂಗಳೂರಿನಲ್ಲಿಯೇ ಕತಿಯಿಡ ಉಳಿಸಬೇಕಾಗಿರುವ ಸಂದರ್ಭ. ಇನ್ನು ವಿಶ್ವಕನ್ನಡವೆಲ್ಲಿ? ತಮಿಳು, ತೆಲುಗರು, ಮಲೆಯಾಳಿಗಳು, ಮರಾಠರು ಎಲ್ಲಿಯೇ ಹೋದರೂ ತಮ್ಮ ಭಾಷೆ ಬಿಡರು. ಕನ್ನಡಿಗರು ತಮ್ಮತನ ಕಳೆದುಕೊಂಡು ಕರಗಿಹೋಗುವರು. ಸಮ್ಮೇಳನಾಧ್ಯಕ್ಷರ ಈ ಕೊರಗು ನೂರಕ್ಕೆ ನೂರರಷ್ಟು ದಿಟ. ಕನ್ನಡಿಗರ ಕನ್ನಡತನ ಮೊದಲು ಮೆರೆಯಲಿ. ಅನಂತರ ಮೇಳಗಳು ನಡೆಯಲಿ.


ಜೋಶಿ ಮಹನೀಯರ ಭಾಷಣ ಉದ್ವೇಗಪೂರ್ಣವಲ್ಲ, ವಿಚಾರಪರಿಪ್ಲುತ. ಆಳವಾಗಿ, ತಣ್ಣಗೆ ಆಲೋಚಿಸಬೇಕಾದ ಅಂಶಗಳಿವೆ. ಪ್ರತಿಯೊಬ್ಬ ಕನ್ನಡಿಗನೂ ಪ್ರಜ್ಞಾವಂತನಾಗಬೇಕು. ಬರಿ 'ನರ'ನಾಗಿದ್ದರೆ ಸಾಲದು. 'ಮಾನವ'ನಾಗಬೇಕು. ಇದೇ ಅವರ ಭಾಷಣದ ಸಾರಸರ್ವಸ್ವ.

■


# ಚಿತ್ರ ಸಂಪುಟ



ಸೈಕಲ್ ಮೇಲೆ ಬಾಲ ಖಾದ್ರಿ




ತಂದೆ ಖಾದ್ರಿ ಶ್ರೀನಿವಾಸದೇಶಿಕಾಚಾರ್ ಹಾಗೂ ಚಿಕ್ಕಪ್ಪ - ವೆಂಕಟನರಸಿಂಹಾಚಾರ್
- ದಾಯು ಜತೆ ಬಾಲಕ ಖಾದ್ರಿ




ಈಗ ಖಾದ್ರಿ ಸ್ಮರಣೆಯಾಗಿರುವ ಮೇಲುಕೋಟೆಯ ಅವರ ಪೂರ್ವಿಕರ ಹೊಸ ಮನೆ



ಬೆಟ್ಟದ ಇನ್ನೊಂದು ನೋಟ...



ಮೇಲುಕೋಟೆ ಶ್ರೀ ಯೋಗಾನರಸಿಂಹಸ್ವಾಮಿಬೆಟ್ಟ



ಮೇಲುಕೋಟೆ - ಖಾದ್ರಿ
ನೆನಪು



ಖಾದ್ರಿ ಶಾಮಣ್ಣನವರ ಪತ್ನಿ
ಶ್ರೀಮತಿ ಸುಮನ್ ಖಾದ್ರಿ
ಶಾಮಣ್ಣ - ಖಾದ್ರಿ ಜನ್ಮ ದಿನ
ಸಮಾರಂಭದಲ್ಲಿ...



ಖಾದ್ರಿ ಕಿರಿಯ ಸೋದರರ ಮಗಳು ಸ್ಮಿತಾ, ಮಗ ಶರತ್ ಖಾದ್ರಿ ಜತೆ ಧಾರವಾಡದಲ್ಲಿ...




ಕಾಗೋಡು ಚಳವಳಿ, ಸಮಾಜವಾದಿ ನಾಯಕ ಸಿ.ಜಿ.ಕೆ. ರೆಡ್ಡಿ ಭಾಷಣ.
ಖಾದ್ರಿ ಭಾಷಾಂತರ



ಡಾ.ರಾಮಮನೋಹರ ಲೋಹಿಯಾ ಬೆಂಗಳೂರಿಗೆ ಬಂದಾಗ. ಖಾದ್ರಿ ಶಾಮಣ್ಣ
ಶಾಂತವೇರಿಗೋಪಾಲಗೌಡ, ಜೆ.ಹೆಚ್.ಪಟೇಲ್, ಎಸ್.ವೆಂಕಟರಾಂ,
ಕೋಣಂದೂರು ಲಿಂಗಪ್ಪ ಮತ್ತಿತ್ತರ ಸಮಾಜವಾದಿಗಳೊಡನೆ ಡಾ.ಲೋಹಿಯಾ.



ಹಿರಿಯ ಸಮಾಜವಾದಿ
ರಾಜನಾರಾಯಣ್
ಬೆಂಗಳೂರಿಗೆ ಬಂದಾಗ
ಖಾದ್ರಿ ಜತೆ ಸಮಾಲೋಚನೆ



ಉತ್ತರಕನ್ನಡದ ಶಿರಸಿ ಪತ್ರಕರ್ತರ ಸಮ್ಮೇಳನದಲ್ಲಿ...




ವೃತ್ತಿನಿರತರ ಕರೆ ಬಂದಲೆಲ್ಲ ಪಾದ್ರಿ - 1974ರಲ್ಲಿ ಶಿರಸಿಯಲ್ಲಿ...



ಪತ್ರಕರ್ತರ ಸಮ್ಮೇಳನದಲ್ಲಿ...





ಎಲ್.ಕೆ.ಅಡ್ವಾಣಿ, ಶಿವರಾಮಕಾರಂತ ಇತರರೊಡನೆ ತುರ್ತುಪರಿಸ್ಥಿತಿ ನಂತರ



ಚಲನಚಿತ್ರದಲ್ಲೂ ಪಾತ್ರ





ಕನ್ನಡದ ಕೆಲಸಕ್ಕೆ ಖಾದ್ರಿ ಶಾಮಣ್ಣ ಮೊದಲ ಆದ್ಯತೆ. ಬಂಗಾರಪೇಟೆಯಲ್ಲಿ...



ಕನ್ನಡ ರಾಜ್ಯೋತ್ಸವ..



ಕನ್ನಡ ಚಳವಳಿ ನಾಯಕ ಜಿ.ನಾರಾಯಣಕುಮಾರ್ ಅವರಿಂದ ಶಾದ್ರಿಗೆ ಸನ್ಮಾನ




ಬರವಣಿಗೆಯಲ್ಲಿ ತಲ್ಲೀನ...



ಕನ್ನಡ ಚಳವಳಿ ನಾಯಕ ಜಿ.ನಾರಾಯಣಕುಮಾರ್ ಅವರಿಂದ ಖಾದ್ರಿಗೆ ಸನ್ಮಾನ



ಮಿತ್ರ ನಜೀರ್ ಸಾಬ್ ಅವರಿಂದ ಆತ್ಮೀಯ ಸನ್ಮಾನ



ಪತ್ರಕರ್ತರ ವಿಚಾರಗೋಷ್ಠಿಯಲ್ಲಿ...



ವಿದ್ಯಾರ್ಥಿ ಸಂಘದಲ್ಲಿ ಭಾಷಣ...



ಆಪ್ತ ಗೆಳೆಯ ಮತ್ತು  ಕಾದಂಬರಿಕಾರ ತರಾಸುಗೆ ವರನಟ ಡಾ.ರಾಜ್ ಸನ್ಮಾನದಲ್ಲಿ...



ಕನ್ನಡ ಚಳವಳಿ ನಾಯಕ ಜಿ.ನಾ.ಕು. ಭೇಟಿ...



ಪು.ತಿ.ನ., ಪಿ.ಟಿ.ಕೃಷ್ಣಅಯ್ಯಂಗಾರ್ ಜತೆ



ವಿಧಾಯಕ ಕಾರ್ಯಕರ್ತರ ಸಭೆಯಲ್ಲಿ...



ದೇಜಗೌ ಅವರಿಂದ ಸನ್ಮಾನ



ಆದಿಚುಂಚನಗಿರಿ ಸ್ವಾಮೀಜಿ ಅವರಿಂದ ಸನ್ಮಾನ



ಸರ್ವಪಕ್ಷ ಸಭೆ - ರಾಜಕೀಯ ಅವರಿಗೆ ಅಸ್ಪೃಶ್ಯವಾಗಿರಲಿಲ್ಲ



ಸಭೆಯಲ್ಲಿ...